ಪವಿತ್ರಾತ್ಮನ ವರಗಳು

ಆಶಿಷ್ ರಾಯ್‌ಚೂರ್

ಉಚಿತವಾದ ಹಂಚಿಕೆಗಾಗಿ ಮಾತ್ರ

ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಥಮ ಪ್ರತಿ: ಡಿಜಿಟಲ್ ಬಿಡುಗಡೆ ಮೇ 2021
ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ:ಕರುಣಾಜೆರೋಮ್, ಬ್ರೈಫ್ಟೈಯ್ಡ್ ಡಿಸೈನ್ಸ್

Contact information:
All Peoples Church& World Outreach,
#319,2nd Floor, 7th Main, HRBR Layout,
2nd Block, Kalyan Nagar, Bangalore 560043
Karnataka INDIA

Phone:+91-80-25452617
Email:bookrequest@apcwo.org
Website:apcwo.org

Unless otherwise indicated, all Scripture quotations are taken from the Holy Bible, New king lames Version. Copyright @1982 by Thoms Nelson, inc., Used by permission. All right reserved.
Scriptures marked as" (MSG)" are taken from THE MESSAGE: The Bible in Contemporary Language copyright 2002 by Eugene H. Peterson.
Scripture marker as" (GNB)" are taken from the GNB-Second Edition ©1992 by American Bible Society Used by permission.

ಉಚಿತ ವಿತರಣೆಗಾಗಿ

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

ಮೇಲಿಂಗ್ ಪಟ್ಟಿ ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.

(Kannada Book – Gifts of the Holy Spirit)

ಪವಿತ್ರಾತ್ಮನ ವರಗಳು

ಆಶಿಷ್ ರಾಯ್‌ಚೂರ್

ಸ್ವೀಕೃತಿಗಳು

ಈ ಪುಸ್ತಕದಲ್ಲಿ ಹಂಚಿಕೊಂಡಿರುವ ಒಳನೋಟಗಳು ನನ್ನ ಸ್ವಂತ ವೈಯಕ್ತಿಕ ಅನುಭವಗಳು, ಅಧ್ಯಯನ ಮತ್ತು ದೇವರೊಡನೆ ಪ್ರಯಾಣದ ಮೂಲಕವಾಗಿ ಹಾಗೆಯೇ ಅನೇಕ ಸೇವಕರುಗಳ ಮೂಲಕವಾಗಿ ಅವರ ಪುಸ್ತಕಗಳು ಸಂದೇಶಗಳು ಮತ್ತು ಅವರ ಜೀವಿತಗಳು ಮತ್ತು ಸೇವೆಗಳನ್ನು ಗಮನಿಸುವುದರ ಮೂಲಕವಾಗಿ ಕಲಿತ ಪಾಠಗಳಾಗಿವೆ. ಇಂತಹ ಪ್ರತಿಯೊಬ್ಬ ದೇವರ ಸೇವಕರುಗಳಿಗೆ, ನಾನು ವೈಯಕ್ತಿಕವಾಗಿ ಭೇಟಿಯಾಗದಿರುವ ಅನೇಕ ಸೇವಕರುಗಳಿಗೆ ನಾನು ಕೃತಜ್ಞತೆಯುಳ್ಳವನಾಗಿದ್ದೇನೆ. ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಸಭಾಪಾಲಕರು ಮತ್ತು ಸೇವಕರುಗಳ ತಂಡವು ಆತ್ಮನ ವಿಷಯದಲ್ಲಿ ನಮ್ಮ ಪ್ರಯಾಣದಲ್ಲಿ ಬೆಳಯಲು ಮತ್ತು ಅಪಾಯಗಳನ್ನು ತೆಗೆದುಕೊಂಡು ನಿರಂತರವಾಗಿ ಮುಂದಕ್ಕೆ ಒತ್ತು ನೀಡಿದಕ್ಕಾಗಿ ನಾನು ಅತ್ಯಂತ ಕೃತಜ್ಞತೆಯುಳ್ಳವನಾಗಿದ್ದೇನೆ. ಹೆಚ್ಚುವರಿಯಾಗಿ, ನಾವು ಪರಸ್ಪರ ಸಂಭಾಷಣೆ, ಚರ್ಚೆ ಮತ್ತು ದೇವರ ಆತ್ಮನು ಹೊಂದಿರುವಂತದಕ್ಕೆ ಹೆಜ್ಜೆಯನ್ನಿಡುವಂತೆ ಮಾಡುವ ವಾರಾಂತ್ಯದ ಶಾಲೆಗಳು ಕಲಿಯುವುದರ ಶ್ರೇಷ್ಟ ಸ್ಥಳವಾಗಿದೆ. ಆದ್ದರಿಂದ ವಾರಾಂತ್ಯದ ಶಾಲೆಗಳಿಗೆ ಹಾಜರಾದಂತಹ ಎಲ್ಲರಿಗೂ (ಮತ್ತು ನಿರಂತರವಾಗಿ ಹಾಜರಾಗುತ್ತಿರುವವರಿಗೂ) ಒಟ್ಟಾಗಿ ಬೆಳೆಯಲು ನಮಗೆ ಸಹಾಯ ಮಾಡಿದ್ದಕ್ಕಾಗಿ “ವಂದನೆಗಳು” ! ಎಲ್ಲಾ ಸಂಗತಿಗಳಲ್ಲಿ ಕ್ರಿಸ್ತನು ಮಹಿಮೆ ಹೊಂದಲಿ ಮತ್ತು ಆತನ ಸಭೆಯು ನೀತಿಬೋದೆ ಹೊಂದಲಿ!

ಸಭಾಪಾಲಕರು ಮತ್ತು ನಾಯಕರುಗಳಿಗೆ ಒಂದು ಮಾತು

ಪ್ರೀತಿಯ ಸಭಾಪಾಲಕರು / ಕ್ರೈಸ್ತನಾಯಕರುಗಳಿಗೆ.

ಪ್ರತಿಯೊಬ್ಬ ವಿಶ್ವಾಸಿಯ ಮೂಲಕವಾಗಿ ಮತ್ತು ಸಭೆಯ ಮೂಲಕವಾಗಿ ಆತನನ್ನು ಪ್ರತಿನಿಧಿಸಲು ಪವಿತ್ರಾತ್ಮವನ್ನು ಕರ್ತನಾದ ಯೇಸುವು ಕಳುಹಿಸಿದ್ದಾನೆ. ಪ್ರತಿ ವಿಶ್ವಾಸಿಯ ಮೂಲಕವಾಗಿ ಆತನ ಮಹಿಮೆಯು ತೋರಿಸಲ್ಪಡಬೇಕೆಂಬುದು ಆತನ ಆಶೆಯಾಗಿದೆ. ಪವಿತ್ರಾತ್ಮನು ಯೇಸು ಕ್ರಿಸ್ತನನ್ನು ಮಹಿಮೆ ಪಡಿಸಲು ಇಲ್ಲಿದ್ದಾನೆ ಮತ್ತು ಆತನ ವರಗಳಿಂದ ಪ್ರತಿಯೊಬ್ಬ ವಿಶ್ವಾಸಿಯು ಆತನನ್ನು ತೋರ್ಪಡಿಸಲೂ ಆತನು ಕಾತುರದಿಂದ ಆಶೆಪಡುತ್ತಿದ್ದಾನೆ. ಫಲಗಳನ್ನು ಉತ್ಪಾದಿಸುವಂತಹ ಅದೇ ಪವಿತ್ರಾತ್ಮನು ವರಗಳ ಮೂಲಕವಾಗಿ ತನ್ನನ್ನು ತೋರಿಸಿಕೊಳ್ಳಲೂ ಆಶೆಪಡುತ್ತಾನೆ. ಆತನ ವರಗಳು ವಿಶ್ವಾಸಿಗಳ ಉಪಕರಣ ಪಟ್ಟಿಗೆಯಾಗಿವೆ ಇವುಗಳಿಲ್ಲದೆ ಹೆಚ್ಚಿನವು ದೇವರ ರಾಜ್ಯಕ್ಕಾಗಿ ನಿಷ್ಪರಿಣಾಮಾಕಾರಿಯಾಗಿದೆ . ಆತ್ಮನ ಬಲದಲ್ಲಿ ಮತ್ತು ಆತ್ಮನ ವರಗಳನ್ನು ತೋರಿಸುವುದರಲ್ಲಿ ದೇವರ ಜನರನ್ನು ಸಜ್ಜುಗೊಳಿಸಲು, ತರಬೇತಿ ನೀಡಲೂ ಈ ಪುಸ್ತಕವನ್ನು ಸ್ವತಂತ್ರವಾಗಿ ದಯವಿಟ್ಟು ಉಪಯೊಗಿಸಿರಿ.

ಜೀವಿತಗಳ ಮೇಲೆ ಪರಿಣಾಮ ಬೀರಲು ಪವಿತ್ರಾತ್ಮನ ವರಗಳನ್ನು ಬಿಡುಗಡೆಗೊಳಿಸಲು ಪ್ರತಿಯೊಬ್ಬ ವಿಸ್ವಾಸಿಯು ಸಜ್ಜುಗೊಂಡಿರುವ ಮತ್ತು ತರಬೇತಿಗೊಂಡಿರುವ ಒಂದು ಸ್ಥಳಿಯ ಸಭೆಯ ಸಮುದಾಯವನ್ನು ಕಲ್ಪಿಸಿಕೊಳ್ಳಿರಿ ಯೇಸುಕ್ರಿಸ್ತನು ನಿಜವಾಗಿ ಮಹಿಮೆ ಹೊಂದುತ್ತಾನೆ ಮತ್ತು ಅಂತಹ ಸಮುದಾಯದ ವಿಶ್ವಾಸಿಗಳ ಮೂಲಕವಾಗಿ ಮತ್ತು ಅವರೊಳಗೆ ಏರಿಸಲ್ಪಡುತ್ತಾನೆ. ಪ್ರತಿಯೊಂದು ಸ್ಥಳಿಯ ಸಭೆಯು ಅಂತಹ ಸಮುದಾಯವಾಗಿ ಕಂಡುಬರಲಿ! ಒಟ್ಟಾಗಿ ಈ ಪ್ರಾಯಣವನ್ನು ಮಾಡೋಣ !

ದೇವರು ಆರ್ಶಿವದಿಸಲಿ!

ಆಶಿಷ್ ರಾಯ್‌ಚೂರ್

ಪರಿವಿಡಿ

ಪೀಠಿಕೆ 1

1. ಅಪ್ರಾಕೃತ ಸೇವೆ 4
2. ಪವಿತ್ರಾತ್ಮನೆಂಬ ವ್ಯಕ್ತಿಯನ್ನು ಪರಿಚಯಿಸುವುದು. 22
3. ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ 32
4. ಆತ್ಮಿಕ ವರಗಳ ಸಂಬಂಧಪಟ್ಟದ್ದು 65
5. ದೇವರ ಪ್ರೀತಿ, ನಮ್ಮ ಪ್ರೇರಣೆ 100
6. ಪವಿತ್ರಾತ್ಮನು ಹೇಗೆ ವರಗಳನ್ನು ಬಿಡುಗಡೆಗೊಳಿಸಲು ಆರಂಭಿಸುತ್ತಾನೆ 108
7. ಅನ್ಯಭಾಷೆಗಳ ವಿಧಗಳು 126
8. ಅನ್ಯಭಾಷೆಯ ಅರ್ಥವಿವರಣೆ 136
9. ಪ್ರವಾದನೆ 140
10. ಜ್ಞಾನದ ವಾಕ್ಯ 158
11. ವಿವೇಕದ ವಾಕ್ಯ 167
12. ಆತ್ಮಗಳನ್ನು ಗ್ರಹಿಸುವುದು 178
13. ಸ್ವಸ್ಥತೆಯ ವರಗಳು 189
14. ಅದ್ಭುತಗಳನ್ನು ಮಾಡುವದು 198
15. ನಂಬಿಕೆಯ ವರ 205
16. ಆತ್ಮನ ವರಗಳಲ್ಲಿ ಅಭಿವೃದ್ಧಿ ಹೊಂದುವುದು 209
17. ವರಗಳನ್ನು ಬಿಡುಗಡೆ ಮಾಡವುದಕ್ಕಾಗಿ ಸರಿಯಾದ ಅಸ್ತಿವಾರ 216

ಪೀಠಿಕೆ

ಈ ಪುಸ್ತಕವು ಸರಳವಾದ ಉದ್ದೇಶ ಹೊಂದಿದೆ ಮತ್ತು ಆತ್ಮನ ವರಗಳನ್ನು ಬಿಡುಗಡೆಗೋಳಿಸಲು ಪವಿತ್ರಾತ್ಮನೊಡನೆ ಹೇಗೆ ಸಾಗಬೇಕೆಂಬುದನ್ನು ಕಲಿಯಲು ಮತ್ತು ಅರ್ಥಮಾಡಿಕೊಳ್ಳಲೂ ವಿಸ್ವಾಸಿಗಳಿಗೆ ಸಹಾಯ ಮಾಡಲು ಉಪಯೋಗಿಸಬಹುದಾದ ಸುಲಬವಾದ ತರಬೇತಿ ಕೈಪಿಡಿಯಾಗಿದೆ. ವಿಸ್ವಾಸಿಗಳು ಎಲ್ಲಿಯಾದರು ಮತ್ತು ಯಾವುದೇ ಸಮಯದಲ್ಲಿಯಾದರೂ ಅವರ ಮೂಲಕವಾಗಿ ಕರ್ತನ ಆತ್ಮನು ಚಲಿಸುವಾಗ ನಿರಂತರವಾಗಿ ಆತ್ಮನ ವರಗಳನ್ನು ಬಿಡುಗಡೆಗೊಳಿಸುವುದು ಮತ್ತು ಚಲಿಸುವುದನ್ನು ನೋಡುವುದು ನಮ್ಮ ಗುರಿಯಾಗಿದೆ.

ದೀರ್ಘಕಾಲದವರೆಗೆ, ಬಹುಶಃ ಕ್ರಮಬದ್ದವಾದ ತರಬೇತಿಯ ಕೊರತೆಯಿಂದ ವಿಶ್ವಾಸಿಗಳು ಆತ್ಮನ ವರಗಳ ಮೇಲೆ ತಪ್ಪಾದ ದೃಷ್ಟಿಕೊನವನ್ನು ಹೊಂದಿದ್ದರು. ನಾವು ಸಭೆಯ ಕೂಟಗಳನ್ನು ದೇವರ ಪುರುಷ ಅಥವಾ ಸ್ರೀಯು ಆತ್ಮನ ಒಂದು ಅಥವಾ ಅಧಿಕ ವರಗಳನ್ನು ವೇದಿಕೆಯ ಮೇಲೆ ತೋರಿಸುವುದನ್ನು ನಿರೀಕ್ಷಿಸಿಕೊಂಡು ನಾವು ಹಾಜರಾಗುತ್ತೆವೆ ಮತ್ತು ಜರುಗಿದತದ್ವಕ್ಕೆ ನಾವುಗಳು ಪ್ರೇಕ್ಷಕರು ಅಥವಾ ಸ್ವೀಕರಿಸುವವರು ಮತ್ತು ಅಭಿಮಾನಿಗಳಾಗಿ ನಿಂತುಕೊಂಡಿರುತ್ತೆವೆ. ವಿಶೇಷವಾದ ಸಭಾ ಕೂಟಗಳು ಮತ್ತು ವಿಶೇಷವಾಗಿ ಅಭಿಷೇಕಹೊಂದಿದ ಜನರ ಮೂಲಕವಾಗಿ ಆತ್ಮನ ವರಗಳು ಪ್ರದರ್ಶಿಸುವುದಕ್ಕೆ ನಾವು ತಳ್ಳಿಬಿಡುತ್ತೇವೆ ಖಂಡಿತವಾಗಿ ಅದು ದೇವರ ಸಂಕಲ್ಪವಲ್ಲ.

ಆತನು ಯಾರಾಗಿದ್ದಾನೆ ಎಂಬುದನ್ನು ಸಾಕ್ಷಿಯನ್ನು ಹೊಂದುವ ಕ್ರಮದಲ್ಲಿ ಪವಿತ್ರಾತ್ಮ ಬಲವನ್ನು ತೋರಿಸಲು ಎಲ್ಲಾ ವಿಶ್ವಾಸಿಗಳು ಕೊನೆಗೊಂಡವರಾಗಬೇಕೆಂದು ಕರ್ತನು ಬಯಸುತ್ತಾನೆ . ಎಲ್ಲಾಕಡೆಯು ಮತ್ತು ಎಲ್ಲಾ ಸಮಯದಲ್ಲೂ ಆತನ ಸಾಕ್ಷಿಗಳು ನಾವಾಗಿರಬೇಕು. ಒಬ್ಬ ವಿದ್ಯಾರ್ಥಿಯಾಗಿರಬಹುದು, ಇಂಜೀನಿಯರ್,ವಿಜ್ಞಾನಿ,ಒಬ್ಬ ವಕೀಲ,ಒಬ್ಬ ಸರ್ಕಾರಿ ಅಧಿಕಾರಿ, ಒಬ್ಬ ಸಾಮಾಜಿಕ ಕೆಲಸಗಾರ,ಒಬ್ಬ ವಿದ್ಯಾರ್ಥಿ, ಒಬ್ಬ ಗೃಹಿಣಿ, ಒಬ್ಬ ವಾಪಾರಸ್ಥ, ಒಬ್ಬ ಕ್ರಿಡಾ ವ್ಯಕ್ತಿ , ಒಬ್ಬ ವೈದ್ಯ, ಒಬ್ಬ ಸರ್ಕಾರಿ ಅಧಿಕಾರಿ,ಒಬ್ಬ ಸಮಾಜ ಸೇವಕ – ಯಾವುದೇ ವೃತ್ತಿಯಿರಬಹುದು ನಾವು ಇರುವಲ್ಲಿಯೇ ಆತ್ಮನ ವರಗಳನ್ನು ತೋರಿಸಬಹುದು ಯೇಸುಕ್ರಿಸ್ತನಿಗಾಗಿ ಸಾಕ್ಷಿಯಾಗಿರಬಹುದು. ಆತ್ಮನ ವರಗಳು ನಮ್ಮ "ಉಪಕರಣ ಪೆಟ್ಟಿಗೆ" ಇದ್ದಂತೆ, ಪವಿತ್ರಾತ್ಮನ ಬಲದ ತೋರಿಸುವಿಗಾಗಿ ನಮಗೆ ಕೊಟಂತಹ ಉಪಕರಣವನ್ನು ಇದು ಒಳಗೊಂಡಿದೆ ಆದ್ದರಿಂದ ನಾವು ಹೋಗುವಲೆಲ್ಲಾ ಜನರು ಸ್ಪರ್ಶಿಸಲ್ಪಡುತ್ತಾರೆ,ಸೇವೆಸಲ್ಲಿಸಲ್ಪಡುತ್ತಾರೆ ಮತ್ತು ಮಾನಸಾಂತರ ಹೊಂದುತ್ತಾರೆ ಮತ್ತು ಕರ್ತನಾದ ಯೇಸುವಿಗೆ ಮಹಿಮೆಯುಂಟಾಗುತ್ತದೆ.

ಆತನ ಚಿತ್ತದಂತೆ ಪವಿತ್ರಾತ್ಮನು ಈ ವರಗಳನ್ನು ವ್ಯಕ್ತಪಡಿಸುತ್ತಾನೆ ಮತ್ತು ವಿತರಿಸುತ್ತಾನೆ. ಆದರೆ ಜೊತೆ ಕೆಲಸದವರಂತೆ ನಾವುಗಳು ಶ್ರದ್ದೆಯಿಂದ ಇಂತಹ ವರಗಳನ್ನು ಅಪೇಕ್ಷಿಸಬೇಕು ಮತ್ತು ಹೇಗೆ ಶರಣಾಗಬೇಕು, ಸಹಕರಿಸಬೇಕು ಮತ್ತು ಕ್ರಮಬದ್ದವಾಗಿ ಇಂತಹ ವರಗಳನ್ನು ಬಿಡುಗಡೆಗೊಳಿಸಬೇಕೆಂಬುದನ್ನು ನಾವು ಕಲಿಯಬೇಕು ಆದ್ದರಿಂದ ಆತನ ಅಪೇಕ್ಷೆಯಂತೆ ಜನರು ಸೇವೆ ಸಲ್ಲಿಸಲ್ಪಡುತ್ತಾರೆ ಮತ್ತು ಯೇಸುವಿಗೆ ಮಹಿಮೆ ಉಂಟಾಗುತ್ತದೆ. ಆಗಾಗ್ಗೆ ಪವಿತ್ರಾತ್ಮನೊಡನೆ ಸಹಕರಿಸುವುದು ಹೇಗೆ ಇಂಬುದು ನಮಗೆ ತಿಳಿದಿರುವುದರ ನಿಮಿತ್ತದಿಂದ ನಮ್ಮ ಮೂಲಕವಾಗಿ ಆತನ ಅಭಿವ್ಯಕ್ತತೆಗಳನ್ನು ವಿರೋದಿಸುತ್ತೆವೆ ಅಥವಾ ತಣಿಸುತ್ತೆವೆ ಅಥವಾ ದುಃಖಪಡಿಸುತ್ತೇವೆ.

ಈ ತರಬೇತಿ ಕೈಪಿಡಿಯು ನಮ್ಮ ವಾರಾಂತ್ಯ ಶಾಲೆಗಳಲ್ಲಿ ಕ್ರೈಸ್ತ ನಾಯಕರುಗಳ ಸಮಾವೇಶಗಳು ಮತ್ತು ನಮ್ಮ ಸತ್ಯವೇದ ಶಾಲೆಯ ಉಪನ್ಯಾಸಗಳಲ್ಲಿ ಭಾಗವಹಿಸುವರನ್ನು ಸಜ್ಜುಗೊಳಿಸಲು ಉಪಯೋಗಿಸುತ್ತೇವೆ. **ಸಜ್ಜುಗೊಳಿಸುವಿಕೆಯು ,ಉಪದೇಶ , ಪ್ರದರ್ಶನ, ಸಕ್ರಿಯಗೊಳಿಸುವಿಕೆ ಮತ್ತು ಪಾಲುಕೊಡುವಿಕೆಯ ಸಂಯೋಜನೆಯ ಮೂಲಕವಾಗಿ ಜರುಗುತ್ತದೆ.**ತರಬೇತಿಯ ಅವಧಿಯಲ್ಲಿ, ನಮ್ಮ ತಂಡವು ಕಾರ್ಯನಿರತವಾಗಿರುವ ಪವಿತ್ರಾತ್ಮನ ವರಗಳ ನಿಜ ಜೀವನದ ಕಥೆಗಳನ್ನು ಹಂಚಿಕೊಳ್ಳುತ್ತಾರೆ ಮತ್ತು ಇವುಗಳು ಹೇಗೆ ವ್ಯಕ್ತವಾಗುತ್ತವೆ ಎಂಬುದನ್ನು ಪ್ರದರ್ಶಿಸಲೂ ಆತ್ಮನ ವರಗಳಲ್ಲಿ ತುಂಬಿ ಹರಿಯುತ್ತಾರೆ. ನಾವು ವೈಯಕ್ತಿಕ ಮತ್ತು ಗುಂಪು ಸಕ್ರಿಯ ಗೊಳಿಸುವಿಕೆಯನ್ನು ಹೊಂದಿದ್ದೆವೆ ಆದ್ದರಿಂದ ಆತ್ಮನ ವರಗಳಲ್ಲಿ ಜನರು ಪ್ರವಹಿಸಲು ಪ್ರಾರಂಭಿಸುತ್ತಾರೆ. ನಾವು ಪಾಲುಕೊಡುವುದಕ್ಕಾಗಿ ಪ್ರಾರ್ಥಿಸುತ್ತೇವೆ ಅದ್ದರಿಂದ ಭಾಗವಹಿಸುವವರು ಅಧಿಕವಾಗಿ ಪಡೆಯಬಹುದು ಮತ್ತು ಆತ್ಮನ ತೋರ್ಪಡಿಸುವಿಕೆಯ ಉನ್ನತ ಮಟ್ಟಕ್ಕೆ ಏರಿಹೋಗಬಹುದು ಮತ್ತು ಆತ್ಮನ ಬಲವನ್ನು ತೋರ್ಪಡಿಸಬಹುದು. ಈ ತರಬೇತಿ ಕೈಪಿಡಿಯನ್ನು ನಿಮ್ಮ ಸ್ವಂತ ವೈಯಕ್ತಿಕ ಲಾಭಕ್ಕಾಗಿ ಉಪಯೋಗಿಸುವುದಿಲ್ಲ ಅದರೆ ಅನೇಕ ಇತರರು, ಸಣ್ಣ ಗುಂಪುಗಳಿರಬಹುದು, ಸ್ಥಳೀಯಸಭೆಗಳು, ಸಮಾವೇಶಗಳು, ಸತ್ಯವೇದ ಶಾಲೆಗಳು. ಸೆಮಿನರಿಗಳು ಮತ್ತು ಇತರೆ ಸಜ್ಜುಗೊಳಿಸುವ ಅವಕಾಶಗಳಲ್ಲಿ ಇದನ್ನು ಉಪಯೋಗಿಸಲು ಶಕ್ತರೆಂದು ನಾನು ನಂಬುತೇನೆ.

ಪವಿತ್ರಾತ್ಮನು ಅಪರಿಮಿತವಾದವನು ಮತ್ತು ಆತನ ಅಭಿವ್ಯಕ್ತತೆಗಳ ವೈವಿದ್ಯತೆಗಳು ಸಹ ಅಪರಿಮಿತವಾದವುಗಳಾಗಿವೆ.ಪವಿತ್ರಾತ್ಮನು ವಿವಿಧವಾದ ಮಾರ್ಗಗಳಲ್ಲಿ ಚಲಿಸುತ್ತಾನೆ ಮತ್ತು ಆತನಅಭಿವ್ಯಕ್ತತೆಗಳು ತರಬೇತಿ ಕಾರ್ಯಕ್ರಮ ಅಥವಾ ಯಾವುದೇ ಪುಸ್ತಕದಲ್ಲಿ ಯಾರಾದರೂ ಸೆರೆಹಿಡಿದ ಕಾರ್ಯಚರಣೆ ಮತ್ತು ವ್ಯಾಖ್ಯಾನಗಳಿಗಿಂತ ಮಿಗಿಲಾಗಿವೆ.ನಾವು ಇದನ್ನು ತಿಳಿದೇ ಇಲ್ಲಾ. ನಾವು ನಿರಂತರವಾಗಿ ಕಲಿಯುತ್ತೇವೆ ,ಬೆಳೆಯುತೇವೆ ಮತ್ತು ಆತ್ಮನ ವಿಷಯಗಳ ಕ್ಷೇತ್ರದಲ್ಲಿ ಉನ್ನತ ಕ್ಷೇತ್ರಕ್ಕೆ ಪ್ರಗತಿ ಹೊಂದುತ್ತೇವೆ. ಆತನ ವಾಕ್ಯದ ಪ್ರಕಟಣೆ ಪಡೆಯುವಾಗ ನಾವು ಕಲಿಯುತ್ತೇವೆ , ಆತ್ಮನಿಂದ ಸೂಕ್ಷ್ಮಪರಿಜ್ಞಾನ ಹೊಂದುತ್ತೇವೆ, ಆತ್ಮದಿಂದ ಸೇವೆಸಲ್ಲಿಸುವಾಗ ಮತ್ತು ಪ್ರತಿಯೊಬ್ಬರ ಮೂಲಕವಾಗಿ

ಆತ್ಮನು ಹೇಗೆ ಕಾರ್ಯಮಾಡುತ್ತಾನೆಂಬುದನ್ನು ಗಮನಿಸುವಾಗ ನಾವು ಪ್ರಾಯೋಗಿಕ ಪಾಠವನ್ನು ಕಲಿಯುತ್ತೇವೆ.

ಜೀವಿತಗಳಿಗೆ ಪ್ರಭಾವ ಬೀರಲೂ ಮತ್ತು ಯೇಸುಕ್ರಿಸ್ತನನ್ನು ಮಹಿಮೆಪಡಿಸಲು ಆತ್ಮನ ವಿಷಯಗಳಲ್ಲಿನ ಅತ್ಯುನ್ನತ ಕ್ಷೇತ್ರಗಳಿಗೆ ನಾವು ಚಲಿಸುವವರಾಗಿರೋಣ.

ದೇವರು ಆಶೀರ್ವದಿಸಲಿ!

ಆಶಿಷ್ ರಾಯ್‌ಚೂರ್

1. ಅಪ್ರಾಕೃತ ಸೇವೆ

ಆತ್ಮನ ವರಗಳು ವಿಶ್ವಾಸಿಗಳ ಮೂಲಕವಾಗಿ ಪವಿತ್ರಾತ್ಮನ ಅಪ್ರಾಕೃತ ಕಾರ್ಯಗಳಾಗಿವೆ. ಅಪ್ರಾಕೃತ ಕೆಲಸಗಳ ಮೂಲಕವಾಗಿ ಪವಿತ್ರಾತ್ಮನ ಬಲ ಮತ್ತು ಪ್ರಸನ್ನತೆ, ವ್ಯಕ್ತಿಗೆ ಗೋಚರವಾಗುವಂತೆ ಮಾಡುವ ಅಥವಾ ತೋರ್ಪಡಿಸುವಂತವುಗಳಾಗಿವೆ. ಜನರು ದೇವರನ್ನು "ನೋಡಲು " ಬಯಸುತ್ತಾರೆ. ಆತನ ನಿಜಸ್ಥಿತಿ, ಬಲ ಪ್ರೀತಿಯನ್ನು ತಿಳಿಯಲು ಜನರು ದೇವರೊಡನೆ ಸಂಧಿಸುವಿಕೆಯನ್ನು ಅವರು ಬಯಸುತ್ತಾರೆ. ದೇವರು ಸ್ವತಃ ತನ್ನನ್ನು ತಿಳಿಯಲ್ಪಡುವಂತೆ ಅಪೇಕ್ಷಿಸುತ್ತಾನೆ. ಆತನು ತನ್ನನ್ನುಸ್ವತಃ "ತೋರ್ಪಡಿಸಲು " ಬಯಸುತ್ತಾನೆ. ವಿಶ್ವಾಸಿಗಳಮೂಲಕವಾಗಿ "ಆತ್ಮನ ತೋರ್ಪಡಿಸುವಿಕೆಗಳು" ಮೂಲಕವಾಗಿ ಮಾಡಲು ಅಪೇಕ್ಷಿಸುವ ಒಂದು ಮಾರ್ಗವು ಇದಾಗಿದೆ.

ವಿಶ್ವಾಸಿಗಳಾಗಿ, ನಾವು ತೆರೆದವರಾಗಿರಬೇಕು, ಅಧ್ಯಯನ ಮಾಡಬೇಕು ಮತ್ತು ಖಂಡಿತವಾಗಿ ಅಪ್ರಾಕೃತವಾಗಿರುವಂತಹ ಕರ್ತನ ಕಾರ್ಯಗಳನ್ನು ನೋಡಲೂ ಕಾತರದಿಂದ ಆಶೆಪಡಬೇಕು.ಕೆಲವುಬಾರಿ ಧಾರ್ಮಿಕವಾಗಿ ನಾವು "ಕರ್ತನನ್ನು ಹುಡುಕಿರಿ " ಎಂಬುದಾಗಿ ಕೊನೆಮಾಡುತ್ತೇವೆ ಆದರೆ ನಾವು " ಆತನ ಹಸ್ತವನ್ನು ಹುಡುಕುವುದಿಲ್ಲ" . ಅದು ಅಗತ್ಯಕರವಾಗಿ ಒಂದು ಸತ್ಯವೇದದ ಭಾವಭಂಗಿಯಲ್ಲ. ಕರ್ತನನ್ನು ಹುಡುಕಿರಿ ಮತ್ತು ಆತನ ಶಕ್ತಿಯನ್ನು ಹುಡುಕಿರಿ ಎಂಬುದಾಗಿ ಸತ್ಯವೇದವು ನಮಗೆ ಪ್ರೋತ್ಸಾಹಿಸುತ್ತದೆ. ಆತನ ಮಹತ್ಕಾರ್ಯಗಳನ್ನು ಅಧ್ಯಯನ ಮಾಡಲು ವಚನಭಾಗಗಳು ನಮಗೆ ಪ್ರೋತ್ಸಾಹಿಸುತ್ತದೆ. ಕೀರ್ತನೆಗಳಿಂದ ಈ ಭಾಗವನ್ನು ಪರಿಗಣಿಸಿರಿ:

ಕೀರ್ತನೆಗಳು 105:1-4
1 ಯೆಹೋವನಿಗೆ ಕೃತಜ್ಞತಾಸ್ತುತಿ ಮಾಡಿರಿ, ಆತನ ನಾಮದ ಮಹತ್ವವನ್ನು ವರ್ಣಿಸಿರಿ ಜನಾಂಗಗಳಲ್ಲಿ ಆತನ ಕೃತ್ಯಗಳನ್ನು ಪ್ರಸಿದ್ಧ ಪಡಿಸಿರಿ.
2 ಆತನನ್ನು ಕೀರ್ತಿಸಿರಿ, ಭಜಿಸಿರಿ, ಆತನ ಅದ್ಭುತ ಕೃತ್ಯಗಳನ್ನೆಲ್ಲಾ ಧ್ಯಾನಿಸಿರಿ.
3 ಆತನ ಪರಿಶುದ್ಧ ನಾಮದಲ್ಲಿ ಹಿಗ್ಗಿರಿ ಯೆಹೋವನ ದರ್ಶನವನ್ನು ಕೋರುವವರ ಹೃದಯವು ಹರ್ಷಿಸಲಿ.
4 ಯೆಹೋವನನ್ನೂ ಆತನ ಬಲವನ್ನೂ ಆಶ್ರಯಿಸಿರಿ ನಿತ್ಯವೂ ಆತನ ದರ್ಶನವನ್ನು ಅಪೇಕ್ಷಿಸಿರಿ.

ಸ್ತೋತ್ರ ಕೊಡುವುದು ಮತ್ತು ಕರ್ತನಿಗೆ ಹಾಡುವುದರ ಜೊತೆಗೆ ನಾವು ಆತನ ಅದ್ಭುತಕೃತ್ಯಗಳನ್ನೆಲ್ಲಾ ಮಾತಾಡುವವರು ಮತ್ತು ಆತನ ಕೃತ್ಯಗಳನ್ನು ಜನರಿಗೆ ತಿಳಿಯಪಡಿಸುವವರು ಆಗಿರಬೇಕು. ನಮ್ಮ ಕರ್ತನ ಹುಡುಕುವಿಕೆಯಲ್ಲಿ ಆತನ ಮುಖವನ್ನು ಮತ್ತು ಆತನ ಬಲವನ್ನು ನಾವು ಹುಡುಕಲು ಪ್ರೋತ್ಸಾಹಗೊಂಡಿದ್ದೇವೆ.

ಕೀರ್ತನೆಗಳು 111:1-3
1 ಯಾಹುವಿಗೆ ಸ್ತೋತ್ರ ನಾನು ಯೆಹೋವನನ್ನು ಕೊಂಡಾಡುವೆನು ಯಾಥಾರ್ಥರ ಕೂಟದಲ್ಲಿಯೂ ನೆರೆದ ಸಭೆಯಲ್ಲಿಯೂ ಮನಃ ಪೂರ್ವಕವಾಗಿ ಕೀರ್ತಿಸುವೆನು.
2 ಯೆಹೋವನ ಕೃತ್ಯಗಳು ಮಹತ್ತಾದವುಗಳು ಅವುಗಳ್ಲಿ ಸಂತೋಷಿಸುವವರು ಅವುಗಳನ್ನೇ ಧ್ಯಾನಿಸುವರು
3 ಆತನ ಕಾರ್ಯವು ಘನಮಾನಗಳುಳ್ಳದ್ದು ಆತನ ನೀತಿಯು ಸದಾಕಾಲವೂ ಇರುವದು.

ಕರ್ತನ ಎಲ್ಲಾ ಕಾರ್ಯಗಳು – ಆತನು ಮಾಡುವಂತಹವೆಲ್ಲವುಗಳೂ – ಅದ್ಭುತಕಾರ್ಯಗಳು, ಆತ್ಮನ ವರಗಳು, ಸ್ವಸ್ಥತೆಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳೆಲ್ಲವೂ ದೊಡ್ಡದಾದವುಗಳಾಗಿವೆ. ದೇವರ ಮಹತ್ಕಾರ್ಯಗಳನ್ನು ಆನಂದಿಸುವವರು ಅವುಗಳನ್ನು ಧ್ಯಾನಮಾಡಲೂ ಸಮಯ ತೆಗೆದುಕೊಳ್ಳುತ್ತಾರೆ. ಕೀರ್ತನೆಗಳು 111:2 ರಲ್ಲಿನ ಪದ "ಅಧ್ಯಯನ" ಅಥವಾ ಧ್ಯಾನಿಸುವುದು ಎಂಬುದು ಹುಡುಕುವುದು, ಅನ್ವೇಷಿಸುವುದು ಮತ್ತು ವಿಚಾರಿಸುವುದರ ವಿಚಾರವನ್ನು ಮಾತ್ರವೇ ಹೊಂದಿರುವುದಲ್ಲದೆ, ಕೇಳುವುದು, ಅದರ ಹಿಂದೆ ಹಿಂಬಾಲಿಸುವುದು ಹಿಂಬಾಲಿಸುವುದು ಮತ್ತು ಪದೇ ಪದೇ ಆಗುವುದಾಗಿದೆ. ದೇವರ ಕಾರ್ಯಗಳನ್ನು ಆನಂದಿಸುವವರು ಆತನ ಕಾರ್ಯಗಳನ್ನು ಅಧ್ಯಯನ ಮಾಡುತ್ತಾರೆ ಮತ್ತು ಆತನ ಕಾರ್ಯಗಳನ್ನು ಹಿಂಬಾಲಿಸುತ್ತಾರೆ ಅವರಿಗೆ ಅಧಿಕವಾಗಿ ಬೇಕು! ಕೀರ್ತನೆಗಳು 111:2-3, ರ ಪ್ರಕಾರವಾಗಿ ಆತನ ಕೃತ್ಯಗಳು ಆತನ ಮಹತ್ತ, ಗೌರವ, ಮಹಿಮೆ, ಮತ್ತು ಸಾರ್ವಭೌಮತೆಯನ್ನು ಪ್ರದರ್ಶಿಸುತ್ತವೆ.

ದಾವೀದನು ದೇವರಿಗಾಗಿ ಅವನ ಹಾತೊರೆಯುವಿಕೆ ಮತ್ತು ದಾಹವನ್ನು ಹಾಗೆಯೇ ದೇವರ ಮಹಿಮೆ ಮತ್ತು ಬಲವನ್ನು ನೋಡಲೂ ಅವನ ಹಾತೊರೆಯುವಿಕೆಯನ್ನು ವ್ಯಕ್ತಪಡಿಸಿದನು. "ದೇವರೇ, ನೀನೇ ನನ್ನ ದೇವರು ನಾನು ನಿನ್ನ ದರ್ಶನವನ್ನು ಕೂತೂಹಲದಿಂದ ಎದುರು ನೋಡುತ್ತೇನೆ. ನೀರಿಲ್ಲದೆ ಒಣಗಿದ ಭೂಮಿಯಲ್ಲಿದ್ದವನು ನೀರಿಗಾಗಿಯೋ ಎಂಬಂತೆ ನನ್ನ ಆತ್ಮವು ನಿನಗಾಗಿ ಆತುರಗೊಳ್ಳುತ್ತದೆ ಶರೀರವು ಕುಂದಿಹೋಗುತ್ತದೆ ನಿನ್ನ ಮಂದಿರದಲ್ಲಿ ನಾನು ನಿನ್ನ ಮಹತ್ವನ್ನೂ ಪ್ರಭಾವವನ್ನೂ ಕಂಡ ಪ್ರಕಾರ ಈಗಲೂ ಕಾಣಬೇಕೆಂದು ಅಪೇಕ್ಷಿಸುತ್ತೇನೆ" . (ಕೀರ್ತನೆಗಳು 63:1-2) ನಮ್ಮ ಜೀವಿತದಲ್ಲಿ ಕೃತ್ಯದಲ್ಲಿ ಆತನ ಬಲದ ಹೆಚ್ಚಳತೆ ಮತ್ತು ಆತನು ಅಧಿಕವಾಗಿ ಬೇಕೆಂದು ನಾವು ಅಪೇಕ್ಷಿಸಬೇಕು.ಅಪ್ರಾಕೃತಕ್ಕಾಗಿ ನಮ್ಮ ಹಸಿವೆಯನ್ನು ಪ್ರೋತ್ಸಾಹಿಸಲು

ಈ ಒಂದು ಅಧ್ಯಾಯದಲ್ಲಿ ಕೆಲವು ಸತ್ಯಗಳನ್ನು ನಾವು ಅನ್ವೇಷಿಸೋಣ.

ಯೇಸುವಿನ ಸೇವೆ

ಕರ್ತನಾದ ಯೇಸುಕ್ರಿಸ್ತನು ದೇವರಗಿದ್ದಾಗಲೂ ಮನುಷ್ಯನಾಗಿ ಭೂಮಿಯ ಮೇಲೆ ನೆಡೆದನು, ಒಬ್ಬ ಮಾನವ ವ್ಯಕ್ತಿಯಾಗಿ ಸ್ವತಃ ತನ್ನನ್ನೇ ಮಿತಿಗಳಲ್ಲಿರಿಸಿಕೊಂಡು ಸಿಮೀತಗೊಳಿಸಿಕೊಂಡಿದ್ದನ್ನು ವಚನಭಾಗಗಳಿಂದ ನಾವು ಅರ್ಥಮಾಡಿಕೊಳ್ಳುತ್ತೇವೆ. ಆತನು ಸೇವೆಯನ್ನು ಪ್ರಾರಂಭಿಸಿದಾಗ, ಕರ್ತನ ಆತ್ಮನು ಆತನ ಮೇಲಿದ್ದನು ಮತ್ತು ಶಭವರ್ತಮಾನ ಸಾರಲೂ,ಸ್ವಸ್ಥಗೊಳಿಸಲು ಮತ್ತು ಬಿಡುಗಡೆಗೊಳಿಸಲು ಆತನು ಅಭಿಷೇಕಿಸಲ್ಪಟ್ಟಿದ್ದನು (ಲೂಕ 4:18-19). ಆತನು ಸೇವೆ ಮಾಡಲು ಹೋದಾಗ, ಪವಿತ್ರಾತ್ಮನ ಬಲದಿಂದ ಅದನ್ನು ಆತನು ಮಾಡಿದನು ಎಂಬುದಾಗಿ ಆತನು ಅಂಗಿಕರಿಸಿದನು (ಮತ್ತಾಯ 12:28) ಅನೇಕ ಸ್ಥಳಗಳಲ್ಲಿ ಪವಿತ್ರಾತ್ಮನ ಬಲದಿಂದ ಕರ್ತನಾದ ಯೇಸುವು ಸೇವೆ ಮಾಡಿದನೆಂಬುದನ್ನು ಧರ್ಮಶಾಸ್ತ್ರವು ರುಜುಪಡಿಸಿದೆ.

ಲೂಕ 4:14
ತರುವಾಯ ಯೇಸು ಪವಿತ್ರಾರ್ಮನ ಶಕ್ತಿಯಿಂದ ಕೂಡಿದವನಾಗಿ ತಿರಿಗಿ ಗಲಿಲಾಯಕ್ಕೆ ಹೋದನು ಅತನ ಸುದ್ದಿಯು ಸುತ್ತಲಿರುವ ಪ್ರಾಂತ್ಯದಲ್ಲೆಲ್ಲಾ ಹಬ್ಬಿಕೊಂಡಿತು.

ಅಪೋಸ್ತಲರ ಕೃತ್ಯಗಳು 10:38
ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು ದೇವರು ಆತನ ಸಂಗಡ ಇದ್ದದರಿಂದ ಆತನು ಉಪಕಾರಗಳನ್ನು ಮಾಡುತ್ತಾ ಸೈತಾನನಿಂದ ಬಾಧಿಸಲ್ಪಡುತ್ತಿರುವವರೆಲ್ಲರನ್ನು ಗುಣಮಾಡುತ್ತಾ ಸಂಚರಿಸಿದನು ಇದೆಲ್ಲಾ ನಿಮಗೆ ಗೊತ್ತಾಗಿರುವದಷ್ಟೆ.

ಇಬ್ರಿಯರಿಗೆ 2:3-4
3 ಈ ಅತ್ಯಂತ ವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯಮಾಡಿದರೆ ತಪ್ಪಿಸಿಕೊಳ್ಳುವದು ಹೇಗೆ? ಇದು ಕರ್ತನಿಂದ ಮೊದಲು ಹೇಳಲ್ಪಟ್ಟಿತು; ಆತನಿಂದ ಕೇಳಿದವರು ಇದನ್ನು ನಮಗೆ ಸ್ಥಿರಪಡಿಸಿದರು;
4 ಮತ್ತು ದೇವರು ಅವರ ಕೈಯಿಂದ ಸೂಚಕಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ನಾನಾ ವಿಧವಾದ ಮಹತ್ಕಾರ್ಯಗಳನ್ನೂ ನಡಿಸಿ ಪವಿತ್ರಾತ್ಮವರಗಳನ್ನು ತನ್ನ ಚಿತ್ತಾನುಸಾರವಾಗಿ ಅವರಿಗೆ ಅನುಗ್ರಹಿಸಿ ಅವರ ಮಾತಿಗೆ ಸಾಕ್ಷಿಕೊಡುತ್ತಿದ್ದನು.

ಕರ್ತನಾದ ಯೇಸುವು ಸಾರಲೂ ಪ್ರಾರಂಭಿಸಿದಂತಹ ರಕ್ಷಣೆಯ ಮಹತ್ತಾದ ಸಂದೇಶವು, ಪವಿತ್ರಾತ್ಮನ ವರಗಳು ಮತ್ತು ಅದ್ಭುತಕಾರ್ಯಗಳು, ಸೂಚಕಕಾರ್ಯಗಳು ಮತ್ತು ಮಹತ್ಕಾರ್ಯಗಳ ತೋರ್ಪಡಿಸುವಿಕೆಯಿಂದ ಜೊತೆಗೂಡಿದ್ದವು. ಕರ್ತನಾದ ಯೇಸುವು ಸ್ವತಃ ತಾನೇ ಪವಿತ್ರಾತ್ಮನ ಬಲದಿಂದ ಸೇವೆಸಲ್ಲಿಸಿದನು ಮತ್ತು ಆತ್ಮನ ವರಗಳನ್ನು ತೋರ್ಪಡಿಸಿದನು.

ನೀವು ಬಲವನ್ನು ಪಡೆದುಕೊಳ್ಳುವಿರಿ

ಆತನಲ್ಲಿ ನಂಬಿಕೆಯಿಡುವವರು ಪವಿತ್ರಾತ್ಮನ ಬಲವನ್ನು ಪಡೆಯುತ್ತಾರೆ ಎಂಬುದಾಗಿ ಕರ್ತನಾದ ಯೇಸುವು ವಾಗ್ದಾನ ಮಾಡಿದ್ದಾನೆ. ಪವಿತ್ರಾತ್ಮನ ಕಾರ್ಯವನ್ನು ಉಲ್ಲೇಖಿಸುವಂತೆ ನಂಬಿದವನ ಹೊಟ್ಟೆಯೊಳಗಿಂದ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಆತನು ಹೇಳಿದ್ದಾನೆ (ಯೋಹಾನ 7:37-39) ಆತನು ಮಾಡಿದಂತಹ ಕಾರ್ಯಗಳನ್ನು ಅವರು ಮಾಡುವರು ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು ಯಾಕಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ ಎಂಬುದಾಗಿ ಆತನು ಹೇಳಿದ್ದಾನೆ (ಯೋಹಾನ 14:12) ಆತನು ತಂದೆಯ ಬಳಿಗೆ ಹೋದ ನಂತರ ಮಾಡಿದಂತಹ ಪ್ರಾಮುಖ್ಯವಾದ ಒಂದು ವಿಷಯವೆಂದರೆ ಪವಿತ್ರಾತ್ಮನನ್ನು ಕಳುಹಿಸುವುದಾಗಿದೆ (ಅಪೊಸ್ತಲರ ಕೃತ್ಯಗಳು 2:33) ಆತನ ಹಿಂಬಾಲಕರಿಗೆ ಆತನು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಮಾಡಿಸುವನು ಆದ್ದರಿಂದ ಆತನಿಗೆ ಸಾಕ್ಷಿಗಳಾಗಿರಲು ಅವರು ಮೇಲಿನಿಂದ ಬಲವನ್ನು ಹೊಂದುವರು ಎಂಬುದಾಗಿ ಆತನು ಹೇಳಿದ್ದಾನೆ (ಅಪೊಸ್ತಲರಕೃತ್ಯಗಳು 1:5,8, ಲೂಕ 24:49).

ಅದನ್ನು ರವಾನಿಸಿ

ಕರ್ತನಾದ ಯೇಸುವು ಆತನ ಮೊದಲ ಶಿಷ್ಯರ ಜೊತೆಯಲ್ಲಿ ಅವರಿಗೆ ಉಪದೇಶಿಸಿದ್ದ ಎಲ್ಲವನ್ನು ಇತರರ ಮೇಲೆ ರವಾನಿಸಬೇಕೆಂಬುದಾಗಿ ಉಪದೇಶಿಸಿದ್ದಾನೆ (ಮತ್ತಾಯ 28:18-20) ಇದು ಅಪ್ರಾಕೃತ ಸೇವೆಯನ್ನು ಒಳಗೊಂಡಿದೆ (ಮತ್ತಾಯ 10:7:8) ಆದದರಿಂದ ಮೊದಲ ಶಿಷ್ಯರುಗಳು ಮತ್ತು 12 ಅಪೊಸ್ತಲರು ಉಪದೇಶಿಸಲ್ಪಟ್ಟರು, ತರಬೇತಿಹೊಂದಿದರು ಮತ್ತು ಆಧಿಸಭೆಯಲ್ಲಿ ಅವರು ಗಮನಿಸಿ ಆಚರಿಸಿದಲ್ಲವುಗಳು ಮತ್ತು ವೈಯಕ್ತಿಕವಾಗಿ ಮಾಡಿದ್ದಂತಹ ಸ್ವಸ್ಥತೆಗಳು, ಬಿಡುಗಡೆ, ಸೂಚಕಕಾರ್ಯ, ಮಹತ್ಕಾರ್ಯ ಮತ್ತು ಅದ್ಭುತಕಾರ್ಯಗಳನ್ನು ಹೊಸ ಶಿಷ್ಯರುಗಳ ಮೇಲೆ ರವಾನಿಸುವುದರ ಭರವಸೆ ನಾವು ಹೊಂದಿದ್ದೇವೆ.

ಆಧಿ ಸಭೆ

ಅಪ್ರೋಸ್ತಲರ ಕೃತ್ಯಗಳು ಪುಸ್ತಕದುದ್ದಕ್ಕೂ ಓದುವಾಗ ಆಧಿ ಸಭಯು, ಪಂಚಾಶತ್ತಮ ದಿನದ ಪ್ರಾರಂಭದಿಂದ ಮತ್ತು ನಂತರ ಪವಿತ್ರಾತ್ಮನ ಬಲದಲ್ಲಿ ನೆಡೆಯಿತು ಎಂಬುದನ್ನು ನಾವು ನೋಡುತೇವೆ. ಅವರು ಅಪ್ರಾಕೃತವಾದದ್ದನ್ನು ಅನುಭವಿಸಿದರು ಮತ್ತು

ತೋರ್ಪಡಿಸಿದರು . ಬರೀ 12 ಅಪೊಸ್ತಲರು ಮಾತ್ರವಲ್ಲ,ಆದರೆ ಇತರೆ ಶಿಷ್ಯರು ಸಹ ಸೂಚಕಕಾರ್ಯಗಳನ್ನು, ಅದ್ಭುತ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಅವರ ಜೀವಿತದ ಮೂಲಕವಾಗಿ ತೋರ್ಪಡಿಸಿದರು.

ಅಪೊಸ್ತಲರು

ಅಪೊಸ್ತಲರು ಕೃತ್ಯಗಳು 4:33
ಕರ್ತನಾದ ಯೇಸು ಜೀವಂತನಾಗಿ ಎದ್ದು ಬಂದನೆಂಬದಕ್ಕೆ ಅಪೊಸ್ತಲರು ಬಹು ಬಲವಾಗಿ ಸಾಕ್ಷಿ ಹೇಳುತ್ತಿದ್ದರು ಬಹಳ ದಯವು ಅವರೆಲ್ಲರ ಮೇಲೆ ಇತ್ತು.

ಸ್ತೆಫನನು, ಯೆರುಸಲೇಮಿನ ಸಭೆಯಲ್ಲಿ ಒಬ್ಬ ಸಹಾಯಕ

ಅಪೊಸ್ತಲರ ಕೃತ್ಯಗಳು 6:8
ಸ್ತೆಫನನು ದೇವರ ಕೃಪೆಯಿಂದಲೂ ಬಲದಿಂದಲೂ ತುಂಬಿದವನಾಗಿ ಜನರಲ್ಲಿ ಮಹಾ ಅದ್ಭುತ ಕಾರ್ಯಗಳನ್ನು ಸೂಚಕ ಕಾರ್ಯಗಳನ್ನೂ ಮಾಡುತ್ತಾ ಇದ್ದನು.

ಫಿಲಿಪ್ಪನು, ಯೆರೂಸಲೇಮಿನ ಸಭೆಯಲ್ಲಿ ಒಬ್ಬ ಸಹಾಯಕ

ಅಪೊಸ್ತಲರ ಕೃತ್ಯಗಳು 8:5-8
5ಫಿಲಿಪ್ಪನು ಸಮಾರ್ಯವೆಂಬ ಪಟ್ಟಣಕ್ಕೆ ಹೋಗಿ ಕ್ರಿಸ್ತನನ್ನು ಅಲ್ಲಿರುವವರಿಗೆ ಪ್ರಕಟಿಸಿದನು
6 ಗುಂಪಾಗಿ ಕೂಡಿದ ಜನಗಳು ಫಿಲಿಪ್ಪನ ಮಾತುಗಳನ್ನು ಕೇಳಿ ಅವನು ಮಾಡಿದ ಸೂಚಕ ಕಾರ್ಯಗಳನ್ನು ನೋಡಿ ಅವನು ಹೇಳಿದ ಸಂಗತಿಗಳಿನ ಏಕಮನಸ್ಸಾಗಿ ಲಕ್ಷ್ಯಕೊಟ್ಟರು
7 ಯಾಕಂದರೆ ಅನೆಚರೊಳಗಿಂದ ದೆವ್ವಗಳು ಮಹಾಶಬ್ದದಿಂದ ಕೂಗಿ ಹೊರಗೆ ಬಂದವು ಮತ್ತು ಅನೇಕ ಪಾರ್ಶ್ವವಾಯು ರೋಗಿಗಳೂ ಕೂಟರೂ ಸ್ವಸ್ಥಮಾಡಲ್ಪಟ್ಟರು.
8 ಆ ಪಟ್ಟಣದಲ್ಲಿ ಬಹು ಸಂತೋಷವಾಯಿತು.

ಹೆಸರಿಲ್ಲದ ಶಿಷ್ಯರುಗಳು

ಅಪೋಸ್ತಲರ ಕೃತ್ಯಗಳು 8:3-4
3 ಆದರೆ ಸೌಲನು ಮನೆಮನೆಗಳಲ್ಲಿ ಹೊಕ್ಕು ಗಂಡಸೆರನ್ನೂ ಹೆಂಗಸರನ್ನೂ ಎಳಕೊಂಡು ಬಂದು ಸೆರೆಮನೆಗೆ ಹಾಕಿಸಿ ಸಭೆಯನ್ನು ಹಾಳುಮಾಡುತ್ತಿದ್ದನು
4 ಚದರಿಹೋದವರು. ಅಲ್ಲಲ್ಲಿ ಹೋಗಿ ಸುವಾರ್ತ ವಾಕ್ಯವನ್ನು ಸಾರುತ್ತಿದ್ದರು.

ಅಪೊಸ್ತಲರ ಕೃತ್ಯಗಳು 11:19-21
19 ಸ್ತೆಫನನ ವಿಷಯದಲ್ಲಿ ಉಂಟಾದ ಹಿಂಸೆಯಿಂದ ಚದರಿಹೊದವರು ಯೆಹೂದ್ಯರಿಗೆ ಹೊರತು ಮತ್ತಾರಿಗೂ ದೇವರ ವಾಕ್ಯವನ್ನು ಹೇಳದೆ ಫೊಯಿನಿಕೆ ಕುಪ್ರ ಅಂತಿಯೋಕ್ಯ ಪ್ರಾಂತ್ಯಗಳವರೆಗೂ ಸಂಚರಿಸಿದರು.
20 ಅವರಲ್ಲಿ ಕುಪ್ರದ್ವೀಪದವರು ಕೆಲವರೂ ಕುರೇನ್ಯದವರು ಕೆಲವರೂ ಅಂತಿಯೋಕ್ಯಕ್ಕೆ ಬಂದು ಗ್ರೀಕರ ಸಂಗಡಲೂ ಮಾತಾಡಿ ಕರ್ತನಾದ ಯೇಸುವಿನ ವಿಷಯವಾದ ಸುವಾರ್ತೆಯನ್ನು ತಿಳಿಸಿದರು,
21 ಕರ್ತನ ಹಸ್ತವು ಅವರಿಗೆ ಸಹಾಯವಾದ್ದರಿಂದ ಬಹು ಜನರು ನಂಬಿ ಕರ್ತನ ಕಡೆಗೆ ತಿರುಗಿಕೊಂಡರು.

ಮೊದಲ 35 ವರ್ಷಗಳು ಅಥವಾ ಮುಂದೆ ಆದಿಸಭೆಯು ಹಳೇ ಒಡಂಬಡಿಕೆಯ ಧರ್ಮಶಾಸ್ತ್ರ ಮತ್ತು ಯೇಸುವಿನೊಡನೆ ನಡೆದಂತಹ ಅಪೊಸ್ತಲರಿಂದ ಅವರು ಕಲಿಸಲ್ಪಟ್ಟಂತಹ ಮೌಖಿಕ ರೂಪದಲ್ಲಿನ ಸುವಾರ್ತೆಗಳನ್ನು (ಇದನ್ನು ನಾವು ತಿಳಿದಿರುವಂತೆ) ಹೊಂದಿತ್ತು. ನಿಧಾನವಾಗಿ ಸುವಾರ್ತೆಗಳು ಮತ್ತು ಪತ್ರಿಕೆಗಳು ಬರೆಯಲ್ಪಟ್ಟವು ಮತ್ತು ವಿವಿಧ ಸಭೆಗಳಿಗೆ ಹಸ್ತಾಂತರಿಸಲಾಯಿತು. ಇಂದು ನಮಗೆ ದೊರೆಯುವಂತಹ ಸಾಧನಗಳು, ತರಬೇತಿ ಮತ್ತು ಎಲ್ಲಾ ಮೂಲಸಂಪನ್ಮೂಲಗಳನ್ನು ಅವರು ಹೊಂದಿರಲಿಲ್ಲ ಆದಾಗ್ಯೂ ಅಪ್ರಾಕೃತ ಸೇವೆಯು ಸಾಮಾನ್ಯವಾಗಿತು ಪ್ರತಿಯೊಬ್ಬ ವಿಶ್ವಾಸಿಯು ದೇವರ ಬಲದಲ್ಲಿ ಚಲಿಸಲು ಶಕ್ತರಾದಂತೆ ಕಾಣಿಸಿತ್ತು.

ಇಂದಿನ ವಿಶ್ವಾಸಿಗಳು

ವಿಶ್ವಾಸಿಗಳ ಕುರಿತು ಕರ್ತನಾದ ಯೇಸುವು ಮಾತಾನಾಡಿದಂತದೆಲ್ಲವು ಸಭಾ ಯುಗದಾದ್ಯಂತ ಎಲ್ಲಾ ವಿಶ್ವಾಸಿಗಳಿಗಾಗಿದ್ದಿತ್ತು. ಆತನ ವಾಗ್ದಾನಗಳ ಮೇಲೆ ಒಂದು ನೂರು ವರುಷಗಳ ಮುಕ್ತಾಯವನ್ನು ಆತನು ಸೂಚಿಸಲಿಲ್ಲ.

ಪವಿತ್ರಾತ್ಮನ ಬಲದ ವಾಗ್ದಾನವು ಇಂದು ನಮಗಾಗಿ ಆತನ ಸಾಕ್ಷಿಗಳಾಗಿರುವುದಾಗಿದೆ. (ಅಪೊಸ್ತಲರ ಕೃತ್ಯಗಳು 1:8 ಅಪೊಸ್ತಲರ ಕೃತ್ಯಗಳು 2:38-39).

ಆತನಲ್ಲಿ ನಂಬಿಕೆಯಿಡುವವರಿಗೆ ಸೂಚಕ ಕಾರ್ಯಗಳು ಉಂಟಾಗುವವು ದೆವ್ವಗಳನ್ನು ಬಿಡಿಸುವರು, ಹೊಸಭಾಷೆಗಳಿಂದ ಮಾತಾಡುವರು, ಹಾವುಗಳನ್ನು ಎತ್ತುವರು, ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಯಾವ ಕೇಡೂ ಆಗುವದಿಲ್ಲ; ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಇವೆಲ್ಲವೂ ಇನ್ನೂ ಮಾನ್ಯವಾಗಿವೆ ಮತ್ತು ಇಂದು ಜರುಗುತ್ತಿವೆ. (ಮಾರ್ಕ 16:17-18)

ಆತ್ಮನ ಅಪ್ರಾಕೃತ ತೋರ್ಪಡಿಸುವಿಕೆಗಳು (ಆತ್ಮನ ವರಗಳು 1 ಕೊರಿಂಥದವರಿಗೆ 12:7-11) ಇನ್ನೂ ಇಂದಿನ ಸಭೆಗಳಲ್ಲಿ ಇವೆ.

ಯಾರಾದರೂ ಅಸ್ವಸ್ಥರಾಗಿದ್ದರೆ, ಅವರ ಮೇಲೆ ಪ್ರಾರ್ಥಿಸಲೂ ಹಿರಿಯರನ್ನು ಕರೆಯುವುದು, ಸ್ವಸ್ಥತೆಗಾಗಿ ಅವರನ್ನು ಕರ್ತನ ಹೆಸರಿನಲ್ಲಿ ಅಭಿಷೇಕಿಸುವುದರ ಉಪದೇಶವು ಇಂದಿನ ಸಭೆಯಲ್ಲಿ ಇನ್ನೂ ಇದೇ (ಯಾಕೋಬನು 5:14-15).

ಯೇಸುವು ಮತ್ತು ಅಪೊಸ್ತಲರು ಇಂತಹ ಅಪ್ರಾಕೃತ ಕೃತ್ಯಗಳನ್ನು ಹಿಂತೆಗೆದುಕೊಳ್ಳಲಾದ ಯಾವುದೇ ಸೂಚನೆಗಳನ್ನು ನಾವು ನೋಡುವುದಿಲ್ಲ. ಆದ್ದರಿಂದ ಇಂದಿನ ವಿಶ್ವಾಸಿಗಳು, ಪವಿತ್ರಾತ್ಮನ ಬಲದಿಂದ ಮತ್ತು ಕರ್ತನಾದ ಯೇಸುವಿನ ಹೆಸರಿನಲ್ಲಿ ಅಪ್ರಾಕೃತ ಕಾರ್ಯಗಳನ್ನು ತೋರ್ಪಡಿಸಬಹುದು ಮತ್ತು ಪಡೆದುಕೊಳ್ಳಲೂ ನಿರೀಕ್ಷಿಸಬಹುದು.

ಪರಿಪೂರ್ಣವಾಗಿರುವುದು ಯಾವಾಗ ಬಂದಿದೆ

1ಕೊರಿಂಥದವರಿಗೆ 13 ರಲ್ಲಿ ನೋಡುವಂತಹ ಅಪ್ರಾಕೃತವಾದವುಗಳಿಗಾಗಿ ಮುಗಿಯುವ ದಿನಾಂಕದ ಕಲ್ಪನೆಯನ್ನು ಬೆಂಬಲಿಸಲು ಈ ಭಾಗವು ಕೆಲವು ಸಮಯದಲ್ಲಿ ಉಪಯೋಗಿಸಲ್ಪಟ್ಟಿದೆ. ಇದನ್ನು ನೋಡೋಣ:

1 ಕೊರಿಂಥದವರಿಗೆ 13:9-13
9 ಅಪೂರ್ಣವಾಗಿ ತಿಳುಕೊಳ್ಳುತ್ತೇವೆ ಅಪೂರ್ಣವಾಗಿ ಪ್ರವಾದಿಸುತ್ತೇವೆ.
10 ಆದರೆ ಸಂಪೂರ್ಣವಾದದ್ದು ಬಂದಾಗ ಅಪೂರ್ಣವಾದದ್ದು ಇಲ್ಲದಂತಾಗುವದು
11 ನಾನು ಬಾಲಕನಾಗಿದ್ದಾಗ ಬಾಲಕನ ಮಾತುಗಳನ್ನಾಡಿದೆನು. ಬಾಲಕನ ಸುಖ ದುಃಖಗಳನ್ನು ಅನುಭವಿಸಿದೆನು ಬಾಲಕನ ಆಲೋಚನೆಗಳನ್ನು ಮಾಡಿಕೊಂಡೆನು ಪ್ರಾಯಸ್ಥನಾದ ಮೇಲೆ ಬಾಲ್ಯದವುಗಳನ್ನು ಬಿಟ್ಟು ಬಿಟ್ಟೆನು
12 ಈಗ ಕಂಚಿನ ದರ್ಪಣದಲ್ಲಿ ಕಾಣಿಸುವಂತೆ (ದೇವರ ಮುಖವು) ನಮಗೆ ಮೊಬ್ಬಾಗಿ ಕಾಣಿಸುತ್ತದೆ. ಆಗ ಮುಖಾಮುಖಿಯಾಗಿ ಆತನನ್ನು ನೋಡುವೆವು. ಈಗ ಸ್ವಲ್ಪ ಮಾತ್ರ ನನಗೆ ತಿಳಿದದೆ ಆಗ ದೇವರು ನನ್ನನ್ನು ಸಂಪೂರ್ಣವಾಗಿ ತಿಳುಕೊಂಡಂತೆ ನಾನು ಸಂಪೂರ್ಣವಾಗಿ ತಿಳುಕೊಳ್ಳುವೆನು
13 ಹೀಗಿರುವದರಿಂದ ನಂಬಿಕೆ ನಿರೀಕ್ಷೆ ಪ್ರೀತಿ ಈ ಮೂರೆ ನಿಲ್ಲುತ್ತವೆ ಇವುಗಳಲ್ಲಿ ದೊಡ್ಡದ್ದು ಪ್ರೀತಿಯೇ.

1ಕೊರಿಂಥದವರಿಗೆ 13 ರ 9ನೇ ವಚನದಲ್ಲಿ, ನಾವುಗಳು "ಭಾಗದಲ್ಲಿ" ಪ್ರವಾದಿಸುತ್ತೇವೆ ಎಂಬುದಾಗಿ ನಾವು ತಿಳಿಯುವಂತೆ ಪೌಲನು ಮಾಡಿದ್ದಾನೆ. ದೇವರು ನಮಗೆ ಎಲ್ಲವನ್ನು ಪ್ರಕಟಿಸುವುದಿಲ್ಲ. ದೇವರು ಪ್ರಕಟಿಸುವಂತಹ ಮಾಹಿತಿಯ ಭಾಗವನ್ನು ಅಥವಾ ತುಂಡನ್ನು ನಾವು ಪ್ರವಾದಿಸುತ್ತೇವೆ. ಎಲ್ಲಾ ಪ್ರಕಟಿಸುವ ವರಗಳು ಮತ್ತು ಆತ್ಮನ ಎಲ್ಲಾ

ವರಗಳ ಕಾರ್ಯವೈಖರಿಯು ಸಹ ಸತ್ಯವಾದುದಾಗಿದೆ. ಪ್ರತಿಯೊಂದು ವರ ಅಥವಾ ಆತ್ಮನ ತೋರ್ಪಡಿಸುವಿಕೆಯು ನಮ್ಮ ಅಪರಿಮಿತ ದೇವರ ಮತ್ತು ಆತನು ಏನಾಗಿದ್ದಾನೆಂಬುದರ ಅಭಿವ್ಯಕ್ತತೆಯ ಒಂದು ಭಾಗ ಅಥವಾ ಒಂದು ತುಂಡು ಆಗಿದೆ.

ಆಮೇಲೆ 1ಕೊರಿಂಥದವರಿಗೆ 13:10ರಲ್ಲಿ ಆತ್ಮನ ವರಗಳ ಭಾಗವಾಗಿರುವಂತದ್ದು, "ಸಂಪೂರ್ಣವಾದದ್ದು ಬಂದಾಗ" ಅದು ಇಲ್ಲದಂತಾಗುವುದು ಎಂಬುದಾಗಿ ಪೌಲನು ನಮಗೆ ತಿಳಿಸಿದ್ದಾನೆ. ಕೆಲವರು "ಸಂಪೂರ್ಣವಾದದ್ದನ್ನು" ಸತ್ಯವೇದವನ್ನು, ಸಂಪೂರ್ಣ ಧರ್ಮಶಾಸ್ತ್ರವು ಧರ್ಮಶಾಸ್ತ್ರಗಳಲ್ಲಿ (ಸತ್ಯವೇದ) ಪರಿಪೂರ್ಣವಾದದು, ಜಡವಾದದ್ದು, ದೈವ ಪ್ರೇರಿತ ವಾಕ್ಯಗಳು ಆಗಿವೆ.

ಆದರೂ 1ಕೊರಿಥದವರಿಗೆ 13 ರಲ್ಲಿ ಪೌಲನು ಉಲ್ಲೇಖಿಸುತ್ತಿರುವುದನ್ನು ಸ್ಪಷ್ಟವಾಗಿ ಸೂಚಿಸುತ್ತಾನೆ. 1ಕೊರಿಂಥದವರಿಗೆ 13:10 ರಲ್ಲಿ ಸಂಪೂರ್ಣವಾದದ್ದು 1ಕೊರಿಂಥವರಿಗೆ 13:12 ರಲ್ಲಿ ನಾವು ಆತನನ್ನು ಮುಖಾಮುಖಿಯಾಗಿ ನೋಡುತ್ತಿದ್ದೇವೆ ಮತ್ತು ನಾವು ತಿಳಿದಿರುವಂತೆಯೇ ತಿಳಿದುಕೊಳ್ಳುತ್ತೇವೆ ಎಂಬುದಾಗಿ ನಮಗೆ ವಿವರಿಸಲ್ಪಟ್ಟಿದೆ. ಅಪೊಸ್ತಲವಾದ ಯೇಹಾನನು ಸಹ ಹೀಗೆ ಬರೆಯುತ್ತಾನೆ. "...... ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವವೆಂದು ಬಲ್ಲೆವು ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು" (1ಯೋಹಾನ 3:2) ಆದ್ದರಿಂದ "ಸಂಪೂರ್ಣವಾದದ್ದು" ಸತ್ಯವೇದದ ಸಂಕಲವನ್ನು ವ್ಯಾಖ್ಯಾನಿಸಲಾಗುವುದಿಲ್ಲ ಆದರೆ ನಿಶ್ಚಯವಾಗಿ ಆತನನ್ನು ಮುಖಮುಖಿಯಾಗಿ ನೋಡುವ ನಮ್ಮನ್ನು ಸೂಚಿಸುತ್ತದೆ.

ವಾಕ್ಯವೆಂಬುವನು ನರಾವತಾರವೆತ್ತಿದಾಗಲೂ, ಕರ್ತನಾದ ಯೇಸುವು ಆತನ ಭೂಲೋಕದ ಸೇವೆಯಲ್ಲಿ ಆತ್ಮನ ಅಭಿಷೇಕದ ಅಧೀನತೆಯಲ್ಲಿ ಸೇವೆಸಲ್ಲಿಸಿದನೆಂಬುದನ್ನು ಪರಿಗಣಿಸಿರಿ.

(ಲೂಕ 4:17-18, ಅಪೊಸ್ತಲರ ಕೃತ್ಯಗಳು 10:38). ಆಮೇಲೆ ನಾವು ಬರೆಯಲ್ಪಟ್ಟ ವಚನ ಭಾಗಗಳನ್ನು ಸೇವೆ ಸಲ್ಲಿಸುವಾಗ, ಆತ್ಮನ ಅಪ್ರಾಕೃತ ತೋರ್ಪಡಿಸುವಿಕೆಗಳು ಮತ್ತು ಅಭಿಷೇಕದ ಮೇಲೆ ಎಷ್ಟು ಅವಲಂಬಿಸಿರಬೇಕು.

ಅಪೊಸ್ತಲನಾದ ಪೌಲನು ಹಳೇ ಒಡಂಬಸಿಕೆಯ ಗ್ರಂಥಭಾಗಗಳನ್ನು ತಿಳಿದಿದ್ದನು. ಆತನ ಪತ್ರಿಕೆಗಳಲ್ಲಿ ನಮಗಾಗಿ ಅವನು ಬರೆಯಲ್ಪಟ್ಟಂತಹವುಗಳ ಪ್ರಕಟನೆಯನ್ನು ಸಹ ಅವನು ಹೊಂದಿದ್ದನು ಆದಾಗ್ಯೂ ಪವಿತ್ರಾತ್ಮನ ಬಲದ ಮೇಲೆ ಸಂಪೂರ್ಣವಾಗಿ

ಅವಲಂಬಿಸಿದನು ಮತ್ತು ಅವನು ಸ್ವತಃ ತಾನೇ ಸೇವೆಸಲ್ಲಿಸಲ್ಪಟ್ಟನು (1ಕೊರಿಂಥದವರಿಗೆ 2:4-5).

ಆದ್ದರಿಂದ, ವಾಕ್ಯವು ಆತ್ಮನ ಕಾರ್ಯದಿಂದ ದೂರವಿರಿಸುವುದಿಲ್ಲ. ಬದಲಿಗೆ ವಾಕ್ಯ ಮತ್ತು ಆತ್ಮನು ಯೇಸುಕ್ರಿಸ್ತನನ್ನು ದೇವರ ಮಗನಂತೆ ಸಾಕ್ಷಿ ತಾಳಲು ಒಟ್ಟಾಗಿ ಕಾರ್ಯಮಾಡುತ್ತವೆ. "ಇದಲ್ಲದೆ ಆತ್ಮನು ಸಾಕ್ಷಿಕೊಡುವವನಾಗಿದ್ದಾನೆ; ಆತ್ಮನು ಸತ್ಯಸ್ವರೂಪನೇ, ಆತ್ಮ ನೀರು ರಕ್ತ ಎಂಬು ಮೂರು ಸಾಕ್ಷಿಗಳುಂಟು ಈ ಮೂರು ಒಂದೇ ಅಭಿಪ್ರಾಯವಾಗಿ ಸಾಕ್ಷಿ ಹೇಳುತ್ತೇವೆ" (1ಯೋಹಾನನು 5:7).

ಯಥಾರ್ಥ ಪ್ರತಿಯಾಗಿ ನಕಲಿ

ಅಪ್ರಾಕೃತ ಅಭಿವ್ಯಕ್ತತೆಗಳ ಕಡೆಗೆ ಕೆಲವರಿಂದ ಎಬ್ಬಿಸಲ್ಪಟ್ಟಂತಹ ಇನ್ನೊಂದು ಸಾಮಾನ್ಯ ಆಕ್ಷೇಪಣೆಯು ವಿಶೇಷವಾಗಿ ಆತ್ಮನ ವರಗಳ ತೋರ್ಪಡಿಸುವಿಕೆಯಲ್ಲಿ "ಇಂತಹ ಸಂಗತಿಗಳನ್ನು ದುರಾತ್ಮನು ಸಹ ಮಾಡುವಂತಹ" ನಕಲಿಯಾದ ಅಭಿವ್ಯಕ್ತತೆಗಳಿವೆ. ದುರಾತ್ಮನು ಸಹ ಅಂತಹ ಅಪ್ರಾಕೃತ ಸಂಗತಿಗಳನ್ನು ಮಾಡುವಾಗ, ನಾವು ಆತ್ಮನ ಯಥಾರ್ಥ ತೋರ್ಪಡಿಸುವಿಕೆಯಲ್ಲಿ ತೊಡಗಿಸಿಕೊಳ್ಳಬಾರದು ಎಂಬುದಾಗಿ ಅವರು ವಾದಿಸುತ್ತಾರೆ.

ಸೈತಾನನು ಸುಳ್ಳು ಕಾರ್ಯಗಳನ್ನು ಅಥವಾ ಮೋಸಕರ ಸೂಚಕಕಾರ್ಯ ಮತ್ತು ಅದ್ಭುತಕಾರ್ಯಗಳನ್ನು ಮಾಡುತ್ತಾನೆ ಎಂಬುದಾಗಿ ಸತ್ಯವೇದವು ಹೇಳುತ್ತದೆ.

2 ಥೆಸಲೋನಿಕದವರಿಗೆ 2:9
ಆ ಅಧರ್ಮಸ್ವರೂಪನ ಪ್ರತ್ಯಕ್ಷತೆಯು ಸೈತಾನನ ಮಾಟಕ್ಕನುಗುಣವಾಗಿರುವದು. ಅದು ಮೋಸಗೊಳಿಸುವ ಸಕಲವಿಧವಾದ ಮಹತ್ಕಾರ್ಯ ಸೂಚಕಕಾರ್ಯ ಅದ್ಭುತ ಕಾರ್ಯಗಳಿಂದಲೂ ದುರ್ನೀತಿಯ ಎಲ್ಲಾ ವಂಚನೆಯಿಂದಲೂ ಕೂಡಿ ನಾಶನ ಮಾರ್ಗದಲ್ಲಿರುವವರಿಗೋಸ್ಕರ ಸಂಭವಿಸುವದು.

2 ಕೋರಿಂಥದವರಿಗೆ 11:13-15
13 ಆದರೆ ಅಂಥವರು ಸುಳ್ಳು ಅಪೊಸ್ತಲರೂ ಮೋಸಗಾರರಾದ ಕೆಲಸದವರೂ ಕ್ರಿಸ್ತನ ಅಪೋಸ್ತಲರಾಗಿ ಕಾಣಿಸುವದಕ್ಕೆ ವೇಷ ಹಾಕಿಕೊಳ್ಳುವವರೂ ಆಗಿದ್ದಾರೆ.
14 ಇದೇನೂ ಅಶ್ಚರ್ಯವಲ್ಲ ಸೈತಾನನು ತಾನೇ ಪ್ರಕಾಶರೂಪುಳ್ಳ ದೇವದೂತನ ವೇಷವನ್ನು ಹಾಕಿಕೊಳ್ಳುವಾಗ
15 ಅವನ ಸೇವಕರು ಸಹ ನೀತಿಗೆ ಸೇವಕರಾಗಿ ಕಾಣಿಸುವದಕ್ಕೆ ವೇಷಹಾಕಿಕೊಳ್ಳುವದು ದೊಡ್ಡದಲ್ಲ ಅವರ ಅಂತ್ಯಾವಸ್ಥೆಯು ಅವರ ಕೃತ್ಯಗಳಿಗೆ ತಕ್ಕ ಹಾಗೆಯೇ ಆಗುವದು.

ವಿಶ್ವಾಸಿಗಳು ದೇವರ ರಾಜ್ಯದ ಬಲದ ಮೇಲೆ ಮತ್ತು ಅದ್ಭುತಗಳು ಜರುಗುವುದನ್ನು ನೋಡಲೂ ಪವಿತ್ರಾತ್ಮನ ಅಭಿಷೇಕವನ್ನು ಉಪಯೋಗಿಸುವಂತಹ ಅದೇ ರೀತಿಯಲ್ಲಿ ಜನರು ದುರಾತ್ಮನ ಬಲವನ್ನು ಮೋಸಕರ ಸೂಚಕಕಾರ್ಯಗಳು ಮತ್ತು ಅದ್ಭುತಗಳನ್ನು ಮಾಡಲೂ ಹೊಂದಿಕೊಳ್ಳುತ್ತಾರೆ. ಆದಾಗ್ಯೂ ಅದ್ಭುತಕಾರ್ಯಗಳು ಮತ್ತು ಸೂಚಕಕಾರ್ಯಗಳನ್ನು ಮಾಡುವುದನ್ನು ನಿಲ್ಲಿಸಲು ಇದು ಕಾರಣವಲ್ಲ. ಸತ್ಯಕರವಾಗಿ ಇದು ದೇವರ ಬಲದಲ್ಲಿ ತೋರ್ಪಡಿಸುವಿಕೆಯನ್ನು ನಾವು ಅಧಿಕವಾಗಿ ನೋಡಲೂ ನಮ್ಮನ್ನು ಇದು ಪ್ರೇರಿಸಿಬೇಕು.

ನಕಲಿ ಕರೆನ್ಸಿ (ನಾಣ್ಯ/ಹಣ)

ನಮ್ಮ ದಿನನಿತ್ಯದ ಜೀವಿತದಲ್ಲಿ ಏನು ಜರುಗುತ್ತದೆ ಎಂಬುದನ್ನು ವಸ್ತು ನಿಷ್ಟವಾಗಿ ನೋಡೋಣ. ಜನರು ನಕಲಿಯನ್ನು ಮಾಡಲೂ ಕಾರಣವೇನೆಂದರೆ ಯಥಾರ್ಥವಾದದ್ದು ಮೌಲ್ಯವುಳ್ಳದಾಗಿದೆ. ಉದಾಹರಣೆ ನಕಲಿ ಕರೆನ್ಸಿಯ ಕುರಿತು ಯೋಚಿಸಿರಿ, ಇದು ನಮ್ಮ ಪ್ರಪಂಚದ ಭಾಗದಲ್ಲಿ ಸಾಕಷ್ಟು ಅತಿರೇಕವಾಗಿರುವುದಾಗಿದೆ. ಯಾಕೆಂದರೆ ಯಥಾರ್ಥವಾದದ್ದು ಬೆಲೆಯುಳ್ಳದಾಗಿದೆ. ನಕಲಿಯನ್ನು ಸುಲಭವಾಗಿ ಪತ್ತೆಹಚ್ಚದಂತೆ ಸಾಧ್ಯವಾದಷ್ಟು ನೈಜವಾಗಿ ಕಾಣುವಂತೆ ಮಾಡುತ್ತಾರೆ. ವಾಸ್ತವವಾಗಿ, ಮೌಲ್ಯವು ಹೆಚ್ಚಾದಂತೆ, ನಕಲಿಯು ನಿಜವಾದದಂತೆ ಕಾಣುವಂತೆ ಮಾಡಲು ಹೆಚ್ಚಿನ ಪ್ರಯತ್ನಗಳನ್ನು ಮಾಡಲಾಗುತ್ತದೆ. ನಕಲಿಯು ಅಧಿಕೃತವಾದದ್ದನ್ನು ಅಪಖ್ಯಾತಿ ಮಾಡುವುದಿಲ್ಲ ಇದು ಅಧಿಕೃತ ಮೌಲ್ಯವನ್ನು ಎದ್ದು ಕಾಣುವಂತೆ ಮಾಡುತ್ತದೆ. ನಕಲಿ ಕರೆನ್ಸಿ ಇರುವುದರಿಂದ ನಾವುಗಳು ಎಲ್ಲಾ ನೈಜ ಕರೆನ್ಸಿಯನ್ನು ಬಿಸಾಕುವುದಿಲ್ಲ. ! ನಾವು ನೈಜವಾದದ್ದನ್ನು ಸಂರಕ್ಷಿಸುತ್ತೇವೆ ಮತ್ತು ನಕಲಿಯ ಮೇಲೆ ಒಂದು ಕಣ್ಣು ಇಟ್ಟಿರುತ್ತೇವೆ ಮತ್ತು ಅವುಗಳನ್ನು ದೂರವಾಗಿಸುತ್ತೇವೆ. ನಕಲಿ ನೋಟುಗಳನ್ನು ಉತ್ಪಾದಿಸುವಂತಹವರು ಬಹಿರಂಗಗೊಳ್ಳುತ್ತಾರೆ ಮತ್ತು ಕಾರ್ಯಭಾರಕ್ಕೆ ತೆಗೆದುಕೊಳ್ಳಲಾಗಿದೆ. ಅದೇ ರೀತಿಯಾಗಿ ಅಂಧಕಾರದ ಬಲಗಳಿಂದ ಉತ್ಪಾದಿಸಲಾದ ನಕಲಿಗಳ ನಿಮಿತ್ತದಿಂದ ಅಪ್ರಾಕೃತವಾದದ್ದನ್ನು ತೋರ್ಪಡಿಸುವಂತಹ ದೇವರ ನೈಜ ಕಾರ್ಯವನ್ನು ಬಿಟ್ಟುಕೊಡಬಾರದು. ಯಥಾರ್ಥವಾದದರಲ್ಲಿ ಸಂಪೂರ್ಣವಾಗಿ ಮುಳುಗಿರುವುದರಿಂದ ನಕಲಿಯನ್ನು ಗುರ್ತಿಸುವುದು ಉತ್ತಮ ಮಾರ್ಗವಾಗಿದೆ. ಯಾಥಾರ್ಥವಾದದು ಉತ್ತಮ ವಿವರದಲ್ಲಿ ಕಾಣಿಸುವುದೇಗೆ ಎಂಬುದನ್ನು ನಾವು ಒಮ್ಮೆ ತಿಳಿದಾಗ ನಾವು ಸುಲಭವಾಗಿ ನಕಲಿಯನ್ನು ಗುರ್ತಿಸಬಹುದು. ಯಥಾರ್ಥವಾದದ್ದು ವಿವರವಾಗಿ ಹೇಗೆ ಕಾಣಿಸುತ್ತದೆ ಎಂಬುದನ್ನು ತಿಳಿದಿರದವರು ವಂಚನೆಗೆ ಒಳಗಾಗುವವರಾಗಿರುತ್ತಾರೆ.

ದುರಾತ್ಮನ ಬಲಗಳ ಸಾಮರ್ಥ್ಯದಿಂದ ಅದ್ಭುತಗಳನ್ನು ಅದೇ ರೀತಿಯಾದ ಸೂಚಕಕಾರ್ಯಗಳನ್ನು ಇತರರು ಮಾಡುತ್ತಿದ್ದಂತಹ ಪರಿಸರಗಳಲ್ಲಿ ದೇವ ಸೇವಕರುಗಳಾದ ಪ್ರವಾದಿಗಳು ಯಥಾರ್ಥ ದೇವರ ಬಲವನ್ನು ತೋರ್ಪಡಿಸಿದ್ದನ್ನು ಸತ್ಯವೇದದದ್ಯಾಂತ ನಾವು ನೋಡುತ್ತೇವೆ. ಆತನ ಸೇವಕರುಗಳಿಗೆ ಅಪ್ರಾಕೃತ ಸೂಚಕಕಾರ್ಯ ಮತ್ತು ಮಹಾತ್ಕಾರ್ಯಗಳನ್ನು ಮಾಡುವುದನ್ನು ಮಾಟಮಂತ್ರಗಾರರು ಅದೇ ಸಂಗತಿಗಳನ್ನು ಮಾಡುತ್ತಿದ್ದರ ನಿಮಿತ್ತದಿಂದ ನಿಲ್ಲಿಸುವಂತೆ ದೇವರು ಹೇಳಲಿಲ್ಲ.ಬದಲಿಗೆ ದೇವರು ತನ್ನ ಸೇವಕರ ಮೂಲಕ ಕೆಲಸ ಮಾಡುವ ಆತನ ಶಕ್ತಿಯು ಕತ್ತಲೆಯ ಕಾರ್ಯಗಳಿಗಿಂತ ದೊಡ್ಡದಾಗಿದೆ ಎಂದು ಮತ್ತೆ ಮತ್ತೆ ತೋರಿಸಿಕೊಟ್ಟನು.

ಮೋಶೆ ಮತ್ತು ಐಗುಪ್ತ್ಯದಲ್ಲಿ ಮಾಟಗಾರರು

ಮೋಶೆಯು ಫರೋಹನ ಆಸ್ಥಾನದಲ್ಲಿ ಬೆಳೆಸಲ್ಪಟ್ಟವನಾಗಿ, ಐಗುಪ್ತ್ಯದ ಮಾಂತ್ರಿಕರು ಮತ್ತು ಮಾಟಗಾರರು ತೋರಿಸಿದಂತಹ ಬಲಗಳೊಂದಿಗೆ ಪರಿಚಿತವಾಗಿದ್ದನು. ಫರೋಹನ ಮುಂದೆ ಹೋಗಲು ದೇವರು ಮೋಶೆಗೆ ಆದೇಶಾಧಿಕಾರ ನೀಡಿದಾಗ ಮೋಶೆಯು ಹಿಡಿದುಕೊಂಡಿದ್ದ ಕೋಲಿನಿಂದ ಅತ್ಯದ್ಭುಕರವಾದದ್ದನ್ನು ಮೋಶೆಯು ತೋರ್ಪಡಿಸಲು ದೇವರು ಸಿದ್ಧಗೊಳಿಸಿದ್ದನು.

ವಿಮೋಚನಕಾಂಡ 7:8-12
8 ಯೆಹೋವನು ಮೋಶೇ ಆರೋನರ ಸಂಗಡ ಮಾತಾಡಿ
9 ಫರೋಹನು ನಿಮಗೆ ನಾನು ನಿಮ್ಮ ಮಾತನ್ನು ನಂಬುವಂತೆ ನೀವು ಮಹತ್ಕಾರ್ಯವನ್ನು ನನ್ನ ಮುಂದೆ ಮಾಡಬೇಕೆಂದು ಹೇಳಿದರೆ ಮೋಶೆಯು ಆರೋನನಿಗೆ ನಿನ್ನ ಕೈಯಲ್ಲಿರುವ ಕೋಲನ್ನು ಫರೋಹನ ಮುಂದೆ ನೆಲದಲ್ಲಿ ಬೀಸಾಡು ಎಂದು ಹೇಳಬೇಕು ಅದು ಸರ್ಪವಾಗುವದು ಎಂದು ಆಜ್ಞಾಪಿಸಿದನು.
10 ಮೋಶೆ ಆರೋನರು ಫರೋಹನ ಬಳಿಗೆ ಹೋಗಿ ಯೆಹೋವನು ತಮಗೆ ಆಜ್ಞಾಪಿಸಿದಂತೆಯೇ ಮಾಡಿದರು. ಆರೋನನು ತನ್ನ ಕೋಲನ್ನು ಫರೋಹನ ಮತ್ತು ಅವನ ಪರಿವಾರದವರ ಮುಂದೆ ನೆಲದಲ್ಲಿ ಬೀಸಾಡಿದಾಗ ಅದು ಸರ್ಪವಾಯಿತು.
11 ಫರೋಹನು ಐಗುಪ್ತ್ಯ ದೇಶದ ವಿದ್ವಾಂಸರನ್ನೂ ಮಂತ್ರಗಾರರನ್ನೂ ಕರೆಸಿದಾಗ ಆ ಜೋಯಿಸರು ತಮ್ಮ ಗುಪ್ತವಿದ್ಯೆಗಳಿಂದ ಅದೇ ರೀತಿಯಾಗಿ ಮಾಡಿದರು.
12 ಅವರು ತಮ್ಮ ತಮ್ಮ ಕೋಲುಗಳನ್ನು ನೆಲಕ್ಕೆ ಬೀಸಾಡಲು ಅವು ಸರ್ಪಗಳಾದವು. ಆದರೆ ಆರೋನನ ಕೋಲು ಅವರ ಕೋಲುಗಳನ್ನು ನುಂಗಿಬಿಟ್ಟಿತು.

ಮೋಶೆಯು ಮಾಡಿದಂತಹ ಮೊದಲ ಮಹತ್ಕಾರ್ಯವನ್ನು ಐಗುಪ್ತದ ಮಾಟಮಂತ್ರಗಾರರು ಅವರ ದುರಾತ್ಮನ ಬಲಗಳೊಡನೆ ಪುನರಾವರ್ತಿಸಿದರು ಇದಕ್ಕೆ ಬಹುಶಃ ಮೋಶೆಯು ಇನ್ನೂ ಸಿದ್ಧವಾಗಿರಲಿಲ್ಲದಾಗಿದ್ದರು ದೇವರು ಆಶ್ಚರ್ಯದಿಂದ ತೆಗೆದುಕೊಳಲಿಲ್ಲ . ದೇವರು ಈಗಾಗಲೇ ಮಾಟಮಂತ್ರಗಾರರು ಕಾಯ್ರ ಮಾಡುವಂತಹ ಬಲಗಳಿಗಿಂತ ಅತ್ಯುನ್ನತವಾಗಿ ಮೋಶೆಯ ಕೋಲು ಇತರರ ಕೋಲುಗಳನ್ನು ನುಂಗಿಬಿಟ್ಟಿತು.

ಐಗುಪ್ತ್ಯದ ಮಾಟಮಂತ್ರಗಾರರು ಮೋಶೆಯು ಮಾಡಿದಂತಹ ಮುಂದಿನ ಎರಡು ಮಹತ್ಕಾರ್ಯಗಳಾದ – ನದಿಯ ನೀರು ರಕ್ತವಾಯಿತು (ವಿಮೋಚನಕಾಂಡ 7:22) ಮತ್ತು ನದಿಗಳಿಂದ ಕಪ್ಪೆಗಳು ಹೊರ ಬಂದು ಭೂಮಿಯನ್ನು ಮುಚ್ಚಿಕೊಂಡಂತಹ (ವಿಮೋಚನಕಾಂಡ 8:7) ಕಾರ್ಯವನ್ನು ಮಾಡಲು ಶಕ್ತರಾದರು.ಅದೇ ರೀತಿಯ ಮಹತ್ಕಾರ್ಯವನ್ನು ಮಾಟಮಂತ್ರಗಾರರು ಮಾಡುತ್ತಿದ್ದಾಗ ದೇವರು ಗಾಬರಿಯಾಗಿಲ್ಲದ್ದನ್ನು ಗಮನಿಸಿರಿ. ಮೋಶೆಯು ತನ್ನ ಕಾರ್ಯತಂತ್ರ ಬದಲಾಯಿಸಲು ಅಥವಾ ಇತರೆ ಕೆಲವು ಮಾದರಿ ಅಥವಾ ತಂತ್ರೋಪಾಯಗಳನ್ನು ಪ್ರಯತ್ನಿಸುವಂತೆ ದೇವರು ಹೇಳಲಿಲ್ಲ, ದೇವರು ಮೋಶೆಯನ್ನು ಮುಂದಿನ ಮಹತ್ಕಾರ್ಯಕ್ಕೆ ಮುನ್ನಡೆಸಿದನು. ಮೋಶೆಯು ಮೊದಲುಮಾಡಿದ ಮೂರು ಮಹತ್ಕಾರ್ಯಗಳನ್ನು ಮಾಟಮಂತ್ರಗಾರರು ನಕಲಿ ಮಾಡಲು ಶಕ್ತಗೊಂಡರು.ಆದರೆ ಅದು ಅವರ ದುರಾತ್ಮನ ಬಲದ ಸರಬರಾಜಿನಿಂದ ಅಲ್ಲಿಯವರೆಗೆ ಮಾಡುವವರಾದರು. ಅದಕ್ಕೆ ಮಿಗಿಲಾಗಿ, ಅವರು ಕೇವಲ ಪ್ರೇಕ್ಷಕರಾಗಿ ಕಂಡುಬಂದರು ಮತ್ತು ಮೋಶೆಯ ಮೇಲಿದ್ದ ದೇವರ ಹಸ್ತವನ್ನು ಒಪ್ಪಿಕೊಳ್ಳಬೇಕಾಯಿತು. ಸೈತಾನನ ಕಾರ್ಯಗಳಿಂದ ದೇವರಬಲವು ಹೆಚ್ಚು ಶ್ರೇಷ್ಠವಾದದ್ದು.

ವಿಮೋಚನಕಾಂಡ 8:18-19
18 ಜೋಯಿಸರು ತಮ್ಮ ಗುಪ್ತ ವಿದ್ಯೆಯಿಂದ ಹಾಗೆಯೇ ಹೇನುಗಳನ್ನು ಉಂಟು ಮಾಡುವದಕ್ಕೆ ಪ್ರಯತ್ನ ಮಾಡಿದಾಗ್ಯೂ ಆಗದೆ ಹೋಯಿತು. ಆ ಹೇನುಗಳು ಮನುಷ್ಯರ ಮೇಲೆಯೂ ಪಶುಗಳ ಮೇಲೆಯೂ ಇದ್ದವು
19 ಆಗ ಆ ಜೋಯಿಸರು ಇದು ದೇವರ ಕೈಕೆಲಸವೇ ಸರಿ ಎಂದು ಫರೋಹನಿಗೆ ಹೇಳಿದರು ಆದರೂ ಫರೋಹನ ಹೃದಯವು ಕಠಿಣವಾಯಿತ್ತು. ಅವನು ಯೆಹೋವನು ಮೋಶೆಗೆ ಮುಂತಿಳಿಸಿದಂತೆಯೇ ಅವನು ಅವರ ಮಾತನ್ನು ಕೇಳದೆ ಹೋದನು.

ನಮಗಾಗಿ ಒಂದು ಪಾಠ ಇಲ್ಲದೆ. ಸ್ವಸ್ಥತೆಗಳು ಬಿಡುಗಡೆಗಳು, ಸೂಚಕಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಯೇಸುವಿನ ಹೆಸರಿನಲ್ಲಿ ಮಾಡುವುದನ್ನು ನಕಲಿಯಿಂದ ಮಹತ್ಕಾರ್ಯಗಳು ಜರುಗುತ್ತಿರುವುದರ ನಿಮಿತ್ತದಿಂದ ನಾವು ನಿಲ್ಲಿಸಲು ಸಾಧ್ಯವಿಲ್ಲ ಅಂಧಕಾರದ ಬಲಗಳಿಂದ ದೇವರ ಬಲವು ಅಧಿಕವಾಗಿ ಶ್ರೇಷ್ಟವಾದದ್ದೆಂದು ಪ್ರಪಂಚಕ್ಕೆ ನಾವು ತೋರಿಸುವುದು ಅಗತ್ಯಕರವಾಗಿದೆ.

ಎಲೀಯನು ಮತ್ತು ಪ್ರವಾದಿಯಾದ ಬಾಳನೂ

ಪ್ರವಾದಿಯಾದ ಬಾಳನೂ ಮತ್ತು ಪ್ರವಾದಿಯಾದ ಅಶೇರನು ಅರಸನಾದ ಅಹಾಬನು ಮತ್ತು ಅವನ ಹೆಂಡತಿಯಾದ ಈಜೆಬೆಲಳ ಬೆಂಬಲದೊಡನೆ ಇದ್ದಂತಹ ಸಮಯದಲ್ಲಿ ಎಲೀಯನು ಜೀವಿಸಿದ್ದನು. ಈಜೆಬೆಲಳಿಂದ ಉತ್ತೇಜಿಸಲ್ಪಟ್ಟಂತಹ ವಿಗ್ರಹಾರಾಧನೆ ಮತ್ತು ಮಾಟಮಂತ್ರಗಳಿಂದ ಭೂಮಿಯು ತುಂಬಿಸಲ್ಪಟ್ಟಿತು. ಎಲೀಯನು ಕರ್ನಿಂದ

ನೆಡೆಸಲ್ಪಟ್ಟನು, ಇಂತಹ ಪ್ರವಾದಿಗಳನ್ನು ಕರ್ಮೆಲಿನ ಬೆಟ್ಟದ ಮೇಲೆ ಸವಾಲು ಹಾಕಿದನು.(1 ಅರಸುಗಳು 18) ದಿನದ ಅಂತ್ಯದಲ್ಲಿ ಎಲೀಯನ ಸರಳ ಪ್ರಾರ್ಥನೆಯ ಪ್ರತಿಕ್ರಿಯೆಯಾಗಿ ಪರಲೋಕದಿಂದ ಬೆಂಕಿಯು ಇಳಿದು ಬಂದಿತು ಮತ್ತು ಯಜ್ಞವೇದಿ ಮತ್ತು ಯಜ್ಞಮಾಂಸವನ್ನೂ ಕಟ್ಟಿಗೆ ಕಲ್ಲು ಮಣ್ಣುಗಳನ್ನು ದಹಿಸಿಬಿಟ್ಟಿತು. ಇದನ್ನು ಸುಳ್ಳು ಪ್ರವಾದಿಗಳು ಮಾಡಲು ಶಕ್ತರಾಗಲಿಲ್ಲ ಜನರು ಈಗ ಕರ್ತನಿಗೆ ಅಡ್ಡಬಿದ್ದರು ಮತ್ತು ಕರ್ತನಾದ ದೇವರನ್ನು ನಿಜಕ್ಕೂ ಅಂಗಿಕರಿಸಿದರು!

1 ಅರಸುಗಳು 18:37-39
37 ಕಿವಿಗೊಡು ಯೆಹೋವನೆ ಕಿವಿಗೊಡು ಯೆಹೋವನಾದ ನೀನೊಬ್ಬನೆ ದೇವರೂ ಈ ಜನರ ಮನಸ್ಸನ್ನು ನಿನ್ನ ಕಡೆಗೆ ತಿರುಗಿಸಿಕೊಳ್ಳುವವನೂ ಆಗಿರುತ್ತೀ ಎಂಬುದನ್ನು ಇವರಿಗೆ ತಿಳಿಯಪಡಿಸು ಎಂದು ಪ್ರಾರ್ಥಿಸಿದನು.
38 ಕೂಡಲೆ ಯೆಹೋವನ ಕಡೆಯಿಂದ ಬೆಂಕಿಬಿದ್ದು ಯಜ್ಞಮಾಂಸವನ್ನೂ ಕಟ್ಟಿಗೆ ಕಲ್ಲು ಮಣ್ಣುಗಳನ್ನು ದಹಿಸಿಬಿಟ್ಟು ಕಾಲಿವೆಯಲ್ಲಿದ್ದ ನೀರನ್ನೆಲ್ಲಾ ಹೀರಿಬಿಟ್ಟಿತು .
39 ಜನರೆಲ್ಲರೂ ಅದನ್ನು ಕಂಡು ಬೋರ್ಲಬಿದ್ದು ಯೆಹೋವನೆ ದೇವರು ಯೆಹೋವನೆ ದೇವರು ಎಂದು ಕೂಗಿದರು.

ಸಭೆಯ ಮೇಲೆ ಆತನ ಪವಿತ್ರಾತ್ಮನನ್ನು ದೇವರು ಸುರಿಸುವಂತ ಒಂದು ಸಮಯದಲ್ಲಿ ನಾವು ನಿಜಕ್ಕೂ ಜೀವಿಸುತ್ತಿದ್ದೇವೆ. ಅನೇಕ ಸುಳ್ಳುಕ್ರಿಸ್ತನವರು , ಸುಳ್ಳುಪ್ರವಾದಿಗಳು, ಮತ್ತು ಭೂಮಿಯನ್ನು ದುರಾತ್ಮನ ಬೋಧನೆಗಳು ಪ್ರವಾಹಿಸುತ್ತಿರುವುದು ಸತ್ಯಕರವಾಗಿರುವುದರಿಂದ ದೇವರ ಶಕ್ತಿಯನ್ನು ಪ್ರದರ್ಶಿಸುವ ಅಗತ್ಯವು ಎಂದಿಗೂ ಹೆಚ್ಚಿಲ್ಲ ಎಂಬುದು ನಿಜವಾಗಿದೆ. ಜನರು ಕರ್ತನನ್ನು ಮತ್ತು ಆತನ ಮಹಿಮೆಯು ಪ್ರದರ್ಶಿಸುವುದನ್ನು ನೋಡುವುದು ಅವಶ್ಯವಾಗಿದೆ ಆದ್ದರಿಂದ ನಾವು ಪ್ರಸಂಗಿಸುವ ಕರ್ತನಾದ ಯೇಸು ನಿಜಕ್ಕೂ ಆತನು ದೇವರು ಎಂಬುದಾಗಿ ಸಂಶಯಕ್ಕೂ ಮಿಗಿಲಾಗಿ ತಿಳಿದುಕೊಳ್ಳಬೇಕು .

ಯೇಸುವಿನ ಸೇವೆ

ಯೇಸುವು ಸಹ ದೆವ್ವಗಳ ಒಡೆಯನಾದ ಬೆಲ್ಜೆಬೂಲನ ಬಲದಿಂದ ಆತನ ಮಹತ್ಕಾರ್ಯಗಳನ್ನು ಮಾಡುತ್ತಿದ್ದಾನೆಂಬುದಾಗಿ ಸುಳ್ಳಾಗಿ ಆಪಾದಿಸಲ್ಪಟ್ಟನು. ಯೇಸುವಿನ ಸಮಯದಲ್ಲೂ ಸಹ ಮಂತ್ರಗಾರರ, ಮಾಟಗಾರರು ಮತ್ತು ಮಾಟಮಂತ್ರ ಮಂತ್ರವಾದಿಗಳು, ಮಾಟಗಾರರು ಮತ್ತು ಮಾಟಮಂತ್ರ ವೃತ್ತಿಗರು ಪ್ರದೇಶದಲ್ಲಿ ಇದ್ದರೂ ಮತ್ತು ಸ್ವಸ್ಥತೆ ಮತ್ತು ಅದ್ಭುತಕಾರ್ಯಗಳನ್ನು ಮಾಡುತ್ತಿದ್ದರೆಂಬುದನ್ನು ಇದು ನಮಗೆ ಸೂಚಿಸುತ್ತದೆ. ಆದಾಗ್ಯೂ ಕರ್ತನಾದ ಯೇಸುವು ಆತನ ಸೇವೆಯು ಆತನ ಸೇವೆಯ ಕಾರ್ಯ ನೀತಿಗಳನ್ನು ಬದಲಿಸಲಿಲ್ಲ ಮತ್ತು ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಮಾಡುವುದನ್ನು ತೊರೆಯಲಿಲ್ಲ. ಆತನು ಇನ್ನೂ ದೇವರ

ಶಕ್ತಿಯನ್ನು ಪ್ರದರ್ಶಿಸುತ್ತಲೇ ಇದ್ದಾನೆ, ಶತನು ದೆವ್ವಗಳನ್ನು ಬಿಡಿಸುವಂತಹ ಆತ್ಮನ ಶಕ್ತಿಯು ಸೈತಾನನ ಶಕ್ತಿಗಿಂತ ಶ್ರೇಷ್ಟವಾದದು ಎಂದು ಸೂಚಿಸುತ್ತದೆ.

ಮತ್ತಾಯ 12:24-29
24 ಆದರೆ ಫರಿಸಾಯರು ಅದನ್ನು ಕೇಳಿ ಇವನು ದೆವ್ವಗಳ ಒಡೆಯನಾದ ಬೆಲ್ಜೆಬೂಲನ ಸಹಾಯದಿಂದ ದೆವ್ವಗಳನ್ನು ಬಿಡಿಸುತ್ತಾನೇ ಹೊರತು ಬೇರೆ ರೀತಿಯಿಂದ ಬಿಡಿಸುವುದಿಲ್ಲ ಅಂದರು
25 ಆತನು ಅವರ ಆಲೋಚನೆಗಳನ್ನು ತಿಳುಕೊಂಡು ಅವರಿಗೆ ಹೇಳಿದೇನೆಂದರೆ- ಯಾವ ರಾಜ್ಯವಾದರೂ ಪಟ್ಟಣವಾದರೂ ಮನೆಯಾದರೂ ನಿಲ್ಲದು
26 ಅದರಂತೆ ಸೈತಾನನು ಸೈತಾನನನ್ನು ಹೊರಡಿಸಿದರೆ ತನ್ನಲ್ಲಿ ಭೇದ ಹುಟ್ಟಿಸಿಕೊಂಡ ಹಾಗಾಯಿತು
27 ಹಾಗಾದರೆ ಅವನ ರಾಜ್ಯವು ಹೇಗೆ ಉಳಿದೀತು? ನಾನು ಬೆಲ್ಜೆಬೂಲನ ಬಲದಿಂದ ದೆವ್ವಗಳನ್ನು ಬಿಡಿಸುವದಾದರೆ ನಿಮ್ಮವರು ಯಾರ ಬಲದಿಂದ ಬಿಡಿಸುತ್ತಾರೆ? ಆದದರಿಂದ ಅವರೇ ನಿಮಗೆ ನ್ಯಾಯತೀರಿಸುವವರಾಗುವರು
28 ನಾನು ದೇವರ ಆತ್ಮ ಬಲದಿಂದಲೆ ದೆವ್ವಗಳನ್ನು ಬಿಡಿಸುವದಾದರೆ ದೇವರ ರಾಜ್ಯವು ನಿಮ್ಮ ಹತ್ತಿರಕ್ಕೆ ಬಂತಲ್ಲಾ.
29 ಇದಲ್ಲದೆ ಒಬ್ಬನು ಮೊದಲು ಬಲಿಷ್ಟನನ್ನು ಕಟ್ಟಿಹಾಕದೆ ಆ ಬಲಿಷ್ಟನ ಮನೆಯನ್ನು ಹೊಕ್ಕು ಅವನ ಸೊತ್ತನ್ನು ಸುಲುಕೊಳ್ಳುವುದು ಹೇಗೆ? ಕಟ್ಟಿಹಾಕಿದ ಮೇಲೆ ಅವನ ಮನೆಯನ್ನು ಸುಲುಕೊಂಡನು.

ಅನೇಕ ಇತರೆ ಉದಾಹರಣೆಗಳು

ನಾವು ಅಪೊಸ್ತಲರ ಕೃತ್ಯಗಳ ಪುಸ್ತಕವನ್ನು ಸಮೀಕ್ಷೆಮಾಡುವಾಗ ಕರ್ತನಾದ ಯೇಸುವಿನ ಸೇವಕರುಗಳು, ಸೈತಾನನ ಬಲದಿಂದ ಅಪ್ರಾಕೃತ ಮಹತ್ಕಾರ್ಯಗಳನ್ನು ಮಾಡುತ್ತಿದ್ದಂತಹ ಜನರನ್ನು ವಿರುದ್ದವಾಗಿ ಹೊಂದಿದಂತಹ ಅನೇಕ ಉದಾಹರಣೆಗಳನ್ನು ನಾವು ನೋಡುತ್ತೇವೆ.

- ಫಿಲಿಪ್ಪನು ಮತ್ತು ಸೀಮೋನನೆಂಬ ಮಂತ್ರವಾದಿ (ಅಪೊಸ್ತಲರ ಕೃತ್ಯಗಳು 8:5-24)
- ಪೌಲನು ಮತ್ತು ಪಾಫೋಸ್ ದ್ವೀಪದ ಮಂತ್ರವಾದಿಯಾದ ಎಲುಮನು (ಅಪೊಸ್ತಲರ ಕೃತ್ಯಗಳು 13:6-12)
- ಪೌಲನು ಮತ್ತು ಫಿಲಿಪ್ಪಿಯಲ್ಲಿ ಕಣಿ ಹೇಳೂವಂತಹ ಆತ್ಮದೊಡನೆ ದೆವ್ವಹಿಡಿದ ಹುಡುಗಿ (ಅಪೊಸ್ತಲರ ಕೃತ್ಯಗಳು 16:12-18)
- ಎಫೆಸದಲ್ಲಿ ಪೌಲನು (ಅಪೊಸ್ತಲರ ಕೃತ್ಯಗಳು 19:11-21)

ಈ ಎಲ್ಲಾ ಪರಿಸ್ಥಿತಿಗಳಲ್ಲಿ ಸೈತಾನನ ಬಲಕ್ಕಿಂತ ಕರ್ತನಾದ ಯೇಸುವಿನ ಬಲವು ಬಹಳ ಅತ್ಯುನ್ನತವಾದದ್ದು ಎಂಬುದಾಗಿ ಕರ್ತನಾದ ಯೇಸುವಿನ ಸೇವಕರುಗಳೂ ಪ್ರದರ್ಶಿಸಿದರು. ಇಂದು ಅದನ್ನೇ ನಾವು ಮಾಡಬೇಕು. ನಮ್ಮ ದೇವರು ದೊಡ್ಡವನು! ಆತನ ಬಲವು ಕತ್ತಲೆಯ ಬಲಗಳಿಂದ ಮಹೋನ್ನತವಾಗಿದೆ!

ನಾನು ನಂಬದೇ ಹೋದರೆ ಏನು?

ಮಾರ್ಕ 16:17-18
17 ಇದಲ್ಲದೆ ನಂಬುವವರಿಂದ ಈ ಸೂಚಕ ಕಾರ್ಯಗಳು ಉಂಟಾಗುವವು ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು ಹೊಸಭಾಷೆಗಳಿಂದ ಮಾತಾಡುವರು ಹಾವುಗಳನ್ನು ಎತ್ತುವರು
18 ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಯಾವ ಕೇಡೂ ಆಗುವದಿಲ್ಲ ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಎಂದು ಹೇಳಿದನು.

ಯೋಹಾನ 14:12
ನಿಮಗೆ ನಿಜನಿಜವಾಗಿ ಹೇಳುತ್ತೇನೆ ನನ್ನನ್ನು ನಂಬುವವನು ನಾನು ನಡಿಸುವ ಕ್ರಿಯೆಗಳನ್ನು ತಾನೂ ನಡಿಸುವನು ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು.

ಒಂದೊಂದು ಸಲ ಕೆಲವು ವಿಶ್ವಾಸಿಗಳು, ಕರ್ತನಾದ ಯೇಸು ಕ್ರಿಸ್ತನಲ್ಲಿ ಅವರು ನಂಬಿಕೆಯಿಡುತ್ತಾರೆ, ಅವರು ವ್ಯಕ್ತಿಯಲ್ಲಿ ನಂಬಿಕೆಯಿಡುತ್ತಾರೆ ಪವಿತ್ರಾತ್ಮನ ಕಾರ್ಯಗಳಲ್ಲಿ ನಂಬಿಕೆಯಿಡುತ್ತಾರೆ, ಸತ್ಯವೇದದಲ್ಲಿ ಅವರು ನಂಬಿಕೆಯಿಡುತ್ತಾರೆ ಎಂಬುದಾಗಿ ನಾವು ಕೇಳುತ್ತೇವೆ ಆದರೆ ಸೂಚಕಕಾರ್ಯಗಳು, ಅದ್ಭುತಕಾರ್ಯಗಳು ಮತ್ತು ಆತ್ಮನ ವರಗಳು ಇಂದು ನಮಗಾಗಿ ಇವೆ ಎಂಬುದಾಗಿ ಅವರು ನಂಬುವುದಿಲ್ಲ. ಕೆಲವೊಮ್ಮೆ ಅವರು “ನೀವು ಮಾಡುವ ರೀತಿಯಲ್ಲಿ ನಾವು ಈ ವಿಷಯಗಳನ್ನು ನಂಬುವುದಿಲ್ಲ” ಎಂದು ಸಹ ಹೇಳಬಹುದು. ಸರಿ ಗೌರವಿಸುತ್ತೇವೆ ಮತ್ತು ಮಹತ್ಕಾರ್ಯಗಳು ಅಥವಾ ಆತ್ಮನ ವರಗಳನ್ನು ನಂಬಬೇಕೆಂಬುದಾಗಿ ಯಾರೋಬ್ಬರನ್ನೂ ಒತ್ತಾಯ ಪಡಿಸುವುದಿಲ್ಲ ಮತ್ತು ಬಲವಂತ ಪಡಿಸುವುದಿಲ್ಲ. ಯೇಸುವಿನ ಕೃತ್ಯಗಳೂ ಬೋಧನೆಗಳು, ಪ್ರಸಂಗಗಳು ಹಾಗೆಯೇ ಸ್ವಸ್ತತೆಗಳು, ಅದ್ಭುತಗಳು, ಸೂಚಕಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಸಹ ಒಳಗೊಂಡಿದ್ದವು ಎಂಬುದನ್ನು ಸಹ ನಾವು ಅರ್ಥಮಾಡಿಕೊಳ್ಳಬೇಕು ಆದ್ದರಿಂದ ಯಾರಾದರೂ ಅಪ್ರಾಕೃತ ಅಂಶಗಳಲ್ಲಿ ತೊಡಗಿಸಿಕೊಳ್ಳಲು ಬಗೆಹರಿಸದಿದ್ದರೆ ಇದು ಸಂಪೂರ್ಣವಾಗಿ ಅವರ ಆಯ್ಕೆಯಾಗಿರುತ್ತದೆ. ಪ್ರತಿಯೊಬ್ಬನು ತನ್ನ ಸ್ವಂತ ಮನಸ್ಸಿನಲ್ಲಿ ಪೂರ್ಣವಾಗಿ ಒಡಂಬಡಿಸಬೇಕೆಂಬುದಾಗಿ ವಚನ ಭಾಗವು ನಮಗೆ ಹೇಳುತ್ತದೆ. ನಂಬುವವರಿಗೆ ಸೂಚಕಕಾರ್ಯಗಳು ಹಿಂಬಾಲಿಸುವವು ಮತ್ತು ನೀವು ನಂಬದಿದ್ದರೆ ಸೂಚಕಕಾರ್ಯಗಳು ನಿಮ್ಮನ್ನು ಹಿಂಬಾಲಿಸುವುದಿಲ್ಲ. ನೀವು ನಂಬದೇ ಹೋದರೆ ಅಮೇಲೆ ನೀವು ಯೇಸುವು ಮಾಡಿದಂತಹ ಕಾರ್ಯಗಳನ್ನು ಮಾಡುವುದಿಲ್ಲ ಮತ್ತು ಸ್ವಸ್ತತೆಗಳು, ಅದ್ಭುತಗಳು, ಸೂಚಕಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಕ್ಷೇತ್ರದಲ್ಲಿ

ಇನ್ನೂ ಹೆಚ್ಚಿನ ಕಾರ್ಯಗಳನ್ನು ಮಾಡುವುದಿಲ್ಲ. ಯೇಸುಕ್ರಿಸ್ತನಲ್ಲಿ ವಿಶ್ವಾಸಿಗಳಾಗಿ, ಆತ್ಮನ ಅಪ್ರಾಕೃತ ಮಹತ್ಕಾರ್ಯಗಳ ಮೇಲೆ ಅಗತ್ಯವಾಗಿ ಒಪ್ಪಿಕೊಳ್ಳದಿದ್ದಾಗ್ಯೂ ಇನ್ನೂ ನಾವು ಒಬ್ಬರಿಗೊಬ್ಬರು ಪ್ರತಿಸಬಹುದು. ಪವಿತ್ರಾತ್ಮನ ವರಗಳನ್ನು ಪ್ರದರ್ಶಿಸುವಂತಹ ಸಂಬಂಧದಲ್ಲಿ ಆತ್ಮನ ಅಧಿಕವಾದ ಕಾರ್ಯಗಳಿಗೆ ಉತ್ಸುಕರಾಗಿರುವವರಿಗೆ ಖಂಡಿತವಾಗಿ ಈ ಪುಸ್ತಕವು ಬರೆಯಲ್ಪಟ್ಟಿದೆ.

ಆಳವಾಗಿ ಬನ್ನಿರಿ (ಆಳಕ್ಕೆ ಬನ್ನಿರಿ)

ಯೆಹೆಜ್ಕೇಲನು 47:1-9

1 ಆ ಮೇಲೆ ಅವನು ನನ್ನನ್ನು ದೇವಸ್ಥಾನದ ಬಾಗಿಲಿಗೆ ಪುನಃ ಕರತಂದನು ಅಹಾ ದೇವಸ್ಥಾನದ ಹೊಸ್ತಲ ಕೆಳಗಿನಿಂದ ನೀರು ಹೊರಟು ಮೂಡಲಿಗೆ ಹರಿಯುತ್ತಿತ್ತು (ದೇವಸ್ಥಾನವು ಪೂರ್ವಾಭಿಮುಖವಷ್ಟೆ) ಆ ನೀರು ದೇವಸ್ಥಾನದ ಬಲಗಡೆ ಕೆಳಗಿನಿಂದ ಹೊರಟು ಯಜ್ಞವೇದಿಯ ದಕ್ಷಿಣದಲ್ಲಿ ಹರಿಯುತ್ತಿತ್ತು.

2 ಆಗ ಅವನು ನನ್ನನ್ನು ಬಡಗಣ ಹೆಬ್ಬಾಗಿಲಿಂದ ದೇವಾಲಯದ ಹೊರಗಣ ಮಾರ್ಗವಾಗಿ ಸುತ್ತಿಸಿಕೊಂಡು ಮೂಡಲ ಹೆಬ್ಬಾಗಿಲಿಗೆ ಕರತಂದನು. ಅಲ್ಲಿ ನೋಡಲು ಅದರ ಬಲಗಡೆ ಮೆಲ್ಲಮೆಲ್ಲನೆ ಹರಿಯುವ ನೀರು ಕಾಣಿಸಿತು.

3 ಆ ಪುರುಷನ ಕೈಯಲ್ಲಿ ಹುರಿಯನ್ನು ಹಿಡಿದುಕೊಂಡು ಮೂಡಲಿಗೆ ಮುಂದರಿದು ಸಾವಿರ ಮೊಳ ಅಳೆದು ನನ್ನನ್ನು ನೀರಿನ ಆಚೆಗೆ ದಾಟಿಸಿದನು ಅಲ್ಲ ನೀರು ಹೆಚ್ಚೆ ಮುಳುಗುವಷ್ಟಿತ್ತು.

4 ಅವನು ಪುನಃ ಸಾವಿರ ಮೊಳ ಅಳೆದು ನನ್ನನ್ನು ನೀರಿನ ಆಚೆಗೆ ದಾಟಿಸುವಾಗ ಆ ನೀರು ಮೊಣಕಾಲಿನವರೆಗೆ ಇತ್ತು.

5ಅವನು ಪುನಃ ಸಾವಿರ ಮೊಳ ಅಳೆದು ನನ್ನನ್ನು ನೀರಿನ ಆಚೆಗೆ ದಾಟಿಸುವಾಗ ಆ ನೀರು ಮೊಣಕಾಲಿನವರೆಗೆ ಇತ್ತು. ಅವನು ಮತ್ತೆ ಸಾವಿರ ಮೊಳ ಅಳೆದನು ಅದು ನನ್ನಿಂದ ದಾಟಲಾಗದ ತೊರೆಯಾಗಿತ್ತು. ನೀರು ಏರಿ ಈಜಾಡುವಷ್ಟು ಪ್ರವಾಹವಾಗಿತ್ತು ದಾಟಲಾಗದ ತೊರೆಯಾಗಿತ್ತು

6 ಆಗ ಅವನು ನನಗೆ ನರಪುತ್ರನೇ ಇದನ್ನು ನೋಡಿದಿಯಾ ಎಂದು ಹೇಳೀ ನನ್ನನ್ನು ತೊರೆಯ ದಡಕ್ಕೆ ಹತ್ತಿಸಿ ಹಿಂದಿರುಗಿಸಿದನು

7 ನಾನು ಹಿಂದಿರುಗಲು ಆಹಾ ತೊರೆಯ ಎರಡು ದಡಗಳಲ್ಲಿಯೂ ಅನೇಕಾನೇಕ ವೃಕ್ಷಗಳು ಕಾಣಿಸಿದವು

8 ಅಗ ಅವನು ನನಗೆ ಹೀಗೆ ಹೇಳೀದನು ಈ ಪ್ರವಾಹವು ಪೂರ್ವ ಪ್ರಾಂತ್ಯಕ್ಕೆ ಹೊರಟು ಅದಾಬಾ ಎಂಬ ತಗ್ಗಿಗೆ ಇಳಿದು ಲವಣ ಸಮುದ್ರದ ಕಡೆಗೆ ಹರಿಯುವದು [ದೇವಸ್ಥಾನದಿಂದ] ಹೊರಟ ಪ್ರವಾಹವು ಲವಣ ಸಮುದ್ರಕ್ಕೆ [ಸೇರಲು] ಅದರ ನೀರು ಸಿಹಿಯಾಗುವದು

9 ಈ ತೊರೆಯು ಎಲ್ಲೆಲ್ಲಿ ಹರಿಯುತ್ತದೋ ಅಲ್ಲಲ್ಲಿ ಗುಂಪುಗುಂಪಾಗಿ ಚಲಿಸುವ ಸಕಲ ವಿಧ ಜಲಜಂತುಗಳು ಬದುಕಿ ಬಾಳವವು ಮೀನುಗಳು ತಂಡೋಪ ತಂಡವಾಗಿರುವವು. ಈ ನೀರು ಸಮುದ್ರಕ್ಕೆ ಬೀಳಲು [ಆ ನೀರೂ] ಸಹಿಯಾಗುವದು ಈ ತೊರೆಯು ಎಲ್ಲೆಲ್ಲಿ ಹರಿದರೂ ಅಲ್ಲಲ್ಲಿ ಜೀವವುಂಟಾಗುವುದು.

ಯೆಹೆಜ್ಕೇಲನು 47 ಸಹಸ್ರವರ್ಷದ ದೇವಾಲಯ ಮತ್ತು ಈ ದೇವಾಲಯದಿಂದ ಹೊರಹರಿಯುವ ಒಂದು ನದಿಯನ್ನು ಸೂಚಿಸುತ್ತದೆ. ಪ್ರಕಟನೆ ಅಧ್ಯಾಯ 21-22 ರಲ್ಲಿ ಹೊಸ ಯೆರೂಸಲೇಮಿನಲ್ಲಿ ನಾವು ಇದನ್ನು ಹೀಗೆ ನೋಡುತ್ತೇವೆ “ಜೀವಜಲದ ನದಿಯನ್ನು ನನಗೆ ತೋರಿಸಿದನು ಅದು ದೇವರ ಮತ್ತು ಯಜ್ಞದ ಕುರಿಯಾದಾತನ

ಸಿಂಹಾಸನದಿಂದ ಹೊರಟು ಪಟ್ಟಣದ ಬೀದಿಯ ಮಧ್ಯದಲ್ಲಿ ಹರಿಯುತ್ತಿತ್ತು" (ಪ್ರಕಟನೆ 22:1) ಪ್ರಸ್ತುತ ಸಮಯದಲ್ಲಿ ವಿಶ್ವಾಸಿಗಳು ದೇವರ ಆಲಯವಾಗಿದ್ದಾರೆ ಎಂಬುದು ನಮಗೆ ಗೊತ್ತಿದೆ, ವಿಶ್ವಾಸಿಗಳು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ದೇವರು ವಾಸಿಸುವಂತಹ ಸ್ಥಳ (ಅಥವಾ ದೇವಾಲಯ) ಎಂಬುದಾಗಿ ಕರೆಯಲ್ಪಡುತ್ತಾರೆ. ಮತ್ತು ಪ್ರತಿಯೊಬ್ಬ ವಿಶ್ವಾಸಿಯ ಮೂಲಕವಾಗಿ ಬಿಡುಗಡೆಯಾದಂತಹ ಬಲ ಮತ್ತು ಪ್ರಸನ್ನತೆಯು ಜೀವಕರವಾದ ನೀರಿನ ನದಿಗಳು ವಿಶ್ವಾಸಿಗಳಿಂದ ಹೊರಹರಿಯುತ್ತವೆ (ಯೋಹಾನ 7:37-39) ಆದ್ದರಿಂದ ಸಹಸ್ರವರ್ಷದಲ್ಲಿ ಬರಲಿರುವಂತಹದ್ದರಲ್ಲಿ ಮತ್ತು ಹೊಸ ಯೆರೂಸಲೇಮಿನ ಮೀಗಿಲಾಗಿ ನಡುವ ಈಗ ಇಲ್ಲಿ ಒಂದು ಸಮಾನಾಂತರವಿದೆ. ಯೆಹೆಜ್ಕೇಲನು ಅವನ ದರ್ಶನದಲ್ಲಿ ಹೆಜ್ಜೆ ಮುಳೂಗುವಷ್ಟು ಆಳದಿಂದ ಮೊಣಕಾಲಿನವರೆಗಿನ ಆಳ, ಸೊಂಟದವರೆಗಿನ ಆಳದವರೆಗೆ ಮತ್ತು ಮುಂದುವರೆದು ನದಿಯಲ್ಲಿ ಈಜಾಡುವ ಆಳದವರೆಗೂ ಮುಂದುವರೆಯಲು ಆಹ್ವಾನಿಸಲ್ಪಟ್ಟನು. ನಾವು ನದಿಯಲ್ಲಿ ಹೆಜ್ಜೆಮುಳುಗವಷ್ಟು ಆಳ, ಮೊಣಕಾಲನಿನವರೆಗಿನ ಆಳ ಅಥವಾ ಸೊಂಟದವರೆಗಿನ ಆಳದವರೆಗೂ ನಮ್ಮ ಕಾಲು ಭೂಮಿಯ ಮೇಲೆ ಸ್ಥಿರವಾಗಿ ಇರಿಸುವುದರಿಂದ (ನದಿಯ ತಳ) ನಾವು ಇನ್ನೂ ಹತೋಟಿಯಲ್ಲಿರುತ್ತೇವೆ. ನಾವು ಅತೀ ಆಳವಾಗಿ ಹೋಗುವಾಗ ನದಿಗೆ ನಮ್ಮನ್ನು ನಾವೇ ಒಪ್ಪಿಸಿಕೊಡುತ್ತೇವೆ ಮತ್ತು ನದಿಯು ಈಗ ನಮ್ಮನ್ನು ಹೊತ್ತೊಯ್ಯುತ್ತದೆ. ಹೌದು, ಇನ್ನೂ ನಮ್ಮ ಭಾಗವಾದಂತಹ ಈಜಾಡುವುದನ್ನು ನಾವು ಮಾಡಬೇಕು ಆದರೆ ನಮ್ಮನ್ನು ಕೊಂಡೊಯ್ಯುವುದು ನದಿಯಾಗಿರುತ್ತದೆ. ಆತ್ಮನಲ್ಲಿ ಆಳವಾಗಿ ನಾವು ಮುಂದರಿಯಲು, ನಾವು ಹೋದರೆ ಹೋಗಲು ಅನುಮತಿಸುವ ಸ್ಥಳಕ್ಕೆ ಬರುವಾಗ ಮತ್ತು ಆಳವಾದ ಕ್ಷೇತ್ರಗಳಿಗೆ ದೇವರ ಆತ್ಮನು ನಮ್ಮನ್ನು ಮುಂದಕ್ಕೆ ಇರಿಸುವುದನ್ನು ಸೂಚಿಸಲು ನಾವು ಇದನ್ನು ಉಪಯೋಗಿಸುತ್ತೇವೆ.

ನಮ್ಮಲ್ಲಿ ಯಾರೂ ಎಲ್ಲಾ ಆಳಗಳನ್ನು ಮತ್ತು ಪವಿತ್ರಾತ್ಮನ ಕ್ಷೇತ್ರಗಳನ್ನು ಅನ್ವೇಷಿಸಿಲ್ಲ. ಆತನು ಉನ್ನತವಾದ ಕ್ಷೇತ್ರಗಳಿಗೆ ನಮ್ಮನ್ನು ತೆಗೆದುಕೊಂಡು ಹೋಗಲೂ ಪ್ರತಿದಿನ ಅಧಿಕವಾಗಿ ಮತ್ತು ಹೆಚ್ಚಾಗಿ ನಾವೆಲ್ಲರೂ ಕಲಿಯುತ್ತಿದ್ದೇವೆ ನಾವು ಕಲಿಯುವಾಗ ಸೂಕ್ಷ್ಮಪರಿಜ್ಞಾನವನ್ನು ಸಂಪಾದಿಸುವಾಗ ಮತ್ತು ಅಧಿಕವಾಗಿ ಆತನ ಮಾರ್ಗಗಳು ಮತ್ತು ಮಹತ್ಕಾರ್ಯಗಳನ್ನು ಅಧಿಕವಾಗಿ ಅನುಭವಿಸುವಾಗ, ನಾವು ಹಂಚಿಕೊಳ್ಳುತ್ತೇವೆ ನಾವು ಒಬ್ಬರಿಗೊಬ್ಬರಿಂದ ಕಲಿಯುತ್ತೇವೆ. ಒಳಗೆ ಒತ್ತಿದವರಾಗಿತ್ತೇವೆ.

ದೇವರೊಂದಿಗೆ ಯಾವುದು ಅಸಾಧ್ಯವಿಲ್ಲ

ಯೆರೆಮೀಯ 32:17,27
17 ಎಲೈ ಕರ್ತನಾದ ಯೆಹೋವನೇ! ಅಹಾ ನೀನು ಭುಜವನ್ನೆತ್ತಿ ನಿನ್ನ ಮಹಾ ಶಕ್ತಿಯಿಂದ ಭೂಮ್ಯಾಕಾಶಗಳನ್ನು ಸೃಷ್ಟಿಸಿದ್ದೀ ಯಾವ ಕಾರ್ಯವೂ ನಿನಗೆ ಅಸಾಧ್ಯವಲ್ಲ

27 ಇಗೋ ನಾನು ಯೆಹೋವನು ನರಪ್ರಾಣಿಗೆಲ್ಲಾ ದೇವರು ನನಗೆ ಅಸಾಧ್ಯವಾದದ್ದುಂಟೋ ?

ನಾವು ಹೃದಯಪೂರ್ವಕವಾಗಿ ಒಪ್ಪಿಕೊಳ್ಳಬೇಕಾದ ಒಂದು ಸತ್ಯವು ದೇವರೊಂದಿಗೆ ಅಸಾಧ್ಯವಾದದ್ದು ಯಾವುದು ಇಲ್ಲ. ದೇವರು ಏನು ಬೇಕಾದರೂ ಮಾಡುತ್ತಾನೆ. ಆತನ ಹಿಂದೆ ಕಾರ್ಯ ಮಾಡಿಲ್ಲದ ರೀತಿಯಲ್ಲಿ ಕಾರ್ಯಮಾಡಲೂ ದೇವರು ಶಕ್ತನು ಮತ್ತು ಮಾಡುತ್ತಾನೆ. ಆತನ ಹಿಂದಿನ ಅದ್ಭುತಕಾರ್ಯಗಳು ಮತ್ತು ಬಲಿಷ್ಟವಾದ ಮಹತ್ಕಾರ್ಯಗಳು ಆತನು ಮಾಡುವಂತಹದರ ಮೇಲೆ ಮಿತಿಯನ್ನು ನಿಗದಿಪಡಿಸಲು ಕೊಟ್ಟಿಲ್ಲ. ಆತನು ಹಿಂದೆ ಮಾಡಿದ ಯಾವುದನ್ನಾದರೂ ಆತನ "ಮೇಲಾಗು" ಮಾಡಬಹುದು. ಆದದರಿಂದ ಆತ್ಮನ ವರಗಳ ಪ್ರದರ್ಶನ ಮತ್ತು ಕಾರ್ಯಾಚರಣೆಯಲ್ಲಿ ದೇವರನ್ನು ನಾವು "ಒಂದು ಪೆಟ್ಟಿಗೆಯಲ್ಲಿ" ಹಾಕಬಾರದು. ದೇವರು ದೇವರಾಗಿದ್ದಾನೆ ಮತ್ತು ಆತನು ಮೆಚ್ಚುವಾಗ, ನವೀನ, ಹೊಸ ಮಾರ್ಗದಲ್ಲಿ ಆತನು ಚಲಿಸುತ್ತಾನೆ ಎಂಬುದರ ವಿಷಯದೊಡನೆ ಇದನ್ನು ನಾವು ಪ್ರಸ್ತಾಪಿಸಬೇಕು. ದೇವರೊಂದಿಗೆ ಯಾವುದು ಅಸಾಧ್ಯವಿಲ್ಲ ಎಂಬುದನ್ನು ತಿಳಿದವರಾಗಿ ಈ ವಿಷಯವನ್ನು ನಾವು ಪ್ರಸ್ತಾಪಿಸಬೇಕು. ಆತ್ಮನ ತೋರ್ಪಡಿಸುವಿಕೆಗಳ ಮೂಲಕವಾಗಿ ಅಸಾಧ್ಯಕರವಾದದು ಸಾಧ್ಯಕರವಾಗುವಂತೆ ಆತನು ಮಾಡುತ್ತಾನೆ. ದೇವರು ಮಾಡುವಂತಹ ಕಾರ್ಯಗಳ ಮೇಲೆ ಇರಿಸಿದಂತಹ ಎಲ್ಲಾ ಇತಿಮಿತಿಗಳನ್ನು ಪಕ್ಕಕ್ಕೆ ಇಡೋಣ.

2. ಪವಿತ್ರಾತ್ಮನೆಂಬ ವ್ಯಕ್ತಿಯನ್ನು ಪರಿಚಯಿಸುವುದು

ಒಬ್ಬನೇ ದೇವರಲ್ಲಿ, ತಂದೆ, ಮಗ ಮತ್ತು ಪವಿತ್ರಾತ್ಮನೆಂಬ ಮೂರು ವ್ಯಕ್ತಿಗಳಲ್ಲಿ ನಾವು ನಂಬುತ್ತೇವೆ. ತಂದೆ ಮತ್ತು ಮಗನಂತೆ ಪವಿತ್ರಾತ್ಮನು ದೇವರಾಗಿದ್ದಾನೆ. ಮೂರನೇ ಒಂದು ಭಾಗದಷ್ಟು ಅಲ್ಲ ಆದರೆ ಸಂಪೂರ್ಣವಾಗಿ ದೇವರು ತಂದೆಯಾದ ದೇವರು ಮತ್ತು ಮಗನಾದ ದೇವರಂತೆ ಸಂಪೂರ್ಣವಾಗಿ ಆತನು ದೇವರಾಗಿರುವುದನ್ನು ಪ್ರತಿನಿಧಿಸುತ್ತಾನೆ. ತಂದೆಯೆಲ್ಲವೂ, ಮತ್ತು ಮಗನು ಎಲ್ಲವೂ, ಪವಿತ್ರಾತ್ಮನೆಂಬ ವ್ಯಕ್ತಿಯ ಮೂಲಕವಾಗಿ ಪ್ರಕಟವಾಗಿದೆ. ಆದ್ದರಿಂದ ಪವಿತ್ರಾತ್ಮನು ಆತನ ಆತ್ಮನಂತೆ ಉಲ್ಲೇಖಿಸಲ್ಪಟ್ಟಿದ್ದಾನೆ, ತಂದೆ (ರೋಮಾಪುರದವರಿಗೆ 8:11), ಕ್ರಿಸ್ತನ ಆತ್ಮ (ರೋಮಾಪುರದವರಿಗೆ 8:9) ಮತ್ತು ಆತನ ಮಗನ ಆತ್ಮ (ಗಲಾತ್ಯದವರಿಗೆ 4:6) ಮುಂತಾದವು.

ತಂದೆಯಾದ ದೇವರು ಮತ್ತು ಮಗನಾದ ದೇವರಂತೆ ಅದೇ ರೀತಿಯಲ್ಲಿ ಪವಿತ್ರಾತ್ಮನು ಒಬ್ಬ ವ್ಯಕ್ತಿಯಾಗಿದ್ದಾನೆ. ಪವಿತ್ರಾತ್ಮನು ಒಂದು ಭಾವನೆಯಲ್ಲ, ಆದರೂ ಆತನ ಕೆಲಸವನ್ನು ವಿವರಿಸಲು ಸತ್ಯವೇದದಲ್ಲಿ ಉಪಯೋಗಿಸಲಾದ ಕೆಲವು ವಿವರಣಕಾರರು ಅಂತಹ ಅಭಿವ್ಯಕ್ತಗೆಗಳನ್ನು ಸೂಚಿಸಬಹುದು. ಆತ್ಮನು ಬೀಸುವ ಗಾಳಿಯಂತೆ ಬರುತ್ತಾನೆ, ಹರಿಯುವ ನದಿಯಂತೆ, ದಹಿಸುವ ಅಗ್ನಿಯಂತೆ, ಕೆಳಗಿಳಿಯುವ ಪಾರಿವಾಳದಂತೆ, ಲೇಪಿತವಾಗುವ ಎಣ್ಣೆಯಂತೆ, ನಿಮ್ಮ ಮೇಲೆ ಸ್ಥಿರವಾಗಿ ಇರಿಸುವ ಕೈಯಂತೆ ಬರುತ್ತದೆ ಎಂಬುದಾಗಿ ನಾವು ಓದುತ್ತೇವೆ.

ಯೋಹಾನ 14:16-18
16 ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು
17 ಆ ಸಹಾಯಕನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು. ಆ ಸಹಾಯಕನು ಯಾರೆಂದರೆ ಸತ್ಯದ ಆತ್ಮನೇ ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವದರಿಂದ ಆತನನ್ನು ಹೊಂದಲಾರದು. ನೀವು ಆತನನ್ನು ಬಲ್ಲಿರಿ ಹೇಗಂದರೆ ನಿಮ್ಮ ಬಳಿಯಲ್ಲಿ ವಾಸಮಾಡುತ್ತಾನೆ ಮತ್ತು ನಿಮ್ಮೊಳಗೆ ಇರುವವನು
18 ನಾನು ನಿಮ್ಮನ್ನು ಅನಾಥರಾಗಿ ಬಿಡುವದಿಲ್ಲ ನಿಮ್ಮ ಬಳಿಗೆ ಬರುತ್ತೇನೆ.

ಪವಿತ್ರಾತ್ಮನನ್ನು “ಆತನು” ಎಂಬುದಾಗಿ ಒಬ್ಬ ವ್ಯಕ್ತಿಯಾಗಿರುವುದನ್ನು ಸೂಚಿಸಲೂ ಉಲ್ಲೇಖಿಸಲಾಗಿದೆ.

ಪವಿತ್ರಾತ್ಮನು ಎಲ್ಲಾ ಕಡೆಯಲ್ಲಿಯು, ಯಾವಾಗಲೂ ನಿಮ್ಮೊಂದಿಗೆ ಇರುತ್ತಾನೆ. ಆತನು ನಿಮ್ಮಲ್ಲಿ ನೆಲೆಗೊಂಡಿರುತ್ತಾನೆ. ನಿಮ್ಮ ಮನೆಯಲ್ಲಿ ನಿಮ್ಮೊಂದಿಗೆ ಆತನಿದ್ದಾನೆ. ನಿಮ್ಮ

ಬಾಳ ಸಂಗಾತಿ ಮತ್ತು ಮಕ್ಕಳೊಂದಿಗೆ ನೀವು ಜನಗರಿಗೆ ಸೇವೆಸಲ್ಲಿಸುವಾಗ ನಿಮ್ಮೊಂದಿಗೆ ಆತನಿದ್ದಾನೆ. ಪ್ರತಿದಿನ ಪ್ರತಿ ಕ್ಷಣದಲ್ಲೂ ಆತನು ನಿಮ್ಮೊಂದಿಗಿದ್ದಾನೆ. ಪವಿತ್ರಾತ್ಮನು ರೂಪಾಂತರಿಸುತ್ತಾನೆ ಮತ್ತು ಇಂತಹ ಪರಿಸ್ಥಿತಿಗಳಲ್ಲೆದ್ದರಲ್ಲಿ ಬಲವನ್ನು ನೀಡುತ್ತಾನೆ. ಕರ್ತನಾದ ಯೇಸುವು ನಮ್ಮೊಂದಿಗಿರುವಂತೆಯೇ ಪವಿತ್ರಾತ್ಮನು ನಮ್ಮೊಂದಿಗಿದ್ದಾನೆ.

ಅಲೋಸ್ ಪ್ಯಾರಾಕ್ಲೆಟೋಸ್ (Allos parakletos)

ಯೋಹಾನ 14:16
ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು.

16 ನೇ ವಚನದಲ್ಲಿನ ಗ್ರೀಕ್ ಪದವು "ಬೇರೊಬ್ಬ ಸಹಾಯಕ" ಎಂಬುದು ಅಲೋಸ್ ಪ್ಯಾರಾಕ್ಲೆಟೋಸ್.

ಯೇಸುವು "ಬೇರೊಬ್ಬ" ಎಂಬ ಪದವನ್ನು ಉಪಯೋಗಿಸಿದ್ದಾನೆ. ಗ್ರೀಕ್‌ನಲ್ಲಿ "ಅಲೋಸ್ " ಎಂಬುದು "ಅದೇ ರೀತಿಯ ಬೇರೊಬ್ಬ" ಎಂಬ ಅರ್ಥ "ಹೆಟೆರೋಸ್" "ವಿಭಿನ್ನವಾಗಿ " ಇರುವುದರಂತೆ ಅಲ್ಲ. ಯೇಸುವು ಆತನ ಶಿಷ್ಯರಿಗೆ ಏನಾಗಿದ್ದನೋ ಆತನ ಅನುಪಸ್ಥಿತಿಯಲ್ಲಿ ಪವಿತ್ರಾತ್ಮನು ಆತನ ಶಿಷ್ಯರುಗಳೀಗೆ ಆತನ ಹಾಗೆಯೇ ಇದ್ದಾನೆ.

ಅದೇ ರೀತಿಯ ಬೇರೊಬ್ಬ ಸಹಾಯಕ ನಾನು ಇದ್ದಂತೆಯೇ ನನ್ನಂತ ರೀತಿಯ ಇನ್ನೋಬ್ಬ ವ್ಯಕ್ತಿಯಾದ ಸಹಾಯಕನು. ಪವಿತ್ರಾತ್ಮನು ನಮ್ಮೊಂದಿಗೆ ಇದ್ದಾನೆ ಮತ್ತು ಯಾವಾಗಲೂ ನಮ್ಮೊಳಗೆ ಇದ್ದಾನೆ ಕರ್ತನಾದ ಯೇಸುವು ವ್ಯಕ್ತಿಯಾಗಿ ಸ್ವತಃ ತಾನೇ ಇದ್ದಂತ ರೀತಿಯಲ್ಲಿ ಪವಿತ್ರಾತ್ಮನು ನಮ್ಮೊಳಗೆ ಮತ್ತು ನಮ್ಮೊಂದಿಗೆ ಇದ್ದಾನೆ.

ಕರ್ತನಾದ ಯೇಸುವು ಪವಿತ್ರಾತ್ಮನನ್ನು ಉಲ್ಲೇಖಿಸಲೂ ಗ್ರೀಕ ಪದವಾದ "ಪ್ಯಾರಾಕ್ಲೆಟೋಸ್" ಅನ್ನು ಉಪಯೋಗಿಸಿದ್ದಾನೆ. ಆಂಪ್ಲಿಫೈಡ್ ಬೈಬಲ್ ಎಂಬ (ವಿಸ್ತರಣ) ಸತ್ಯವೇದವು "ಪ್ಯಾರೋಕ್ಲೆಟೋಸ್" ಪದಕ್ಕೆ ಏಳು ಪಟ್ಟು ಅರ್ಥಗಳನ್ನು ತರುತ್ತದೆ.

ಯೋಹಾನ 14:16 (ಆಂಪ್ಲಿಫೈಡ್ ಬೈಬಲ್)
ನಾನು ತಂದೆಯನ್ನು ಕೇಳಿಕೊಳ್ಳುತ್ತೇನೆ ಯಾವಾಗಲೂ ನಿಮ್ಮೊಂದಿಗಿರಲೂ ಇನ್ನೊಬ್ಬ ಸಹಾಯಕನನ್ನು (ಸಂತೈಸುವವ, ನ್ಯಾಯಾವಾದಿ, ಮಧ್ಯಸ್ಥಗಾರ, ಸಲಹೆಗಾರ, ಬಲಪಡಿಸುವವನು, ಜೊತೆನಿಂತುಕೊಳುವವನು) ಆತನು ಕಳುಹಿಸುವನು.

ಪವಿತ್ರಾತ್ಮನು ನಮಗೆ ಏನಾಗಿದ್ದಾನೆಂಬುದನ್ನು ವಿಶ್ಲೇಷಿಸುವ ಪದವಾದ "ಪ್ಯಾರಾಕ್ಲೆಟೋಸ್‌ನ" ಏಳುಪಟ್ಟು ಅಂಶಗಳ ಪ್ರತಿಯೊಂದನ್ನು ವಿಸ್ತಾರವಾಗಿ ಅದರ ಮೇಲೆ ಸಂಕ್ಷಿಪ್ತವಾಗಿ ನೋಡೋಣ.

ಸಹಾಯಕ

ಒಬ್ಬ ಸಹಾಕನು, ಹಾಜರಾಗಲೂ ಆದೇಶಿಸಲ್ಪಟ್ಟವನು ಅಥವಾ ಒಬ್ಬ ಕಡೆಗೆ ಕರೆಯಲ್ಪಟ್ಟವನಾಗಿದ್ದಾನೆ. ಸಹಾಯಕನಾಗಿ, ಪವಿತ್ರಾತ್ಮನು ನಮ್ಮ ಸಹಭಾಗಿ ವಾಸ್ತವವಾಗಿ ನಮ್ಮ ಹಿರಿಯ ಪಾಲುದಾರ. ನಾವು ಪವಿತ್ರಾತ್ಮದೊಡನೆ ಜೊತೆ-ಕೆಲಸದವರಾಗಿದ್ದೇವೆ. ನಾವು ಪಾಲುದಾರತ್ವದಲ್ಲಿದ್ದೇವೆ. ದೇವರು ನಮ್ಮನ್ನು ಮಾಡಲೂ ಕರೆಯಲ್ಪಟ್ಟಂತದ್ದಕ್ಕಾಗಿ ನಾವು ಒಟ್ಟಾಗಿ ಕೆಲಸ ಮಾಡುತ್ತೇವೆ.

ಅಪೊಸ್ತಲರ ಕೃತ್ಯಗಳು 5:32
ಈ ಕಾರ್ಯಗಳಿಗೆ ನಾವು ಸಾಕ್ಷಿ ದೇವರು ತನಗೆ ವಿಧೇಯರಾಗಿರುವವರಿಗೆ ದಯಪಾಲಿಸಿರುವ ಪವಿತ್ರಾತ್ಮನೂ ಸಾಕ್ಷಿ ಎಂದು ಹೇಳಿದರು.

ಪವಿತ್ರಾತ್ಮನು ಕೃಪೆಯ ಆತ್ಮನಾಗಿದ್ದಾನೆ (ಜೆಕರ್ಯ 12:10, ಇಬ್ರಿಯರಿಗೆ 10:29) ನಾವು ಮಾಡುವಂತಹ ಕಾರ್ಯಗಳ ಮೇಲೆ ಅ ಪ್ರಾಕೃತ ಬಲವನ್ನು ದೇವರ ಕೃಪೆಯನ್ನು ಆತನು ದಯಪಾಲಿಸುತ್ತಾನೆ. ಪವಿತ್ರಾತ್ಮನೊಡನೆ ಜೊತೆಯಾಗಿರುವುದನ್ನು ಕಲಿಯಿರಿ ಮತ್ತು ಆತನ ಸಹಾಯಕ್ಕಾಗಿ ಆತನನ್ನು ಕೇಳಿರಿ.

ಸಂತೈಸುವವನು

ಸಂತೈಸುವವನಾಗಿ, ಆತನು ಪ್ರೋತ್ಸಾಹ, ಸಂತೈಸುವಿಕೆ, ನವೀಕರಿಸುವ, ಉಜ್ಜೀವನಗೊಳಿಸುವ ಮತ್ತು ನಮ್ಮ ಜೀವಿತಕ್ಕೆ ಸ್ವಸ್ಥತೆ ನೀಡುತ್ತಾನೆ.

ದೇವರ ವಾಕ್ಯವು ಏನು ಹೇಳುತ್ತದೆಂಬುದನ್ನು ಪವಿತ್ರಾತ್ಮನು ನಮಗೆ ಜ್ಞಾಪಿಸುವಂತಹ ಸಮಯಗಳಿವೆ ಮತ್ತು ಆತನು ಮಾತಾನಾಡುವ ವಾಕ್ಯವು ನಮಗೆ ಪ್ರೋತ್ಸಾಹ ತರುತ್ತದೆ. ಇದು ನಮ್ಮ ಆತ್ಮಗಳನ್ನು ಮೇಲೆತ್ತುತ್ತದೆ.

ಯೋಹಾನ 14:26
ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು.

ಸ್ವಾಭಾವಿಕದಲ್ಲಿ ಬಹಳ ಹೆಚ್ಚಿನದು ಮತ್ತು ದೊಡ್ಡದು ಎಂಬುದಾಗಿ ಕಾಣಿಸುವಂತಹ ಜೀವಿತದ ಪರಿಸ್ಥಿತಿಗಳ ಮೂಲಕವಾಗಿ ನಾವು ಹಾದುಹೋಗುವಾಗ ದೇವರ ವ್ಯಾಪಕ ಉದ್ದೇಶಗಳನ್ನು ನಮಗೆ ಪವಿತ್ರಾತ್ಮನ ಪ್ರಕಟಿಸಿದ ಸಮಯಗಳಿವೆ. ಪ್ರಸ್ತುತದಲ್ಲಿ ಈಗ ದೇವರು ನಮಗೆ ಹೇಳುತ್ತಿರುವವಗಳನ್ನು ನಮಗೆ ಆತನು ಹೇಳುತ್ತಾನೆ ಮತ್ತು ಭವಿಷ್ಯತ್ತಿನವುಗಳ ಕುರಿತು ದೇವರು ಪ್ರಕಟಿಸುವವುಗಳನ್ನು ನಮಗೆ ಪ್ರಕಟಿಸುತ್ತಾನೆ. (ಯೋಹಾನ 16:13-15) ನಾವು ಹಾದುಹೋಗುತ್ತಿರುವಂತಹ ಯಾವುದೇ ಪರಿಸ್ಥಿತಿ ಇರಬಹುದು ಅಥವಾ ಕೇಡುಗಾಲದ ಮಧ್ಯದಲ್ಲಿ ಬಲವಾದ ಭರವಸೆ ಮತ್ತು ಸ್ತಬ್ಧ ಆದರಣೆಯನ್ನು ಇದು ಕೊಡುತ್ತದೆ.

ಯಾರೋಬ್ಬರ ಮೂಲಕವಾಗಿ ಅಥವಾ ಒಂದು ಕನಸ್ಸಿನಲ್ಲಿ ಪವಿತ್ರಾತ್ಮನು ಮಾತಾನಾಡುವಂತಹ ಸಮಯಗಳಿವೆ. ಭಕ್ತಿವೃದ್ಧಿ, ಪ್ರೋತ್ಸಾಹ ಮತ್ತು ಸಂತೈಸುವಿಕೆಯನ್ನು ತರುವಂತಹ ಒಂದು ಪ್ರವಾದನಾ ವಾಕ್ಯ ನಾವು ಪಡೆಯುತ್ತೇವೆ. (1ಕೊರಿಂಥದವರಿಗೆ 14:3)

ನ್ಯಾಯಾವಾದಿ (ವಕೀಲ)

ನ್ಯಾಯಾಧೀಶರ ಮುಂದೆ ಇನ್ನೊಬ್ಬರ ಕಾರಣವನ್ನು ಸಮರ್ಥಿಸಿಕೊಳ್ಳುವವನು, ವಾದಿಸುವವನು, ರಕ್ಷಣೆಗೆ ಸಲಹೆಗಾರ, ಕಾನೂನು ಸಹಾಯಕ,ವಕೀಲನನೊಬ್ಬಎಂಬುದರ ಅಕ್ಷರಶಃ ಅರ್ಥವಾಗಿದೆ. ವಕೀಲರು ನಿಮ್ಮ ಪ್ರಕರಣವನ್ನು ಸಮರ್ಥಿಸಿಕೊಳ್ಳುವುದಲ್ಲದೆ ನಿಮ್ಮದೇ ಆದ ಹಕ್ಕಿನ ಪ್ರಯೋಜನಗಳನ್ನು ನೀವು ಪಡೆಯುತ್ತೀರಿ ಎಂದು ಖಚಿತಪಡಿಸುತ್ತಾರೆ. ತಂದೆಯಾದ ದೇವರು ಸರ್ವೋಚ್ಚನ್ಯಾಯಧೀಶನಾಗಿರುವಂತಹ ಆತ್ಮಿಕ ಕ್ಷೇತ್ರದಲ್ಲಿ ಜಾರಿಯಲ್ಲದೆ ಎಂದು ಗೋಚರಿಸುವ “ನ್ಯಾಯಂಗ ವ್ಯವಸ್ಥೆಯನ್ನು” ಹೊಸ ಒಡಂಬಡಿಕೆಯು ಪ್ರಸ್ತುತಪಡಿಸುತ್ತದೆ. ಪರಲೋಕದಲ್ಲಿ ವಿಶ್ವಾಸಿಗಳಿಗಾಗಿ ತಂದೆಯ ಮುಂದೆ ಕರ್ತನಾದ ಯೇಸುವು ವಕೀಲನಂತೆ ನಿಂತುಕೊಳುತ್ತಾನೆ. ಅದೇ

ರೀತಿಯಾಗಿ, ಭೂಮಿಯ ಮೇಲಿರುವ ಪವಿತ್ರಾತ್ಮನು ತಂದೆಯ ಮುಂದೆ ವಿಶ್ವಾಸಿಗಳಿಗೆ ವಕೀಲನಂತೆ ಪ್ರತಿನಿಧಿಸುತ್ತಾನೆ. ದೆವ್ವವು “ಸಹೋದರರ ದೂರುಗಾರನು” ಎಂಬುದಾಗಿ ಕರೆಯಲ್ಪಡುತ್ತಾನೆ. (ಪ್ರಕಟನೆ 12:10)

ನಾವು ಪಾಪ ಮಾಡಿದಾಗ ತಂದೆಯೊಂದಿಗೆ (1ಯೋಹಾನ 2:1-2, ಅದೇ ಗ್ರೀಕ್ ಪದ ಪ್ಯಾರಾಕ್ಲೆಟೋಸ್) ತನ್ನನ್ನು ತಾನೇ ಒಮ್ಮೆ ಮತ್ತು ಎಲ್ಲರಿಗೂ ನಮ್ಮ ಎಲ್ಲಾ ಪಾಪಗಳಿಗಾಗಿ ಸಂಪೂರ್ಣ ಪಾವತಿಸಿ (ಸಮಾಧಾನಪಡಿಸಿದ) ಘೋಷಿಸಿಕೊಳ್ಳುವ ನಮ್ಮ ನ್ಯಾಯಾವಾದಿಯು ಕರ್ತನಾದ ಯೇಸುವಾಗಿದ್ದಾನೆ. ಹೇಗಾದರೂ, ಯೇಸುಕ್ರಿಸ್ತನು ನಮಗೆ ಒದಗಿಸಿದ್ದನ್ನು ನಂಬಿಕೆಯಿಂದ ನಾವು ಅರಿಕೆಮಾಡಬೇಕು ಮತ್ತು ಪಡೆದುಕೊಳ್ಳಬೇಕು (1ಯೋಹಾನ 1:9)

ಕರ್ತನಾದ ಯೇಸುವು ತಂದೆಯಾದ ನಮಗೆ ಪಡೆದುಕೊಂಡಂತಹ ಎಲ್ಲವನ್ನೂ ಭೂಮಿಯ ಮೇಲೆ ನಾವು ಪಡೆಯಲು ಖಚಿತಪಡಿಸಲು, ತಂದೆಯೊಡನೆ ಪವಿತ್ರಾತ್ಮನ ನಮ್ಮ ವಕೀಲನಾಗಿದ್ದಾನೆ. (ಯೋಹಾನ 16:13-15) “ಕದ್ದುಕೊಳ್ಳಲೂ ಕೊಲ್ಲಲು ಮತ್ತು ನಾಶಪಡಿಸಲು” ಬಂದಂತಹವನಾದ ಅಂಧಕಾರದ ಬಲಗಳ ವಿರುದ್ಧವಾಗಿ ಭೂಮಿಯ ಮೇಲೆ ನಾವುಗಳು ಆತ್ಮಿಕ ಹೋರಾಟದಲ್ಲಿ ತೊಡಗಿಸಿಕೊಂಡಿರುವಾಗ ಪವಿತ್ರಾತ್ಮನು ನಮ್ಮ ಹೃದಯಗಳಲ್ಲಿ ಖಾತರಿಯನ್ನು ಕೊಡುವದಕ್ಕಾಗಿ (2ಕೊರಿಂಥದವರಿಗೆ 1:20-22) ತಂದೆಯ ಮುಂದೆ ನಿಂತುಕೊಳ್ಳುತ್ತಾನೆ. ಮತ್ತು ವೈರಿಯ ವಿರುದ್ಧವಾಗಿ ಒಂದು ಗುಣಮಟ್ಟವನ್ನು ಎಬ್ಬಿಸುತ್ತಾನೆ. (ಯೆಶಾಯ 59:19), ಹೀಗೆ ಭೂಮಿಯ ಮೇಲೆ ನಮ್ಮ ಒಡಂಬಡಿಕೆ ಹಕ್ಕುಗಳು ನಮ್ಮ ಸದಾವಕಾಶಗಳು, ನಮ್ಮ ಆಶೀರ್ವಾದಗಳು ಮತ್ತು ನಮ್ಮ ಆತ್ಮಿಕ ಸ್ವಾಸ್ಥ್ಯವನ್ನು ಜಾರಿಗೊಳಿಸುವುದು. ಮತ್ತು ನಿರ್ವಹಿಸುವುದನ್ನು ಮಾಡುತ್ತಾನೆ.

ಮಧ್ಯಸ್ಥಗಾರ

ಮಧ್ಯಸ್ಥಗಾರನು, ಒಬ್ಬ ಮನುಷ್ಯನು ಒಬ್ಬ ಸ್ನೇಹಿತನಿಗಾಗಿ ಬೇಡುವಂತೆ ಇನ್ನೊಬ್ಬನ ಜೊತೆಯಲ್ಲಿ ವಕೀಲರಿಗೆ ಹೋಲುವಂತೆ,ಯೇಸು ಮತ್ತು ಪವಿತ್ರಾತ್ಮ ಇಬ್ಬರೂ ವಿಶ್ವಾಸಿಗಳಿಗಾಗಿ ಮಧ್ಯಸ್ಥಿಕೆಯ ಪಾತ್ರದಲ್ಲಿ ಭಾಗಿಯಾಗಿದ್ದಾರೆ. ವ್ಯತ್ಯಾಸವೆಂದರೆ ಅದು ದುರ್ಬಲ ಮತ್ತು ಸಾಧ್ಯವಾಗದವನ ಪರವಾಗಿ ಮಧ್ಯವರ್ತಿ ಮನವಿ ಮಾಡುತ್ತಾನೆ ವಕೀಲರು ಆರೋಪಿಯ ವಿರುದ್ಧ ಹಕ್ಕುಗಳನ್ನು ಸಮರ್ಥಿಸುತ್ತಾರೆ ಮತ್ತು ಹಕ್ಕು ಪಡೆಯುತ್ತಾರೆ

.

ಕರ್ತನಾದ ಯೇಸು ತಂದೆಯ ಮುಂದೆ ನಮ್ಮ ಪ್ರಧಾನ ಯಾಜಕನಾಗಿದ್ದಾನೆ (ಇಬ್ರಿಯರು 2:17; ಇಬ್ರಿಯ 3: 1; ಇಬ್ರಿಯ 4:14; ಇಬ್ರಿಯ 8: 1; ಇಬ್ರಿಯ 10:21; ಇತ್ಯಾದಿ).

ಆತನು ತಂದೆಯ ಬಲಗೈಯಲ್ಲಿ ನಮಗಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡುತಿದ್ದಾನೆ (ರೋಮ 8:34). ನಮಗಾಗಿ ಮಧ್ಯಸ್ಥಿಕೆ ವಹಿಸಲು ಅವನು ಯಾವಾಗಲೂ ಜೀವಿಸುತ್ತಾನೆ (ಇಬ್ರಿಯ 7:25).

ಈ ಮಹಾಯಾಜಕನ ಮಧ್ಯಸ್ಥಿಕೆಯು ಪಾಪ,ಶೋಧನೆ ದೌರ್ಬಲ್ಯಗಳು ಹೊರಬರಲು ಇಬ್ರಿಯ 2: 17-18) ಮತ್ತು ನಮ್ಮ ಅಗತ್ಯ ಸಮಯದಲ್ಲಿ ಕೃಪೆ ಮತ್ತು ಕರುಣೆಯನ್ನು ಪಡೆಯಲು ನಮಗೆ ಸಹಾಯ ಮಾಡುವುದಾಗಿದೆ (ಇಬ್ರಿಯ 4: 14-16). ಆದ್ದರಿಂದ ನಮ್ಮ ಕಡೆಯಿಂದ, ಕೃಪಾ ಸಿಂಹಾಸನದ ಮುಂದೆ ನಮಗೆ ಮೊದಲು ಸಹಾಯ ಮಾಡಲಾಗುವುದು ಎಂದು ತಿಳಿದುಕೊಂಡು ಆತ್ಮವಿಶ್ವಾಸದಿಂದ ಹತ್ತಿರವಾಗಬೇಕು

ಅಂತೆಯೇ, ನಮ್ಮ ಹೃದಯದಲ್ಲಿ ವಾಸಿಸುವ ಪವಿತ್ರಾತ್ಮವು ನಮ್ಮ ಮಧ್ಯವರ್ತಿ. ಆತನು ಪ್ರಾರ್ಥನೆಯ ಆತ್ಮ (ಜೆಕರ್ಯ 12:10). : ನಮ್ಮ ಮಧ್ಯವರ್ತಿಯಾಗಿ ಪವಿತ್ರಾತ್ಮನು

- ನಮ್ಮ ದೌರ್ಬಲ್ಯಗಳಿಗೆ ಸಹಾಯ ಮಾಡುತ್ತಾನೆ (ರೋಮನ್ನರು 8:26)
- ಏನು ಪ್ರಾರ್ಥಿಸಬೇಕು ಎಂಬುದಾಗಿ ನಮಗೆ ಗೊತ್ತಿಲ್ಲದಿದ್ದಾಗ ಮಧ್ಯಸ್ಥಿಕೆ ವಹಿಸಲು ಸಹಾಯ ಮಾಡುತ್ತಾನೆ(ರೋಮನ್ನರು 8:26)
- ತಂದೆಯ ಚಿತ್ತಕ್ಕೆ ಅನುಗುಣವಾಗಿ ಮಧ್ಯಸ್ಥಿಕೆ ವಹಿಸಲು ನಮಗೆ ಸಹಾಯ ಮಾಡುತ್ತಾನೆ (ರೋಮನ್ನರು 8:27)
- ನಮ್ಮ ಮನಸ್ಸು ಗ್ರಹಿಸಲಾಗದ ರಹಸ್ಯಗಳನ್ನು ಪ್ರಾರ್ಥಿಸಲು ನಮಗೆ ಸಹಾಯ ಮಾಡುತ್ತಾನೆ (1 ಕೊರಿಂಥ 14: 2)
- ಆತ್ಮಿಕ ಸಂಘರ್ಷದಲ್ಲಿ ನಮ್ಮನ್ನು ಪರಿಶ್ರಮದಿಂದ ಒಳಗೊಳ್ಳುವ ಎಲ್ಲಾ ರೀತಿಯ ಪ್ರಾರ್ಥನೆ ಮತ್ತು ಬಿನ್ನಹನಗಳನ್ನು ಮಾಡಲು ನಮಗೆ ಸಹಾಯ ಮಾಡುತ್ತದೆ (ಎಫೆಸದವರಿಗೆ 6:18)

ಆದ್ದರಿಂದ ನಮ್ಮ ಕಡೆಯಿಂದ, ನಾವು ಪವಿತ್ರಾತ್ಮದೊಂದಿಗೆ ಮಧ್ಯಸ್ಥಿಕೆ. ಪ್ರಾರ್ಥನೆಯಲ್ಲಿ ಕೈಜೋಡಿಸಬೇಕು ಆತನು ನಮ್ಮ ಮೂಲಕ, ನಮಗಾಗಿ ಮತ್ತು ಇತರರಿಗೆ. ಮಧ್ಯಸ್ಥಿಕೆಯನ್ನು ವಹಿಸುತ್ತಾನೆ

ಸಲಹೆಗಾರ

ನಮ್ಮ ಸಲಹೆಗಾರರಾಗಿ, ಪವಿತ್ರಾತ್ಮವು ನಮ್ಮ ಸಲಹೆಗಾರ, ನಮ್ಮ ಮಾರ್ಗದರ್ಶಿ, ನಮ್ಮ ಗುರು ಮತ್ತು ನಮ್ಮನ್ನು ಎಲ್ಲಾ ಸತ್ಯದತ್ತ ಕೊಂಡೊಯ್ಯುವವನು (ಯೋಹಾನ 14:26;ಯೋಹಾನ 16: 13-15). ಪವಿತ್ರಾತ್ಮವು ಸಲಹೆಯ ಆತ್ಮವಾಗಿದೆ (ಯೆಶಾಯ 11: 2). ಆತನು ಬುದ್ಧಿವಂತಿಕೆಯ ಆತ್ಮ, ಜ್ಞಾನದ ಆತ್ಮ ಮತ್ತು ತಿಳುವಳಿಕೆಯ ಆತ್ಮವಾಗಿದ್ದಾನೆ (ಯೆಶಾಯ 11: 2). ಆತನಿಗೆ ಎಲ್ಲವೂ ತಿಳಿದಿದೆ. ಆದ್ದರಿಂದ, ನಮ್ಮ ಸಲಹೆಗಾರನಾಗಿ , ಆತನ ಸಲಹೆಯು ಯಾವಾಗಲೂ ಪರಿಪೂರ್ಣವಾಗಿದೆ.

ಯೋಹಾನನು ಬರೆಯುವಂತೆ ಆತನು ಒಳಗೆ ಅಭಿಷೇಕವಿರುವಾತನು (1 ಯೋಹಾನ

2: 20,26,27) ಆದ್ದರಿಂದ ವಿಶ್ವಾಸಿಯು ತಪ್ಪಿನಿಂದ ದೂರವಿರಿಸುತ್ತಾನೆ.

ಆತನ ಸಲಹೆಯನ್ನು ಕೇಳಿರಿ . ಪವಿತ್ರಾತ್ಮವನ್ನು ನಿಮಗೆ ಸಲಹೆಗಳನ್ನು ಮಾತಾಡುವಾಗ ಆತನಿಂದ ಕೇಳಿಸಿಕೊಳ್ಳಲು ಕಲಿಯಿರಿ.

ಬಲಪಡಿಸುವವನು

ಸಾಮಾನ್ಯ ಅರ್ಥದಲ್ಲಿ ಈ ಪದವು ಸಹಾಯಕ, ಸಹಾಯಗಾರ, ನೆರವಿಗ ಎಂದರ್ಥ. ಪವಿತ್ರಾತ್ಮವು ನಮ್ಮ ಕೊರತೆಯನ್ನು ನೀಗಿಸುವ ಮೂಲಕ ನಮ್ಮನ್ನು ಬಲಪಡಿಸುತ್ತಾನೆ ಮತ್ತು ನಮ್ಮಲ್ಲಿ ಶಕ್ತಿ ಮತ್ತು ಸಾಮರ್ಥ್ಯದಲ್ಲಿ ನಮ್ಮನ್ನು ಹೆಚ್ಚಿಸುತ್ತಾನೆ

.

ನಮ್ಮ ಆಂತರ್ಯದಲ್ಲಿ ವಿಶೇಷಬಲ ಹೊಂದಿದವರಾಗುವಂತೆ ಆತ್ಮದಿಂದ ನಾವು ಬಲಗೊಳ್ಳುತ್ತೇವೆ (ಎಫೆಸದವರಿಗೆ 3:16).

ಆತನು ಕೊಡುವ ಶಕ್ತಿಯಿಂದ ನಾವು ಶರೀರವನ್ನು ಜಯಿಸುತ್ತೇವೆ (ರೋಮಾಪುರದವರಿಗೆ 8:13), ನಾವು ಭಯವನ್ನು ಜಯಿಸುತ್ತೇವೆ (2 ತಿಮೊಥೆಯನಿಗೆ 1: 7) ಮತ್ತು ಶತ್ರುಗಳನ್ನು ಜಯಿಸುತ್ತೇವೆ(1 ಯೋಹಾನ 4: 4).

ತಂದೆಯ ಚಿತ್ತವನ್ನು ಮಾಡಲು ಮತ್ತು ತ್ಯಾಗಮಾಡಲು ಆತನು ನಮ್ಮನ್ನು ಬಲಪಡಿಸುತ್ತಾನೆ. ಯೇಸು ಸಹ ತನ್ನನ್ನುಶಿಲುಬೆಯ ಮೇಲೆ ಅರ್ಪಿಸಲು ಶಾಶ್ವತ ಆತ್ಮದಿಂದ ಅಧಿಕಾರ ಪಡೆದನು (ಇಬ್ರಿಯರಿಗೆ 9:14).

ಪ್ರಬಲವಾದ ಕಾರ್ಯಗಳನ್ನು ಮಾಡಲು ಬಲಆತನು ನಮಗೆ ಅಧಿಕಾರ ನೀಡುತ್ತಾನೆ ಮತ್ತು ಅಭಿಷೇಕಿಸುತ್ತಾನೆ (ಲೂಕ 24:49).

ಜೊತೆ ನಿಂತಿರುವಾತನು (ಬದಲಿ)

ಅವನು ನಮ್ಮೊಂದಿಗೆ ಮತ್ತು ಎಲ್ಲದರ ಮೂಲಕ ಮತ್ತು ನಮ್ಮೊಂದಿಗೆ ನಿಲ್ಲುತ್ತಾನೆ.ನಾವು ದೇವರ ರಾಜ್ಯದ ಸಲುವಾಗಿ ಕಷ್ಟಗಳು.ಸವಾಲುಗಳನ್ನು, ಕಿರುಕುಳಗಳನ್ನು ಎದುರಿಸುತ್ತಿರುವಾಗ ಆತನು ನಮಗೆ ದೈವಿಕ ಶಕ್ತಿಯನ್ನು ನೀಡುತ್ತಾನೆ ಯೇಸುವಿಗಾಗಿ ಸಾಕ್ಷಿ ಹೇಳುಲು ಅಧಿಕಾರಿಗಳ ಮುಂದೆ ನಮ್ಮನ್ನು ಕರೆತಂದಾಗ ಮಾತನಾಡಲು ಪದಗಳನ್ನು ಆತನು ನಮಗೆ ಕೊಡುತ್ತಾನೆ. (ಮತ್ತಾಯ 10: 18-20).

ದೇವರ ಆತ್ಮವು ಅಲೋಸ್ ಪ್ಯಾರಾಕ್ಲೆಟೋಸ್‌ನಂತೆ ಇಲ್ಲಿದೆ. ಆತನು ನಮ್ಮಲ್ಲಿಗೆ ಬಂದ ಎಲ್ಲವನ್ನು ಸ್ವೀಕರಿಸಿ. ಮತ್ತು ಸ್ವಾಗತಿಸಿ

ಪವಿತ್ರಾತ್ಮದೊಂದಿಗೆ ನಿಮ್ಮ ಸಂಬಂಧವನ್ನು ಬೆಳೆಸಿಕೊಳ್ಳಿ

2 ಕೊರಿಂಥದವರಿಗೆ 13:14
ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪವಿತ್ರಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ.

ಸಹಭೋಗವು ಗ್ರೀಕ್ ನಲ್ಲಿ koinonia = ಪಾಲುದಾರಿಕೆ, ಅನ್ಯೋನ್ಯತೆ

ಭಾಗವಹಿಸುವಿಕೆ, ಸಂಭೋಗ, ಲಾಭ, ವಿತರಣೆ, ಸಾಮಾನ್ಯ ವಸ್ತುಗಳನ್ನು ಹೊಂದಿರುವ, ಇತ್ಯಾದಿ.

ಸಹಭೋಗವನ್ನು ಸ್ನೇಹವನ್ನು(ನಿಕಟತೆ) ಅನ್ಯೋನ್ಯತೆಯು (ಪರಸ್ಪರ ಸಂಗತಿಗಳು ಹಂಚಿಕೊಳ್ಳುವುದು), ಮತ್ತು ಪಾಲುದಾರಿಕೆ (ಒಟ್ಟಿಗೆ ಕೆಲಸ ಮಾಡುವುದು) ಎಂಬುದನ್ನು ಒಳಗೊಂಡಿರುತ್ತದೆ

ನಾವು ಪವಿತ್ರಾತ್ಮದೊಂದಿಗಿನ ನಮ್ಮ ಒಡನಾಟದಲ್ಲಿ ಬೆಳೆಯಬೇಕು. ಆತನು ನಮ್ಮಲ್ಲಿ ಮತ್ತು ನಮ್ಮ ಮೂಲಕ ಕೆಲಸ ಮಾಡುವುದರಿಂದ ಈ ನಿಕಟವಾದ ಸ್ನೇಹವನ್ನು ಬೆಳೆಸಿಕೊಳ್ಳುತ್ತೇವೆ.. ಪವಿತ್ರಾತ್ಮವು ಒಬ್ಬ ವ್ಯಕ್ತಿ ಮತ್ತು ಆತನ ಜೊತೆ. ನಿರಂತರವಾಗಿ

ಹೆಚ್ಚುತ್ತಿರುವ, ಸದಾ ಆಳವಾಗಿರುವ, ಬೆಳೆಯುತ್ತಿರುವ ಸಂಬಂಧವನ್ನು ಪೋಷಿಸಲು ಸಾಧ್ಯವಾಗುತ್ತದೆ.

ಪವಿತ್ರಾತ್ಮನೊಂದಿಗೆ ನಮ್ಮ ಸಂಬಂಧವನ್ನು ಬೆಳೆಸುವ ಕುರಿತು ಕೆಲವು ಒಳನೋಟಗಳು:

• ಆತನೊಂದಿಗೆ ಮಾತನಾಡಿ.

• ಆತನ ಪ್ರಸನ್ನತೆ ಆನಂದಿಸಿ. ಆತನನ್ನು ಪ್ರೀತಿಸು. ಆತನನ್ನು ಆರಾಧಿಸಿರಿ

• ಯೇಸುವನ್ನು ಮಹಿಮೆಪಡಿಸಿರಿ - ಯೇಸುವನ್ನು ಮಹಿಮೆಪಡಿಸಲು ಪವಿತ್ರಾತ್ಮನು ಇಲ್ಲಿದ್ದಾನೆ.ನಾವು ಯೇಸುವನ್ನುಮಹಿಮೆಪಡಿಸುವಾಗ, ಆತನು ಭಾಗಿಯಾಗುತ್ತಾನೆ.

• ಪವಿತ್ರಾತ್ಮವನ್ನು ದುಃಖಿಸಬೇಡಿ (ದುಃಖ, ಯಾತನೆ, ತೊಂದರೆ)(ಎಫೆಸದವರಿಗೆ 4:30). ಆತನು ಮೆಚ್ಚದ ಕೆಲಸಗಳನ್ನು ಮಾಡುವಾಗ ನಾವು ಆತನನ್ನು ದುಃಖಿಸುತ್ತೇವೆ

• ಪವಿತ್ರಾತ್ಮವನ್ನು ನಂದಿಸಬೇಡಿರಿ . (ಅದು ಆರಿಸುವುದು ,ಹಾಳು ಮಾಡುವುದು)

(2 ಥೆಸಲೊನೀಕ 5:19). ನಾವು ಆತನನ್ನು ನಿಗ್ರಹಿಸಿದಾಗ ಅಥವಾ ಆತನ ಅಪೇಕ್ಷೆಗಳನ್ನು ನಿರ್ಲಕ್ಷಿಸಿ, ಅಥವಾ ಆತನು ಬಯಸಿದಂತೆ ನಾವು ಚಲಿಸದಿರುವಾಗ ಆತನನ್ನು ನಾವು ನಂದಿಸುತ್ತೆವೆ ಮತ್ತು ಆದ್ದರಿಂದ ನಾವು ಆತನ ಮಾರ್ಗ ತಡೆಯುತ್ತೇವೆ. ಸಾಮಾನ್ಯವಾಗಿ ನಾವು ಆತನೊಂದಿಗೆ ಹೆಜ್ಜೆಯನ್ನಿಡಲು ಭಯಪಡುವ ಕಾರಣ ಆತ್ಮನನ್ನು ನಂದಿಸುತ್ತೆವೆ.

• ಪವಿತ್ರಾತ್ಮವನ್ನು ಎದುರಿಸಬೇಡಿರಿ (ಅಪೊಸ್ತಲರಕೃತ್ಯಗಳು 7:51). ಎದುರಿಸುವುದು ಎಂದರೆ ವಿರೋಧಿಸು, ವಿರೋಧವಾಗಿರು ಅಥವಾ ಪವಿತ್ರಾತ್ಮನು ಹೇಳುವುದು, ಮಾಡುವುದು ಅಥವಾ ಮಾಡಲು ನಮ್ಮನ್ನು ಪ್ರೇರೇಪಿಸುವುದರ ವಿರೋಧವಾಗಿ ಹೋರಾಡುವುದಾಗಿದೆ.

• ಆತನಿಗೆ ಸಂವೇದನಾಶೀಲರಾಗಿರಿ. ಆತನು ನಿಮ್ಮ ಮೇಲೆ ಚಲಿಸುವಾಗ ಆತನಿಗೆ ಪ್ರತಿಕ್ರಿಯಿಸಿರಿ

• ನಿಮ್ಮ ಆಲೋಚನೆಗಳನ್ನು ಶುದ್ಧವಾಗಿಡಿರಿ.. ಕನಸುಗಳು ಮತ್ತು ದರ್ಶನಗಳು ಪವಿತ್ರಾತ್ಮನ ಭಾಷೆಯ ಒಂದು ಭಾಗವಾಗಿದೆ ಇದು ಪವಿತ್ರಾತ್ಮನು ಮಾತನಾಡುವಾ ಒಂದು ಪ್ರಮುಖ ಮಾರ್ಗವಾಗಿದೆ

• ಮೃದುತ್ವದಲ್ಲಿ ನಡೆಯಿರಿ (ನಮ್ರತೆ, ಸೌಮ್ಯತೆ, ಶಾಂತತೆ, ಸಭ್ಯತೆ, ಪ್ರೀತಿ, ಪವಿತ್ರ ಧೈರ್ಯ). ಪವಿತ್ರಾತ್ಮವು ಒಂದು ಪಾರಿವಾಳದಂತೆ ಶಾಂತವಾಗಿರುತ್ತದೆಸೌಮ್ಯತೆಯಿಂದ ನಡೆಯುವವರ ಮೇಲೆ ಆತನು ಬೆಳಗುತ್ತಾನೆ.

• ಆತನಿಗೆ ವಿಧೇಯರಾಗಿರಿ. ಆತನ ಅಪೇಕ್ಷೆಗಳಿಗೆ ವಿಧೇಯರಾಗಿರಿ ಮತ್ತು

ನಿಮ್ಮ ಜೀವಿತದ ಮೂಲಕ ಬರುವ ಆತನ ನಡೆಸುವಿಕೆಯ ಹೆಚ್ಚಿನದನ್ನು ಸ್ವೀಕರಿಸಲು ಪ್ರಾರಂಭಿಸುವಿರಿ

ವಾಸಿಸುವ ಕೆಲಸ ಮತ್ತು ಅಧಿಕಾರ ನೀಡುವ ಕೆಲಸ

ಆತ್ಮನ ನಿವಾಸಸ್ಥಾನದ ಕಾರ್ಯ ಮತ್ತು ಆತ್ಮನ ಅಧಿಕಾರ ನೀಡುವ ಕಾರ್ಯವಿದೆ .ಆತನ ವಾಸಿಸುವ ಕೆಲಸವು ನಾವು ಯೇಸುವಿನಂತೆ ಹೆಚ್ಚು ಹೆಚ್ಚು ಆಗಲು ನಮ್ಮನ್ನು ಪರಿವರ್ತಿಸಲು ನಮ್ಮಲ್ಲಿ ಸಹಾಯ ಮಾಡುತ್ತದೆ. ಆತನ ಅಧಿಕಾರ ಕೊಡುವ ಕೆಲಸವು ಯೇಸುವನ್ನು ಮಹಿಮೆಪಡಿಸಲು ಮತ್ತು ಅವರ ಕೆಲಸವು ಮತ್ತು ನಮ್ಮ ಸುತ್ತಮುತ್ತಲಿನ ಜನರಿಗೆ ಸೇವೆ ಸಲ್ಲಿಸಲು ನಮ್ಮ ಮೂಲಕ ಆತನ ಕಾರ್ಯವಾಗಿದೆ.

ಒಬ್ಬ ವಿಶ್ವಾಸಿಯ ಜೀವನದಲ್ಲಿ ಪವಿತ್ರಾತ್ಮನ ಕೆಲಸವು ನೆಲೆಗೊಂಡ ಪ್ರಸನ್ನತೆ ಮತ್ತು ಹರಿಯುವ ಪ್ರಸನ್ನತೆ ಇವೆರೆಡು ಆಗಿದೆ. ಆತನು ನಿಮ್ಮ ಸಾಂತ್ವನಕಾರ, ಶಿಕ್ಷಕ, ಸಲಹೆಗಾರ, ಮಾರ್ಗದರ್ಶಿ, ಮಧ್ಯವರ್ತಿ,ಇತ್ಯಾದಿಯಾಗಿ ನಿಮ್ಮಲ್ಲಿ ನೆಲೆಗೊಂಡಿರುತ್ತಾನೆ. ಆತನು ನಿಮ್ಮ ಅಧಿಕಾರ ನೀಡುವ, ಸಹೋದ್ಯೋಗಿ, ಬಲಪಡಿಸುವಾತನು,ಇತ್ಯಾದಿಯಾಗಿ ನಿಮ್ಮಿಂದ ಹರಿಯುತ್ತಾನೆ.

ಆತನು ನಮ್ಮ ಸಾಂತ್ವನಕಾರನಾಗಿ ನಮ್ಮಲ್ಲಿ ನೆಲೆಸಿದ್ದಾನೆ, ನಮಗೆ ಸಾಂತ್ವನ ನೀಡುತ್ತಾನೆ ಮತ್ತು ನಮಗೆ ಆರಾಮದಾಯಕವಾಗಿರಿಸಲು ಅಲ್ಲ ಪವಿತ್ರಾತ್ಮನ ಪ್ರಸನ್ನತೆ ಸೂಚಕವಾಗಿ ಕೆಲವೊಮ್ಮೆ ನಾವು ಭಾವನೆಗಳಲ್ಲಿ ಅಥಾವ ಶಾರೀರಿಕವಾಗಿ 'ಉತ್ತಮ ಮತ್ತು ಆರಾಮದಾಯಕ' ಭಾವನೆಗಳಲ್ಲಿ ತಪ್ಪಾಗಿ ಗೊಂದಲಕ್ಕೆ ಒಳಗಾಗುತ್ತೆವೆ. ಇದು ಅನಿವಾರ್ಯವಲ್ಲ. ಕೆಲವುಬಾರಿ ದೇವರ ಆತ್ಮನು ಶಾರೀರಿಕವಾಗಿ ಕಠಿಣವಾಗಿರುವ ಅಥಾವ ಭಾವನಾತ್ಮಕವಾಗಿ ಬೇಡಿಕೆಯಿರಬಹುದಾದ ಕೆಲಸಗಳನ್ನು ಮಾಡಲು ನಿಮ್ಮನ್ನು ಪ್ರೇರೇಪಿಸುವ ಸಮಯಗಳು ಇರಬಹುದು ಆದರೆ ಆತನು ಖಂಡಿತವಾಗಿಯೂ ನಿಮ್ಮೊಂದಿಗೆ ನಿಮ್ಮ ಸಾಂತ್ವನಕಾರನಾಗಿ ಮತ್ತು ಅಧಿಕವಾದ್ದರಲ್ಲಿ ನಿಮ್ಮೊಂದಿಗಿರುತ್ತಾನೆ.

3. ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ

ಕಡೇ ದಿವಸದ ಆತ್ಮನ ಸುರಿಸುವಿಕೆ

ಅಪೊಸ್ತಲರ ಕೃತ್ಯಗಳು 2ನೇ ಅಧ್ಯಾಯದಲ್ಲಿ ನಮಗೆ ದಾಖಾಲಿಸಲಾದಂತಯೇ, ಪಂಚಾಶತ್ತಮ ದಿನದಂದು ಪವಿತ್ರಾತ್ಮನ ಬಲಿಷ್ಟ ಸುರಿಸುವಿಕೆಯಿಂದ ಸಭೆಯು ಜನಿಸಿತು. ಅಪೊಸ್ತಲರ ಕೃತ್ಯದಲ್ಲಿ ನೋಡಿದಂತೆ ಆದಿಸಭೆಯು ಪವಿತ್ರಾತ್ಮನ ಬಲದಿಂದ ಚಲಿಸಿತು ಮತ್ತು ಸೇವೆ ಸಲ್ಲಿಸಿತು. ಎಲ್ಲಾ ವಿಶ್ವಾಸಿಗಳು ದೇವರ ಆತ್ಮನ ಕಾರ್ಯಗಳನ್ನು ತೋರ್ಪಡಿಸಿದರು ಮತ್ತು ತುಂಬಿಸಲ್ಪಟ್ಟರು ಹೊಸದಾಗಿ ಸ್ಥಾಪಿಸಲ್ಪಟ್ಟಂತಹ ಸಭೆಗಳು ಜನಿಸಿದವು ಮತ್ತು ಪತ್ರಿಕೆಗಳ ಉದ್ದಕ್ಕೂ ಗೋಚರಿಸಿದಂತೆ ಪವಿತ್ರಾತ್ಮದ ಬಲದಲ್ಲಿ ಪೋಷಿಸಲ್ಪಟ್ಟರು ಸಭೆಯು **ಮೊದಲ 400** ವರ್ಷಗಳಲ್ಲಿ ಬಹಳ ಬಲಿಷ್ಟ, ಬಲಯುತ ಮತ್ತು ಸ್ಪಂದಕವಾಗಿತ್ತು ಆದಾಗ್ಯೂ ಇದರ ನಂತರ **ಕ್ರಿ.ಶ.400 ಕ್ರಿ.ಶ. 1400** ಇತಿಹಾಸದಲ್ಲಿ ನೋಡಿದಂತೆ ಸಭೆಯು ಕತ್ತಲೆ ಯುಗದ ಅವಧಿಯಲ್ಲಿ ಆತ್ಮೀಕವಾಗಿ ದುರ್ಬಲವಾದ ಅಸ್ತಿತ್ವವುಳ್ಳದ್ದಾಗಿ ಕಂಡುಬಂದಿತು. ಬಲದ ಕಾರ್ಯಗಳು ಮತ್ತು ತೋರ್ಪಡಿಸುವಿಕೆಗಳು ಸಾಂಸ್ಥಿಕ ಸಭೆಯಲ್ಲಿ ಜಹುಪಾಲು ಗೈರುಹಾಜಯಲ್ಲಿತ್ತು ಆ ಮೇಲೆ ಸಭೆಯ ಪುನಃಸ್ಥಾಪನೆ ಮತ್ತು ಉಜ್ಜೀವನವು ಪ್ರಾರಂಭಗೊಂಡಿತ್ತು. ಸಂಕ್ಷಿಪ್ತವಾಗಿ, **1500** ರಲ್ಲಿ ನೋಡುತ್ತೇವೆ. ಪ್ರೊಟಸ್ಟೆಂಟ್ ಚಳುವಳಿಯು ನಂಬಿಕೆಯ ಮೂಲಕ ಕೃಪೆಯಿಂದ ರಕ್ಷಣೆಯ ಪ್ರಕಟನೆಯನ್ನು ತಂದಿತು ಆ ಮೇಲೆ **1600** ರಲ್ಲಿ ಧರ್ಮಶುದ್ದಿವಾದಿಗಳು (ಪ್ಯೂರಿಟನ್) ನೀರಿನ ದೀಕ್ಷಾಸ್ನಾನದ ಪ್ರಾಮುಖ್ಯತೆಯ ತಿಳುವಳಿಕೆ ಮತ್ತು ಸಭೆಯನ್ನು ರಾಜ್ಯದಿಂದ ಬೇರ್ಪಡಿಸುವಿಕೆಯನ್ನು ತಂದರು**. 1700 ರಲ್ಲಿ** ಪವಿತ್ರತೆಯ ಚಳುವಳಿಯು ಪ್ರಪಂಚದಿಂದ ಪ್ರತ್ಯೇಕಿಸಲ್ಪಟ್ಟಂತಹದ್ದಾಗಿರುವ ಸಭೆಯ ಶುದ್ದೀಕರಣದ ತಿಳುವಳಿಕೆಯನ್ನು ತಂದಿತ್ತು**. 1800** ರಲ್ಲಿ ದೈವಿಕ ಸ್ವಸ್ಥತೆಯ ಬಲದ ತೋರ್ಪಡಿಸುವಿಕೆ ಮತ್ತು ಪ್ರಕಟನೆಯನ್ನು ತಂದಿತ್ತು**. 1900** ರಲ್ಲಿ ಪಂಚಾಶತ್ತಮ ಚಳುವಳಿಯು ಪವಿತ್ರಾತ್ಮನ ದೀಕ್ಷಾಸ್ನಾನ ಮತ್ತು ಅನ್ಯಭಾಷೆಯಲ್ಲಿ ಮಾತಾನಾಡುವುದರ ಪ್ರಕಟನೆಯನ್ನು ತಂದಿತ್ತು 2000ದಲ್ಲಿ ಪಂಚಾಶತ್ತಮ ಚಳುವಳಿಯನ್ನು ಹಿಂಬಾಲಿಸುವಾಗ, ಅನೇಕ ಸ್ಪಷ್ಟವಾದ ಗುರುತಿಸಬಹುದಾದ ಚಲನೆಗಳು ಕ್ರಿಸ್ತನ ಅಂಗವು ದೇವರಲ್ಲಿ ಉನ್ನತವಾದ ಕ್ಷೇತ್ರಕ್ಕೆ ಎಬ್ಬಿಸಲ್ಪಡಲು ಕಾರಣವಾಯಿತು. ಐದು-ಪಟ್ಟು ಸೇವಾ ವರಗಳಾದ ಸುವಾರ್ತಿಕರು, ಬೋಧಕರು, ಸಭಾಪಾಲಕರು, ಪ್ರವಾದಿಗಳು ಮತ್ತು ಅಪೊಸ್ತಲರು ಕ್ರಿಸ್ತನ ಅಂಗಕ್ಕೆ ಪುನಃ ಸ್ಥಾಪಿಸಲ್ಪಟ್ಟರು. ವಿಶ್ವಾಸಿಗಳು ಬಲವಾಗಿ ದೇವರ ವಾಕ್ಯದಲ್ಲಿ ಮತ್ತು ಆತ್ಮದಲ್ಲಿ ಸಜ್ಜುಗೊಂಡ ಸೇವೆಯ ಕಾರ್ಯಗಳಿಗೆ ಬಿಡುಗಡೆಗೊಂಡಂತಹ ದೇವರ ಕ್ಯಾಲೆಂಡರನ ಸಮಯದಲ್ಲಿ ನಾವಿದ್ದೇವೆ (ಎಫೆಸದವರಿಗೆ 4:11,12) ದೇವರ ಪ್ರಸನ್ನತೆ ಮತ್ತು ಮಹಿಮೆಯು ಬಿಡುಗಡೆಗೊಂಡಂತಹ ಮತ್ತು ಹೆಚ್ಚುತ್ತಿರುವಂತಹ ಅಳತೆಗಳ ತೋರ್ಪಡಿಸುವಿಕೆಯ ಸಮಯದಲ್ಲಿ ನಾವು ಇದ್ದೇವೆ.

ಆದಿ ಹೊಸ ಒಡಂಬಡಿಕೆಯ ವಿಶ್ವಾಸಿಗಳಿಗೆ ಬಿಡುಗೊಂಡಂತಹ ನಂಬಿಕೆಗಾಗಿ ನಾವು ಎತ್ತಿಹಿಡಿಯಲ್ಪಟ್ಟಿದ್ದೇವೆ. (ಯೂದ 1:3) ಅವರು ನಂಬಿದ್ದಂತದ್ದು ಮತ್ತು ನಡೆದ್ದಂತದ್ದು "ಪ್ರಸ್ತುತ ಸತ್ಯ" ಎಂಬುದಾಗಿ ಕರೆಯಲ್ಪಟ್ಟಿತ್ತು (2 ಪೇತ್ರನು 1:12)ಆಧಿಸಭೆಯಲ್ಲಿ ಕಂಡು ಬಂದಂತೆ ಹೊಸ ಬಡಂಬಡಿಕೆ ಸತ್ಯವನ್ನು ಅನುಭವಿಸುವುದು ಮತ್ತು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವಂತಹ "ಪ್ರಸ್ತುತ ಸತ್ಯಕ್ಕೆ" ಆತನ ಸಭೆಯನ್ನು ಕರ್ತನು ಪುನಃ ಸ್ಥಾಪಿಸುತ್ತಿದ್ದಾನೆ.

ಆತನು ನಿಮ್ಮನ್ನು ಪವಿತ್ರಾತ್ಮ ಮತ್ತು ಬೆಂಕಿಯೊಡನೆ ದೀಕ್ಷಾಸ್ನಾನ ಮಾಡಿಸುತ್ತಾನೆ

ಯೇಸುವಿನ ಸೇವೆಯನ್ನು ಸ್ನಾನಿಕನಾದ ಯೋಹಾನನು ಪರಿಚಯಿಸಿದಾಗ, ಕರ್ತನಾದ ಯೇಸುವು ಜನರನ್ನು ಪವಿತ್ರಾತ್ಮ ಮತ್ತು ಬೆಂಕಿಯೊಡನೆ ದೀಕ್ಷಾಸ್ನಾನ ಮಾಡಿಸುತ್ತಾನೆಂಬುದಾಗಿ ಸಾರಿಹೇಳಿದನು.

ಮತ್ತಾಯ 3:11-12
11 ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬದಕ್ಕೆ ನಿಮಗೆ ನೀರನಲ್ಲಿ ಸ್ನಾನ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು ಆತನ ಕೆರಗಳನ್ನು ಹೊರಲಿಕ್ಕೂ ನಾನು ಹೋಗ್ಯನಲ್ಲ ಆತನ ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು
12ಆತನು ಮೊರವನ್ನು ಕೈಲ್ಲಿ ಹಿಡಿದಿದ್ದಾನೆ. ತನ್ನ ಕಣದಲ್ಲಿಯ ರಾಶಿಯನ್ನು ತೂರಿ ಹಸು ಮಾಡಿ ತನ್ನ ಗೋದಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟು ಬಿಡುವನು ಎಂದು ಹೇಳಿದನು.

'ಜೊತೆ' ಎಂಬ ಪದಕ್ಕೆ ಗ್ರೀಕನಲ್ಲಿ "ಎನ್" (en) ಎಂಬುದಾಗಿದ್ದು ಇದು ಪ್ರಾಥಮಿಕ ಉಪಸರ್ಗಾವ್ಯಯವಾಗಿದ್ದು 'ಒಳಗೆ' 'ಜೊತೆ' 'ಇದರಿಂದ' 'ನ' ಮತ್ತು 'ಗಾಗಿ' ಮುಂತಾದ ಅರ್ಥವಾಗಿದೆ. ಆದ್ದರಿಂದ "ಪವಿತ್ರಾತ್ಮದೊಡನೆ ದೀಕ್ಷಾಸ್ನಾನ" ಮತ್ತು "ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ " ಎಂಬ ಪದಗಳನ್ನು ಪರಸ್ಪರ ಬದಲಾಯಿಸಿ ಉಪಯೋಗಿಸಬಹುದಾಗಿದೆ.

ಸ್ನಾನಿಕನಾದ ಯೇಹಾನನು ಕರ್ತನಾದ ಯೇಸುವು ಪವಿತ್ರಾತ್ಮದಲ್ಲಿಯೂ ಮತ್ತು ಬೆಂಕಿಯೊಡನೆಯು ದೀಕ್ಷಾಸ್ನಾನ ಮಾಡಿಸುತ್ತಾನೆಂಬುದಾಗಿ ಸಾರಿದನು ಯೇಹಾನನು ವರ್ಣಿಸಿದ್ದಂತಹ 'ಬೆಂಕಿ' ಇದು "ಹೊಟ್ಟನ್ನು ಸುಟ್ಟು ಹಾಕುತ್ತದೆ" . ಹೊಟ್ಟು ಅದೈವಿಕವಾದದ್ದನ್ನು (ಕೀರ್ತನೆಗಳು 1:4 ಕೀರ್ತನೆಗಳು 35:5) ಮತ್ತು ಶಾರೀರಿಕವಾಗಿರುವುದನ್ನು (ಯೆರೆಮಿಯ 23:28) ಇದು ಪ್ರತಿನಿಧಿಸಲು

ಉಪಯೋಗಿಸಲಾಗಿದೆ. ವಿಶ್ವಾಸಿಗಳ ಜೀವಿತದಲ್ಲಿ ಹೊಟ್ಟನ್ನು ಬೆಂಕಿಯು ಸುಟ್ಟುಹಾಕುತ್ತದೆ. ದೇವರಲ್ಲದವುಗಳನ್ನು ಮತ್ತು ಅದೈವಿಕವಾದದ್ದನ್ನು ಇದು ಸುಟ್ಟುಹಾಕುತ್ತದೆ. ಸ್ನಾನಿಕನಾದ ಯೋಹಾನನು ಉಲ್ಲೇಖಿಸಿವಂತದ್ದು ಅಂತಿಮವಾದ, ಅದೈವಿಕವಾದದ್ದರ ನಿತ್ಯತ್ವದ ನ್ಯಾಯತೀರ್ಪಿನ ಕುರಿತು ವ್ಯಾಖ್ಯಾನಿಸುತ್ತಾನೆ. (ಪ್ರಕಟನೆ 20:10.15) ಆದ್ದರಿಂದ "ಬೆಂಕಿ" ವಿಶ್ವಾಸಿಗಳ ಜೀವಿತದಲ್ಲಿ ಜರುಗುವ ಶುದ್ದೀಕರಣದ ಕಾರ್ಯ ಮತ್ತು ಅದೈವಿಕವಾದ್ದರ ನಿತ್ಯವಾದ ನ್ಯಾಯತೀರ್ಪು ಇವೆರಡು ಉಲ್ಲೇಖಗಳನ್ನು ಹೊಂದಿವೆ.

ಈಗ, ಪವಿತ್ರಾತ್ಮದಲ್ಲಿ ದೀಕ್ಷಾಸ್ನಾದ ಕುರಿತು, ಕರ್ತನಾದ ಯೇಸುವು ಆತನ ಭೂಲೋಕದ ಸೇವೆಯ ಅವಧಿಯಲ್ಲ ಪವಿತ್ರಾತ್ಮದ ಬಲದೊಡನೆ ಸೇವೆ ಮಾಡಿದ್ದನೆಂಬುದಾಗಿ ನಮಗೆ ತಿಳಿದದೆ. (ಲೂಕ 4:14,18,19 ಮತ್ತಾಯ 12:28 ಅಪೊಸ್ತಲರ ಕೃತ್ಯಗಳು 10:38) ಆತನು ಪವಿತ್ರಾತ್ಮನ ಕುರಿತು ಬೋಧಿಸಿದನು ಮತ್ತು ಆತನು ಕಾರ್ಯ ಮಾಡಿದ ರೀತಿಯಲ್ಲಿ ವಿಶ್ವಾಸಿಗಳು, ಕಾರ್ಯಮಾಡಲೂ ಬಲ ನೀಡಲೂ "ತಂದೆಯ ವಾಗ್ದಾನವನ್ನು" ಕಳುಹಿಸುವುದಾಗಿ ಆತನು ವಾಗ್ದಾನಮಾಡಿದ್ದನು (ಯೋಹಾನ 14:12,26 ಯೋಹಾನ 15:26 ಯೋಹಾನ 16:7-13) ಆದಾಗ್ಯೂ ಆತನ ಭೂಲೋಕದ ಸೇವೆಯ ಅವಧಿಯಲ್ಲಿ ಪವಿತ್ರಾತ್ಮನಿಂದ ಯಾರನ್ನಾದರೂ ದೀಕ್ಷಾಸ್ನಾನ ಮಾಡಿಸುವುದನ್ನು ನಾವು ನೋಡುವುದಿಲ್ಲ.

ಆತನ ಪುನರುತ್ಥಾನದ ನಂತರ, ಆತನ ಶಿಷ್ಯರುನ್ನು ಸಂಧಿಸಿದನು ಮತ್ತು ಪವಿತ್ರಾತ್ಮವನ್ನು ಅವರು ಪಡೆಯಲು ಉಸಿರಿಸಿದನು.

ಯೋಹಾನ 20:21-22
21 ಯೇಸು ಅವರಿಗೆ ನಿಮಗೆ ಸಮಾಧನವಾಗಲಿ ಎಂದು ತಿರಿಗಿ ಹೇಳಿ –ತಂದೆ ನನ್ನನ್ನು ಕಳುಹಿಸಿಕೊಟ್ಟ ಹಾಗೆಯೇ ನಾನು ನಿಮ್ಮನ್ನು ಕಳುಹಿಸಿಕೊಡುತ್ತೇನೆ. ಅಂದನು
22 ಇದನ್ನು ಹೇಳಿ ಅವರ ಮೇಲೆ ಊದಿ ಅವರಿಗೆ ಪವಿತ್ರಾತ್ಮವರವನ್ನು ತಕ್ಕೊಳ್ಳಿರಿ.

ಶಿಷ್ಯರುಗಳು ಹೊಸದಾಗಿ ಜನಿಸಿದ ಸಮಯವು ಇದಾಗಿತ್ತು. ಇದನ್ನು ನಾವು ಹೇಳುವುದು ಏಕೆಂದರೆ ದೇವರು ಊದಿದಾಗ ಆತನು ಜೀವವನ್ನು ಪಾಲುಕೊಟ್ಟನು, ತನ್ನದ್ದನು ಮನುಷ್ಯನಿಗೆ ನೀಡಿದನು (ಆದಿಕಾಂಡ 2:4) ಆದ್ದರಿಂದ ಈ ಪ್ರಕಟದಲ್ಲಿ ಅವರು ಆತ್ಮದಲ್ಲಿ ಜನಿಸಿದರು. ಅವರ ಆತ್ಮಗಳು ಜೀವವನ್ನು ಪಡೆದುಕೊಂಡವು ಮತ್ತು ಹೊಸ ಸೃಷ್ಟಿಯ ಜನರಾಗಿ ಅವರು ಕಂಡು ಬಂದರು.

ಆತನನ್ನು ತಂದೆಯು ಕಳುಹಿಸಿಕೊಟ್ಟಂತಯೇ ಆತನ ಶಿಷ್ಯರುಗಳಿಗೆ ಕರ್ತನಾದ ಯೇಸುವು ಆದೇಶಾಧಿಕಾರ ನೀಡಿದ್ದಾಗಲೂ ಮತ್ತು ಅವರು ಹೊಸದಾಗಿ ಜನಿಸಿದಾಗಲೂ ಕರ್ತನಾದ ಯೇಸುವು ಅವರಿಗೆ ಮೇಲಿನಿಂದ ಬಲವನ್ನು ಪಡೆಯಲು ಪವಿತ್ರಾತ್ಮದೊಡನೆ ದೀಕ್ಷಾಸ್ನಾನಕ್ಕಾಗಿ ಯೆರೂಸಲೇಮಿನಲ್ಲಿ ಕಾದುಕೊಂಡಿರಲೂ ಉಪದೇಶಿಸಿದನು

ಲೂಕ 24:48-49
48 ಇವುಗಳ ವಿಷಯದಲ್ಲಿ ನೀವೇ ಸಾಕ್ಷಿ ಹೇಳುವವರಾಗಿದ್ದೀರಿ.
49 ಇಗೋ ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿದ್ರಿ ಎಂದು ಹೇಳಿದನು.

ಅಪೊಸ್ತಲರ ಕೃತ್ಯಗಳು 1:4-5,8
4-5 ಹೀಗರಲಾಗಿ ಆತನು ಅವರೊಂದಿಗೆ ಕೂಡಿದ್ದಾಗ್ಗೆ ಅವರಿಗೆ ಯೋಹಾನನಂತೂ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮದಲ್ಲಿ ಸ್ನಾನವಾಗುವದು ಆದಕಾರಣ ನೀವು ಯೆರೂಸಲೇಮನ್ನು ಬಿಟ್ಟು ಹೋಗದೆ ತಂದೆ ಮಾಡಿದಂಥ ನೀವು ನನ್ನಿಂದ ಕೇಳಿದಂಥ ವಾಗ್ದಾನಕ್ಕೆ ಕಾದು ಕೊಂಡಿರಿ ಎಂದು ಅಪ್ಪಣೆಕೊಟ್ಟನು.
8 ಆದರೆ ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು.

ಅವರು ಯೆರೂಸಲೇಮಿನಲ್ಲಿ ಕಾದುಕೊಂಡಿರಲು ಆತನು ಹೇಳದನು ಆದ್ದರಿಂದ ಅವರು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿಕೊಳ್ಳಬಹುದಿತ್ತು. “ದೀಕ್ಷಾಸ್ನಾನ” ಎಂಬ ಪದವು ಅದ್ದು, ಮುಳುಗು, ಮುಳುಗಿಸಿಬಿಡು ಮತ್ತು ಪೂರ್ತಿ ಮುಳುಗಿಸು ಎಂಬ ಅರ್ಥ ಹೊಂದಿದೆ. ಇದು ಸಂಪೂರ್ಣವಾಗಿ ಆವರಿಸಿರುವುದು ಸುತ್ತುವರೆದಿರುವುದು ಮತ್ತು ಮುಳುಗಿರುವುದರ ವಿಚಾರ ಹೊಂದಿದೆ.

ಪವಿತ್ರಾತ್ಮದೊಡನೆ ದೀಕ್ಷಾಸ್ನಾನದ ಉದ್ದೇಶವು ಆತನ ಬಲದೊಡನೆ ವಿಶ್ವಾಸಿಗಳಿಗೆ ಹೊಂದಿಸುವುದಾಗಿದೆ ಆದ್ದರಿಂದ ಭೂಲೋಕದ ಕಟ್ಟಕಡೆಯವರೆಗೂ ಯೇಸುವಿಗಾಗಿ ಅವರು ಸಾಕ್ಷಿಗಳಾಗಿರಬಹುದು.

ಪವಿತ್ರಾತ್ಮನ ವರವನ್ನು ಪಡೆದುಕೊಳ್ಳುವುದು

ವೈಯಕ್ತಿಕವಾಗಿ ಅಥವಾ ಗುಂಪಾಗಿ ಜನರು ಪವಿತ್ರಾತ್ಮನ ದೀಕ್ಷಾಸ್ನಾನ ಪಡೆದುಕೊಂಡಂತಹ ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ದಾಖಲಿಸಿರುವ ಐದು ಉದಾಹರಣೆಗಳನ್ನು ನಾವು ಸಮೀಕ್ಷೆ ಮಾಡೋಣ ಇನ್ನೂ ಅಧಿಕವಾದವು ಅನೇಕ ಇವೆ

ಎಂಬುದಾಗಿ ನಾವು ಅರ್ಥ ಮಾಡಿಕೊಳ್ಳುತ್ತೇವೆ. ಆದರೆ ಇವುಗಳು ನಮ್ಮ ಕಲಿಕೆಗಾಗಿ ಮತ್ತು ಉಪದೇಶಕ್ಕಾಗಿ ನಿರ್ದಿಷ್ಟವಾಗಿ ಬರೆಯಲ್ಪಟ್ಟಿವೆ. ಪವಿತ್ರಾತ್ಮನು ನಮಗಾಗಿ ದಾಖಲಿಸಿರುವಂತಹವುಗಳನ್ನು ಸಮೀಕ್ಷೆ ಮಾಡೋಣ ಮತ್ತು ಇವುಗಳಿಂದ ಒಳನೋಟಗಳನ್ನು ನೋಡೋಣ.

ಪಂಚಾಶತ್ತಮ ದಿನ

ಅಪೊಸ್ತಲರ ಕೃತ್ಯಗಳು 2:1-4
1 ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕ ಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು
2 ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು
3 ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡುವು
4 ಆಗ ಅವರೆಲ್ಲರು ಪವಿತ್ರಾತ್ಮಭರಿತವಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು.

ಪಂಚಾಶತ್ತಮದಿನದಂದು ಪವಿತ್ರಾತ್ಮನಲ್ಲಿ 120 ಶಿಷ್ಯರು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಅಸಾಮಾನ್ಯವಾದವುಗಳು ಜರುಗಿದವು: ಬಿರುಗಾಳಿ ಬೀಸುತ್ತದೋ ಎಂಬಂತೆ ಆಕಾಶದೊಳಗಿಂದ ಒಂದು ಬಲಿಷ್ಟವಾದ ಶಬ್ದ, ಉರಿಯಂತಿದ್ದ ನಾಲಿಗೆಗಳು ಅವರ ಮೇಲೆ ಬಂದವು ಮತ್ತು ಅವರು ಇತರೆ ಅನ್ಯಭಾಷೆಗಳಲ್ಲಿ ಮಾತಾಡಿದರು ಇಲ್ಲಿ

ಇತರೆ ಕೆಲವು ಸಂಗತಿಗಳನ್ನು ಗಮನಿಸಿರಿ.:

- ಅವರು ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಮಾಡಿಸಿಕೊಂಡು (ಅಪೊಸ್ತಲರ ಕೃತ್ಯಗಳು 1:5) ಅವರು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:4) ಅವರು ಹೊದಿಸಲ್ಪಟ್ಟರು ಮತ್ತು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟರು.

- ಅವರು ಇತರೆ ಅನ್ಯಭಾಷೆಯಲ್ಲಿ ಮಾತನಾಡಿದ್ದನ್ನು ಗಮನಿಸಿರಿ, ಇದರ ಅರ್ಥವು ತಮ್ಮದೇ ಆದ ಧ್ವನಿಗಳು ತಮ್ಮದೇ ಆದ ಉಚ್ಛಾರದ (ಗಾಯನ) ಅಂಗಗಳ ಮೂಲಕ ಬರುತ್ತಿವೆ. ಅವರು ಮಾತನಾಡಿದರು. ಪವಿತ್ರಾತ್ಮನದ್ದಲ್ಲ. ಆತ್ಮನಿಂದ ಅವರಿಗೆ ಕೇವಲ ಭಾಷೆಯು ಕೊಡಲ್ಪಟ್ಟಿತ್ತು.

ಇದು ಸುಗ್ಗಿಯ ಹಬ್ಬವಾಗಿತ್ತು ಪ್ರಥಮ ಫಲಗಳ ಹಬ್ಬದ 50 ದಿವಸಗಳ ನಂತರ, ಪಂಚಾಶ್ತಮ್ಮ ಹಬ್ಬವು ಬರುತ್ತದೆ. ಯೆರೂಸಲೇಮ ಈ ಹಬ್ಬಗಳನ್ನು ಆಚರಿಸಲು ಬಂದಿದ್ದ ಜನರುಗಳ ಗುಂಪುಗಳಿಂದ ತುಂಬಿತ್ತು. ಮೇಲಂತ್ತಸ್ತಿನ ಕೊಠಡಿಯಲ್ಲಿ ಜರುಗುವುದನ್ನು ಕೇಳಿಸಿಕೊಂಡಂತಹ ಜನರು ಗುಂಪು ವಿಭಿನ್ನವಾದ ಪ್ರತಿಕ್ರಿಯೆ

ಹೊಂದಿದ್ದರು. ಕೆಲವರು ಆಶ್ಚರ್ಯ ಚಿಕಿತರಾದರು ಮತ್ತು ಬೆರಗಾದರು. ಕೆಲವರು ಭ್ರಮೆಗೊಂಡರು ಮತ್ತು ಗೊಂದಲಕ್ಕೊಳಗಾದರು. ಇತರರು ಅಪಹಾಸ್ಯಮಾಡಿದರು ಮತ್ತು ಈ ಶಿಷ್ಯರುಗಳು ಮಧ್ಯಪಾನ ಮಾಡಿ ಮತ್ತರಾಗಿದ್ದಾರೆಂದು ಹೇಳಿದರು.

ಅಪೊಸ್ತಲರ ಕೃತ್ಯಗಳು 2:14-18
14 ಆಗ ಪೇತ್ರನು ಹನ್ನೊಂದು ಮಂದಿ ಅಪೊಸ್ತಲರ ಸಹಿತ ಎದ್ದು ನಿಂತು ಗಟ್ಟಿಯಾದ ಧ್ವನಿಯಿಂದ ಅವರಿಗೆ ಹೀಗೆ ಪ್ರಸಂಗ ಮಾಡಿದನು. ಹೆಹೋದ್ಯರೇ, ಯೆರೂಸಲೇಮಿನಲ್ಲಿ ವಾಸವಾಗಿರುವ ಎಲ್ಲಾ ಜನರೇ, ಈ ಸಂಗತಿಯು ಏನೆಂದು ನಿಮಗೆ ಗೊತ್ತಾಗುವ ಹಾಗೆ ನನ್ನ ಮಾತಿಗೆ ಕಿವಿಗೊಡಿರಿ
15 ನೀವು ಭಾವಿಸಿದಂತೆ ಇವರು ಅಮಲೇರಿದವರಲ್ಲ ಈಗ ಬೆಳಿಗ್ಗೆ ಒಂಭತ್ತು ಘಂಟೆಯಾಗಿದೆಯಷ್ಟೆ
16 ಆದರೆ ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ ಅದೇನಂದರೆ-
17 ಕಡೇ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರ ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು
18 ಇದಲ್ಲದೆ ಆ ದಿನಗಳಲ್ಲಿ ನನ್ನ ದಾಸದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು ಅವರೂ ಪ್ರವಾದಿಸುವರು.

ಅಪೊಸ್ತಲನಾದ ಪೇತ್ರನು ಪವಿತ್ರಾತ್ಮನ ಪ್ರೇರಣೆಯ ಅಧೀನದಲ್ಲಿ ಹಳೇ ಒಡಂಬಡಿಕೆಯಲ್ಲಿ ಪ್ರವಾದಿ ಯೋವೇಲನ ವ್ಯಾಖ್ಯಾನಗಳನ್ನು ಹೇಳುತ್ತಾನೆ. (ಯೋವೇಲ 2:28-32) ಮತ್ತು ಜರುಗುತ್ತಿರುವುದು ಆ ಪ್ರವಾದನೆಯ ನೇರವೇರಿಕೆ ಎಂಬುದಾಗಿ ಹೇಳುತ್ತಾನೆ. ಪಕ್ಕದ ಟಿಪ್ಪಣಿಯಾಗಿ, ಆತ್ಮನ ಸುರಿಸುವಿಕೆಯು ಪ್ರವಾದನೆ, ಕನಸ್ಸುಗಳು ಮತ್ತು ದರ್ಶನಗಳ ಸಂಯೋಜನೆಯೊಂದಿಗಿರುತ್ತದೆ. ಎಂಬುದಾಗಿ ಯೋವೇಲನು ಮುನ್ಸೂಚನೆಯಾಗಿ ಹೇಳಿದ್ದನ್ನು ಗಮನಿಸಿರಿ. ಪಂಚಾಶತ್ತಮ ದಿನದಲ್ಲಿ ಇದರಲ್ಲಿ ಯಾವುದು ಜರುಗಲಿಲ್ಲ, ಬದಲಿಗೆ, ಅಲ್ಲಿ ಶಬ್ದ, ಬೆಂಕಿ ಮತ್ತು ಅನ್ಯಭಾಷೆಗಳು ಇದ್ದವು. ಆದಾಗ್ಯೂ ಪವಿತ್ರಾತ್ಮನು ಪೇತ್ರನ ಮೂಲಕ ಹೀಗೆ ಮಾತಾಡುತ್ತಾನೆ "ಹೇಳಿಸಿದ ಸಂಗತಿ" (ಅಪೊಸ್ತಲರ ಕೃತ್ಯಗಳು 2:16) ಅಥವಾ ಇದು ನೆರವೇರಿಸಲ್ಪಟ್ಟಂತಹ ಅದೇ ಸಂಗತಿ ಎಂಬುದಾಗಿ ಹೇಳುತ್ತಾನೆ! ಇಲ್ಲಿರುವಂತಹ ಪಾಠವೇನೆಂದರೆ ಪವಿತ್ರಾತ್ಮನು ಚಲಿಸುವಾಗ, ತೋರ್ಪಡಿಸುವಿಕೆಯು ಯಾವಾಗಲೂ ಒಂದೇ ರೀತಿಯಿರುವುದಿಲ್ಲ ಆದರೆ ಇದು ಇನ್ನೂ ಆತ್ಮನ ಸುರಿಸುವಿಕೆ ಎಂಬುದಾಗಿ ಕರೆಯಲ್ಪಡುತ್ತದೆ. ಯಾಕೆಂದರೆ ಅದೇ ಪವಿತ್ರಾತ್ಮನು ಕಾರ್ಯನಿರತನಾಗಿದ್ದಾನೆ !

ಪೇತ್ರನು ಪ್ರಸಂಗಿಸಿದ ನಂತರ ಅದೇ ದಿನದಲ್ಲಿ ಮೂರು ಸಾವಿರ ಜನರು ರಕ್ಷಿಸಲ್ಪಟ್ಟರು. ನಾವು ಅಭಿಷೇಕದ ಅಧೀನದಲ್ಲಿ ಪ್ರಸಂಗಿಸುವಾಗ ನಾವು ಸಹ ಅಂತಹ ಆತ್ಮಗಳ ಒಂದು ದೊಡ್ಡ ಸುಗ್ಗಿಯನ್ನು ಎದುರುನೋಡಬಹುದು ! ಇದು ಪುನಃ ಮತ್ತು ಪುನಃ ಮತ್ತು ಪುನಃ ಜರುಗಬಹುದು !

ಅಪೊಸ್ತಲರ ಕೃತ್ಯಗಳು 2:38-39
38 ಪೇತ್ರನು ಅವರಿಗೆ – ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ ಆಗ ನೀವು ಪವಿತ್ರಾತ್ಮದಾನವನು ಹೊಂದುವಿರಿ.
39 ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ ಎಂದು ಹೇಳಿದನು.

ಪಶ್ಚಾತ್ತಾಪದ ಅವನ ಕರೆಯ ಭಾಗವಾಗಿ, ಪೇತ್ರನು ಗುಂಪಿನವರಿಗೆ ಅವರ ಪಾಪಗಳ ಕ್ಷಮಿಸಲ್ಪಡುವುದು ಮಾತ್ರವಲ್ಲದೇ, “ಪವಿತ್ರಾತ್ಮನ ವರವನ್ನು ಪಡೆದುಕೊಳ್ಳುತ್ತೀರಿ” ಎಂಬುದಾಗಿ ತಿಳಿಸುತ್ತಾನೆ. ಒಂದು ವರದಂತೆ 120 ಶಿಷ್ಯರುಗಳು ಸುಮ್ಮನೇ ಪಡೆದುಕೊಂಡಂತಹದ್ದನ್ನು ಅವರು ಸಹ ಪಡೆದುಕೊಳ್ಳಬಹುದು. ಪವಿತ್ರಾತ್ಮನ ಸುರಿಸುವಿಕೆಯು ನಮಗೆ ಒಂದು ವರದಂತೆ ಕೊಡಲ್ಪಟ್ಟಿದೆ ನಾವು ಸುಮ್ಮನೇ ಮಾಡಬೇಕಾದುದೇನಂದರೆ. ನಂಬಿಕೆಯಿಂದ ಪಡೆದುಕೊಳ್ಳಬೇಕು. ಪವಿತ್ರಾತ್ಮನ ವರವನ್ನು ನಾವು ಸಂಪಾದಿಸಲು ಸಾಧ್ಯವಿಲ್ಲ.

ಪೇತ್ರನು ತಿಳಿಸುವ ಮತ್ತೊಂದು ಪ್ರಾಮುಖ್ಯ ಸತ್ಯವೇನೆಂದರೆ “ವಾಗ್ದಾನವು” ಅಥವಾ ಈ ಸಂದೇಶವು ನಿಮ್ಮ ಮಕ್ಕಳಿಗಾಗಿಯು (ತಲೆಮಾರುಗಳಾದ್ಯಂತೆ), ದೂರವಾಗಿದ್ದವರೆಲ್ಲರಿಗೂ (ದೇಶಗಳಾದ್ಯಂತೆ) ಮತ್ತು ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೂ (ಜನರ ಗುಂಪುಗಳಾದ್ಯಂತ, ಸಮಯದಾದ್ಯಂತ) ಮಾಡೋಣವಾಗಿದೆ ಎಂದು ಹೇಳಿದನು. ಪೇತ್ರನು ವಾಗ್ದಾನವು ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೂ ಇದೆ ಎಂಬುದಾಗಿ ಹೇಳಿದನು ಇಂದು ದೇವರು ಜನರನ್ನು ಕರೆಯುತ್ತಿರುವಾಗ, ರಕ್ಷಣೆಯ “ವಾಗ್ದಾನವು” ಮತ್ತು ಅಪೊಸ್ತಲರ ಕೃತ್ಯಗಳು 2:38 ರಲ್ಲಿ ಹೇಳಿದ ಪವಿತ್ರಾತ್ಮನ ವರಗಳು ಇಂದು ಸಹ ನಮಗಾಗಿ ಇವೆ. ಪವಿತ್ರಾತ್ಮನ ಸುರಿಸುವಿಕೆ ಅಥವಾ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನವು ಸಭೆಯ ಯುಗದಾದ್ಯಂತ ಎಲ್ಲಾ ವಿಶ್ವಾಸಿಗಳಿಗಾಗಿ ಇದೆ.

ಸಮಾರ್ಯದಲ್ಲಿನ ವಿಶ್ವಾಸಿಗಳು

ಅಪೊಸ್ತಲರ ಕೃತ್ಯಗಳು 8ನೇ ಅಧ್ಯಾಯದಲ್ಲಿ ವಿಶ್ವಾಸಿಗಳು ಹಿಂಸೆಯ ನಿಮಿತ್ತವಾಗಿ ಯೆರೂಸಲೇಮಿನಿಂದ ಹೊರಗೆ ಅನೇಕ ನೆರೆಹೊರೆಯ ಹಳ್ಳಿಗಳು, ನಗರಗಳು ಮತ್ತು ಪಟ್ಟಣಗಳಿಗೆ ಚದುರಿ ಹೋದರು. ಯೆರೂಸಲೇಮಿನ ಸಭೆಯಲ್ಲಿ ಸೇವೆ ಸಲ್ಲಿಸುತ್ತಿದ್ದಂತಹ ಫಿಲಿಪ್ಪನು, ಸಮಾರ್ಯದ ನಗರಕ್ಕೆ ಹೋದನು ಮತ್ತು ಅವರಿಗೆ ಕ್ರಿಸ್ತನನ್ನು ಸಾರಿದನು ಮಾಟಮಂತ್ರದ ಮೂಲಕವಾಗಿ ಅನೇಕ ಜನರನ್ನು ಹತೋಟಿಯಲ್ಲಿಟ್ಟುಕೊಂಡಿದ್ದ ಒಬ್ಬ ಮಂತ್ರವಾದಿಯಾಗಿದ್ದಂತಹ ಸೀಮೋನನು ಎಂಬ ಹೆಸರುಳ್ಳ ವ್ಯಕ್ತಿಯನ್ನು ಸಹ

ಒಳಗೊಂಡು ಅನೇಕರು ಕರ್ತನಾದ ಯೇಸುಕ್ರಿಸ್ತನನ್ನು ನಂಬಿದರು. ಈ ಹೊಸ ವಿಶ್ವಾಸಿಗಳು ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಂಡರು.

ಅಪೊಸ್ತಲರ ಕೃತ್ಯಗಳೂ 8:12-19
12 ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸು ಕ್ರಿಸ್ತನ ಹೆಸಿನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು ಗಂಡಸರೂ ಹೆಂಗಸರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು.
13 ಆಗ ಸೀಮೋನನು ಕೂಡ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡು ಫಿಲಿಪ್ಪನ ಸಂಗಡ ಯಾವಾಗಲೂ ಇದ್ದು ಸೂಚಕಕಾರ್ಯಗಳೂ ಮಹತ್ಕಾರ್ಯಗಳೂ ಉಂಟಾಗುವದನ್ನು ನೋಡಿ ಬೆರಗಾದನು.
14 ಸಮಾರ್ಯದವರು ದೇವರ ವಾಕ್ಯವನ್ನು ಸ್ವೀಕರಿಸಿದ ವರ್ತಮಾನವನ್ನು ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಕೇಳಿ ಪೇತ್ರ ಯೋಹಾನರನ್ನು ಅವರ ಬಳಿಗೆ ಕಳುಹಿಸಿದರು.
15 ಇವರು ಅಲ್ಲಿಗೆ ಬಂದು ಆ ಜನರಿಗೆ ಪವಿತ್ರಾತ್ಮವರವು ದೊರೆಯಬೇಕೆಂದು ಅವರಿಗೋಸ್ಕರ ಪ್ರಾರ್ಥನೆ ಮಾಡಿದರು.
16 ಯಾಕಂದರೆ ಆ ವರವು ಅವರಲ್ಲಿ ಒಬ್ಬನ ಮೇಲಾದರೂ ಇನ್ನೂ ಬಂದಿರಲಿಲ್ಲ ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾತ್ರ ಮಾಡಿಸಿಕೊಂಡಿದ್ದರು.
17 ಅಪೊಸ್ತಲರು ಅವರ ಮೇಲೆ ಕೈಗಳನ್ನಿಡಲು ಅವರು ಪವಿತ್ರಾತ್ಮವರವನ್ನು ಹೊಂದಿದರು.
18 ಅಪೊಸ್ತಲರು ಕೈಗಳನ್ನಿಡುವದರ ಮೂಲಕವಾಗಿ ಪವಿತ್ರಾತ್ಮದಾನವಾಗುವದನ್ನು ಸೀಮೋನನು ನೋಡಿ ಹಣವನ್ನು ತಂದು ಅವರ ಮುಂದಿಟ್ಟು – ನಾನು ಯಾರ ಮೇಲೆ ಕೈಗಳನ್ನಿಡುತ್ತೇನೋ
19 ಅವರು ಪವಿತ್ರಾತ್ಮವರನ್ನು ಹೊಂದುವಂತೆ ಈ ಅಧಿಕಾರವನ್ನು ನನಗೂ ಕೊಡಿರಿ ಅಂದನು.

ಸಮಾರ್ಯದಲ್ಲಿ ಜನರು ಕರ್ತನಾದ ಯೇಸುಕ್ರಿಸ್ತನಲ್ಲ ನಂಬಿಕೆಯಿಟ್ಟಿದ್ದನ್ನು ಕೇಳಿದಾಗ ಯೆರೋಸಲೇಮಿನಲ್ಲಿ ಅಪೊಸ್ತಲರು ಮಾಡಿದ್ದನ್ನು ಗಮನಿಸುವುದು ಆಸಕ್ತಿಕರವಾಗಿದೆ. ಪವಿತ್ರಾತ್ಮನನ್ನು ಅವರು ಪಡೆಯಲು ನಿರ್ದಿಷ್ಟವಾಗಿ ಪ್ರಾರ್ಥಿಸುವುದಕ್ಕಾಗಿ ಪೇತ್ರ ಮತ್ತು ಯೋಹಾನರು ಬಂದರು.

ಹೊಸ ವಿಶ್ವಾಸಿಗಳು ಪವಿತ್ರಾತ್ಮನನ್ನು ಪಡೆಯಲು (ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ) ಪ್ರಾರ್ಥಿಸುವುದು ಆಧಿಸಭೆಯಲ್ಲಿ "ಸಾಮಾನ್ಯ ರೂಢಿಯಾಗಿ" ಕಂಡು ಬಂದಿದ್ದನ್ನು ಊಹಿಸುವುದು ಸುರಕ್ಷಿತವೆಂದು ತೋರುತ್ತದೆ. ಸಮಾರ್ಯದಲ್ಲಿ ಈ ಹೊಸ ವಿಶ್ವಾಸಿಗಳಿಗಾಗಿ ಅಪೊಸ್ತಲರು ಪ್ರಾರ್ಥಿಸಿದಾಗ ಅತ್ಯದ್ಭುತಕರವಾದವುಗಳೂ ಜರುಗಿದವು ಎಂಬುದನ್ನು ಸಹ ನಾವು ಊಹಿಸಬಹುದು ಯಾಕೆಂದರೆ ಸೀಮೋನನು ಅಪ್ರಾಕೃತವಾದದರ ಕತ್ತಲೆ – ಕಡೆಗೆ ತೊಡಗಿಸಿಕೊಂಡಿದ್ದವನು ಅದೇ ಬಲವನ್ನು ಕೊಂಡುಕೊಳ್ಳಲು ಹಣವನ್ನು ನೀಡುತ್ತಿದ್ದಾನೆ. ಪಂಚಾಶತ್ತಮ ದಿನದ ಉದಾಹರಣೆಯ ಪ್ರಾಚೀನ ದಾಖಲೆಗಳಲ್ಲಿ ಏನು ಜರುಗಿತ್ತೆಂಬುದನ್ನು ಧರ್ಮಶಾಸ್ತ್ರದ ವಚನಗಳಲ್ಲಿ ವ್ಯಾಖ್ಯಾನಿಸಲ್ಲಿಲ್ಲದಿದ್ದಾಗಲೂ ಪವಿತ್ರಾತ್ಮನ ವರವನ್ನು ಸಮಾರ್ಯದಲ್ಲಿನ ವಿಶ್ವಾಸಿಗಳ ಪಡೆದಾಗ ಅವರು ಇತರೆ ಅನ್ಯಭಾಷೆಗಳಲ್ಲಿ ಮಾತಾನಾಡಲೂ ಪ್ರಾರಂಭಿಸಿದ್ದರು ಎಂಬುದನ್ನು ಊಹಿಸಿಕೊಳ್ಳುವುದರಲ್ಲಿ ನಾವು ಸುರಕ್ಷಿತರು ಅನ್ನಿಸುತ್ತದೆ. ಒಬ್ಬ ಮಾಜಿ ಮಂತ್ರವಾದಿ, ಸೀಮೋನನ್ನು ಬೆಚ್ಚಿಬಿಸಿದ್ದ ಅಪ್ರಾಕೃತ ವಿದ್ಯಮಾನವು ಇದಾಗಿತ್ತು.

ಸೌಲನು ಅಪೊಸ್ತಲನಾದ ಪೌಲನಾಗಿ ಕಂಡು ಬಂದದ್ದು

ಅಪೊಸ್ತಲರ ಕೃತ್ಯದಲ್ಲಿನ ನಮ್ಮ ಮುಂದಿನ ದಾಖಲೆಯ ಉದಾಹರಣೆಯು, ಪವಿತ್ರಾತ್ಮನನ್ನು ಪಡೆದುಕೊಳ್ಳಲೂ ಪ್ರಾರ್ಥಿಸಲ್ಪಟ್ಟಂತಹ ಸೌಲನು, ತದನಂತರದಲ್ಲಿ ಮಹಾ ಅಪೊಸ್ತಲನಾದ ಪೌಲನಾಗಿ ಕಂಡು ಬಂದಂತಹವನ ಕುರಿತಾಗಿದೆ. ಸೌಲನು ದಮಸ್ಕದ ದಾರಿಯಲ್ಲಿ ಕರ್ತನಾದ ಯೇಸುವಿನೊಡನೆ ಒಂದು ಬಲಯುತವಾದ ಸಂಧಿಸುವಿಕೆಯನ್ನು ಹೊಂದಿದ್ದನು ಅವನು ಕುರುಡನಾದನು ಮತ್ತು ಮೂರು ದಿನಗಳು ಅದೇ ರೀತಿಯಲ್ಲಿಯೇ ಇದ್ದನು ಉಪವಾಸ ಪ್ರಾರ್ಥನೆ ಮತ್ತು ಕರ್ತನಾದ ಯೇಸುಕ್ರಿಸ್ತನಿಗಾಗಿ ಕಾಯುತ್ತಿದ್ದನು. ಸೌಲನು ಕಣ್ಣಿನ ದೃಷ್ಟಿಯನ್ನು ಪಡೆದುಕೊಳ್ಳಲೂ ಹೋಗಿ ಪ್ರಾರ್ಥಿಸುವಂತೆ ಒಬ್ಬ ಶಿಷ್ಯನಾದ ಅನನೀಯನೆಂಬ ಹೆಸರುಳ್ಳವನಿಗೆ ಕರ್ತನಾದ ಯೇಸುವು ಉಪದೇಶಿಸಿದನು.

ಅಪೊಸ್ತಲರ ಕೃತ್ಯಗಳು 9:10-18
10 ದಮಸ್ಕದಲ್ಲಿ ಅನನೀಯನೆಂಬ ಒಬ್ಬ ಶಿಷ್ಯನಿದ್ದನು ಕರ್ತನು ದರ್ಶನದಲ್ಲಿ ಅನನೀಯನೇ ಎಂದು ಅವನನ್ನು ಕರೆಯಲು ಅವನು ಕರ್ತನೇ ಇಗೋ ಇದ್ದೇನೆ ಅಂದನು.
11 ಕರ್ತನು ಅವನಿಗೆ – ನೀನೆದ್ದು ನೆಟ್ಟನೇ ಬೀದಿ ಎಂಬ ಬೀದಿಗೆ ಹೋಗಿ ಯೂದನ ಮನೆಯಲ್ಲಿ ತಾರ್ಸದ ಸೌಲನೆಂಬವನನ್ನು ವಿಚಾರಿಸು ಅವನು ಪ್ರಾರ್ಥನೆ ಮಾಡುತ್ತಾನೆ
12 ಮತ್ತು ಅನನೀಯನೆಂಬ ಒಬ್ಬ ಮನುಷ್ಯನು ಒಳಗೆ ಬಂದು ತನಗೆ ತಿರಿಗಿ ಕಣ್ಣು ಕಾಣುವಂತೆ ತನ್ನ ಮೇಲೆ ಕೈಯಿಡುವದನ್ನು ನೋಡಿದ್ದಾನೆ ಎಂದು ಹೇಳಿದನು
13 ಅದಕ್ಕೆ ಅನನೀಯನ ಕರ್ತನೇ ಆ ಮನುಷ್ಯನು ಯೆರೂಸಲೇಮಿನಲ್ಲಿ ನಿನ್ನನ್ನು ನಂಬಿದ ದೇವಜನರಿಗೆ ಎಷ್ಟೋ ಕೇಡನ್ನುಂಟುಮಾಡಿದ್ದನೆಂದು ಅವನ ವಿಷಯವಾಗಿ ಅನೇಕರಿಂದ ಕೇಳಿದ್ದೇನೆ
14 ಮತ್ತು ಇಲ್ಲಿಯೂ ನಿನ್ನ ಹೆಸರನ್ನು ಸ್ಮರಿಸುವವರೆಲ್ಲರಿಗೆ ಬೇಡಿಹಾಕಿಸುವ ಅಧಿಕಾರವನ್ನು ಮಹಾಯಾಜಕರಿಂದ ಹೊಂದಿದ್ದಾನೆ ಅಂದನು
15 ಕರ್ತನು ಅವನಿಗೆ ನೀನು ಹೋಗು ಆ ಮನುಷ್ಯನ ಅನ್ಯಜನರಿಗೂ ಅರಸುಗಳಿಗೂ ಇಸ್ರಾಯೇಲ್ಯರಿಗೂ ನನ್ನ ಹೆಸರನ್ನೂ ತಿಳಿಸುವದಕ್ಕಾಗಿ ನಾನು ಆರಿಸಿಕೊಂಡ ಸಾಧನವಾಗಿದ್ದಾನೆ.
16 ಅವನು ನನ್ನ ಹೆಸರಿನ ನಿಮಿತ್ತ ಎಷ್ಟು ಹಿಂಸೆ ಅನುಭವಿಸಬೇಕೆಂಬದನ್ನು ನಾನೇ ಅವನಿಗೆ ತೋರಿಸುವೆನು ಎಂದು ಹೇಳಿದನು.
17 ಆಗ ಅನನೀಯನು ಹೊರಟು ಆ ಮನೆಯೊಳಗೆ ಹೋಗಿ ಅವನ ಮೇಲೆ ತನ್ನ ಕೈಗಳನ್ನಿಟ್ಟು ಸಹೋದರನಾದ ಸೌಲನೇ ನೀನು ಬಂದ ದಾರಿಯಲ್ಲಿ ನಿನಗೆ ಕಾಣಿಸಿಕೊಂಡ ಕರ್ತನಾದ ಯೇಸು ನಿನಗೆ ಕಣ್ಣು ಕಾಣುವಂತೆಯೂ ನೀನು ಪವಿತ್ರಾತ್ಮಭರಿತನಾಗುವಂತೆಯೂ ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆ ಎಂದು ಹೇಳಿದನು
18 ಕೂಡಲೆ ಅವನಕಣ್ಣುಗಳಿಂದ ಪರೆಗಳಂತೆ ಏನೋ ಬಿದ್ದು ಅವನ ಕಣ್ಣು ಕಾಣಿಸಿದವು ಅವನು ಎದ್ದು ದೀಕ್ಷಾಸ್ನಾನ ಮಾಡಿಸಿಕೊಂಡನು ತರುವಾಯ ಊಟಮಾಡಿ ಬಲಹೊಂದಿದನು.

ಅನನೀಯನು, ಆರಂಭಿಕ ಹಿಂಜರಿಕೆಯ ನಂತರ ಹೋದನು ಮತ್ತು ಸೌಲನಿಗಾಗಿ ಅವನ ಕಣ್ಣುಗಳ ದೃಷ್ಟಿಯನ್ನು ಪಡೆದುಕೊಳ್ಳುವುದು ಮಾತ್ರವಲ್ಲದೆ, ಪವಿತ್ರಾತ್ಮನಿಂದ ತುಂಬಿಸಲ್ಪಡುವಂತೆ ಪ್ರಾರ್ಥಿಸಿದನು. ಸೌಲನು ಯೇಸುವಿನಲ್ಲಿ ಒಬ್ಬ

ವಿಶ್ವಾಸಿಯಾಗಿದ್ದಾನೆ ಕರ್ತನಲ್ಲಿ ಮೂರು – ದಿವಸಗಳ ಹಳೆಬನಾಗಿದ್ದಾನೆ ಕರ್ತನಾದ ಯೇಸುವು ಅನನೀಯನಿಗೆ ಹೇಳಿದ್ದರಿಂದ ನಾವು ನೋಡುವಂತಹ ಅವನ ಜೀವಿತದಲ್ಲಿನ ಒಂದು ದೊಡ್ಡ ಕರೆ ಹೊಂದಿದ್ದನು. ಆದಾಗ್ಯೂ ಪವಿತ್ರಾತ್ಮನನ್ನು ಪಡೆದುಕೊಳ್ಳುವಂತೆ ಅವನು ಪ್ರಾರ್ಥಿಸಲ್ಪಟ್ಟನು.

ಆದಿಸಭೆಯಲ್ಲಿ, ಹೊಸ ವಿಶ್ವಾಸಿಗಳು ಪವಿತ್ರಾತ್ಮವನ್ನು ಪಡೆದುಕೊಳ್ಳಲೂ ಪ್ರಾರ್ಥಿಸುವುದು ಸಾಮಾನ್ಯವಾಗಿತ್ತು ಎಂಬುದನು ನಮ್ಮ ತಿಳುವಳಿಕೆಗೆ ತಿರುಗಿ ಮತ್ತೊಮ್ಮೆ ಇದರಿಂದ ಸೇರಿಸಿಕೊಳ್ಳಬಹುದು.

ಪೌಲನು ಅನ್ಯಭಾಷೆಯಲ್ಲಿ ಮಾತನಾಡಿದನು ಅಥವಾ ಯಾವುದೇ ಅಪ್ರಾಕೃತ ವಿದ್ಯಮಾನಗಳನ್ನು ತೋರಿಸಿದನೆಂಬುದರ ಕುರಿತು ಅಪೊಸ್ತಲರ ಕೃತ್ಯಗಳ 9ನೇ ಅಧ್ಯಾಯವು ನಿರ್ದಿಷ್ಟವಾಗಿ ವ್ಯಾಖ್ಯಾನಿಸದಿದ್ದಾಗ್ಯೂ ಸೌಲನು (ನಂತರ ಪೌಲನು) ಅನ್ಯಭಾಷೆಗಳಲ್ಲಿ ಅಧಿಕವಾಗಿ ಮಾತಾನಾಡಿದನೆಂಬುದು ನಮಗೆ ಗೊತ್ತು, ಅವನು ಕೊರಿಂಥದವರಿಗೆ ಹೀಗೆ ಬರೆದನು "ನಾನು ನಿಮ್ಮೆಲ್ಲರಿಗಿಂತಲೂ ಹೆಚ್ಚಾಗಿ ವಾಣಿಗಳನ್ನಾಡುತ್ತೇನೆಂದು ದೇವರನ್ನು ಕೊಂಡಾಡುತ್ತೇನೆ." (1ಕೊರಿಂಥದವರಿಗೆ 14:18) ಪೌಲನು ಎಲ್ಲಾ ಆತ್ಮನ ವರಗಳನ್ನು ತೋರ್ಪಡಿಸನೆಂದು ಮತ್ತು ಇವುಗಳು ಕುರಿತು ಇತರೆ ವಿಶ್ವಾಸಿಗಳಿಗೆ ಬೋಧಿಸಿದನು, ಯಾಕೆಂದರೆ 1ಕೊರಿಂಥದವರಿಗೆ 12-14 ಅಧ್ಯಾಯಗಳನ್ನು ಅವನೇ ಬರೆದಿದ್ದಾನೆ ಎಂಬುದು ನಮಗೆ ತಿಳಿದದೆ.

ಕೊರ್ನೇಲ್ಯನು ಮತ್ತು ಅವನ ಮನೆಯವರು

ಅಪೊಸ್ತಲರಕೃತ್ಯಗಳು ಪುಸ್ತಕದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಂತಹ ಇನ್ನೊಂದು ನಾಲ್ಕನೆ ದಾಖಲೆಯ ಉದಾಹರಣೆಯು ಕೊರ್ನೇಲ್ಯನು ಮತ್ತು ಅವನ ಮನೆಯವರದಾಗಿದೆ. ಅಪೊಸ್ತಲನಾದ ಪೇತ್ರನು ಹೋಗಿ ಕೊರ್ನೇಲ್ಯನನ್ನು ಸಂಧಿಸಲು ಯೇಸುಕ್ರಿಸ್ತನ ಕುರಿತು ಅವನು ಸಾರಲೂ ದೈವಿಕವಾಗಿ ಉಪದೇಶಿಸಲ್ಪಟ್ಟನು. ಇದು ಮೊದಲ ಬಾರಿಗೆ ಸುವಾರ್ತೆಯು ಅನ್ಯರಿಗೆ ಸಾರಲ್ಪಟ್ಟಿತ್ತು.

ಅಪೊಸ್ತಲರ ಕೃತ್ಯಗಳು 10:44-48
44 ಪೇತ್ರನು ಈ ಮಾತುಗಳನ್ನು ಇನ್ನೂ ಹೇಳುತ್ತಿರುವಾಗ ಅವರನ ವಾಕ್ಯವನ್ನು ಕೇಳಿದವರಲ್ಲರ ಮೇಲೆ ಪವಿತ್ರಾತ್ಮವರವು ಇಳಿಯಿತು. ಅವರು
45-46 ನಾನಾ ಭಾಷೆಗಳನ್ನಾಡುತ್ತಾದೇವರನ್ನು ಕೊಂಡಾಡುತ್ತಾ ಇರುವದನ್ನು ಪೇತ್ರನ ಸಂಗಡ ಬಂದಿದ್ದ ಯೆಹೂದ್ಯರಾದ ವಿಶ್ವಾಸಿಗಳು ಕೇಳಿದಾಗ ಅನ್ಯಜನಗಳಿಗೂ ಪವಿತ್ರಾತ್ಮದಾನ ಮಾಡಲ್ಪಟ್ಟದೆಯಲ್ಲಾ ಎಂದು ಆತ್ಯಾಶ್ಚರ್ಯಪಟ್ಟರು. ನಡೆದ ಸಂಗತಿಯನ್ನು ಪೇತ್ರನು ನೋಡಿ –

47 ನಮ್ಮ ಹಾಗೆಯೇ ಪವಿತ್ರಾತ್ಮವರವನ್ನು ಹೊಂದಿದ ಇವರಿಗೆ ನೀರಿನ ದೀಕ್ಷಾಸ್ನಾನ ವಾಗದಂತೆ ಯಾರಾದರೂ ಅಭ್ಯಂತರ ಮಾಡಾರೇ ಎಂದು ಹೇಳಿ
48 ಅವರಿಗೆ ನೀವು ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಅಪ್ಪಣೆಕೊಟ್ಟನು ಆ ಮೇಲೆ ಅವರು ಅವನನ್ನು ಇನ್ನೂ ಕೆಲವು ದಿವಸ ಇರಬೇಕೆಂದು ಬೇಡಿಕೊಂಡರು.

ಪೇತ್ರನು ಈ ಜನರಿಗೆ ಕ್ರಿಸ್ತನ ಕುರಿತು ಸಾರಿದಾಗ, ಅವರು ಸಂದೇಶವನ್ನು ನಂಬಿದರು ಮತ್ತು ಅವರ ಮೇಲೆ ತಕ್ಷಣವೆ ದೇವರು ಆತನ ಆತ್ಮನನ್ನು ಸುರಿಸಿದನು. ಈ ಜನರು ಅನ್ಯಭಾಷೆಯಲ್ಲಿ ಮಾತನಾಡಿದರು ಮತ್ತು ದೇವರನ್ನು ಕೊಂಡಾಡಿದರು.

ಅಪೊಸ್ತಲರ ಕೃತ್ಯಗಳು 11:15-18
15 ನಾನು ಮಾತಾಡುವದಕ್ಕೆ ಪ್ರಾರಂಭಿಸಿದಾಗ ಪವಿತ್ರಾತ್ಮವರವು ಮೊದಲು ನಮ್ಮ ಮೇಲೆ ಇಳಿದಂತೆ ಅವರ ಮೇಲಯೂ ಇಳಿಯಿತು
16 ಆಗ ಯೋಹಾನನಂತೂ ನೀರಿನ ದೀಕ್ಷಾಸ್ನಾನ ಮಾಡಿಸಿದನು ನಿಮಗಾದರೋ ಪವಿತ್ರಾತ್ಮದಲ್ಲಿ ಸ್ನಾನವಾಗುವದು ಎಂದು ಯೇಸುಸ್ವಾಮಿ ಹೇಳಿದ ಮಾತು ನನ್ನ ನೆನಪಿಗೆ ಬಂತು
17 ದೇವರು ಕರ್ತನಾಗಿರುವ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟ ನಮಗೆ ಕೊಟ್ಟವರಕ್ಕೆ ಸರಿಯಾದ ವರವನ್ನು ಶಕ್ತನೋ ?
18 ಹೀಗೆಂದ ಮಾತುಗಳನ್ನು ಆ ಸುನ್ನತಿಯವರು ಕೇಳಿ ಆಕ್ಷೇಪಣೆ ಮಾಡುವದನ್ನು ಬಿಟ್ಟು ಹಾಗಾದರೆ ದೇವರು ಅನ್ಯಜನರಿಗೂ ಜೀವಕೊಡಬೇಕೆಂದು ಅವರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿದ್ದಾನೆ ಎಂದು ದೇವರನ್ನು ಕೊಂಡಾಡಿದರು.

ಪೇತ್ರನು ಯೆರೂಸಲೇಮಿಗೆ ಒಮ್ಮೆ ಹಿಂದಿರುಗಿದ ಮೇಲೆ ಕೊರ್ನೇಲ್ಯನ ಮನೆಯಲ್ಲಿ ನಡೆದ ಘಟನೆಗಳನ್ನು ಪುನಃ ಹೇಳಿದನು ಮತ್ತು ಪಂಚಾಶತ್ತಮ ದಿನದಲ್ಲಿ 120 ಶಿಷ್ಯರು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿದಂತಹ ರೀತಿಯಲ್ಲಿ ಇದು ಇರುವುದಾಗಿದೆ ಎಂಬುದಾಗಿ ಅವನು ಸ್ಪಷ್ಟವಾಗಿ ವ್ಯಾಖ್ಯಾನಿಸಿದನು.

ಆದಾಗ್ಯೂ ಕರ್ತನಾದ ಯೇಸು ಕ್ರಿಸ್ತನಲ್ಲಿ ಜನರು ನಂಬಿಕೆಯಿಟ್ಟ ನಂತರ ಅವರು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನವನ್ನು ಪಂಚಾಶತ್ತಮದಿನದಲ್ಲಿ ಪಡೆದಂತೆ ಅವರು ಪಡೆಯುವುದರ ಇನ್ನೊಂದು ಉದಾಹರಣೆ ಇದೆ.

ಎಫೆಸದಲ್ಲಿನ ವಿಶ್ವಾಸಿಗಳು

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡ ಕೊನೆಯ ದಾಖಲಿತ ಉದಾಹರಣೆಯು ಅಪೊಸ್ತಲರ ಕೃತ್ಯಗಳು 19 ರಲ್ಲಿನ ಎಫೆಸದಲ್ಲಿನದ್ದಾಗಿದೆ. ಇಲ್ಲಿ ಅಪೊಸ್ತಲನಾದ ಪೌಲನು ಸ್ನಾನಿಕನಾದ ಯೋಹಾನನಿಂದ ನೀರಿನಲ್ಲಿ ದೀಕ್ಷಾಸ್ನಾನ ಪಡೆದ ಕೆಲವು ಜನರನ್ನು

ಸಂಧಿಸಿದನು. ಈ ಜನರಿಗೆ ಯೇಸುಕ್ರಿಸ್ತನ ಸೇವೆಯಿಂದ ಜರುಗಿದ್ದಂತಹವುಗಳ ಬಗ್ಗೆ ತಿಳಿದಿರಲಿಲ್ಲ.

ಅಪೊಸ್ತಲರ ಕೃತ್ಯಗಳು 19:1-7
1 ಅಪೊಲ್ಲೋಸನು ಕೊರಿಂಥದಲ್ಲಿದ್ದಾಗ ಪೌಲನು ಮಲೆನಾಡಿನಲ್ಲಿ ಸಂಚಾರಮಾಡಿ ಎಫೆಸಕ್ಕೆ ಬಂದು ಕೆಲವು ಮಂದಿ ಶಿಷ್ಯರನ್ನು ಕಂಡು
2 ನೀವು ನಂಬಿದಾಗ ಪವಿತ್ರಾತ್ಮವರವನ್ನು ಹೊಂದಿದಿರೋ ಎಂದು ಅವರನ್ನು ಕೇಳಲು ಅವರು ಅವನಿಗೆ ಇಲ್ಲ ಪವಿತ್ರಾತ್ಮವರವು ಉಂಟಂಬದನ್ನೇ ನಾವು ಕೇಳಲಿಲ್ಲ ಅಂದರು
3 ಅವನು ನೀವು ಯಾವದನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡಿರಿ ಎಂದು ಕೇಳಿದ್ದಕ್ಕೆ ಅವರು ಯೋಹಾನನ ಬೋಧನೆಯನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡೆವು ಅಂದರ
4 ಅದಕ್ಕೆ ಪೌಲನು ಯೋಹಾನನು ದೇವರ ಕಡೆಗೆ ತಿರುಗಿಕೊಂಡವರಿಗೆ ದೀಕ್ಷಾಸ್ನಾನ ಮಾಡಿಸಿ ತನ್ನ ಹಿಂದೆ ಬರುವಾತನಲ್ಲಿ ಅಂದರೆ ಯೇಸುವಿನಲ್ಲಿ ನಂಬಿಕೆಯಿಡಬೇಕೆಂಬದಾಗಿ ಜನರಿಗೆ ಹೇಳದನು ಎಂದು ಹೇಳಲು
5 ಅವರು ಆ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೇಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು.
6 ಪೌಲನು ಅವನ ಮೇಲೆ ಕೈಗಳನ್ನಿಡಲು ಪವಿತ್ರಾತ್ಮವರವು ಅವನ ಮೇಲೆ ಬಂತು ಅವರು ನಾನಾ ಭಾಷೆಗಳನ್ನಾಡಿದರು ಪ್ರವಾದಿಸಿದರು
7 ಅವರು ಸುಮಾರು ಹನ್ನೆರಡು ಮಂದಿ ಗಂಡಸರು.

ಪೌಲನ ಪ್ರಾರಂಭಿಕ ಪ್ರಶ್ನೆಯನ್ನು ಪರಿಗಣಿಸುವುದು ಆಸಕ್ತಿಕರವಾಗಿದೆ "ನೀವು ನಂಬಿದಾಗ ಪವಿತ್ರಾತ್ಮವರವನ್ನು ಹೊಂದಿದಿರೋ?" ಎಂಬುದು ಇದಾಗಿದೆ. ಹೊಸ ವಿಶ್ವಾಸಿಗಳು ಯೇಸುಕ್ರಿಸ್ತನಲ್ಲಿ ನಂಬಿಕೆಯಿಟ್ಟಾಗ ಈ ಜನರಿಗೆ ಪೌಲನು ಅಪೊಸ್ತಲರ ಕೃತ್ಯಗಳು 19 ರಲ್ಲಿ ಮಾಡಿದ ರೀತಿಯಲ್ಲಿ ಪವಿತ್ರಾತ್ಮನನ್ನು ಪಡೆಯಲು ಪ್ರಾರ್ಥಿಸುವಂತದ್ದು ತಿರುಗಿ ಸಾಮಾನ್ಯವಾಗಿರುವುದೆಂದು ಸೂಚಿಸುತ್ತಿದೆ. ಪೌಲನು ಅವರಿಗೆ ಯೇಸುಕ್ರಿಸ್ತನ ಕುರಿತು ಸಾರಿದನು, ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು, ಆಮೇಲೆ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಲು ಅದು ಪವಿತ್ರಾತ್ಮನನ್ನು ಪಡೆಯಲು ಅವರಿಗಾಗಿ ಪ್ರಾರ್ಥನೆಯನ್ನು ಮಾಡಿದನು. ತಿರುಗಿ ಮತ್ತೊಮ್ಮೆ, ಹಿಂದಿನಂತೆ, ಪವಿತ್ರಾತ್ಮನ ಸುರಿಸುವಿಕೆಯು ಅಥವಾ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನವು ಅತ್ಯದ್ಭುತಕರವಾದ ತೋರ್ಪಡಿಸುವಿಕೆಗಳಾದ - ಇತರೆ ಅನ್ಯಭಾಷೆಗಳಲ್ಲಿ ಮಾತಾಡುವುದು ಮತ್ತು ಈ ಘಟನೆಯಲ್ಲಿ, ಅವರು ಪ್ರವಾದನೆಯನ್ನು ಸಹ ಮಾಡಿದಂತವುಗಳಿಂದ ಒಳಗೊಂಡಿರುವುದನ್ನು ನಾವು ಗಮನಿಸುತ್ತೇವೆ.

ಐದು ದಾಖಲಿತ ಉದಾಹರಣೆಗಳ ಸಾರಂಶ

ದಾಖಲಿತ ಉದಾಹರಣೆಗಳ ಐದರಲ್ಲಿ ಮೂರು ನಿದರ್ಶನಗಳಲ್ಲಿ, ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಮಾಢಿಸಿಕೊಂಡ ಜನರು ಅನ್ಯಭಾಷೆಯಲ್ಲಿ ಮಾತನಾಡಿದರು ಎಂಬುದು ಸ್ಪಷ್ಟವಾಗಿದೆ. ಇನ್ನುಳಿದ ಎರಡು ನಿದರ್ಶನಗಳಲ್ಲಿ, ಸಮಾರ್ಯದಲ್ಲಿ ಯಾವುದೊ

ಅತ್ಯದ್ಭುತಕರವಾದದ್ದು ಜರುಗಿತೆಂದು ನಾವು ಊಹಿಸಿಕೊಳ್ಳುತ್ತೇವೆ ಮತ್ತು ಸೌಲನ ಪ್ರಕರಣದಲ್ಲಿ (ನಂತರ ಪೌಲನು) ಅವನು ಅನ್ಯಭಾಷೆಯಲ್ಲಿ ಮಾತನಾಡಿದ್ದನೆಂಬುದು ನಮಗೆ ತಿಳಿದಿದೆ. ಆದ್ದರಿಂದ ಎಲ್ಲಾ ಐದು ನಿದರ್ಶನಗಳಲ್ಲಿ ಅತ್ಯದ್ಭುತಕವಾದದ್ದು ಜರುಗಿತ್ತು ಮತ್ತು ಐದರಲ್ಲಿ ನಾಲ್ಕು ನಿದರ್ಶನಗಳಲ್ಲಿ ಅವರು ನಿಶ್ಚಯವಾಗಿ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಅನ್ಯಭಾಷೆಯಲ್ಲಿ ಮಾತಾಡಿದರು ಎಂಬುದಾಗಿ ಉಲ್ಲೇಖಿಸುವುದು ಸುರಕ್ಷಿತವೆಂದು ಕಾಣಿಸುತ್ತದೆ.

ಐದರಲ್ಲಿನ ಮೂರು ಘಟನೆಗಳಲ್ಲಿ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು ಮತ್ತು ಆನಂತರ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಐದರಲ್ಲಿನ ಎರಡರಲ್ಲಿ ಸಮಾರ್ಯ ಮತ್ತು ಎಫೆಸದಲ್ಲಿ, ಅವರು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು ಮತ್ತು ಆಮೇಲೆ ಪವಿತ್ರಾತ್ಮನಿಂದ ದೀಕ್ಷಾಸ್ನಾವನ್ನು ಹೊಂದಿದ್ದರು ಆದ್ದರಿಂದ ದೇವರು ಯಾವುದೇ ಮಾರ್ಗದಲ್ಲಿಯಾದರೂ ಕಾರ್ಯಮಾಡಬಹುದು ಮತ್ತು ಯಾವುದೇ "ವ್ಯವಸ್ಥಿತ" ಹಂತಗಳು ಈ ಒಂದು ಪ್ರಕ್ರಿಯೆಯಲ್ಲಿಲ್ಲ.

• ಸಾಕ್ಷಿಗಳಾಗಿರಲೂ ಬಲವನ್ನು ಹೊಂದಿಕೊಳ್ಳುವುದೇ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನದ ಉದ್ದೇಶವಾಗಿದೆ ಆತ್ಮನ ಒಂದು ತೋರ್ಪಡಿಸುವಿಕೆ ಅಥವಾ ಆತ್ಮನ ಒಂದು ವರವೆಂಬುದಾಗಿ ನಮಗೆ ತಿಳಿದಿರುವ ಅನ್ಯಭಾಷೆಯಲ್ಲಿ ಮಾತನಾಡುವುದರ ಅಪ್ರಾಕೃತತೋರ್ಪಡಿಸುವಿಕೆಗಳ ಮೂಲಕವಾಗಿ ಬಲವನ್ನು ಹೊಂದಿಕೊಳ್ಳುವುದು ವ್ಯಕ್ತಪಡಿಸಲ್ಪಟ್ಟಿದೆ. (1ಕೊರಿಂಥದವರಿಗೆ 12:7-11) ಆದ್ದರಿಂದ ಕೆಲವು ಕಳೆಯುವುದನ್ನು ಇಲ್ಲಿ ಮಾಡೋಣ:

• ನಾವು ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಮಾಡಿಸಿಕೊಂಡಾಗ ನಾವು ಬಲ ಮತ್ತು ವರಗಳು ಎರಡನ್ನು ಹೊಂದುತ್ತೇವೆ. ದೇವರ ಆತ್ಮನು ವಿಶ್ವಾಸಿಗಳನ್ನು ಬಲದೊಡನೆ ಹೊಂದಿಸುತ್ತಾನೆ. ಅಥವಾ ಕೊಡುತ್ತಾನೆ. ಮತ್ತು ಹಾಗೆಯೇ ಈ ಒಂದು ಹಂತದಿಂದ ವಿಶ್ವಾಸಿಗಳಿಗೆ ಎಲ್ಲಾ ಒಂಭತ್ತು ವರಗಳು ಸಮರ್ಥವಾಗಿ ದೊರೆಯುವಂತೆ ಮಾಡುತ್ತಾನೆ. ಇವುಗಳು "ಆತ್ಮನ ವರಗಳು" ಯಾವುದೇ ವೈಯಕ್ತಿಕ ವ್ಯಕ್ತಿಗೆ ಸಂಬಂಧಿಸಿದಂತಹ ವರಗಳಲ್ಲ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಆದ್ದರಿಂದ ಪವಿತ್ರಾತ್ಮನು ಈ ವರಗಳನ್ನು ಹೊಂದಿರುತ್ತಾನೆ ಮತ್ತು ವಿಶ್ವಾಸಿಗಳ ಮೂಲಕವಾಗಿ ಅವುಗಳಲ್ಲಿ ಕಾರ್ಯಮಾಡುತ್ತಾನೆ ಮತ್ತು ವಿಶ್ವಾಸಿಗಳ ಮೂಲಕವಾಗಿ ಅವುಗಳಲ್ಲಿ ಕಾರ್ಯಮಾಡುತ್ತಾನೆ. ಇಂತಹ ವರಗಳನ್ನು ಸರಿಯಾಗಿ ಪ್ರದರ್ಶಿಸಲು ಪವಿತ್ರಾತ್ಮನೊಡನೆ ವಿಶ್ವಾಸಿಗಳು ಸಹಕಾರದಿಂದ ಕೆಲಸ ಮಾಡುವುದನ್ನು ಕಲಿಯಬೇಕು.

• ನಾವು ಹೊಂದಿಕೊಳ್ಳುವ ಬಲವು ಪವಿತ್ರಾತ್ಮವರಗಳನ್ನು ಪ್ರದರ್ಶಿಸುವ ಮೂಲಕವಾಗಿ ಸೂಚಕಕಾರ್ಯಗಳು, ಮಹತ್ಕಾರ್ಯಗಳು, ಅದ್ಬುತಕಾರ್ಯಗಳು, ಸ್ವಸ್ಥತೆಗಳು ಮತ್ತು ದೇವರ ಅತ್ಯದ್ಭುತಕಾರ್ಯಗಳ ಫಲಿತಾಂಶದ ಮೂಲಕವಾಗಿ ವ್ಯಕ್ತಪಡಿಸಲ್ಪಟ್ಟಿದೆ.

● ಅತಿ ಹೆಚ್ಚು ಸಾಮಾನ್ಯವಾಗಿ ಕಾಣುವ ಪ್ರಥಮ ವರವು ಅನ್ಯಭಾಷೆಯಲ್ಲಿ ಮಾತಾನಾಡುವುದಾಗಿದೆ. ದೇವರು ಉದ್ದೇಶದ ಮೇಲೆ ವಿಷಯಗಳನ್ನು ಮಾಡುತ್ತಾನೆ. ಆದ್ದರಿಂದ ಅರಿಯದ ಅನ್ಯಭಾಷೆಯಲ್ಲಿ ಮಾತನಾಡುವ ಈ ವರವು ಇತರೆ ಎಲ್ಲಾ ಆತ್ಮನ ವರಗಳಲ್ಲಿ ಹರಿಯಲು ನಮಗೆ ಸಹಾಯ ಮಾಡುವ ಕೀಲಕ್ಕೈ ಆಗಿದೆ.

ನೆಲೆಸಿರುವುದು ಮತ್ತು ದೀಕ್ಷಾಸ್ನಾನ – ವ್ಯತ್ಯಾಸವೇನು ?

ಒಬ್ಬನು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವಾಗ ಒಬ್ಬನು ಹೊಸದಾಗಿ ಹುಟ್ಟಿದವನಾಗಿರುತ್ತಾನೆ. ನಾವು ಆತ್ಮದಿಂದ ಜನಿಸಿದವರಾಗಿದ್ದೇವೆ. ಗಲಾತ್ಯದವರಿಗೆ 4:6 ಹೀಗೆ ವ್ಯಾಖ್ಯಾನಿಸುತ್ತದೆ. “ನೀವು ಪುತ್ರರಾಗಿರುವದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಕೊಟ್ಟನು” ! ನಾವು ಈಗಾಗಲೇ ಪವಿತ್ರಾತ್ಮನ ಆಲಯವಾಗಿದ್ದೇವೆ ಮತ್ತು ದೇವರ ಆತ್ಮನು ನಮ್ಮಲ್ಲಿ ವಾಸಿಸುತ್ತಾನೆ (ನಮ್ಮೊಳಗೆ ನೆಲೆಸುತ್ತಾನೆ.) ಆದ್ದರಿಂದ ಒಬ್ಬ ವಿಶ್ವಾಸಿಯು ಪವಿತ್ರಾತ್ಮನ ದೀಕ್ಷಾಸ್ನಾನ ಹೊಂದಿಕೊಳ್ಳಲೂ ಪ್ರಾರ್ಥಿಸುವುದು ಏಕೆ ಅವಶ್ಯಕವಾಗಿದೆ ? ಕೆಲವರು ತಮ್ಮ ವಾದವನ್ನು ಹೀಗೆ ಮಾಢಿಸುತ್ತಾರೆ: ’ಪವಿತ್ರಾತ್ಮನು ಭಾಗಗಳಲ್ಲಿ ಬರುವುದಿಲ್ಲ ಯಾಕೆಂದರೆ ಆತನು ಒಬ್ಬ ವ್ಯಕ್ತಿಯಾಗಿದ್ದಾನೆ ಆದ್ದರಿಂದ ನೀವು ಆತನನ್ನು ಹೊಂದಿದ್ದರೆ ಆತನ ಎಲ್ಲವನ್ನು ನೀವು ಹೊಂದಿರುವಿರಿ;

ಆತ್ಮಿಕತೆ ಮತ್ತು ನೈಸರ್ಗಿಕದ ನಡುವೆ ಸಾಮ್ಯತೆಗಳಿದ್ದರೂ, ವ್ಯತ್ಯಸಗಳು ಇವೆ. ಅಥ್ಮಕ ವಿಷಯಗಳು ಸ್ವಾಭಾವಿಕದಲ್ಲಿ ವಿಷಯಗಳನ್ನು ನೋಡುವಂತಹ ರೀತಿಗಿಂತ ಆಗಾಗ್ಗೆ ವಿಭಿನ್ನವಾಗಿರುತ್ತವೆ. ಸ್ವಾಭಾವಿಕ ಕ್ಷೇತ್ರದಲ್ಲಿ ಒಬ್ಬ ವ್ಯಕ್ತಿಯನ್ನು ದೈಹಿಕವಾಗಿ ನೀವು ನೋಡುವಾಗ, ನೀವು ವ್ಯಕ್ತಿಯನ್ನು ಸಂಪೂರ್ಣವಾಗಿ ನೋಡುವುದು ಸತ್ಯಕರವಾಗಿದೆ. ದೈಹಿಕವಾಗಿ ತನ್ನ ಯಾವುದು ಒಂದು ಅಂಗವನ್ನು ಆ ವ್ಯಕ್ತಿಯು ಕೆಲವು ಇತರೆ ಸ್ಥಳದಲ್ಲಿ ಬಿಟ್ಟಿದ್ದಾನೆ ಎಂಬುದಾಗಿ ಅಲ್ಲ, ಆದಾಗ್ಯೂ ಪವಿತ್ರಾತ್ಮನನೆಂಬ ವ್ಯಕ್ತಿಯನ್ನು ಪರಿಗಣಿಸುವಾಗ ಒಂದು ದೊಡ್ಡ ವ್ಯತ್ಯಾಸವಿದೆ ಪವಿತ್ರಾತ್ಮನು ಒಬ್ಬ ವ್ಯಕ್ತಿ ಆದರೆ ನಮ್ಮಂತವನಲ್ಲ. ಆತನು ಅಪರಿಮಿತವಾದವನು ಆತನು ಬರಬಹುದು ಮತ್ತು ಬರುತ್ತಲೇ ಇರುತ್ತಾನೆ ಯಾಕೆಂದರೆ ಆತನು ಅಪರಿಮಿತವಾದವನು. ನಾವು ಆತನನ್ನು “ಅಧಿಕವಾಗಿ” ಹೊಂದಬಹುದು ಯಾಕೆಂದರೆ ಆತನು ಅಪಾರವಾದವನು ಮತ್ತು ನಮ್ಮ ಜೀವಿತದಲ್ಲಿ ಆತನನ್ನು ಎಷ್ಟು ನಾವು ಅನುಭವಿಸಬೇಕೆಂಬುದಕ್ಕೆ ಕೊನೆಯೇ ಇಲ್ಲಾ.

ವಚನಭಾಗದಲ್ಲಿ, ಪವಿತ್ರಾತ್ಮನ ವಿಭಿನ್ನವಾದ ಅಳತೆಗಳು ಇರುವುದನ್ನು ನಾವು ನೋಡುತ್ತೇವೆ. ಮೋಶೆಯ ಮೇಲೆ ಇದ್ದಂತಹ ಆತ್ಮನು 70 ಇತರೆ ಹಿರಿಯರಿಗೆ ಹಂಚಲ್ಪಟ್ಟಿದ್ದನ್ನು ನಾವು ನೋಡುತ್ತೇವೆ (ಅರಣ್ಯಕಾಂಡ 11:16-30) ಮೋಶೆಯು

ಸಾಗಿಸಿದಂತಹ – ಜ್ಞಾನದ ಆತ್ಮದ ಒಂದು ಪಾಲನ್ನು ಯೆಹೋಶುವನು ಹೊಂದಿದ್ದನ್ನು ನಾವು ನೋಡುತ್ತೇವೆ. (ಧರ್ಮೋಪದೇಶಕಾಂಡ 34:9) ಎಲೀಯನು ಪರಲೋಕಕ್ಕೆ ಒಯ್ಯಲ್ಪಟ್ಟಾಗ, ನಂತರ ಎರಡರಷ್ಟು ಅಳತೆಯ ಆತ್ಮನು ಎಲೀಷನ ಮೇಲೆ ನೆಲೆಸಿದ್ದನ್ನು ನಾವು ನೋಡುತ್ತೇವೆ. (2 ಅರಸುಗಳು 2:9-10) ಯೇಸುವಿನ ಮೇಲೆ ಆತ್ಮನ ವರವು ಅಳತೆ ಮಾಡದೆ ಕೊಡಲ್ಪಟ್ಟಿತ್ತು ಎಂಬುದಾಗಿ ಸ್ನಾನಿಕನಾಧ ಯೋಹಾನನು ಘೋಷಿಸುತ್ತಾನೆ. (ಯೋಹಾನ 3:34).

ಈ ಎರಡು ವ್ಯಾಖ್ಯಾನಗಳನ್ನು ನೋಡುವುದರಿಂದ ವಿಶ್ವಾಸಿಗಳ ಜೀವಿತದಲ್ಲಿ ಆತ್ಮನ ದೀಕ್ಷಾಸ್ನಾನ ಮತ್ತು ಆತ್ಮನ ವಾಸಿಸುವ ಕಾರ್ಯದ ನಡುವೆ ಇರುವ ವ್ಯತ್ಯಾಸಗಳನ್ನು ನಾವು ಅರ್ಥ ಮಾಡಿಕೊಳ್ಳಬಹುದು.

ಯೋಹಾನ 4: 13-14
13 ಯೇಸು ಆಕೆಗೆ ಈ ನೀರನ್ನು ಕುಡಿಯುವರೆಲ್ಲರಿಗೆ ತಿರಿಗಿ ನೀರಡಿಕೆಯಾಗುವದು
14 ನಾನು ಕೊಡುವ ನೀರನ್ನು ಕುಡಿದವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ ನಾನು ಅವನಿಗೆ ಕೊಡುವ ನೀರು ಅವನಲ್ಲಿ ಉಕ್ಕುವ ಒರತೆಯಾಗಿದ್ದು ನಿತ್ಯಜೀವವನ್ನು ಉಂಟುಮಾಡುವದು ಎಂದು ಹೇಳಿದನು.

ಯೋಹಾನ 7:37-39
37 ಆ ಜಾತ್ರೆಯ ಮಹಾದಿವಸವಾದ ಕಡೇ ದಿನದಲ್ಲಿ ಯೇಸು ನಿಂತುಕೊಂಡು ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಿರಿ
38 ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು.
39 ಇದನ್ನು ಯೇಸು ತನ್ನನ್ನು ನಂಬಿದವರು ಹೊಂದದಿರುವ ಪವಿತ್ರಾತ್ಮನವರವನ್ನು ಕುರಿತು ಹೇಳಿದನು ಆತನು ಇನ್ನೂ ತನ್ನ ಮಹಿಮೆಯ ಪದವಿಯನ್ನು ಹೊಂದದೆ ಇದ್ದಕಾರಣ ಪವಿತ್ರಾತ್ಮ ವರವು ಇನ್ನೂ ಬಂದಿದ್ದಿಲ್ಲ.

ಯೋಹಾನ 4ರಲ್ಲಿ, ಕರ್ತನಾದ ಯೇಸುವು ಒಂದು ಒರತೆಯ ಕುರಿತು ಮಾತಾಡಿದ್ದಾನೆ, ಯೋಹಾನ 7 ರಲ್ಲಿ ಒಂದು ನದಿಯ ಕುರಿತು ಮಾತಾಡಿದ್ದಾನೆ. ಒರತೆಯು ವಿಶ್ವಾಸಿಗಳೊಳಗೆ ಇರುತ್ತದೆ. ನದಿಯು ವಿಶ್ವಾಸಿಗಳಿಂದ ಹೊರಗೆ ಹರಿಯುತ್ತದೆ. ಒಳಗಿರುವ ಒರತೆಯು ವಿಶ್ವಾಸಿಗಳಿಗೆ ನಿತ್ಯಜೀವ ತರುತ್ತದೆ. ವಿಶ್ವಾಸಿಗಳಿಂದ ಹೊರಹರಿಯುವ ನದಿಯು ವಿಶ್ವಾಸಿಯ ಮೂಲಕವಾಗಿ ಇತರರಿಗೆ ದೊರೆಯುವಂತೆ ಮಾಡುವ ಪವಿತ್ರಾತ್ಮನ ಬಲ ಮತ್ತು ಪ್ರಸನ್ನತೆಯಾಗಿದೆ. ಇದು ಅದೇ ನೀರು (ಪವಿತ್ರಾತ್ಮನ ಒಂದು ಚಿಹ್ನೆ), ಆದರೆ ವಿಭಿನ್ನ ಅಳತೆಗಳು ಮತ್ತು ವಿಭಿನ್ನ ಉದ್ದೇಶಗಳು, ಆದಾಗ್ಯೂ ಅದೇ ಆತ್ಮನು ಕಾರ್ಯನಿರತನಾಗಿದ್ದಾನೆ, ಆದರೆ ಅಳತೆ ಮತ್ತು ಉದ್ದೇಶದಲ್ಲಿ ವ್ಯತ್ಯಾಸವಿದೆ.

1 ಕೊರಿಂಥದವರಿಗೆ 12:13 ರ ಕುರಿತು ಏನು ?

1 ಕೊರಿಂಥದವರಿಗೆ 12:13
ಹಾಗೆಯೇ ಕ್ರಿಸ್ತನು ಯೇಹೂದ್ಯರಾಗಲಿ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರು ಒಂದೇ ದೇಹವಾಗುವದಕ್ಕಾಗಿ ಒಂದೇ ಆತ್ಮನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡೆವು ಒಂದೇ ಆತ್ಮ ನಮ್ಮೆಲ್ಲರಿಗೂ ಪಾನವಾಗಿ ಕೊಡಲ್ಪಟ್ಟಿತು.

ಕೆಲವು ಸಮಯಗಳಲ್ಲಿ ಜನರು 1ಕೊರಿಂಥದವರಿಗೆ 12:13 ರನ್ನು ನಾವೆಲ್ಲರು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನವೆಂಬುದಕ್ಕೆ ವ್ಯಾಖ್ಯಾನಿಸಿ ಉಪಯೋಗಿಸುತ್ತಾರೆ ರಕ್ಷಿಸುವಂತಹ ಒಂದೇ ದೀಕ್ಷಾಸ್ನಾನವಿದೆ (ಎಫೆಸದವರಿಗೆ 4:5) ಆದರೆ ಅನೇಕ ದೀಕ್ಷಾಸ್ನಾನಗಳ ಕುರಿತು ವಿಶ್ವಾಸಿಗಳು ಉಪದೇಶಿಸಲ್ಪಡಬೇಕು ಮತ್ತು ವಿಶ್ವಾಸಿಗಳು ಅನುಭವಿಸಬೇಕು (ಇಬ್ರಿಯರಿಗೆ 6:2)

ರಕ್ಷಿಸುವಂತಹ ಒಂದೇ ದೀಕ್ಷಾಸ್ನಾನವು, 1ಕೊರಿಂಥದವರಿಗೆ 12:13 ರಲ್ಲಿ ವರ್ಣಿಸಿದ್ದಂತೆ ಒಂದೇ ಅಂಗಕ್ಕೆ ದೀಕ್ಷಾಸ್ನಾನವಾಗಿದೆ. ಕ್ರಿಸ್ತನ ದೇಹಕ್ಕೆ ಪವಿತ್ರಾತ್ಮನಿಂದ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಿದ್ದೇವೆ. ಇದು ರಕ್ಷಣೆಯಲ್ಲಿ ಜರುಗುತ್ತದೆ.

ಆಮೇಲೆ ನಾವು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವಂತಹ ನೀರಿನ ದೀಕ್ಷಾಸ್ನಾನವಿದೆ. ನಾವು ಇನ್ನೊಬ್ಬ ವಿಶ್ವಾಸಿಯಿಂದ ನೀರಿನಲ್ಲಿ ದೀಕ್ಷಾಸ್ನಾನ ಹೊಂದಿದ್ದೇವೆ. ವಿಶ್ವಾಸಿಯು ಯೇಸುವಿನ ಹೆಸರಿನಲ್ಲಿ (ಯೇಸುವಿನ ಅಧಿಕಾರದಿಂದ) ತಂದೆಯ ಹೆಸರಿನಲ್ಲಿ (ಮತ್ತಾಯ 28:18-20) ನೀರಿನ ದೀಕ್ಷಾಸ್ನಾನ ನಿರ್ವಹಿಸುತ್ತಾರೆ. ನೀರಿನ ದೀಕ್ಷಾಸ್ನಾನವು ಪ್ರಾಥಮಿಕವಾಗಿ ಯೇಸು ಕ್ರಿಸ್ತನ ಶಿಷ್ಯರಾಗಿರಲೂ ನಮ್ಮ ಆಯ್ಕೆಯ ಒಂದು ಘೋಷಣೆ ಮತ್ತು ಆತನ ಹೆಸರಿನೊಡನೆ ನಮ್ಮ ಗುರುತು ಆಗಿದೆ. ರಕ್ಷಣೆಹೊಂದಿದ ನಂತರ ಯಾವುದೇ ಸಮಯದಲ್ಲಿ ನೀರಿನ ದೀಕ್ಷಾಸ್ನಾನವು ಜರುಗುತ್ತದೆ.

ಪವಿತ್ರಾತ್ಮನ ದೀಕ್ಷಾಸ್ನಾನವು ಸಹ ಇದೇ ಪವಿತ್ರಾತ್ಮದಲ್ಲಿ, ಯೇಸುವಿನಿಂದ ನಾವು ದೀಕ್ಷಾಸ್ನಾನ, ಮಾಡಿಸಿಕೊಂಡಿದ್ದೇವೆ.(ಮತ್ತಾಯ 3:11 ಅಪೋಸ್ತಲರ ಕೃತ್ಯಗಳು::5,8)ಈ ದೀಕ್ಷಾಸ್ನಾನವು ಬಲ ಮತ್ತು ಶುದ್ದೀಕರಣಕ್ಕಾಗಿದೆ.ಈ ಒಂದು ಅಧ್ಯಾಯದಲ್ಲಿ ಮುಖ್ಯ ವಿಷಯಾಂಶವಾಗಿರುವ ಪವಿತ್ರಾತ್ಮನ ದೀಕ್ಷಾಸ್ನಾನವು ರಕ್ಷಣೆ ಹೊಂದಿದನಂತರ ಯಾವುದೇ ಸಮಯದಲ್ಲಿ ಜರುಗಬಹುದು ಅಥವಾ ಅಪೋಸ್ತಲರ ಕೃತ್ಯಗಳು 10ರಲ್ಲಿ ಕೊರ್ನೇಲ್ಯನ ಮನೆಯಲ್ಲಿ ನಡೆದಂತ ರಕ್ಷಣೆಯ ಸಮಯದಲ್ಲಿ ಜರುಗಬಹುದು.

ಆದ್ದರಿಂದ ಈ ಮೂರು ದೀಕ್ಷಾಸ್ನಾನಗಳಲ್ಲಿ (ಒಂದೇ ದೇಹಕ್ಕೆದೀಕ್ಷಾಸ್ನಾನ, ನೀರಿನಲ್ಲಿ ದೀಕ್ಷಾಸ್ನಾನ, ಪವಿತ್ರಾತ್ಮನ ದೀಕ್ಷಾಸ್ನಾನ) ಯಾರು ದೀಕ್ಷಾಸ್ನಾನ ಮಾಡಿಸುತ್ತಾರೆ, ನಾವು ಯಾವುದಕ್ಕೆ ದೀಕ್ಷಾಸ್ನಾನ ಹೊಂದಿದ್ದೇವೆ ಮತ್ತು ದೀಕ್ಷಾಸ್ತಾನ ಉದ್ದೇಶದ ಮೇಲೆ ವ್ಯತ್ಯಾಸಗಳನ್ನು ನಾವು ನೋಡುತ್ತೇವೆ. ಆದ್ದರಿಂದ 1ಕೊರಿಂಥದವರಿಗೆ 12:13 ಕ್ರಿಸ್ತನ ದೇಹಕ್ಕೆ ದೀಕ್ಷಾಸ್ನಾನ ಹೊಂದಿರುವುದನ್ನು ವ್ಯಾಖ್ಯಾನಿಸುತ್ತದೆ ಮತ್ತು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದುವುದರಿಂದ ಇದು ವಿಭಿನ್ನವಾಗಿದೆ.

ಅನ್ಯಭಾಷೆಗಳು ಏಕೆ?

ಆತ್ಮನಿಂದ ಮನುಷ್ಯರ ಮತ್ತು ದೇವದೂತರುಗಳು ಅನ್ಯಭಾಷೆಯಲ್ಲಿ (1ಕೊರಿಂಥದವರಿಗೆ 13:1) ನಾವು ಮಾತನಾಡುವಲ್ಲಿ ತಿಳಿಯದ ಅನ್ಯಭಾಷೆಯಲ್ಲಿ ಮಾತನಾಡುವುದನ್ನು ದೇವರು ಒಂದು ಆತ್ಮನ ವರವಾಗಿ ರಚಿಸಿರುವುದನ್ನು ಆಲೋಚಿಸುವುದು ತುಂಬಾ ಆಸಕ್ತಿಕರವಾಗಿದೆ ಮತ್ತು ಪವಿತ್ರಾತ್ಮದ ದೀಕ್ಷಾಸ್ನಾನ ಪಡೆದುಕೊಳ್ಳಲೂ ವಿಶ್ವಾಸಿಗಳ ಮೇಲೆ ದೇವರು ಇದನ್ನು ಮೊದಲ ವರವಾಗಿ ಉಪಯೋಗಿಸಿದ್ದನ್ನು ನೋಡಿ ಪರಿಗಣಿಸುವುದು ಸಹ ಆಸಕ್ತಿಕರವಾಗಿ ದೇವರು ಇದನ್ನು ಏಕೆ ಮಾಡುತ್ತಾನೆ ? ಅನೇಕರಿಗೆ "ಇತರೆ ಅನ್ಯಭಾಷೆಯಲ್ಲಿ ಮಾತನಾಡುವುದು" ಮಾನವ ಜನಾಂಗದ ಮನಸ್ಸಿಗೆ ಅಪರಾಧ ಧ್ವನಿಗಳಂತೆ ಕಾಣಿಸುತ್ತದೆ.

ಆದರೆ ಇತರೆ ಅನ್ಯಭಾಷೆಗಳಲ್ಲಿ ಮಾತಾನಾಡುವುದನ್ನು ಹೊಂದಿಕೊಂಡಿರುವುದು ಏಕೆ ಅವಶ್ಯಕವಾಗಿದೆಂಬುದಕ್ಕೆ ಇದು ಕಾರಣವಾಗಿದೆ. ನಾವು ದೇವರನ್ನು ನಂಬುತ್ತೇವೆ. ಆತನ ಜ್ಞಾನವನ್ನು ನಂಬುತ್ತೇವೆ. ನಮ್ಮ ಸ್ವಂತ ತಿಳುವಳಿಕೆಗೆ ಮೀಗಿಲಾಗಿ ಆತನನ್ನು ನಂಬುತ್ತೇವೆ. ನಮ್ಮ ಸ್ವಂತ ತಿಳುವಳಿಕೆಗೆ ಮೀಗಿಲಾಗಿ ಆತನನ್ನು ಕಾರ್ಯ ಮಾಡುವ ರೀತಿಯನ್ನು ಒಳಗೊಳ್ಳಬೇಕು ಮತ್ತು ಇದರೊಡನೆ ಹೋಗಬೇಕು: ಇತರೆ ಎಲ್ಲಾ ವರಗಳನ್ನು ಪ್ರದರ್ಶಿಸಲು ಇದೇ ರೀತಿಯ ನಂಬಿಕೆ ಬೇಕು ಮತ್ತು ಆತನಲ್ಲಿ ನಂಬಿಕೆಯಿಟ್ಟಾಗ ನಮ್ಮ ಸ್ವಂತ ತಿಳುವಳಿಕೆಯಿಂದ ಹೆಜ್ಜೆಯನ್ನಿಡಲು ಸಮ್ಮತಿ ಇರಬೇಕು.

ಈ ಪುಸ್ತಕದಲ್ಲಿ ಏಳನೇ ಅಧ್ಯಾಯದಲ್ಲಿ ಅನ್ಯಭಾಷೆಯ ವೈವಿಧ್ಯತೆಯ ವರದ ಕುರಿತು ಅಧಿಕವಾಗಿ ನಾವು ತಿಳಿಯೋಣ ಆ ಒಂದು ಅಧ್ಯಾಯದಲ್ಲಿ ಅನ್ಯಭಾಷೆಯಲ್ಲಿ ಮಾತನಾಡುವುದರ ಪ್ರಯೋಜನಗಳ ಕುರಿತು ತ್ವರಿತವಾಗಿ ನೋಡಬಹುದು. ಜೊತೆಗೆ ಹೆಚ್ಚಿನ ಮಾಹಿತಿಗಾಗಿ ಏ.ಪಿ.ಸಿ.ಯ ಪ್ರಕಾಶನವಾದ: "ಅನ್ಯಭಾಷೆಯಲ್ಲಿ

ಮಾತನಾಡುವುದರ ಅದ್ಭುತಕರ ಲಾಭಗಳು" ಎಂಬ ಉಚಿತ ಪುಸ್ತಕವನ್ನು apcwo.org / publications ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಿರಿ.

ಅನ್ಯಭಾಷೆಯಲ್ಲಿ ಮಾತನಾಡುವುದು ಪವಿತ್ರಾತ್ಮನ ದೀಕ್ಷಾಸ್ನಾನದ ಪುರಾವೆಯಾ ?

ಈ ಒಂದು ಪ್ರಶ್ನೆಯು ಹಲವು ದಶಕಗಳಲ್ಲಿ, ಬಹುಶಃ ಶತಮಾನಗಳಿಂದ ತೀವ್ರವಾಗಿ ಚರ್ಚಿಸಲ್ಪಟ್ಟ ಪ್ರಶ್ನೆಯಾಗಿದೆ.

ಅಪೋಸ್ತಲರ ಕೃತ್ಯಗಳು ಪುಸ್ತಕದಲ್ಲಿ ವೇದ ದಾಖಲಿತಿ ನಿದರ್ಶನಗಳು ಆದರಿಸಿ ನೋಡುವುದಾದರೆ ಈ ಪ್ರಶ್ನೆಗೆ ಉತ್ತರವು "ಹೌದು" ಪವಿತ್ರಾತ್ಮದಲ್ಲಿ ಜನರು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಅನ್ಯಭಾಷೆಯಲ್ಲಿ ಅವರು ಮಾತಾನಾಡಿದರು. ಇದು ಸಾಮಾನ್ಯ ಮತ್ತು ನಿರೀಕ್ಷಿತವಾದದ್ದು ಆಗಿತ್ತು.

ಮತ್ತೊಂದೆಡೆ ಆತ್ಮನ ಒಂಭತ್ತು ವರಗಳಿವೆ ಎಂದು ನಮಗೆ ತಿಳಿದಿದೆ. ಒಬ್ಬ ವಿಶ್ವಾಸಿಯು ಆತ್ಮದೊಡನೆ ದೀಕ್ಷಾಸ್ನಾನ ಹೊಂದಿದಾಗ ಅನ್ಯಭಾಷೆಯಲ್ಲಿ ಮಾತನಾಡುವುದನ್ನು ಹೊರತು ಪಡಿಸಿ ಇತರೆ ವರಗಳ ಯಾವುದಾದರೊಂದನ್ನು ತೋರ್ಪಡಿಸಲು ಪವಿತ್ರಾತ್ಮನ ಆರಿಸಿಕೊಂಡರೆ ಎಂಬ ಸಾಮಾನ್ಯ ಪ್ರಶ್ನೆಯನ್ನು ಪ್ರಸ್ತಾಪಿಸಬಹುದು . ನಾವು ಇದಕ್ಕೆ ಸಂಪೂರ್ಣವಾಗಿ ತೆರೆದಿರುತ್ತೇವೆ ಮತ್ತು ಇದು ಖಂಡಿತವಾಗಿಯೂ ಸಾಧ್ಯ ಎಂಬುದಾಗಿ ಅರ್ಥಮಾಡಿಕೊಳ್ಳುತೇವೆ.

ಒಬ್ಬ ವಿಶ್ವಾಸಿಯು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿ, ಅನ್ಯಭಾಷೆಯಲ್ಲಿ ಮಾತನಾಡುವುದನ್ನು ಹೊರತು ಪಡಿಸಿ ಇತರೆ ಆತ್ಮನ ವರಗಳನ್ನು ತೋರ್ಪಡಿಸುವುದು ಸಾಧ್ಯಕರವೇ?

ಖಂಡಿತವಾಗಿ.ಹೌದು

ಆದಾಗ್ಯೂ ವಿಶ್ವಾಸಿಗಳು ಎಲ್ಲಾ ಒಂಬತ್ತು ಆತ್ಮನ ವರಗಳಲ್ಲಿ ಹರಿಯಬೇಕು ಮತ್ತು ಸಕ್ರಿಯೆಗೊಂಡಿರಬೇಕೆಂಬುದನ್ನು ನೋಡುವುದು ನಮ್ಮ ಗುರಿಯಾಗಿದೆ, ವಿಶ್ವಾಸಿಗಳು ಪವಿತ್ರಾತ್ಮನ ದೀಕ್ಷಾಸ್ನಾನ ಪಡೆದುಕೊಳ್ಳಲು ಅವರು ಪ್ರಾರ್ಥಿಸುವಾಗ, ಅವರು ಇತರೆ ಅನ್ಯಭಾಷೆಯೊಡನೆ ಮಾತಾನಾಡುವುದನ್ನು ನಿರೀಕ್ಷಿಸುವಂತೆ ಮತ್ತು ಅಪೇಕ್ಷಿಸುವಂತೆ

ಯಾವಾಗಲೂ ನಾವು ಪ್ರೋತ್ಸಾಹಿಸುತ್ತೇವೆ. ಬೇಗನೆ ಅಥವಾ ಆನಂತರ ಅವರು ಇತರೆ ಅನ್ಯಭಾಷೆಯಲ್ಲಿ ಬೇಗನೆ ಅಥವಾ ಆನಂತರ ಅವರು ಇತರೆ ಅನ್ಯಭಾಷೆಯಲ್ಲಿ ಮಾತನಾಡಲೂ ಪ್ರಾರಂಭಿಸುತ್ತಾರೆ. ಮತ್ತು ನಾವು ಅಲ್ಲಿಗೆ ನಿಲ್ಲಿಸುವುದಿಲ್ಲ. ಎಲ್ಲಾ ಒಂಭತ್ತು ವರಗಳಲ್ಲಿಯು ಅವರು ಹರಿಯುವಂತೆ ಶ್ರದ್ಧೆಯಿಂದ ಅಪೇಕ್ಷಿಸಬೇಕೆಂಬುದಾಗಿ ನಾವು ಅವರಿಗೆ ಪ್ರೋತ್ಸಾಹಿಸುತ್ತೇವೆ.

ಎಲ್ಲಾ ವಿಶ್ವಾಸಿಗಳು ಇತರೆ ಅನ್ಯಭಾಷೆಯೊಡನೆ ಮಾತನಾಡಲೂ ನಾವು ಪ್ರೋತ್ಸಾಹಿಸಬಹುದು ಯಾಕೆಂದರೆ ಎಲ್ಲಾ ವಿಶ್ವಾಸಿಗಳು ಇದನ್ನು ಮಾಡಬಹುದೆಂಬುದಾಗಿ ಕರ್ತನಾದ ಯೇಸುವು ಮಾರ್ಕ 16:17-18 ರಲ್ಲಿ ವ್ಯಾಖ್ಯಾನಿಸಿದ್ದಾನೆ: “ಇದಲ್ಲದೆ ನಂಬುವವರಿಂದ ಈ ಸೂಚಕಕಾರ್ಯಗಳು ವುಂಟಾಗುವವು ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು ಹೊಸಬಾಷೆಗಳಿಂದ ಮಾತಾಡುವರು ಹಾವುಗಳನ್ನು ಎತ್ತುವರು, ವಿಷಪದಾರ್ಥವನ್ನೇನಾದರೂ ಕೂಡಿದರೂ ಅವರಿಗೆ ಯಾವ ಕೇಡೂ ಅಗುವದಿಲ್ಲ ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಎಂದು ಹೇಳಿದನು.”

ಕೆಲವು ಇತರೆ ಪ್ರಶ್ನೆಗಳು

ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ನಾನು “ಕಾದುಕೊಂಡಿರಬೇಕಾ” ?

ಇಲ್ಲಾ. ನಾವು ಕಾದುಕೊಂಡಿರುವ ಅವಶ್ಯಕತೆಯಿಲ್ಲ. ನಾವು ನಂಬಿಕೆಯೊಡನೆ ಮತ್ತು ನೀರಿಕ್ಷೆಯೊಡನೆ ಪ್ರಾರ್ಥಿಸಬೇಕು ಆದರೆ ಅನೇಕ ದಿವಸಗಳವರೆಗೆ ನಾವು “ಕಾದುಕೊಂಡಿರುವ” ಅಗತ್ಯತೆಯಿಲ್ಲ. ಮೊದಲ 120 ಮಂದಿ ಶಿಷ್ಯರು ಯೆರೂಸಲೇಮಿನಲ್ಲಿ ತಂಗಿದ್ದರ ಕಾರಣವೇನೆಂದರೆ ಪಂಚಾಶತ್ತಮ ದಿನಕ್ಕಾಗಿ ಕಾಯುತ್ತಿದ್ದರು ಯಾಕೆಂದರೆ ಆ ಒಂದು ದಿನದಲ್ಲಿ ದೇವರು ಆತನ ಆತ್ಮವನ್ನು ಸುರಿಸುತ್ತೇನೆಂಬುದಾಗಿ ನಿಶ್ಚಯಪಡಿಸಿದ್ದನು. ನಂತರದ ನಿದರ್ಶನಗಳಲ್ಲಿ ಪ್ರಾರ್ಥನೆಯ ಸಮಯದಲ್ಲಿ ಜನರು ಇದಕ್ಕಾಗಿ ಪ್ರಾರ್ಥಿಸಿದರು ಮತ್ತು ಪವಿತ್ರಾತ್ಮನ ದೀಕ್ಷಾಸ್ನಾನ ಮಾಡಿಸಿಕೊಂಡರು ಎಂಬುದನ್ನು ನಾವು ನೋಡುತ್ತೇವೆ.

ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಪಡೆದುಕೊಳ್ಳಲೂ ನನ್ನ ಮೇಲೆ ಕೈಗಳನ್ನಿಡುವ ಅವಶ್ಯಕತೆಯಿದೆಯಾ ?

ಅಗತ್ಯವಾಗಿ ಇಲ್ಲ. ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಮಾಡಿಸುವುದು ಕರ್ತನಾದ ಯೇಸು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಆದ್ದರಿಂದ ಆತನು ಬೇರೆ ಯಾರನ್ನಾದರೂ ನಿಮ್ಮೊಡನೆ ಪ್ರಾರ್ಥಿಸಲು ಉಪಯೋಗಿಸಬಹುದು ಅಥವಾ ನಿಮ್ಮ ಮೇಲೆ ಕೈಗಳನ್ನಿಡಲು ಮತ್ತು ನಿಮ್ಮೊಡನೆ ಪ್ರಾರ್ಥಿಸಲು ಬೇರೊಬ್ಬರು ಇಲ್ಲದೆ ಆತನು ಇದನ್ನು ಮಾಡಬಹುದು ಪವಿತ್ರಾತ್ಮದಲ್ಲಿ ನೀವು ದೀಕ್ಷಾಸ್ನಾನ ಹೊಂದಲೂ ಬೇರೆ ಯಾರು ಪ್ರಾರ್ತಿಸದಿದ್ದಾಗಲು ನಂಬಿಕೆಯಿಂದ ನೀವು ವೈಯಕ್ತಿಕವಾಗಿ ಪ್ರಾರ್ಥಿಸಿ ಪಡೆದುಕೊಳ್ಳಬಹುದು. ಪಂಚಾಶತ್ತಮ ದಿನದಂದ ಮತ್ತು ಕೊರ್ನೇಲ್ಯನ ಮನೆಯಲ್ಲಿ ಅವರ ಮೇಲೆ ಯಾರು ಕೈಗಳನ್ನಿಡದೆ ಜನರ ಮೇಲೆ ಪವಿತ್ರಾತ್ಮನು ಇಳಿದನು.

ಪವಿತ್ರಾತ್ಮನ ದೀಕ್ಷಾಸ್ನಾನಕ್ಕಾಗಿ ಪ್ರಾರ್ಥಿಸುವ ಮೊದಲು ನಾನು ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಂಡಿರಬೇಕಾ ?

ಅಗತ್ಯವಿಲ್ಲ ನಾವು ಈಗಾಗಲೇ ನೋಡಿದಂತೆ ಸೌಲ ಮತ್ತು ಕೊರ್ನೇಲ್ಯನ ಮನೆಯಲ್ಲಿ ಮೊದಲು ಜನರು ಪವಿತ್ರಾತ್ಮನಿಂದ ದೀಕ್ಷಾಸ್ನಾನ ಪಡೆದ ನಂತರ ನೀರಿನಲ್ಲಿ ಅವರು ದೀಕ್ಷಾಸ್ನಾನ ಹೊಂದಿದ್ದರು. ಸಮಯರ್ಾ ಮತ್ತು ಎಫೆಸದವರ ಘಟನೆಯಲ್ಲಿ ಅವರು ಮೊದಲು ನೀರಿನಿಂದ ದೀಕ್ಷಾಸ್ನಾನ ಹೊಂದಿಕೊಂಡರು ಮತ್ತು ಆ ಮೇಲೆ ಆನಂತರ ಆತ್ಮದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು ಆದ್ದರಿಂದ ದೇವರು ಎರಡರಲ್ಲಿ ಯಾವುದೇ ಮಾರ್ಗದಲ್ಲಿ ಕಾರ್ಯಮಾಡುತ್ತಾನೆ.

ಅನ್ಯಭಾಷೆಯು ಯಾವಾಗಲು ಅರ್ಥವಾಗಬೇಕಾ ?

ಅಪೊಸ್ತಲರ ಕೃತ್ಯಗಳು 2ರಲ್ಲಿ ಪಂಚಾಶತ್ತಮ ದಿನದಂದು, ಜನರುಗಳು ಪರಿಚಿತದವಿದ್ದಂತಹ ಅವರ ಭಾಷೆಗಳೊಂದಿಗೆ ಮಾತನಾಡಿದಂತಹ ಅದ್ಭುತಕರವಾದ ಕಾರ್ಯಗಳನ್ನು ಕೇಳಿದರು. ಆ ದಿನದಲ್ಲಿ ಪರಲೋಕದ ಮತ್ತು ಭೂಲೋಕದ ಭಾಷೆಗಳನ್ನು ಒಳಗೊಂಡ ಆ ದಿನದಲ್ಲಿ ಪವಿತ್ರಾತ್ಮದಲ್ಲಿ 120 ವಿಶ್ವಾಸಿಗಳು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಪರಲೋಕ ಮತ್ತು ಭೂಲೋಕದ ಭಾಷೆಗಳನ್ನು ಬೊಗೊಂಡಂತಹ ಅರ್ಥವಾಗದಂತಹ ಇತರೆ ಅನ್ಯಭಾಷೆಗಳಲ್ಲಿ ಕೆಲವು ಮಾತನಾಡಿರಬಹುದು ಎಂಬಂತಹ ಸಾಧ್ಯತೆಯನ್ನು ಇದು ಹೊರಗಿಡುವುದಿಲ್ಲ. ಅಲ್ಲಿ ಹಾಜರಿದಂತಹ ಜನರುಗಳ ಭಾಷೆಗಳಲ್ಲಿ

ಮಾತ್ರ 120 ಜನರು ಇತರೆ ಅರಿಯದ ಭಾಷೆಗಳನ್ನು ಉಪಯೋಗಿಸಿದರು ಎಂಬುದನ್ನು ತಳ್ಳಿಹಾಕಲಾಗುವುದಿಲ್ಲ.

ಅಪೊಸ್ತಲರ ಕೃತ್ಯಗಲೂ 2:7-11
7 ಎಲ್ಲರು ಆಶ್ಚರ್ಯದಿಂದ ಬೆರಗಾಗಿ ಇಗೋ ಮಾತಾಡುತ್ತಿರುವ ಇವರೆಲ್ಲರು ಗಲಿಲಾಯದವರಲ್ಲವೇ
8 ನಾವು ಪ್ರತಿಯೊಬ್ಬರು ನಮ್ಮ ನಮ್ಮ ಹುಟ್ಟುಬಾಷೆಯಲ್ಲಿ ಇವರು ಮಾತಾಡುವುದನ್ನು ಕೇಳುತ್ತೇವಲ್ಲಾ ಇದು ಹೇಗೆ ?
9 ಪಾರ್ಥ್ಯರೂ ಮೇದ್ಯರೂ, ಏಲಾಮ್ಯರೂ ಮೆಸೊಪೊತಾಮ್ಯ, ಯೂದಾಯ, ತಪ್ಪದೋಕ್ಯ, ಪಂತ, ಆಸ್ಯ, ಪುಗ್ಯ,
10 ಪಂಪುಲ್ಯ, ಐಗುಪ್ತ ಕುರೇನೆಯ ಮಗ್ಗುಲಲ್ಲಿರುವ ಲಿಬ್ಯ ಈ ಸೀಮೆಗಳಲಿ ವಾಸವಾಗಿರುವವರೂ ರೋಮಾಪುರದಿಂದ ಬಂದು ಇಳಿದಿರುವ ಯೆಹೂದ್ಯರೂ ಯೆಹೂದ್ಯಮತಾವಲಂಬಿಗಳು ಕ್ರೇತ್ಯರೂ
11 ಅರಬೀದೇಶದವರೂ ಆಗಿರುವ ನಾವು ನಮ್ಮ ನಮ್ಮ ಭಾಷೆಗಳಲ್ಲಿ ಇರುವ ದೇವರ ಮಹತ್ತುಗಳ ವಿಷಯವಾಗಿ ಹೇಳುವದನ್ನು ಕೇಳುತ್ತೇವೆ ಅಂದುಕೊಂಡರು.

ಅಪೊಸ್ತಲರ ಕೃತ್ಯಗಳು 10 ಮತ್ತು 19 ರಲ್ಲಿ ಜನರು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದಾಗ, ಅವರೆಲ್ಲರೂ ಅಲ್ಲಿ ಹಾಜರಿದ್ದವರು ಅರ್ಥಮಾಡಿಕೊಳ್ಳುವ ಭಾಷೆಗಳಲ್ಲಿ ಮಾತನಾಡಿದರು ಎಂಬುದಾಗಿ ಧರ್ಮಶಾಸ್ತ್ರವು ನಿರ್ಣಾಯಕವಾಗಿ ಹೇಳುವುದಿಲ್ಲ.

ಇನ್ನೊಂದು ಕಡೆಯಲ್ಲಿ, ವಚನಭಾಗಗಳು ನಾವು ಅನ್ಯಭಾಷೆಯಲ್ಲಿ ಮಾತನಾಡುವಾಗ, ಮಾನವನ ಮತ್ತು ದೇವದೂತರ ಭಾಷೆಗಳನ್ನು ಮಾತನಾಡುತ್ತೇವೆ ಎಂಬುದಾಗಿ (1ಕೊರಿಂಥದವರಿಗೆ 13:1) ಸ್ಪಷ್ಟವಾಗಿ ಬೋಧಿಸುತ್ತದೆ. ಆದುದರಿಂದ ಇದು ನಿಶ್ಚಯವಾಗಿ ಯಾರು ಅರ್ಥಮಾಡಿಕೊಳ್ಳಲಾಗದಂತಹ ಭಾಷೆಯಲ್ಲಿ ಮಾತನಾಡಬೇಕೆಂಬದನ್ನು ಸೂಚಿಸುತ್ತದೆ. ಆದ್ದರಿಂದ ನಾವು ಅನ್ಯಭಾಷೆಯಲ್ಲಿ ಮಾತನಾಡುವಾಗ "ಯಾರು ಅವನ್ನು ಅರ್ಥ ಮಾಡಿಕೊಳ್ಳುವುದಿಲ್ಲ" ಎಂಬುದಾಗಿ ಅಪೊಸ್ತಲನಾದ ಪೌಲನು ಸ್ಪಷ್ಟವಾಗಿ ವ್ಯಾಖ್ಯಾನಿಸುತ್ತಾನೆ.

1 ಕೊರಿಂಥದವರಿಗೆ 13:1
ನಾನು ಮನುಷ್ಯರ ಭಾಷೆಗಳನ್ನೂ ದೇವದೂತರ ಭಾಷೆಗಳನ್ನೂ ಆಡುವವನಾದರೂ ಪ್ರೀತಿಯಿಲ್ಲದವನಾಗಿದ್ದರೆ ನಾದಕೊಡುವ ಕಂಚೂ ಗಣಗಣಿಸುವ ತಾಳವೂ ಆಗಿದ್ದೇನೆ.

1 ಕೊರಿಂಥದವರಿಗೆ 14:2
ವಾಣಿಯನ್ನಾಡುವವನು ದೇವರ ಸಂಗಡ ಮಾತಾಡುತ್ತಾನೆ ಹೊರತು ಮನುಷ್ಯರ ಸಂಗಡ ಆಡುವದಿಲ್ಲ. ಅವನು ಆತ್ಮ ಪ್ರೇರಿತನಾಗಿ ರಹಸ್ಯಾರ್ಥಗಳನ್ನು ನುಡಿಯುತ್ತಿದ್ದರೂ ಯಾರೂ ತಿಳುಕೊಳ್ಳುವದಿಲ್ಲ.

ವಚನ ಭಾಗದಲ್ಲಿ ಕಾಣುವಂತೆ ಅನ್ಯಭಾಷೆಯಲ್ಲಿ ಪ್ರಾರ್ಥಿಸುವ ಮಾತನಾಡುವುದರ ವಿವಿಧ ಉಪಯೋಗಗಳಿವೆ ಎಂದು ನಾವು ಅರ್ಥಮಾಡಿಕೊಳ್ಳಬೇಕು ಕೆಳಗಿನವುಗಳನ್ನು ಇವು ಒಳಗೊಂಡಿದೆ:

(ಅ) ವೈಯಕ್ತಿಕ ಪ್ರಾರ್ಥನೆ, ಮಧ್ಯಸ್ಥಿಕೆ ಮತ್ತು ಭಕ್ತಿವೃದ್ಧಿಗಾಗಿ ಅನ್ಯಭಾಷೆಗಳು: ಇದು

ಅನ್ಯಭಾಷೆಗಳಲ್ಲಿ ಮಾತನಾಡುವ ಸಾಮಾನ್ಯ ಬಳಕೆಯಾಗಿದೆ .ಇಲ್ಲಿ ವಿಶ್ವಾಸಿಯು ಇತರಿಗಾಗಿ ವಿಜ್ಞಾಪಿಸುವ ಮತ್ತು ದೇವರೊಂದಿಗೆ ನೇರವಾಗಿ ಸಂಪರ್ಕಿಸುವ ,ಆಂತರ್ಯ ಮನುಷ್ಯನ ಭಕ್ತಿ ವೃದ್ಧಿಯ ಫಲಿತಾಂಶ ನೀಡುವ ಅನ್ಯಭಾಷೆಯಲ್ಲಿ ,ಆಂತರಿಕ ಮನುಷ್ಯನು ದೇವರೊಂದಿಗೆ ನೇರವಾಗಿ ಸಂವಹನ ನಡೆಸುತ್ತಾನೆ, ಮತ್ತು ಇತರರಿಗಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡುತ್ತಾನೆ (1 ಕೊರಿಂಥ 14: 2,4; ರೋಮಾಪುರದವರಿಗೆ 8: 26-27).

(ಆ) ವ್ಯಾಖ್ಯಾನಕ್ಕಾಗಿ ಅನ್ಯಭಾಷೆಗಳು: ಇದು ಒಂದು ಕೂಟದಲ್ಲಿ ಇರುವಾಗ ವಿಶ್ವಾಸಿಯು ಅನ್ಯಭಾಷೆಗಳಲ್ಲಿ ಸಂದೇಶವನ್ನು ನೀಡಬಹುದು ಮತ್ತು ಇದರ ವ್ಯಾಖ್ಯಾನ,ನೀಡಬಹುದು ಇದರಿಂದಾಗಿ ಪ್ರಸ್ತುತ ಇರುವವರೆಲ್ಲರೂ ಅರ್ಥಮಾಡಿಕೊಳ್ಳಬಹುದು ಮತ್ತು ಭಕ್ತಿವೃದ್ಧಿ ಆಗಬಹುದು (1 ಕೊರಿಂಥ 14: 5,13)

(ಇ) ಅವಿಶ್ವಾಸಿಗೆ ಅನ್ಯಭಾಷೆಯು ಸಂಕೇತವಾಗಿ : ಇಲ್ಲಿ ಹಾಜರಾಗಿರುವ ಅವಿಶ್ವಾಸಿಗೆ ಅರ್ಥವಾಗುವ ಭಾಷೆಯಲ್ಲಿ ವಿಶ್ವಾಸಿಯು ಮಾತನಾಡಲು ಆತ್ಮನಿಂದ ಶಕ್ತಗೊಳ್ಳುತ್ತಾನೆ ಇದರ ಪರಿಣಾಮವಾಗಿ ಅವರು ಕರ್ತನ ಬಗ್ಗೆ ಸತ್ಯವನ್ನು ಕೇಳುತ್ತಾರೆ (1 ಕೊರಿಂಥ 14:22; ಅಪೋಸ್ತಲರ ಕೃತ್ಯಗಳು 2: 7-11).

ಆದ್ದರಿಂದ ಈ ಪ್ರಶ್ನೆಗೆ ಉತ್ತರವೆಂದರೆ, ‘ಇಲ್ಲ, ಅನ್ಯಭಾಷೆಯು ಯಾವಾಗಲೂ

ಅರ್ಥ ಮಾಡಿಕೊಳ್ಳಬೇಕು ಎಂಬುದಾಗಿ ಅಲ್ಲ.

ಯೇಸು ಇತರ ಅನ್ಯ ಭಾಷೆಗಳೊಂದಿಗೆ ಮಾತನಾಡಿದ್ದಾನೆಯೇ?

ನಮಗೆ ಗೊತ್ತಿಲ್ಲ.

ಯೇಸು ಅನ್ಯಭಾಷೆಗಳಲ್ಲಿ ಮಾತಾಡಿದನು. ಎಂಬುದಾಗಿ ಧರ್ಮಗ್ರಂಥದಲ್ಲಿ ಯಾವುದೇ ಭಾಗದಲ್ಲಿ ಅಂತೆಯೇ ಆತನು ಅನ್ಯಭಾಷೆಗಳಲ್ಲಿ ಮಾತನಾಡಲಿಲ್ಲ ಎಂದು ಯಾವುದೇ . ಧರ್ಮಗ್ರಂಥದ ಭಾಗದಲ್ಲಿ ಹೇಳುವುದಿಲ್ಲ. ಆದ್ದರಿಂದ, ಅನ್ಯಭಾಷೆ ಮತ್ತು ಅದರ ಅರ್ಥವಿವರಣೆಯ ಈ ಎರಡು ಆತ್ಮನ ವರಗಳನ್ನು ಕರ್ತನಾದ ಯೇಸು ಅಭ್ಯಾಸಿಸಿದನಾ ಎಂಬುದು ನಮಗೆ ಗೊತ್ತಿಲ್ಲ.ಆತನ ಪ್ರಸಂಗ ಮತ್ತು ಭೋಧನೆಯ ಅದ್ಭುತದ ಜೊತೆಯಂತೆ ಇತರೆ ಏಳು ಆತ್ಮನ ವರಗಳನ್ನು ತೋರ್ಪಡಿಸಿದನಾ ಎಂಬುದು ನಮಗೆ ತಿಳಿದಿಲ್ಲ.

ಇಬ್ರಿಯ 2: 3-4
3 ಈ ಅತ್ಯಂತ ವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯಮಾಡಿದರೆ ತಪ್ಪಿಸಿಕೊಳ್ಳುವದು ಹೇಗೆ? ಇದು ಕರ್ತನಿಂದ ಮೊದಲು ಹೇಳಲ್ಪಟ್ಟಿತು; ಆತನಿಂದ ಕೇಳಿದವರು ಇದನ್ನು ನಮಗೆ ಸ್ಥಿರಪಡಿಸಿದರು
4 ಮತ್ತು ದೇವರು ಅವರ ಕೈಯಿಂದ ಸೂಚಕಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ನಾನಾ ವಿಧವಾದ ಮಹತ್ಕಾರ್ಯಗಳನ್ನೂ ನಡಿಸಿ ಪವಿತ್ರಾತ್ಮವರಗಳನ್ನು ತನ್ನ ಚಿತ್ತಾನುಸಾರವಾಗಿ ಅವರಿಗೆ ಅನುಗ್ರಹಿಸಿ ಅವರ ಮಾತಿಗೆ ಸಾಕ್ಷಿಕೊಡುತ್ತಿದ್ದನು.

ನಾವು ಅನ್ಯಭಾಷೆಗಳಲ್ಲಿ ಮಾತನಾಡುವಾಗ ದೆವ್ವಕ್ಕೆ ಅರ್ಥವಾಗಬಹುದೇ?

ಸೈತಾನ ಮತ್ತು ಇಲ್ಲವೇ ಅವನ ದೆವ್ವಗಳು ನಾವು ಅನ್ಯಭಾಷೆಗಳಲ್ಲಿ ಮಾತನಾಡುವುದನ್ನು ಅರ್ಥಮಾಡಿಕೊಳ್ಳುತ್ತವೆ. ಎಂದು ಸತ್ಯವೇದ ಸ್ಪಷ್ಟವಾಗಿ ಹೇಳುತ್ತಿಲ್ಲ ಆದಾಗ್ಯೂ, ನಾವು ಹೀಗೆ ಊಹಿಸಬಹುದು. ನಾವು ಅನ್ಯಭಾಷೆಗಳಲ್ಲಿ ಮಾತನಾಡುತ್ತೇವೆ .1 ಕೊರಿಂಥ 13: 1 ರ ಪ್ರಕಾರ ನಾವು ಅನ್ಯಭಾಷೆಗಳಲ್ಲಿ ಮಾತನಾಡುವಾಗ ಮನುಷ್ಯರ ಮತ್ತು ದೇವಧೂತರುಗಳ ಅನ್ಯಭಾಷೆಗಳಲ್ಲಿ ಮಾತನಾಡುತ್ತೇವೆ .ಸೈತಾನ ಮತ್ತು ಅವನ ದುರಾತ್ಮಗಳು ಮನುಷ್ಯರ ಅನ್ಯ ಭ್ಹಾಷೆಯನ್ನು ಅರ್ಥಮಾಡಿಕೊಳ್ಳುತ್ತಾರೆ ಎಂಬುದು ನಮಗೆ ತಿಳಿದಿದೆ.ಯಾಕೆಂದರೆ ನಾವು ದುಷ್ಟಾತ್ಮಗಳನ್ನು ವಿರೋಧಿಸುವಾಗ,ಗದರಿಸುವಾಗ ಅಥವಾ ಹೊರ ಹಾಕುವಾಗ ನಮಗೆ ತಿಳಿದಿರುವ ಭಾಷೆಯಲ್ಲಿ ಮಾತುಗಳನ್ನು ನಾವು ಮಾತನಾಡುತ್ತೇವೆ ಮತ್ತು ಈ ದುಷ್ಟಶಕ್ತಿಗಳು ಪ್ರತಿಕ್ರಿಯಿಸುತ್ತವೆ ಮತ್ತುವಿಧೇಯವಾಗುತ್ತವೆ.. ನಾವು ಕೂಡ ಬೆಳಕಿನ ದೇವಧೂತರುಗಳು ಮತ್ತು ಮತ್ತು ಸೈತಾನ ಮತ್ತು ಅವನ ದುರಾತ್ಮಗಳ ನಡುವೆ ಸಂಘರ್ಷವಿದೆ ಎಂದು ಧರ್ಮಗ್ರಂಥದಲ್ಲಿನಾವು ಗಮನಿಸುತ್ತೇವೆ. (ದಾನಿಯೇಲ 10: 13,20,21; ಯೂದ 1: 9).
ಬೆಳಕಿನ ದೇವದೂತರು, ದೇವದೂತರ ಭಾಷೆಯಲ್ಲಿ ಪದಗಳನ್ನು ಬಳಸುವುದರಿಂದ ಸೈತಾನ ಮತ್ತು ಅವನ ದುರಾತ್ಮಗಳನ್ನು ಗದರಿಸುತ್ತಾರೆ. (ಯೂದ 1: 9). ಆದ್ದರಿಂದ ನಾವು ಸೈತಾನನನ್ನು ಮತ್ತು ಅವನ ದುರಾತ್ಮಗಳು ಮನುಷ್ಯರ ಮತ್ತು ದೇವದೂತರ ಭಾಷೆ ಅರ್ಥಮಾಡಿಕೊಳ್ಳುತ್ತವೆ ಎಂದು ನಾವು ಊಹಿಸಿಕೋಳ್ಳಬಹುದು. ಆದ್ದರಿಂದ ಇದು ನಾವು ಅನ್ಯಭಾಷೆಗಳಲ್ಲಿ ಮಾತನಾಡುವುದನ್ನು ದೆವ್ವಗಳು ಅರ್ಥಮಾಡಿಕೊಳ್ಳುತ್ತವೆ ಎಂದರ್ಥ. ಆದಾಗ್ಯೂ,ನಾವು ಅನ್ಯಭಾಷೆಯಲ್ಲಿ ಮಾತನಾಡುವುದನ್ನು ಅರ್ಥಮಾಡಿಕೊಳ್ಳುವ ದೆವ್ವಗಳ ಬಗ್ಗೆ ತಲೆಕೆಡಿಸಿಕೊಳ್ಳಬಾರದು

ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಸ್ವೀಕರಿಸಲು ಸೂಚನೆಗಳು ಮತ್ತು ಪ್ರಾರ್ಥನೆ

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಸ್ವೀಕರಿಸುವುದು ದೇವರ ಶುದ್ಧ ಕೆಲಸ.ನಾವು ಇದನ್ನು ತಯಾರಿಸಲು ಅಥವಾ ಜನರನ್ನು ಇದಕ್ಕೆ ಒತ್ತಾಯಿಸಲು ಸಾಧ್ಯವಿಲ್ಲ. ನಾವುದೇವರ ವಾಕ್ಯವು ಏನು ಹೇಳಬೇಕು, ಎಂಬುದನ್ನು ಹಂಚಿಕೊಳ್ಳಬೇಕು ಕೆಲವು ಪ್ರಾಯೋಗಿಕ ಸೂಚನೆಗಳನ್ನು ಜನರಿಗೆ ಕಲಿಸುವುದು ತದನಂತರ ಪ್ರಾರ್ಥಿಸಬೇಕು. ಆತನ ವಾಕ್ಯ ಮತ್ತು ಆತನ ಜನರಿಗೆ ದೀಕ್ಷಾಸ್ನಾನ ಮಾಡಿಸಲು ದೇವರು ಯಾವಾಗಲೂ ನಂಬಿಗಸ್ತನಾಗಿರುತ್ತಾನೆ ಆತನು ಬಾಯಾರಿದವರ ಮೇಲೆ ತನ್ನ ಆತ್ಮ ಸುರಿಯುತ್ತಾನೆ (ಯೆಶಾಯ 44: 3).

ಯೇಸು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಮಾಢಿಸುವಾತಾನು ಆದ್ದರಿಂದ ಆತನ ಕಡೆಗೆ ನೋಡಿರಿ

ಯೇಸು ನಮ್ಮನ್ನು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಮಾಡುತ್ತಾನೆಂದು ಸತ್ಯವೇದ ಹೇಳುತ್ತದೆ (ಮತ್ತಾಯ3:11). ಆದ್ದರಿಂದ, ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಪಡೆಯಲು ಒಬ್ಬ ಸಭಾಪಾಲಕ ಅಥವಾ ದೇವರ ಮನುಷ್ಯನ ಅಗತ್ಯವಿಲ್ಲ! ನಮಗೆ ದೀಕ್ಷಾಸ್ನಾನ ಮಾಡಿಸಲು ಆತನ ಪವಿತ್ರಾತ್ಮ ನಮ್ಮ ಮೇಲೆ ಸುರಿಸಲು ನಾವು ಯೇಸುವನ್ನು ಕೇಳಬಹುದು ನಮ್ಮ ಮೇಲೆ. ಆತನು ತನ್ನ ಆತ್ಮವನ್ನು, ಸುರಿಯುತ್ತಿದ್ದಂತೆ ಸ್ವರ್ಗೀಯ ಭಾಷೆಗಳನ್ನು ಮುಂದೆ ಬರುತ್ತದೆ. ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ಇದು ಸಂಭವಿಸಿದೆ-ಪ್ರತಿಯೊಂದೂ ಸಮಯದಲ್ಲಿ ಪವಿತ್ರಾತ್ಮದ ವರಗಳನ್ನು ಪಡೆದುಕೊಂಡರು,ಅಪ್ರಾಕೃತವಾದದ್ದು ಸಂಭವಿಸಿತು.ಅವರು ಅನ್ಯಭಾಷೆಯಲ್ಲಿ ಆರಾಧಿಸಲು ಪ್ರಾರಂಭಿಸಿದರು

ನೀವು ಒಬ್ಬ ವಿಶ್ವಾಸಿ ಮತ್ತು ನೀವು ಇತರ ಅನ್ಯಭಾಷೆಗಳೊಂದಿಗೆ ಮಾತನಾಡಬಹುದು

ನೀವು ವಿಶ್ವಾಸಿಗಳಾಗಿ ಇತರ ಅನ್ಯ ಭಾಷೆಗಳೊಂದಿಗೆ ಮಾತನಾಡಬಹುದು ಎಂದುದನ್ನು ನೆನಪಿಡಿ.ಕರ್ತನಾದ ಯೇಸು ನಿಮಗೆ ಮಾರ್ಕ 16: 17-18 ರಲ್ಲಿ ಹೀಗೆ ಹೇಳಿದ್ದಾನೆ : “17ಇದಲ್ಲದೆ ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸಭಾಷೆಗಳಿಂದ ಮಾತಾಡುವರು; ಹಾವುಗಳನ್ನು ಎತ್ತುವರು; 18ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಯಾವ ಕೇಡೂ ಆಗುವದಿಲ್ಲ; ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಎಂದು ಹೇಳಿದನು.

ನಂಬಿಕೆಯ ಒಂದು ಹೆಜ್ಜೆ ಇರಿಸಿ

ನಾವು ನಂಬಿಕೆಯಿಂದ ಆತ್ಮದ ವಾಗ್ದಾನವನ್ನು ಸ್ವೀಕರಿಸುತ್ತೇವೆ. ಇದು ಉಡುಗೊರೆ ಪವಿತ್ರಾತ್ಮನ ವರಗಳು ಮತ್ತು ವಾಗ್ದಾನ ಪಡೆಯಲು ನಿಮಗೆ ಬೇಕಾಗಿರುವುದು ಸರಳವಾದ ನಂಬಿಕೆ

ಗಲಾತ್ಯದವರಿಗೆ 3: 13-14
13 ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ
14 ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ.

ಎಲ್ಲಾ ಭಯವನ್ನು ತಿರಸ್ಕರಿಸಿ

ನೀವು ಕೆಲವು "ಇತರೆ"ಆತ್ಮದಿಂದ ಸ್ವೀಕರಿಸುತ್ತೀರಿ ಎಂಬುದಾಗಿ ಭಯಪಡಬೇಡಿರಿ .ನಿಮಗೆ ಪವಿತ್ರಾತ್ಮದಿಂದ ದೀಕ್ಷಾಸ್ನಾನ ಮಾಡಿಸಲು ಪ್ರಾರ್ಥಿಸುವಾಗ ಮತ್ತು ಕರ್ತನಾದ ಯೇಸುವನ್ನು ಕೇಳಿದಾಗ, ಅದು ನಿಖರವಾಗಿ ಜರುಗುತ್ತದೆ. ಕರ್ತನಾದ ಯೇಸು ಹೀಗೆ ಲೂಕ 11: 11-13 ರಲ್ಲಿ ಹೇಳಿದ್ದಾನೆ 11ನಿಮ್ಮಲ್ಲಿ ತಂದೆಯಾದವನು ಮೀನನ್ನು ಕೇಳುವ ಮಗನಿಗೆ ಮೀನು ಕೊಡದೆ ಹಾವನ್ನು ಕೊಡುವನೇ? 12ಅಥವಾ ತತ್ತಿಯನ್ನು ಕೇಳಿದರೆ ಚೇಳನ್ನು ಕೊಡುವನೇ? 13ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮವರವನ್ನು ಕೊಡುವನಲ್ಲವೇ ಅಂದನು.

ಆರಾಮವಾಗಿರಿ, ನೀವು ಏನನ್ನಾದರೂ ಮಾಡಲು ದೇವರನ್ನು ಮನವೊಲಿಸಲು ಪ್ರಯತ್ನಿಸುತ್ತಿಲ್ಲ

ಪವಿತ್ರಾತ್ಮನ ವರ ಪಡೆಯಲು ನೀವು ದೇವರನ್ನು ಬೇಡಿಕೊಳ್ಳಬೇಕಾಗಿಲ್ಲ, ಆತನ ಕೈಯನ್ನು ತಿರುಗಿಸಲು , ಹೆಚ್ಚು ಗಂಟೆಗಳು, ಕಾದುಕೊಂಡಿರುವುದು,ಸ್ವೀಕರಿಸಲು ಮನವಿ, ಅಳಲು, ತುಂಬಾ ಕಣ್ಣೀರು ಸುರಿಸುವುದು ಮಾಡಬೇಕಾಗಿಲ್ಲ.ನಿಮ್ಮ ಜೀವನದಲ್ಲಿ ದೇವರು ತನ್ನ

ವಾಗ್ದಾನವನ್ನು ನೇರವೇರಿಸಲು ಸಿದ್ದನಾಗಿದ್ದಾನೆ. ಕೇಳಿ ಮತ್ತು ನಂಬಿಕೆಯಿಂದ ಸ್ವೀಕರಿಸಿ ನೀವು ಪ್ರಾಮಾಣಿಕ ಬಯಕೆ ಹೊಂದಿರಬೇಕು ಮಾರ್ಕ 11: 24 ರಲ್ಲಿ ! ಯೇಸು ಹೀಗೆ ಹೇಳಿದ್ದಾನೆ : "ಆದಕಾರಣ ನೀವು ಪ್ರಾರ್ಥನೆಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ; ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ"

ಇಂದಿನಿಂದ ಕೆಲವೇ ನಿಮಿಷಗಳಲ್ಲಿ, ನೀವು ಪ್ರಾರ್ಥಿಸುವಾಗ, ನೀವು ಕೇಳುವ ಕ್ಷಣದಲ್ಲಿ ನೀವು ಕೇಳುವದನ್ನು ಸ್ವೀಕರಿಸುತ್ತೀರಿ ಎಂದು ನಂಬಿರಿ.

ಪವಿತ್ರಾತ್ಮನು ಭಾಷೆಯನ್ನು ನೀಡುತ್ತಾನೆ ಆದರೆ ನೀವು ಮಾತನಾಡಬೇಕು

ಅಪೊಸ್ತಲರ ಕೃತ್ಯಗಳು 2: 4
ಆಗ ಅವರೆಲ್ಲರು ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು

ಕೆಳಗೆ ನೀಡಲಾದ ಪ್ರಾರ್ಥನೆಯನ್ನು ನೀವು ಪ್ರಾರ್ಥಿಸಿದ ನಂತರ, ನಿಮ್ಮ ಬಾಯಿ ತೆರೆಯಿರಿ ಮತ್ತು ಏನು ಬಂದರೂ ಮಾತನಾಡಿ. ಅದು ನಿಮ್ಮ ಧ್ವನಿ ಮತ್ತು ನಿಮ್ಮ ಗಾಯನ (ಧ್ವನಿ) ಅಂಗಗಳು ಕಾರ್ಯನಿರತವಾಗಿರುತ್ತವೆ. ಪವಿತ್ರಾತ್ಮನು ಮಾತನಾಡುವುದಿಲ್ಲ. ನೀವು ಮಾತನಾಡುವುದುನ್ನು ಮಾಡಬೇಕು ಆತನು ಭಾಷೆಯನ್ನು ಮಾತ್ರ ಒದಗಿಸುತ್ತಾನೆ

ಶಬ್ದಗಳಿಂದ ಕೂಡಿದ ಒಂದು ಭಾಷೆ

ಭಾಷೆಯಲ್ಲಿ ಮಾತನಾಡುವುದನ್ನು ಸರಳವಾಗಿ ಶಬ್ದಗಳನ್ನು ಒಳಗೊಂಡಿರುತ್ತದೆ ಎಂಬುದನ್ನು ನೆನಪಿಡಿ .ಈ ಶಬ್ದಗಳು ಗ್ರಹಿಸಲು ಸಾಧ್ಯವಾದ ಮತ್ತು ಒಂದು ನಿರ್ದಿಷ್ಟ ಅನುಕ್ರಮ ಅನುಸರಿಸುವುದರಿಂದ ಇತರರು ನೀವು ಆ ಭಾಷೆಯಲ್ಲಿ ಏನು ಹೇಳುತ್ತಿದ್ದೀರಿ ಎಂಬುದರ ಅರ್ಥವನ್ನು ಪಡೆಯುತ್ತಾರೆ.ಅನ್ಯಭಾಷೆಗಳಲ್ಲಿ, ನಾವು ಮನುಷ್ಯರ ಅಥವಾ ದೇವದೂತರುಗಳ ಭಾಷೆಗಳಲ್ಲಿ ಮಾತನಾಡುತ್ತೇವೆ.

ಆದ್ದರಿಂದ, ಪವಿತ್ರಾತ್ಮನು ಭಾಷೆಯನ್ನು ನೀಡುತ್ತಾನೆ (ಅವಿಳಂಬವಾದ ಅಥವಾ ಪ್ರೇರಿತ ಶಬ್ದಗಳು) ಮತ್ತು ನಿಮ್ಮ ಗಾಯನ ಅಂಗಗಳನ್ನು ಬಳಸಿಕೊಂಡು ನೀವು ಶಬ್ದಗಳನ್ನು ವ್ಯಕ್ತಪಡಿಸಬೇಕು.ಈ ಶಬ್ದಗಳು ನೀವು ಕಲಿಯದ ಭಾಷೆಯಲ್ಲಿರುವುದರಿಂದ, ನಿಮ್ಮಮನಸ್ಸು ಈ ಶಬ್ದಗಳನ್ನು ಅರ್ಥಮಾಡಿಕೊಳ್ಳುವುದಿಲ್ಲ. ನೀವು ಆರಂಭದಲ್ಲಿ ಕೆಲವು ವಿಚಿತ್ರ ಶಬ್ದಗಳನ್ನು ಮಾಡುತ್ತಿದ್ದೇನೆ ಎಂಬುದಾಗಿ ಅನಿಸಬಹುದು ಇವುಗಳು ಒಂದು ಅಪರಿಚಿತ ಪದಗಳು (ಶಬ್ದಗಳು) ಆಗಿರುತ್ತವೆ. ಮುಂದುವರಿಯಿರಿ ಮತ್ತು

ಅದಕ್ಕೆನಿಮ್ಮ ಧ್ವನಿ ನೀಡಿ. ನೀವು ನಂಬಿಕೆಯಲ್ಲಿ ಹೆಜ್ಜೆಯನ್ನಿಡಿರಿ ಹೆಚ್ಚಿನ ಪದಗಳು ಹರಿಯಲು ಪ್ರಾರಂಭಿಸುತ್ತವೆ.

ಒಂದು ಸಮಯದಲ್ಲಿ ಒಂದೇ ಭಾಷೆ

ನೀವು ಒಂದೇ ಸಮಯದಲ್ಲಿ ಎರಡು ಭಾಷೆಗಳನ್ನು ಮಾತನಾಡಲು ಸಾಧ್ಯವಿಲ್ಲ ಎಂದು ನೆನಪಿಡಿರಿ. ಆದ್ದರಿಂದ ನಿಮ್ಮ ಸ್ವಂತ ಭಾಷೆ (ಗಳಲ್ಲಿ) ನಲ್ಲಿ ಏನನ್ನೂ ಮಾತನಾಡಲು ಪ್ರಯತ್ನಿಸಬೇಡಿರಿ."ಕರ್ತನಿಗೆ ಸ್ತೋತ್ರ" ಅಥವಾ "ಹಲ್ಲೆಲೂಯ"ಇವುಗಳನ್ನು ವೇಗವಾಗಿ ಹೇಳಲು ಪ್ರಯತ್ನಿಸಬೇಡಿರಿ .ಹಾಗೆ ಮಾಡುವ ಅಗತ್ಯವಿಲ್ಲ. ಇವು ಆತ್ಮನು ಬಿಡುಗಡೆ ಮಾಡಲು ಬಯಸುವ ಭಾಷೆಯ ಹರಿವಿಗೆ ಅಡ್ಡಿಯಾಗುತ್ತವೆ. ಬದಲಾಗಿ, ಪ್ರಾರ್ಥನೆಯನ್ನು ಪ್ರಾರ್ಥಿಸಿದ ನಂತರ, ನಂಬಿಕೆಯ ಹೆಜ್ಜೆ ಇರಿಸಿ ಮತ್ತು ಹೊಸ ಭಾಷೆಗಳಲ್ಲಿ ಮಾತನಾಡಿರಿ.ನೀವು ಮಾಡಬಹುದು ಎಂದು ಯೇಸು ನಿಮಗೆ ಹೇಳಿದ್ದಾನೆ, ಆದ್ದರಿಂದ ನೀವು ಮಾಡಬಹುದು!

ದೇವರು ಆತ್ಮನ ಮನಸ್ಸನ್ನು ಅರ್ಥಮಾಡಿಕೊಳ್ಳುತ್ತಾನೆ (ಎಲ್ಲಾ ಭಾಷೆಗಳಲ್ಲಿ)

ದೇವರು ನಿಮ್ಮ ಹೃದಯ ನೋಡುವಾತನು, ನಿಮ್ಮ ಮೂಲಕವಾಗಿ ಪವಿತ್ರಾತ್ಮನು ಬಿಡುಗಡೆ ಮಾಡುತ್ತಿರುವುದನು. ಅರ್ಥಮಾಡಿಕೊಳ್ಳುತ್ತಾನೆ.

ರೋಮಾಪುರದವರಿಗೆ 8:27
ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪವಿತ್ರಾತ್ಮನ ಮನೋಭಾವವು ಏನೆಂದು ತಿಳಿದದೆ ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವಜನರಿಗೋಸ್ಕರ ಬೇಡಿಕೊಳ್ಳುವನೆಂದು ಆತನು ಬಲ್ಲನು.

ನೀವು ಮಾತಾನಾಡುತ್ತಿರುವುದನ್ನು ನೀವು ಅರ್ಥಮಾಡಿಕೊಳ್ಳುತ್ತಿಲ್ಲ ಎಂಬ ಸಂಗತಿಯ ಕುರಿತು ಚಿಂತಿಸಬೇಡಿರಿ, ನಾವು ಆತ್ಮದಿಂದ ಪ್ರಾರ್ಥಿಸುವಾಗ ನಮ್ಮ ಆತ್ಮವು ಪವಿತ್ರಾತ್ಮದಿಂದ ಸಕ್ರಿಯಗೊಂಡು ಪ್ರಾರ್ಥಿಸುತ್ತದೆ ಮತ್ತು ನಮ್ಮ ತಿಳುವಳಿಕೆಯನ್ನು ಕಾರ್ಯರೂಪಕ್ಕೆ ತರಲಾಗುವುದಿಲ್ಲ "ಯಾಕಂದರೆ ನಾನು ವಾಣಿಯನ್ನಾಡುತ್ತಾ ದೇವರನ್ನು ಪ್ರಾರ್ಥಿಸಿದರೆ ನನ್ನಾತ್ಮವು ಪ್ರಾರ್ಥಿಸುವದೇ ಹೊರತು ನನ್ನ ಬುದ್ಧಿ ನಿಷ್ಫಲವಾಗಿರುವದು" (1ಕೊರಿಂಥದವರಿಗೆ 14:14) ನಿಮ್ಮ ಮೂಲಕವಾಗಿ ಪವಿತ್ರಾತ್ಮನು ಬಿಡುಗಡೆ ಮಾಡುತ್ತಿರುವುದನ್ನು ದೇವರು ಅರ್ಥಮಾಡಿಕೊಳ್ಳುತ್ತಾನೆ ಮತ್ತು ಅದು ಪ್ರಾಮುಖ್ಯ ವಿಚಾರವಾಗಿದೆ.

ಪ್ರಾರ್ಥನೆ

ಪವಿತ್ರಾತ್ಮನ ದೀಕ್ಷಾಸ್ನಾನ ಕೇಳಲು ಮತ್ತು ಪಡೆದುಕೊಳ್ಳಲು ಒಂದು ಸರಳ ಪ್ರಾರ್ಥನೆ ಇಲ್ಲದೆ. ಆಮೇಲೆ ನಂಬಿಕೆಯಿಂದ ಹೆಜ್ಜೆಯನ್ನಿಡಿರಿ ಮತ್ತು ಪವಿತ್ರಾತ್ಮನು ಕೊಡುವ ಭಾಷೆಗಳಲ್ಲಿ ಮಾತಾನಾಡಿರಿ.

ಪ್ರೀತಿಯ ಕರ್ತನಾದ ಯೇಸುವೆ, ನಾನು ಒಬ್ಬ ವಿಶ್ವಾಸಿ ಪವಿತ್ರಾತ್ಮದಿಂದ ನನ್ನನ್ನು ದೀಕ್ಷಾಸ್ನಾನ ಮಾಡಿಸು ಎಂಬುದಾಗಿ ನಾನು ಕೇಳುತ್ತೇನೆ ಆದ್ದರಿಂದ ನಿನಗಾಗಿ ಸಾಕ್ಷಿಯಾಗಿರಲು ಬಲವನ್ನು ನಾನು ಪಡೆದುಕೊಳ್ಳಬಹುದು ಪರಲೋಕ ತಂದೆಯೆ, ಯೇಸುವಿನ ಹೆಸರಿನಲ್ಲಿ ಕಡೇ ದಿವಸಗಳಲ್ಲಿ ನನ್ನ ಆತ್ಮವನ್ನು ಸುರಿಸುತ್ತೇನೆ ಎಂಬುದಾಗಿ ನೀನು ವಾಗ್ದಾನ ಮಾಡಿದಂತೆ ನಿಮ್ಮ ಆತ್ಮನನ್ನು ನನ್ನ ಮೇಲೆ ಸುರಿಸು ಎಂಬುದಾಗಿ ಬೇಡುತ್ತೇನೆ. ಪವಿತ್ರಾತ್ಮನ ಎಲ್ಲಾ ವರಗಳೊಡನೆ ಪವಿತ್ರಾತ್ಮನ ಸುರಿಸುವಿಕೆಯನ್ನು ನಾನು ಈಗ ನಂಬಿಕೆಯಿಂದ ಪಡೆದುಕೊಳ್ಳುತ್ತೇನೆ. ಪವಿತ್ರಾತ್ಮನು ಈಗ ನನ್ನ ಮೇಲೆ ಇದ್ದಾನೆ. ಮತ್ತು ಆತನಲ್ಲಿ ವಾಸಿಸುವ ಎಲ್ಲಾ ವರಗಳು ನನ್ನಲ್ಲಿವೆ. ಕರ್ತನಾದ ಯೇಸುವೆ ವಂದನೆಗಳು ಯಾಕೆಂದರೆ ನಾನು ಒಬ್ಬ ವಿಶ್ವಾಸಿ, ಈಗ ನಾನು ಆತ್ಮನು ಸಾಮರ್ಥ್ಯವನ್ನು ಕೊಡುವಾಗ ನಾನು ಹೊಸ ಅನ್ಯಭಾಷೆಯಲ್ಲಿ ಈಗ ಮಾತಾಡುತ್ತೇನೆ. ನನ್ನ ಜೀವಿತದ ಮೂಲಕವಾಗಿ ಇತರೆ ಎಲ್ಲಾ ಆತ್ಮನ ವರಗಳಲಿ ಹರಿಯಬೇಕೆಂದು ನಾನು ಬಯಸುತ್ತೇನೆ. ಕರ್ತನಾದ ಯೇಸುವೆ ವಂದನೆ ಪವಿತ್ರಾತ್ಮನೆ ಸ್ವಾಗತಿಸುತ್ತೇನೆ.

ಅನ್ಯಭಾಷೆಯಲ್ಲಿ ನೀವು ಮಾತನಾಡಲೂ ಪ್ರಾರಂಭಿಸದಾಗ, ಆಗಾಗ್ಗೆ ಅನ್ಯಭಾಷೆಯಲ್ಲಿ ಪ್ರಾರ್ಥಿಸುವುದನ್ನು ಮುಂದುವರೆಸಿರಿ. ಅನ್ಯಭಾಷೆಯಲ್ಲಿ ವಿಸ್ತರಿಸಲ್ಪಟ್ಟ ಹೆಚ್ಚಾದ ಗಂಟೆಗಳನ್ನು ಪ್ರಾರ್ಥಿಸುವುದರಲ್ಲಿ ಕಳೆಯಿರಿ ಮತ್ತು ಪ್ರಯತ್ನಿಸಿರಿ ಅನ್ಯಭಾಷೆಯಲ್ಲಿ ಪ್ರಾರ್ಥಿಸುವುದರ ಅನೇಕ ಪ್ರಯೋಜನಗಳು ಇವೆ. ಅನ್ಯಭಾಷೆಯಲ್ಲಿ ಪ್ರಾರ್ಥಿಸುವುದರ ಪ್ರಯೋಜನಗಳ ಕುರಿತು ಮಾಹಿತಿಗಾಗಿ ನಮ್ಮ ಏ.ಪಿ.ಸಿ. ಪುಸ್ತಕ “ಅನ್ಯಭಾಷೆಯಲ್ಲಿ ಪ್ರಾರ್ಥಿಸುವುದರ ಅದ್ಭುತಕರ ಪ್ರಯೋಜನಗಳು” ಎಂಬುದು ಉಚಿತವಾಗಿ apcwo.org / publications ಇಲ್ಲಿ ದೊರೆಯುತ್ತದೆ.

ಈ ಪುಸ್ತಕದಲ್ಲಿ ನೀವು ಮುಂದುವರೆಯುವಾಗ, ಪವಿತ್ರಾತ್ಮನ ವರಗಳ ಕುರಿತು ಅಧಿಕವಾಗಿ ನೀವು ಕಲಿಯುತ್ತೀರಿ ಆದ್ದರಿಂದ ಆತನ ಎಲ್ಲಾ ವರಗಳನ್ನು ತೋರ್ಪಡಿಸಲು ಶರಣಾಗುವುದೇಗೆ ಎಂಬುದನ್ನು ನೀವು ಕಲಿಯುವಿರಿ, ಇಂತಹ ವರಗಳ ಮೂಲಕವಾಗಿ ನೀವು ಜನರಿಗೆ ಸೇವೆ ಸಲ್ಲಿಸಬಹುದು. ನೀವು ಬಲದೊಡನೆ ಸಾಕ್ಷಿಗಳಾಗುತ್ತೀರಿ. ಯೇಸುಕ್ರಿಸ್ತನಿಗೆ ಮಹಿಮೆ ಉಂಟಾಗುತ್ತದೆ !

ತುಂಬಿದೆ, ಅಭಿಷೇಕಿಸಲ್ಪಟ್ಟಿದೆ ಮತ್ತು ಆತ್ಮದಲ್ಲಿ ನಡೆಯುವುದು

ವಿಶ್ವಾಸಿಗಳ ಜೀವಿತದಲ್ಲಿ ಪವಿತ್ರಾತ್ಮನ ಕಾರ್ಯಗಳ ಸಂಬಂದದಲ್ಲಿ ಅನೇಕ ವಿಭಿನ್ನಪದಗಳನ್ನು ಮತ್ತು ಅಭಿವ್ಯಕ್ತತೆಗಳನ್ನು ನಾವು ಹೊಸಒಡಂಬಡಿಕೆಯಲ್ಲಿ ನೋಡಬಹುದು. ನಾವು ಬಳಸಬಹುದಾದ ಪರಿಭಾಷೆಯ ಬಗ್ಗೆ ಸ್ಪಷ್ಟತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡಲು ಇವುಗಳಲ್ಲಿ ಪ್ರಸ್ತುತ ಪಡಿಸುತ್ತೇವೆ. ಅಂತಹ ಪದಗಳ ಸಂಪೂರ್ಣ ವಿವರಣೆಗಳು ಅಲ್ಲ ಎಂಬುದನ್ನು ದಯವಿಟ್ಟು ಗಮನಿಸಿ ಅದನ್ನು ಇನ್ನೊಂದು ಪುಸ್ತಕಕ್ಕಾಗಿ ಬಿಟ್ಟು ಬಿಡಬೇಕಾಗುತ್ತದೆ.

ಮೇಲಿನ ಕೊಠಡಿಯಲ್ಲಿ 120 ಮಂದಿ ಹೊಂದಿದಂತಹ ಅನುಭವ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನದಂತೆ ಉಲ್ಲೇಖಿಸಲಾಗಿದೆ. (ಅಪೊಸ್ತಲರ ಕೃತ್ಯಗಳು 1:5) ಅವರೆಲ್ಲರೂ ಪವಿತ್ರಾತ್ಮಭರಿತ ಆದರೆಂಬುದನ್ನು ನಾವು ಗಮನಿಸಬಹುದು (ಅಪೊಸ್ತಲರ ಕೃತ್ಯಗಳು 2:4) ತಿರುಗಿ ಸಮಾರ್ಯದಲ್ಲಿ, ವಿಶ್ವಾಸಿಗಳ ಮೇಲೆ ಪವಿತ್ರಾತ್ಮನು "ಇಳಿದು ಬರುವಂತೆ" ಅಪೊಸ್ತಲರು ಪ್ರಾರ್ಥಿಸಿದರು ಮತ್ತು ಅವರು ಪವಿತ್ರಾತ್ಮವನನ್ನು ಪಡೆದರು (ಅಪೊಸ್ತಲರ ಕೃತ್ಯಗಳು 8:16-17) ಅದೇ ರೀತಿಯಾಗಿ, ಕೊರ್ನೇಲ್ಯನ ಮನೆಯಲ್ಲಿ ಜನರು ಸೇರಿದ್ದಾಗ, ಪೇತ್ರನು ಪ್ರಸಂಗಿಸಿದಾಗ ಅವರು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದ್ದರು (ಅಪೊಸ್ತಲರ ಕೃತ್ಯಗಳು 11:15-17) ಪವಿತ್ರಾತ್ಮನು "ಇಳಿದು ಬಂದನು" ಮತ್ತು ಅವರೆಲ್ಲರ ಮೇಲೆ "ಸುರಿಸಲ್ಪಟ್ಟನು" (ಅಪೊಸ್ತಲರ ಕ್ಯತ್ಯಗಳು 10:44-45) ಆದ್ದರಿಂದ ವಿಶ್ವಾಸಿಗಳು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆ ಸಮಯದಲ್ಲೆ ಅವರು ಪವಿತ್ರಾತ್ಮದೊಡನೆ ತುಂಬಿಸಲ್ಪಡುತ್ತಾರೆ, ಅವರ ಮೇಲೆ ಆತ್ಮನು ಇಳಿದು ಬಂದನು ಮತ್ತು ಅವರ ಮೇಲೆ ಸುರಿಸಲ್ಪಟ್ಟನು. ಪವಿತ್ರಾತ್ಮದಲ್ಲಿ ಒಬ್ಬ ವಿಶ್ವಾಸಿಯು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಜರುಗುವುದೇನು ಎಂಬುದನ್ನು ವ್ಯಾಖ್ಯಾನಿಸಲು ಇವೆಲ್ಲಾ ವ್ಯಕ್ತಪಡಿಸುವಿಕೆಗಳು ಸಮಯಂಜಸವಾದವುಗಳಾಗಿವೆ.

ಒಂದೇ ದೀಕ್ಷಾಸ್ನಾನ, ಅನೇಕ ತುಂಬಿಸುವಿಕೆಗಳು

ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ನಾವು ಗಮನಿಸುವ ವಿಷಯವೇನೆಂದರೆ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದ ಅದೇ ವಿಶ್ವಾಸಿಗಳು ಪದೇ ಪದೇ ಆತ್ಮಭರಿತರಾದರು ಅಥವಾ ಪವಿತ್ರಾತ್ಮದಲ್ಲಿ ಸಂಪೂರ್ಣರಾದವರಂತೆ ಆದರು ಎಂಬುದಾಗಿ ವರದಿ ಮಾಡಿದೆ.

ಅಪೊಸ್ತಲರ ಕೃತ್ಯಗಳು 4:8
“ಪೇತ್ರನು ಪವಿತ್ರಾತ್ಮಭರಿತನಾಗಿ ಅವರಿಗೆ ಜನರ ಅಧಿಕಾರಿಗಳೇ ಹಿರಿಯರೇ”

ಅಪೊಸ್ತಲರ ಕೃತ್ಯಗಳು 4:31
ಹೀಗೆ ಪ್ರಾರ್ಥನೆ ಮಾಡಿದ ಮೇಲೆ ಅವರು ಕೂಡಿದ್ದ ಸ್ಥಳವು ನಡುಗಿತು ಅವರೆಲ್ಲರು ಪವಿತ್ರಾತ್ಮಭರಿತರಾಗಿ ದೇವರ ವಾಕ್ಯವನ್ನು ಧೈರ್ಯದಿಂದ ಹೇಳುವವರಾದರು.

ಅಪೊಸ್ತಲರ ಕೃತ್ಯಗಳು 6:3
ಆದದರಿಂದ ಸಹೋದರರೆ ಸಂಭಾವಿತರೂ ಪವಿತ್ರಾತ್ಮಭರಿತರೂ ಜ್ಞಾನಸಂಪನ್ನರೂ ಆಗಿರುವ ಏಳುಮಂದಿಯನ್ನು ನಿಮ್ಮೊಳಗಿಂದ ನೋಡಿ ಆರಿಸಿಕೊಳ್ಳಿರಿ ಅವರನ್ನು ಈ ಕೆಲಸದ ಮೇಲೆ ನೇಮಿಸುವೆವು.

ಅಪೊಸ್ತಲರ ಕೃತ್ಯಗಳು 6:5
ಈ ಮಾತು ಸರ್ವಮಂಡಲಿಗೆ ಒಳ್ಳೇದೆಂದು ತೋಚಿತು. ಅವರು ಪವಿತ್ರಾತ್ಮಭರಿತನೂ ನಂಬಿಕೆಯಿಂದ ತುಂಬಿದವನೂ ಆದ ಸ್ತೆಫನನನ್ನೂ ಫಿಲಿಪ್ಪ, ಪ್ರೊಖೋರ, ನಿಕಂನೋರ, ತಿಮೋರ್ನ, ಪರ್ಮೇನ, ಯೆಹೂದ್ಯ ಮತಾವಲಂಬಿಯಾದ ಅಂತಿಯೋಕ್ಯದ ನಿಕೊಲಾಯ ಎಂಬವರನ್ನೂ ಆರಿಸಿಕೊಂಡು ಅಪೊಸ್ತಲರ ಮುಂದೆ ನಿಲ್ಲಿಸಿದರು.

ಅಪೊಸ್ತಲರ ಕೃತ್ಯಗಳು 7:55
ಆದರೆ ಅವನು ಪವಿತ್ರಾತ್ಮಭರಿತನಾಗಿ ಆಕಾಶದ ಕಡೆಗೆ ದೃಷ್ಟಿಸಿನೋಡಿ ದೇವರ ಪ್ರಭಾವವನ್ನೂ ದೇವರ ಬಲಗಡೆಯಲ್ಲಿ ನಿಂತಿದ್ದ ಯೇಸುವನ್ನೂ ಕಂಡು.

ಅಪೊಸ್ತಲರ ಕೃತ್ಯಗಳು 11:24
ಅವನು ಒಳ್ಳೆಯವನೂ ಪವಿತ್ರಾತ್ಮಭರಿತನೂ ನಂಬಿಕೆಯಿಂದ ತುಂಬಿದವನೂ ಆಗಿದ್ದನು.

ಅಪೊಸ್ತಲರ ಕೃತ್ಯಗಳು 13:9
ಆಗ ಪೌಲನೆನಿಸಿಕೊಳ್ಳುವ ಸೌಲನು ಪವಿತ್ರಾತ್ಮಭರಿತನಾಗಿ ಅವನನ್ನು ದೃಷ್ಟಿಸಿ ನೋಡಿ.

ಅಪೊಸ್ತಲರ ಕೃತ್ಯಗಳು 13:52
ಶಿಷ್ಯರಾದವರು ಸಂತೋಷ ಪೂರ್ಣರೂ ಪವಿತ್ರಾತ್ಮಭರಿತರೂ ಆದರು.

ಅಪೊಸ್ತಲನಾದ ಪೌಲನು ಅವನ ಪತ್ರಿಕೆಗಳಲ್ಲಿ ಆತ್ಮದಿಂದ ದೀಕ್ಷಾಸ್ನಾನ ಹೊಂದಿದ (ಆತ್ಮಭರಿತರಾದ) ವಿಶ್ವಾಸಿಗಳಿಗೆ ಅವರು ಆತ್ಮದೊಡನೆ ಭರಿತರಾಗಬೇಕು, ಆತ್ಮದಿಂದ ಜೀವಿಸಬೇಕು ಮತ್ತು ಆತ್ಮದಲ್ಲಿ ನಡೆಯಬೇಕೆಂದು ಬರೆಯುತ್ತಾನೆ.

ಎಫೆಸದವರಿಗೆ 5:18-21
18 ಮಧ್ಯಪಾನ ಮಾಡಿ ಮತ್ತರಾಗಬೇಡಿರಿ, ಅದರಿಂದ ಪಟಿಂಗತನವು ಹುಟ್ಟುತ್ತದೆ.

19 ಆದರೆ ಪವಿತ್ರಾತ್ಮಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮ ಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡುತ್ತಾ ಕೀರ್ತನೆ ಹಾಡುತ್ತಾ
20 ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರಮಾಡುತ್ತಾ ಕ್ರಿಸ್ತನಿಗೆ ಭಯಪಡುವವರಾಗಿದ್ದು
21 ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ.

ಗಲಾತ್ಯದವರಿಗೆ 5:16,22-25
16 ನಾನು ಹೇಳುವುದೇನಂದರೆ ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ ಆಗ ನೀವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವದಿಲ್ಲ.
22 ಆದರೆ ದೇವರಾತ್ಮನಿಂದ ಉಂಟಾಗುವ ಫಲವೇನಂದರೆ- ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ ಇಂಥವುಗಳೇ
23 ಇಂಥವುಗಳನ್ನು ಯಾವ / ಧರ್ಮಶಾಸ್ತ್ರವೂ ಆಕ್ಷೇಪಿಸುವದಿಲ್ಲ
24 ಕ್ರಿಸ್ತ ಯೇಸುವಿನವರು ತಮ್ಮ ಶರೀರ ಭಾವವನ್ನು ಅದರ ವಿಷಯಾಭಿಲಾಷೆ ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು
25 ನಾವು ಆತ್ಮನಿಂದ ಜೀವಿಸುತ್ತಿರಲಾಗಿ ಆತ್ಮ ನನ್ನನುಸರಿಸಿ ನಡೆಯೋಣ.

ನಾವು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದಾಗ ಆ ಕ್ಷಣದಲ್ಲೇ ನಾವು ಅಭಿಷೇಕಿಸಿದವರು ಮತ್ತು ತುಂಬಿಸಲ್ಪಟ್ಟವರಾಗುತ್ತೇವೆ. ಆತ್ಮಭರಿತರಾಗಿರುವುದು ವಿಶ್ವಾಸಿಗಳೊಳಗೆ ಪವಿತ್ರಾತ್ಮದ ಕಾರ್ಯದಲ್ಲಿ ಹೇಗೆ ಜೀವಿಸುತ್ತೇವೆ ಎಂಬುದರ ಮೇಲೆ ಪರಿಣಾಮ ಬೀರುತ್ತದೆ. ಇದು ನಮ್ಮ ನಡವಳಿಕೆ ಮತ್ತು ನಮ್ಮ ಸಂಬಂಧ ಅಭಿಷೇಕ ಹೊಂದಿದವರಾಗಿರುವುದು ನಮ್ಮ ಕೆಲಸದ ಮೇಲೆ ಪರಿಣಾಮ ಬೀರುವ, ಸೇವೆಗಾಗಿ ನಮ್ಮನ್ನು ಪವಿತ್ರಾತ್ಮನು ಅಧಿಕಾರಗೊಳಿಸುವ ಕಾರ್ಯದೊಡನೆ ಸಂಬಂಧ ಹೊಂದಿದೆ. ಆದ್ದರಿಂದ ಪವಿತ್ರಾತ್ಮದ ದೀಕ್ಷಾಸ್ನಾನವು ಒಂದು ತುಂಬಿಸುವಿಕೆ ಮತ್ತು ಅಭಿಷೇಕದ ಫಲಿತಾಂಶವಾಗಿದೆ ದೀಕ್ಷಾಸ್ನಾನ ಹೊಂದಿರುವುದು, ತುಂಬಿಸಲ್ಪಟ್ಟವರಾಗಿ ಮತ್ತು ಅಭಿಷೇಕ ಹೊಂದಿದವರಾಗಿವುದಾಗಿದೆ ಆದಾಗ್ಯೂ ಇವೆರಡನ್ನೂ ಒಂದು ಅರ್ಥದಲ್ಲಿ “ಸಕ್ರಿಯ” ವಾಗಿರಿಸಬೇಕೆಂದು ನಾವು ನೋಡುತ್ತೇವೆ.

ತುಂಬಿಸಲ್ಪಡುವುದು ಮತ್ತು ನಡೆಯುವುದು ಮತ್ತು ಆತ್ಮದಲ್ಲಿ ಜೀವಿಸುವುದು

ಮೇಲೆ ಕೊಡಲ್ಪಟ್ಟ ವಚನ ಭಾಗಗಳಿಂದ ನಾವು ನೋಡುವಾಗ, ನಾವು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದಾಗ ತುಂಬಿಸಲ್ಪಟ್ಟವರಾಗಿದ್ದಾಗಲೂ ನಾವು ತುಂಬಿದವರಾಗಿ ಇರಬೇಕು ಅಥವಾ ಆತ್ಮನಲ್ಲಿ ಪೂರ್ಣರಾಗಿ ಇರಬೇಕು ನಾವು ನಿರಂತರವಾಗಿ, ಪದೇ ಮತ್ತು ಪದೇ ಮತ್ತು ಪದೇ ಭರಿತರಾಗಿರುವುದು ಅಗತ್ಯವಾಗಿದೆ. ಇದು ಯಾಕೆಂದರೆ ಶಾರೀರಿಕ ಮತ್ತು ಆತ್ಮನ ನಡುವಿನ ದೃಢವಾದ ಹೋರಾಟದಿಂದ ಆಗಿದೆ (ಗಲಾತ್ಯದವರಿಗೆ 5:17) ಶಾರೀರಿಕವಾದದು ಮೇಲುಗ್ಯೆ ತೆಗೆದುಕೊಳ್ಳಲೂ ನಾನು ಅವಕಾಶ ಕೊಟ್ಟರೆ, ಆಮೇಲೆ ನಾನು ಆತ್ಮನ “ಕಡಿಮೆ ತುಂಬಿದವನಾಗುತ್ತೇನೆ” ಅದು ನನ್ನ ಮೇಲಿರುವ ಪವಿತ್ರಾತ್ಮನ

ಪ್ರಭಾವವು ನನ್ನ ಮೇಲೆ ಆ ಮಟ್ಟಕ್ಕೆ ಕ್ಷೀಣಿಸಿದೆ ಕಡಿಮೆಯಾಗಿದೆ. ಆದರೆ ನಾನು ಪವಿತ್ರಾತ್ಮದೊಡನೆ ಪೂರ್ಣವಾಗಿ ಇದ್ದರೆ, ಶಾರೀರಿಕವಾದದು ಅಧೀನತೆಯಲ್ಲಿರುತ್ತದೆ. ನಾವು ಆತ್ಮಭರಿತರಾಗಿ ಜೀವಿಸುವಾಗ "ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ" (ಗಲಾತ್ಯದವರಿಗೆ 5:16) ಅಥವಾ "ಆತ್ಮನಿಂದ ಜೀವಿಸುವವರಾಗಿರಿ" (ಗಲಾತ್ಯದವರಿಗೆ 5:25) ಎಂಬುದಾಗಿ ಪೌಲನು ನಮಗೆ ಹೇಳುವುದನ್ನು ಮಾಡುವವರಾಗಿದರುತ್ತೇವೆ. ಪವಿತ್ರಾತ್ಮಭರಿತನಾಗಿರುವ ವ್ಯಕ್ತಿಯು, ಜ್ಞಾನ, ನಂಬಿಕೆ, ಕೃತಜ್ಞತೆ, ಕರ್ತನಿಗೆ ಹಾಡುವುದು, ಸಮರ್ಪಣೆಯಲ್ಲಿ ನಡೆಯುವುದು. ಆತ್ಮನ ಫಲಗಳನ್ನು ತೋರ್ಪಡಿಸುವವರಾಗಿಯು ಸಹ (ಗಲಾತ್ಯದವರಿಗೆ 5:22-23) ಮತ್ತು ಶಾರೀರಿಕ ಪಾಪಮಯ ಅಭಿಲಾಷೆಗಳಿಂದ ಹೊರಬರುವುದರೊಡನೆ ನಡೆಯುವವನಾಗಿರುತ್ತಾನೆ. (ಗಲಾತ್ಯದವರಿಗೆ 5:16-24) ಪವಿತ್ರಾತ್ಮದೊಡನೆ ಭರಿತರಾಗಿರುವ ಕ್ರಮದಲ್ಲಿ ನಮ್ಮ ಹೃದಯಗಳನ್ನು ಶುದ್ಧವಾಗಿ ಮತ್ತು ಸ್ವತಂತ್ರವಾಗಿ ಇರಿಸುವುದು ಅಗತ್ಯವಾಗಿದೆ. ನಿಮ್ಮ ಪಾಪಗಳನ್ನು ಅರಿಕೆ ಮಾಡಿರಿ ಮತ್ತು 1ಯೋಹಾನ 1:7,9 ರ ಪ್ರಕಾರವಾಗಿ ತಕ್ಷಣವೇ ಆತನ ಶುದ್ಧೀಕರಣವನ್ನು ಪಡೆದುಕೊಳ್ಳಿರಿ ಮನನೊಂದವರಂತ ಅನ್ನಿಸಿದ ಕ್ಷಣವೇ ಕ್ಷಮಾಪಣೆ ಬಿಡುಗಡೆ ಮಾಡಿರಿ – ನಿಮ್ಮೆಲ್ಲವನ್ನೂ ಆತನಿಗೆ ಕೊಡಿರಿ. ಆತನನ್ನು ಸ್ವಾಗತಿಸಿರಿ. ಆತನೊಂದಿಗೆ ಅನ್ಯೋನ್ಯತೆಯಲ್ಲಿ ನೆಲೆಸಿರಿ, ಇದು ಆತ್ಮದಲ್ಲಿ ತುಂಬಿಸಲ್ಪಟ್ಟವರಾಗಿ, ಆತ್ಮದಲ್ಲಿ ನಡೆಯುವವರಾಗಿ ಮತ್ತು ಆತ್ಮದಲ್ಲಿ ಜೀವಿಸುವವರಾಗಿ "ಸಕ್ರಿಯವಾಗಿ" ನೆಲೆಗೊಂಡಿರಲು ಸಹಾಯ ಮಾಡುತ್ತದೆ.

ಅಭಿಷೇಕ ಹೊಂದಿದ

ನಾವು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದಾಗ ಪವಿತ್ರಾತ್ಮನಿಂದ ನಾವು ಅಭಿಷೇಕಿಸಲ್ಪಡುತ್ತೇವೆ. ಅಭಿಷೇಕ ಹೊಂದಿದವರಾಗಿರುವುದು, ನಮ್ಮ ಮೇಲೆ ಆತ್ಮವನ್ನು ಹೊಂದಿರುವುದು ನಮ್ಮ ಮೂಲಕವಾಗಿ ದೇವರು ಮಾಡಲು ಇಚ್ಛಿಸುವ ಕಾರ್ಯಗಳನ್ನು ಮಾಡಲೂ ನಮಗೆ ಬಲಕೊಡುವುದಾಗಿದೆ (ಲೂಕ 4:17-19 ಅಪೊಸ್ತಲರ ಕೃತ್ಯಗಳು 10:38) ಕ್ರಿಸ್ತನಲ್ಲಿ ವೈಯಕ್ತಿಕವಾಗಿ ಎಲ್ಲಾ ಸಮಯದಲ್ಲೂ "ಸಕ್ರಿಯ" ವಾಗಿರುವುದಿಲ್ಲ. ನಮ್ಮ ಮೇಲೆ ಪವಿತ್ರಾತ್ಮನು ಯಾವಾಗಲಾದರೂ ಚಲಿಸುವಾಗ ಆ ಒಂದು ಸಮಯದಲ್ಲಿ ಆತನು ಬಯಸುವ ಕಾರ್ಯವನ್ನು ಮಾಡಲೂ (ನೀನು ಮಾಡಬೇಕೆಂಬುದಾಗಿ ದೇವರು ಅಪೇಕ್ಷಿಸುವ ಎಲ್ಲದವರಲ್ಲೂ ಅಭಿಷೇಕವಿದೆ) ನಾವು ಅಭಿಷೇಕ ಹೊಂದಿದ್ದೇವೆ ಎಂಬುದಾಗಿ ಹೇಳಲು (ಅಭಿಷೇಕವು ""ಸಕ್ರಿಯವಾಗಿದೆ") ಆತನ ಬಲವನ್ನು ನಮ್ಮ ಮೇಲೆ ಬಿಡುಗಡೆಗೊಳಿಸುತ್ತಾನೆ. ಅಭಿಷೇಕವು ಒಬ್ಬ ವಿಶ್ವಾಸಿಯ ಮೂಲಕವಾಗಿ ಆತ್ಮನ ಬಲವು ತೋರ್ಪಡಿಸುವುದಾಗಿದೆ ಪವಿತ್ರಾತ್ಮನು ಇದನ್ನು ಪ್ರಾರಂಭಿಸುವ ಸಂದರ್ಭಗಳಿವೆ. ಆತನು ನಮ್ಮ ಮೇಲೆ ಚಲಿಸುತ್ತಾನೆ ಮತ್ತು ಆ ಮೇಲೆ ನಾವು ಕಾರ್ಯ ಮಾಡಲು ಪ್ರಾರಂಭಿಸಲ್ಪಡುವ ಸಮಯಗಳಿವೆ. ಪವಿತ್ರಾತ್ಮನ ವರಗಳು ಜನರಿಗೆ ಸೇವೆ ಸಲ್ಲಿಸುವ ಕ್ರಮದಲ್ಲಿ ಪವಿತ್ರಾತ್ಮನಿಂದ ತೋರ್ಪಡಿಸಿದ ಅಭಿಷೇಕದ ಮೂಲಕವಾಗಿ (ಬಲ) ಇವರು

ಸಂಪರ್ಕದಾರಿ (ಸಾಧನೆಗಳು) ಆಗಿವೆ ಅಭಿಷೇಕದ ವಿಭಿನ್ನ ಹಂತಗಳಿವೆ. ಇತರೆ ಸಮಯಗಳಿಗಿಂತ "ಅಧಿಕವಾಗಿ ಅಭಿಷೇಕ ಹೊಂದಿದ" ಸಮಯಗಳಿವೆ ತೋರ್ಪಡಿಸುವಂತಹ ಬಲದ ಮಟ್ಟವು ಆ ಕ್ಷಣದಲ್ಲಿ ಇರುವ ಮತ್ತು ಸಕ್ರಿಯವಾಗಿರುವ ಅಭಿಷೇಕಕ್ಕೆ ಅನುಪಾತದಲ್ಲಿರುತ್ತದೆ.

ನಾವು ನಿರಂತರವಾಗಿ ಆತ್ಮದೊಡನೆ ಭರಿತರಾಗಿರಬೇಕು. ಹಾಗೆಯೇ, ನಾವು ಸೇವೆಸಲ್ಲಿಸುವ ಪತಿ ಸಮಯದಲ್ಲಿ (ದೇವರು ಕರೆದಂತಹ ಕಾರ್ಯವನ್ನು ಮಾಡಲು) ನಾವು ಅಭಿಷೇಕದ ಅಧೀನತೆಯಲ್ಲಿ ಚಲಿಸಬೇಕು. ಆದುದರಿಂದ ಈ ಅರ್ಥದಲ್ಲಿ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನವು ಆರಂಭಿಕ ಮತ್ತು ಪುನರಾವರ್ತಿನೀಯವೆರಡು ಆಗಿರುತ್ತದೆ. ನಾವು ಒಮ್ಮೆ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದ್ದೇವು ಆದರೆ ಮತ್ತೆ ಮತ್ತೆ ಭರಿತರಾಗುತ್ತೇವೆ ಮತ್ತು ಅಭಿಷೇಕಿಸಲ್ಪಡುತ್ತೇವೆ.

ಮೇಲಿರುವ ಅಭಿಷೇಕ ಮತ್ತು ಒಳಗಿರುವ ಅಭಿಷೇಕ

"ಮೇಲಿರುವ ಅಭಿಷೇಕ" ಮತ್ತು "ಒಳಗಿರುವ ಅಭಿಷೇಕ" ಇವುಗಳಲ್ಲಿ ನಾವು ಗೊಂದಲಕ್ಕೊಳಗಾಗಬಾರದು. ಇದನ್ನು ಗಮನಿಸಿ. ನಮ್ಮ ಮೇಲಿರುವ ಅಭಿಷೇಕವು ಸೇವೆಗಾಗಿ ನಮಗೆ ಬಲ ನೀಡಲೂ ನಮ್ಮ ಮೇಲಿರುವ ಆತ್ಮವಾಗಿದೆ. ಒಳಗಿರುವಂತಹ ಅಭಿಷೇಕವು ಕ್ರಿಸ್ತನ ಸ್ವಾರೂಪ್ಯಕ್ಕೆ ರೂಪಾಂತರಗೊಳ್ಳಲು ಮತ್ತು ನಮ್ಮಲ್ಲಿ ಆತನ ನೆಲಗೊಂಡ ಕಾರ್ಯವನ್ನು ಕೊಂಡೊಯ್ಯುವ ಒಳಗಿರುವ ಆತ್ಮವಾಗಿದೆ. ಆದ್ದರಿಂದ 1ಯೋಹಾನ 2:20,27 ವಿಶ್ವಾಸಿಗಳ ಒಳಗಿರುವ (ಅಂದರೆ ಒಳಗಿರುವ ಅಭಿಷೇಕ) ಆತ್ಮನನ್ನು ಉಲ್ಲೇಖಿಸುತ್ತದೆ.

1 ಯೋಹಾನ 2:20,27
20 ನೀವು ಪವಿತ್ರನಾಗಿರುವಾತನಿಂದ ಅಭಿಷೇಕವನ್ನು ಹೊಂದಿದವರಾಗಿದ್ದು ಎಲ್ಲರೂ ತಿಳಿದವರಾಗಿದ್ದಿರಿ.
27 ಆದರೆ ಆತನಿಂದ ನೀವು ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿರುವದರಿಂದ ಯಾವನಾದರೂ ನಿಮಗೆ ಉಪದೇಶ ಮಾಡುವದು ಅವಶ್ಯವಿಲ್ಲ ಆತನು ಮಾಡಿದ ಅಭಿಷೇಕವು ಎಲ್ಲಾ ವಿಷಯಗಳಲ್ಲಿ ನಿಮಗೆ ಉಪದೇಶ ಮಾಡುವಂಥದಾಗಿದ್ದು ಸತ್ಯವಾಗಿದೆ, ಸುಳ್ಳಲ್ಲಿ ಅದು ನಿಮಗೆ ಉಪದೇಶ ಮಾಡಿದ ಪ್ರಕಾರ ಆತನಲ್ಲಿ ನೆಲೆಗೊಂಡಿರಿ.

4. ಆತ್ಮಿಕ ವರಗಳ ಸಂಬಂಧಪಟ್ಟದ್ದು

ನಾವು 1ಕೊರಿಂಥದವರಿಗೆ 12 ರಲ್ಲಿ ಆತ್ಮನ ವರಗಳನ್ನು ಪರಿಚಯಾತ್ಮಕವಾಗಿ ನೋಡುತ್ತೇವೆ. ಮತ್ತು ಕೊರಿಂಥದವರಿಗೆ ಬರೆದ ಪೌಲನ ಪತ್ರಿಕೆಯ ಹಿನ್ನಲೆಯನ್ನು ಸ್ವಲ್ಪವಾಗಿ ಅರ್ಥಮಾಡಿಕೊಳ್ಳುವುದರಿಂದ ನಾವು ಆರಂಭಿಸೋಣ.

ಪೌಲನ 2ನೇ ಸುವಾರ್ತಾ ಸೇವಾ ಪ್ರಯಾಣದಲ್ಲಿ (ಕ್ರಿ.ಶ. 49 ಕ್ರಿ.ಶ. 52) ಅಪೊಸ್ತಲನಾದ ಪೌಲನು 18 ತಿಂಗಳುಗಳು ಕೊರಿಂಥದಲ್ಲಿ ಕಳೆದನು (ಅಪೊಸ್ತಲರ ಕೃತ್ಯಗಳು 18:11)ಇದು ಒಂದು ಬಂದರು ನಗರ, ಎರಡು ಬಂದರುಗಳಿಂದ ಸೇವೆ ನಡೆಯುತ್ತಿತ್ತು ಮತ್ತು ಸುಮಾರು 2 ಲಕ್ಷ ಜನಸಂಖ್ಯೆಯನ್ನು ಹೊಂದಿದ "ಗ್ರೀಸನ ಆಭರಣ" ಎಂಬುದಾಗಿ ತಿಳಿದಿದ್ದ ಅಭಿವೃದ್ದಿ ಹೊಂದುತ್ತಿದ್ದಂತಹ ವಾಣಿಜ್ಯ ಕೇಂದ್ರವಾಗಿತ್ತು. ಕೊರಿಂಥ ಪಟ್ಟಣವು ಪ್ರೀತಿಯ ದೇವತೆ ಮತ್ತು 1000 ಪುರುಷರು ಮತ್ತು ಸ್ತ್ರೀಯರಾದ ದೇವಸ್ಥಾನದ ವೈಶ್ಯರನ್ನು ಹೊಂದಿದ್ದ ಅಫ್ರೋಡೈಟ್ ದೇವಾಲಯ ಹೊಂದಿತ್ತು. ಅನೈತಿಕತೆ ಮತ್ತು ಸಂತೋಷಕ್ಕಾಗಿ ಕೊರಿಂಥ ಖ್ಯಾತಿ ಎಂಬುದಾಗಿ ಎಲ್ಲರಿಗೂ ತಿಳಿದಿತ್ತು. ಯೆಹೂದಿ ವಿಶ್ವಾಸಿಗಳಾದ ಅಕ್ವಿಲನೂ ಮತ್ತು ಪ್ರಿಸ್ಕಿಲ್ಲಳೂ ರೋಮ ಚಕ್ರವರ್ತಿ ಕ್ಲಾಡಿಯಸ್ ಕ್ರಿ.ಶ.49 ಎಂಬುವನಿಂದ ಎಲ್ಲಾ ಯೆಹೂದ್ಯರ ರೋಮ್ ಅನ್ನು ಬಡಬೇಕೆಂಬುದಾಗಿ ಶಾಸನವನ್ನು ಹೊರಡಿಸಿದ್ದರಿಂದ ರೋಮ್ ನಿಂದ ಕೊರಿಂಥಗೆ ಬಂದಿದ್ದರು (ಅಪೊಸ್ತಲರ ಕೃತ್ಯಗಳು 18:1-3) ಅವರು ಪೌಲನೊಟ್ಟಿಗೆ ಗುಡಾರ ನಿರ್ಮಿಸುವ ಕೆಲಸ ಮಾಡಿಕೊಂಡು ಒಟ್ಟಾಗಿ ಕೊರಿಂಥದಲ್ಲಿ ಸೇವೆ ಮಾಡಿದ್ದರು ಪೌಲನಿಗೆ ಫಿಲಿಪ್ಪಿಯಿಂದ ಕಳುಹಿಸಿದ ಕೆಲವು ಹಣ ಸಹಾಯವನ್ನು ಪಡೆದುಕೊಂಡಿದ್ದನು (2ಕೊರಿಂಥದವರಿಗೆ 9:1-10, 2ಕೊರಿಂಥದವರಿಗೆ 11:6-10, ಫಿಲಿಪ್ಪಿಯವರಿಗೆ 4:15-16) ಸೀಲನೂ ಮತ್ತು ತಿಮೊಥೆಯನೂ ಮೆಕೆದೋನ್ಯದಿಂದ ಆಗಮಿಸಿದರು ಮತ್ತು ಪೌಲ, ಅಕ್ವಿಲ, ಪ್ರಿಸ್ಕಿಲ್ಲಳನ್ನು ಮತ್ತು ಕೊರಿಂಥದಲ್ಲಿ ಲೂಕನನ್ನು ಸೇರಿಕೊಂಡರು (ಅಪೊಸ್ತಲರ ಕೃತ್ಯಗಳು 18:5)

ಅತೀ ವೇಗವಾಗಿ ಆತ್ಮಭರಿತ ಆತ್ಮಭರಿತ ಸಭೆಯು ಬರೀ 18 ತಿಂಗಳಿನಲ್ಲಿ ಕೊರಿಂಥದಲ್ಲ ಸ್ಥಾಪಿಸಲ್ಪಟ್ಟಿತ್ತು. ಪೌಲನು ಯೇಸು ಕ್ರಿಸ್ತನ ಶಿಲುಬೆಯ ಕುರಿತಾದ, ಕರ್ತನ ಮೇಜಿನಲ್ಲಿ ಪಾಲು ಹೊಂದುವುದು, ಪವಿತ್ರಾತ್ಮದ ಬಲದ ಕುರಿತು ಅನೇಕ ವಿಷಯಗಳನ್ನು ಬೋಧಿಸಿದ್ದನು ಮತ್ತು ಆತ್ಮನ ವರಗಳನ್ನು ಮತ್ತು ಇತರೆ ಸತ್ಯಗಳನ್ನು ಎಲ್ಲರೂ ಅಭ್ಯಾಸಿಸುವಂತೆ ಮಾಡಿದ್ದನು.

ಈ ಒಂದು 18 ತಿಂಗಳ ಕೊನೆಯಲ್ಲಿ, ಪೌಲನೂ, ಅಕ್ವಿಲನೂ ಮತ್ತು ಪ್ರಿಸ್ಕಿಲ್ಲಳೂ ಕೊರಂಥವನ್ನು ಬಿಟ್ಟುಹೊದರು ಸ್ವಲ್ಪ ಸಮಯ ಕೆಂಖ್ರೆಯದಲ್ಲಿದ್ದು, ಆ ಮೇಲೆ ಅಲ್ಲಿಂದ

ಹೊರಟು ಎಫೆಸಕ್ಕೆ ಬಂದರು (ಅಪೊಸ್ತಲರ ಕೃತ್ಯಗಳು 18:18-19) ಪೌಲನು ಅಕ್ವಿಲ ಮತ್ತು ಪ್ರಿಸ್ಕಿಲ್ಲಳನ್ನು ಅಲ್ಲೆ ಬಿಟ್ಟು ಯೆರೂಸಲೇಮಿಗೆ ಹೋದನು. ಅಕ್ವಿಲನೂ ಮತ್ತು ಪ್ರಿಸ್ಕಿಲ್ಲಳೂ ಎಫೆಸದಲ್ಲಿ ಅಪೊಲ್ಲೋಸನನ್ನು ಸಂಧಿಸಿ ಅವನಿಗೆ ಕರ್ತನಾದ ಯೇಸುವಿನ ಕುರಿತು ವಿಷಯಗಳನ್ನು ಬೋದಿಸಿದರು. ಆನಂತರ ಅಪೊಲ್ಲೋಸನನ್ನು ಕೊರಿಂಥದಲ್ಲಿ ವಿಶ್ವಾಸಿಗಳೊಡನೆ ಸೇರಿಸಿಕೊಳ್ಳಲು ಶಿಫಾರಸ್ಸು ಮಾಡಿ ಕಳುಹಿಸಿಕೊಟ್ಟರು. ಕೊರಿಂಥದಲ್ಲಿನ ವಿಶ್ವಾಸಿಗಳಿಗೆ ಅಪೊಲ್ಲೋಸನು ದೊಡ್ಡ ಆಶೀರ್ವಾದವಾಗಿದ್ದನ್ನು (ಅಪೊಸ್ತಲರ ಕೃತ್ಯಗಳು 18:24-28)

ಪೌಲನ ಮೂರನೇ ಸುವಾರ್ತಾ ಪ್ರಯಾಣದಲ್ಲಿ (ಕ್ರಿ.ಶ. 53 ಕ್ರಿ.ಶ 58) ಪೌಲನು ಮೂರು ವರ್ಷಗಳು ಎಫೆಸದಲ್ಲಿ ಕಳೆದನು ಅ ಒಂದು ಸಮಯದ ಅವದಿಯಲ್ಲಿ ಕೊರಿಂಥದಿಂದ ಕೆಲವು ಜನರು 'ಖ್ಲೋಯೆಯ ಮನೆಯವರನ್ನು' ಒಳಗೊಂಡು (1ಕೊರಿಂಥದವರಿಗೆ 1:11) ಪೌಲನನ್ನು ಎಫೆಸದಲ್ಲಿ ಸಂಧಿಸಿದರು ಮತ್ತು ಕೊರಿಂಥ ಸಭೆಯಲ್ಲಿನ ಸಮಸ್ಯೆಗಳ ಕುರಿತು ತಿಳಿಸಿದರು "ಸ್ತೆಫನನೂ, ಫೊರ್ತುನಾತನೂ, ಅಖಾಯಿಕನೂ (1ಕೊರಿಂಥದವರಿಗೆ 16:17) ಕೊರಿಂಥದಿಂದ ಬಂದಂತಹ ಕೆಲವು ಜನರಾಗಿದ್ದರು ಎಫೆಸದಿಂದ ಪೌಲನು ಕೊರಿಂಥ ಸಭೆಯ ಸಮಸ್ಯೆಗಳನ್ನು ಪರಿಹರಿಸಲು 1ಕೊರಿಂಥದವರಿಗೆ ಪತ್ರಿಕೆ ಬರದನು ಕೊರಿಂಥದಿಂದ ಬಂದಿದ್ದ ಜನರು ಇಲ್ಲವೆ ಅಥವಾ ತೀತನು ಕೊರಿಂಥಕ್ಕೆ ಪೌಲನ ಮೊದಲ ಪತ್ರಿಕೆಯನ್ನು ತೆಗೆದುಕೊಂಡು ಹೋದರ ಪೌಲನು ಕೊರಿಂಥದಲ್ಲಿನ ಸಭೆಯ ವ್ಯವಹಾರಗಳನ್ನು ನೋಡಲೂ ತೀತನನ್ನು ಕಳುಹಿಸಿದ್ದನು"

ಪೌಲನು ಕೊರಿಂಥದವರಿಗೆ ಬರೆದ ಮೊದಲ ಪತ್ರಿಕೆಯಲ್ಲಿ ಕೊರಿಂಥಸಭೆಯ ಉದ್ದೇಶಿಸಲಾದ ಸಮಸ್ಯೆಗಳು ಯಾವುವೆಂದರೆ:

- ವಿಭಾಗ, ಜಗಳ – ಜನರು ಪೌಲನ, ಪೇತ್ರನ ಅಪೊಲ್ಲೋಸನ ಪರಗಳನ್ನು ತೆಗೆದುಕೊಂಡಿದ್ದು (ಅಧ್ಯಾಯ 1-4)
- ಲೈಂಗಿಕ ಅನೈತಿಕತೆ (ಅಧ್ಯಾಯ 5-6)
- ಆಂತರಿಕ ಕಲಹಗಳು (ಅಧ್ಯಾಯ 6)
- ಮದುವೆ (ಅಧ್ಯಾಯ 7)
- ವಿಗ್ರಹಗಳಿಗೆ ಅರ್ಪಿಸಿದ ಆಹಾರ (ಅಧ್ಯಾಯ 8,10)

ಆ ಮೇಲೆ ಪೌಲನು ಸಭೆಯಾಗಿ ಸೇರಿ ಬರುವುದದರಲ್ಲಿ ಕ್ರಮವಾದ ನಡವಳಿಕೆಯ ಸಂಬಂಧಿತ ಸಮಸ್ಯಗಳನ್ನು ಉದ್ದೇಶಿಸಿ ಹೇಳುತ್ತಾನೆ ಅಧ್ಯಾಯ 11-14 ರಲ್ಲಿ.

- ತಲೆ ಮುಚ್ಚುವುದು (ಅಧ್ಯಾಯ 11:1-16)
- ಕರ್ತನ ಭೋಜನದಲ್ಲಿ ಭಾಗವಹಿಸುವುದು (ಅಧ್ಯಾಯ 12-14)
- ಆತ್ಮಿಕ ವರಗಳನ್ನು ಚಲಾಯಿಸುವುದು (ಅಧ್ಯಾಯ 12-14)

ಪೌಲನು ಆಮೇಲೆ ಪುನರುತ್ಥಾನ ಮತ್ತು ಸುವಾರ್ತೆಯ ಕುರಿತ ಸತ್ಯವನ್ನು ಪುನಃ ದೃಢಿಕರಿಸುತ್ತಾನೆ (ಅಧ್ಯಾಯ 15) ಮುಕ್ತಾಯದಲ್ಲಿ, ವಿಶ್ವಾಸಿಗಳಿಗೋಸ್ಕರ ಕೂಡಿಸುವುದನ್ನು ಕುರಿತು ಮನವಿ ಮಾಡುತ್ತಾನೆ (ಅಪೊಸ್ತಲರ ಕೃತ್ಯಗಳು 16) ಇದು ಪುನಃ ಅವರ ಸಾಮಾನ್ಯ ಸೇರಿಬರುವಿಕೆಯಲ್ಲಿ ಜರುಗಿತ್ತು.

ಆದ್ದರಿಂದ 1ಕೊರಿಂಥದವರಿಗೆ 12 ರಿಂದ 14 ಆತ್ಮನ ವರಗಳನ್ನು ಅಭ್ಯಾಸಿಸುವುದರ ಉದ್ದೇಶಿಸಲ್ಪಟ್ಟದ್ದಾಗಿದೆ, ಸ್ಥಳಿಯ ಸಭೆಯ ಸೇರಿಬರುವಿಕೆಯ ಸನ್ನಿವೇಶದಲ್ಲಿ ಆತ್ಮನ ವರಗಳ ಹೇಗೆ ಅಭ್ಯಾಸಿಸಲ್ಪಡಬೇಕು ಮತ್ತು ಓದಬೇಕು ಹೇಗಾದರೂ ಇದು ಸ್ಥಳೀಯ ಸಭೆಯ ಸೇರಿಬರುವಿಕೆಯಲ್ಲಿ ಮಾತ್ರವೇ ಆತ್ಮನ ವರಗಳು ತೋರ್ಪಡಿಸಲ್ಪಡುತ್ತವೆ ಎಂಬ ಸೂಚನೆಯಲ್ಲಿ ಯಾಕೆಂದರೆ ಪವಿತ್ರಾತ್ಮನು ಯಾವಾಗಲೂ ಇರುವಾತನು ಮತ್ತು ಆತನ ಚಿತ್ತದಂತೆ ಎಲ್ಲಿ ಬೇಕಾದರೂ, ಯಾವುದೇ ಸಮಯದಲ್ಲಿ ವಿಶ್ವಾಸಿಗಳ ಮೂಲಕ ತನ್ನನ್ನೇ ತೋರ್ಪಡಿಸಬಹುದು.

ಕೊರಿಂಥ ಸಭೆಯ ಸೇರಿಬರುವಿಕೆ

ಪೌಲನು ಪತ್ರಿಕೆಗಳಲ್ಲಿ ಕೊರಿಂಥ ಸಭೆಯ ಆತ್ಮಿಕ ಜೀವಿತದ ಮೌಲ್ಯನಮಾಪನ ನಾವು ನೋಡುವುದು ಸಾಕಷ್ಟು ಆಸಕ್ತಿಕರವಾಗಿದೆ. ಅವರು ಸ್ಪಷ್ಟವಾದ ಸಮಸ್ಯೆಗಳನ್ನು ಹೊಂದಿದ್ದರೂ, ಅವರ ನ್ಯೂನತೆಗಳ ಹೊರತಾಗಿಯೂ ಅವರು ಆತ್ಮನ ಕಾರ್ಯದ ವಿಷಯದಲ್ಲಿ ಬಹಳಷ್ಟು ಅನುಭವಿಷುತ್ತಿದ್ದರು. ಕೆಲವು ಮುಖ್ಯಾಂಶಗಳು ಇಲ್ಲಿವೆ:

- ಪೌಲನು “ಎಲ್ಲಾ ನುಡಿಯಲ್ಲಿಯೂ ಎಲ್ಲಾ ತಿಳುವಳಿಕೆ ಯಲ್ಲಿಯೂ ಆತನಲ್ಲಿ ಸಮೃದ್ಧಿ ಹೊಂದಿದವರಾಗಿದ್ದೀರಿ” (1ಕೊರಿಂಥದವರಿಗೆ 1:5) ಅವರು ಉಚ್ಚಾರಣ ವರಗಳನ್ನು ಹೊಂದಿದ್ದರು ಎಂಬುದನ್ನು ಸೂಚಿಸುತ್ತದೆ (ಅನ್ಯಭಾಷೆಗಳು, ಅನ್ಯಭಾಷೆಗಳ ಅರ್ಥವಿವರಣೆ ಮತ್ತು ಪ್ರವಾದನೆ) ಮತ್ತು ಪ್ರಕಟನೆಯ ವರಗಳು (ಜ್ಞಾನದ ವಾಕ್ಯ, ವಿವೇಕದ ವಾಕ್ಯ, ಗ್ರಹಿಕೆಯ ಆತ್ಮಗಳು) ಸಮೃದ್ಧಿಯಾಗಿ ಕಾರ್ಯರೂಪದಲ್ಲಿದ್ದವು ಎಂಬುದಾಗಿ ಪೌಲನು ವ್ಯಾಖ್ಯಾನಿಸುತ್ತಾನೆ.

● ಪೌಲನು ಹೀಗೆ ವ್ಯಾಖ್ಯಾನಿಸುತ್ತಾನೆ “ನೀವು ಯಾವ ಕೃಪಾವರದಲ್ಲಿಯೂ ಕೊರತೆಯಿಲ್ಲದವರಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಇದ್ದೀರಿ” (1ಕೊರಿಂಥದವರಿಗೆ 1:7) ಇದರ ಅರ್ಥವು ಅವರ ಮಧ್ಯದಲ್ಲಿ ಉಚಿತವಾಗಿ ಕಾರ್ಯಗತಗೊಳಿಸಲೂ ಅವರು ಆತ್ಮನ ವರಗಳನ್ನು ಹೊಂದಿದ್ದರು.

● ಅವರೆಲ್ಲರೂ ಒಟ್ಟಾಗಿ ಸೇರಿ ಬರುವಾಗೆಲ್ಲಾ ದೇವರ ಬಲವನ್ನು ಅವರು ಪ್ರದರ್ಶಿಸುವ ಸೂಚನೆಯಂತೆ ಅವರ ಕೂಡಿಬರುವಿಕೆಯಲ್ಲಿ ಕರ್ತನ ಬಲವು ಅಲ್ಲಿರುತ್ತಿತ್ತು (1ಕೊರಿಂಥದವರಿಗೆ 5:5) ಎಂಬುದಾಗಿ ಪೌಲನು ವ್ಯಾಖ್ಯಾನಿಸುತ್ತಾನೆ.

● ಕೊರಿಂಥದವರು “ಆತ್ಮಿಕ ವರಗಳಿಗಾಗಿ ಉತ್ಸಾಹಭರಿತರಾಗಿದ್ದರು” (1ಕೊರಿಂಥದವರಿಗೆ 14:12) ಆತ್ಮನ ವರಗಳಿಗಾಗಿ ಪ್ರತಿಯೊಬ್ಬರು ಭಾವೋದ್ರಿಕ್ತರಾಗಿರುವಂತಹ ಒಂದು ಸ್ಥಳೀಯ ಸಭಿಕರನ್ನು ಊಹಿಸಿಕೊಳ್ಳಿರಿ.

● ಅವರು ಅನ್ಯಭಾಷೆಯಲ್ಲಿ ಮಾತನಾಡಲೂ ಬಹಳ ಕಾತರದಿಂದ ಇದ್ದರು ಎಂಬುದಾಗಿ ಪೌಲನು ಗುರ್ತಿಸುತ್ತಾನೆ ಮತ್ತು “ನಾನು ನಿಮ್ಮೆಲ್ಲರಿಗಿತಲ್ಲೂ ಹೆಚ್ಚಾಗಿ ವಾಣಿಗಳನ್ನಾಡುತ್ತೇನೆಂದು ದೇವರನ್ನು ಕೊಂಡಾಡುತ್ತೇನೆ.” (1ಕೊರಿಂಥದವರಿಗೆ 14:18) ಎಂಬುದಾಗಿ ಅವರು ತಿಳಿಯುವಂತೆ ಮಾಡುತ್ತಾನೆ.

● ಅವರು ಒಟ್ಟಾಗಿ ಸೇರಿಬರುವಾಗ, ಅವರ ಆತ್ಮಿಕ ವರಗಳ ಮೂಲಕ ಪ್ರತಿಯೊಬ್ಬನು ಏನಾದರೊಂದನ್ನು ಕೊಡಲು ಮತ್ತು ಸೇವೆ ಮಾಡಲೂ ಸೇರಿಬರುತ್ತಿದ್ದರು. ಪೌಲನು ಹೀಗೆ ವ್ಯಾಖ್ಯಾನಿಸುತ್ತಾನೆ: “ಹಾಗಾದರೇನು, ಸಹೋದರರೇ ನೀವು ಕೂಡಿಬಂದಿರುವಾಗ ಒಬ್ಬನು ಹಾಡುವದೂ, ಒಬ್ಬನು ಉಪದೇಶಮಾಡುವದೂ, ಒಬ್ಬನು ತನಗೆ ಪ್ರಕಟವಾದದ್ದನ್ನು ತಿಳಿಸುವದೂ, ಒಬ್ಬನು ವಾಣಿಯನ್ನಾಡುವದೂ, ಒಬ್ಬನು ಅದರ ಅರ್ಥವನ್ನು ಹೇಳುವದೂ ಉಂಟಷ್ಟೆ. ನೀವು ಏನೂ ನಡಿಸಿದರೂ ಭಕ್ತಿವೃದ್ಧಿಗಾಗಿಯೇ ನಡಿಸಿರಿ” (1ಕೊರಿಂಥದವರಿಗೆ 14:26) ಜನರು ಇನ್ನೊಬ್ಬನನ್ನು ಆಶೀರ್ವದಿಸುವ ಅವಕಾಶಕ್ಕಾಗಿ ಕಾದು ಬಂದಿರುವ ಅಂತಹ ಒಂದು ಸಭೆಯ ಕೂಡಿಬರುವಿಕೆಯನ್ನು ಊಹಿಸಿಕೊಳ್ಳಿರಿ.

ಕೇವಲ 18 ತಿಂಗಳಲ್ಲಿ!

ಕೊರಿಂಥ ಸಭೆಯು ಹೇಗೆ ಅಂತಹ ಒಂದ ಆತ್ಮಿಕ ಸ್ಪಂದಕ ಸಭೆಯಾಗಿ ಕಂಡು ಬಂದಿತು, ಅಂತಹ ಸಮೃದ್ಧಿಯಾದ ಕಾರ್ಯಚರಣೆಯಲ್ಲಿ ಆತ್ಮನ ವರಗಳನ್ನು ಹೊಂದಿದಂತಹ ದೇವರ ಬಲವನ್ನು ಅನುಭವಿಸುವ ಮತ್ತು ಕೇವಲ 18 ತಿಂಗಳುಗಳಲ್ಲಿ ಆತ್ಮಿಕ ತೋರ್ಪಡಿಸುವಿಕೆಗಳ ಕುರಿತ ಬಹಳ ಅನುಕಂಪವುಳ್ಳ ಒಂದು ಸಮುದಾಯವಾಗಿ ಕಂಡುಬಂದಿತು? ಇದಕ್ಕೆ ಕೊಡುಗೆ ನೀಡಿದ ಎರಡು ಪ್ರಾಮುಖ್ಯ ಅಂಶಗಳನ್ನು ನಾವು ನೋಡಬಹುದು.

ಪೌಲನ ಪ್ರಸಂಗ ಮತ್ತು ಅಪೊಸ್ತಲತ್ವದ ಸೇವೆಯು ದೇವರ ಬಲವನ್ನು ಪ್ರದರ್ಶಿಸಿತು.

1 ಕೊರಿಂಥದವರಿಗೆ 2:4-5
4-5 ನಿಮ್ಮ ನಂಬಿಕೆಯು ಮಾನುಷಜ್ಞಾನವನ್ನು ಆಧಾರ ಮಾಡಿಕೊಳ್ಳದೆ ದೇವರ ಶಕ್ತಿಯನ್ನು ಆಧಾರ ಮಾಡಿಕೊಂಡಿರಬೇಕೆಂದು ನನ್ನ ಬೋಧನೆಯಲ್ಲಿಯೂ ಪ್ರಸಂಗದಲ್ಲಿಯೂ ಮನವೊಲಿಸುವ ಜ್ಞಾನ ವಾಕ್ಯಗಳನ್ನು ನಾನು ಪ್ರಯೋಗಿಸದೆ ದೇವರಾತ್ಮನ ಬಲವನ್ನು ತೋರ್ಪಡಿಸುವ ವಾಕ್ಯಗಳನ್ನೇ ಪ್ರಯೋಗಿಸಿದೆನು.

2 ಕೊರಿಂಥದವರಿಗೆ 12:12
ಹಿಂಸೆಯನ್ನು ಸ್ಥಿರಚಿತ್ತದಿಂದ ತಾಳಿಕೊಳ್ಳುವದರಲ್ಲಿಯೂ ಸೂಚಕ ಕಾರ್ಯಗಳನ್ನೂ ಅದ್ಭುತಗಳನ್ನೂ ಮಹತ್ಕಾರ್ಯಗಳನ್ನೂ ನಡಿಸಿದ್ದರಲ್ಲಿಯೂ ಅಪೊಸ್ತಲನಿಗೆ ಇರತಕ್ಕ ಲಕ್ಷಣಗಳು ನಿಮ್ಮ ಮಧ್ಯದಲ್ಲಿ ತೋರಿದವು.

ದೇವರ ಬಲವು ಪ್ರದರ್ಶಿಸಿದ್ದನ್ನು ಅವರು ನೋಡಿದರು. ಪೌಲನು ಆತ್ಮನ ಕಾರ್ಯಗಳ ಕುರಿತು ಅವರಿಗೆ ಬೋಧಿಸಿದನು ಮತ್ತು ಪ್ರಸಂಗಿಸಿದನು ಕೊರಿಂಥದಲ್ಲಿನ ವಿಶ್ವಾಸಿಗಳು ವಿಗ್ರಹಾರಾಧನೆ ಮತ್ತು ಪಾಪಯುಕ್ತ ಜೀವಿತಗಳಿಂದ ಸುಮ್ಮನೇ ಹೊರ ಬಂದರು, ಸುಮ್ಮನೆ ಅದರತ್ತ ಹೆಜ್ಜೆ ಹಾಕಿದರು ಮತ್ತು ಅವರು ಕಂಡದ್ದರಲ್ಲಿ ಕಾರ್ಯನಿರ್ವಹಿಸಲು ಪ್ರಾರಂಭಿಸಿದರು. ಅವರ ಮಧ್ಯದಲ್ಲಿ ದೇವರು ಮಾಡಿದ್ದನ್ನು "ಕ್ರಿಸ್ತ ಯೇಸುವಿನಲ್ಲಿ ದೇವರು ನಿಮಗೆ ಅನುಗ್ರಹಿಸಿದ ಕೃಪೆಯ ನಿಮಿತ್ತ" (1ಕೊರಿಂಥದವರಿಗೆ 1:4) ಎಂಬುದಾಗಿ ಪೌಲನು ವ್ಯಾಖ್ಯಾನಿಸುತ್ತಾನೆ ನಾವು ಅಂತಹ ಬಲಯುತ ಆತ್ಮಭರಿತ ಸ್ಥಳೀಯ ಸಭೆಯ ಸಮುದಾಯಗಳನ್ನು ಎಬ್ಬಿಸಲು ಬಯಸಿದರೆ ಹೀಗೆ ನಾವುಗಳು ಸೇವೆ ಮಾಡಬೇಕು.

ದೇವರ ಆತ್ಮನ ಚಲನೆ – ಸುರಿಸುವಿಕೆಯ ಒಂದು ಋತು.

ಕೊರಿಂಥದ ಸಭೆಯು ಸುಮಾರು ಕ್ರಿ.ಶ.49-52 ರಲ್ಲಿ ಅದು ಪಂಚಾಶತ್ತಮ ದಿನದ ನಂತರ ಸುಮಾರು 20 ವರ್ಷಗಳ ಬಳಿಕ ಸ್ಥಾಪಿಸಲ್ಪಟ್ಟಿತ್ತು (ಪಂಚಾಶತ್ತಮ ದಿನವು ಕಿ.ಶ. 30 ರಲ್ಲಿ ಜರುಗಿತು ಎಂಬುದನ್ನು ನಾವು ಪರಿಗಣಿಸಿದರೆ) ಇದು ಒಂದು ದೇವರ ಆತ್ಮನ ಸುರಿಸುವಿಕೆಯ ಅಸಾಮಾನ್ಯವಾದ ಒಂದು ಸಮಯವಾಗಿತ್ತು. ಅಪೊಸ್ತಲನಾದ ಪೌಲನು ಸ್ವತಃ ಈ ಬಲವಾದ ದೇವರ ಆತ್ಮನ ಚಲನೆಯನ್ನು ಸಾಗಿಸುವವನಾಗಿದ್ದನು.

ಈಗ 1ಕೊರಿಂಥದವರಿಗೆ 12 ರಲ್ಲಿನ ಆತ್ಮನ ವರಗಳ ಕುರಿತಾದ ನಮ್ಮ ಮುಖ್ಯ ವಚನಭಾಗವನ್ನು ಪರೀಕ್ಷಿಸೋಣ.

1 ಕೊರಿಂಥದವರಿಗೆ 12:1-11
1 ಸಹೋದರರೇ, ಪವಿತ್ರಾತ್ಮದಿಂದುಂಟಾಗುವ ವರಗಳನ್ನು ಕುರಿತು ನಿಮಗೆ ತಿಳಿಯದಿರಬಾರದೆಂದು ಅಪೇಕ್ಷಿಸುತ್ತೇನೆ.
2 ನೀವು ಅಜ್ಞಾನಿಗಳಾಗಿದ್ದಾಗ ನಿಮಗೆ ಪ್ರೇರಣೆಯಾದ ಹಾಗೆ ಮೂಕ ವಿಗ್ರಹಗಳ ಬಳಿಗೆ ಹೋಗುತ್ತಿದ್ದಿರೆಂದು ಬಲ್ಲಿರಿ
3 ಹೀಗಿರುವುದರಿಂದ ನಾನು ನಿಮಗೆ ತಿಳಿಸುವದನ್ನು ಕೇಳಿರಿ ದೇವರಾತ್ಮನ ಪ್ರೇರಣೆಯಿಂದ ಮಾತಾಡುವ ಯಾವ ಮನುಷ್ಯನಾದರೂ ಯೇಸುವನ್ನು ಶಾಪಗ್ರಸ್ತನೆಂದು ಹೇಳುವದಿಲ್ಲ ಮತ್ತು ಪವಿತ್ರಾತ್ಮನ ಪ್ರೇರಣೆಯಿಂದಲೇ ಹೊರತು ಯಾವ ಮನುಷ್ಯನಾದರೂ ಯೇಸುವನ್ನು ಕರ್ತನೆಂದು ಹೇಳಲಾರನು.
4 ವರಗಳಲ್ಲಿ ಬೇರೆ ಬೇರೆ ವಿಧಗಳುಂಟು ದೇವರಾತ್ಮನು ಒಬ್ಬನೇ
5 ಸೇವೆಗಳಲ್ಲಿ ಬೇರೆ ಬೇರೆ ವಿದಗಳುಂಟು ಕರ್ತನು ಒಬ್ಬನೇ
6 ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು ಸರ್ವರಲ್ಲಿಯೂ ಸರ್ವಕಾರ್ಯಗಳನ್ನು ಸಾಧಿಸುವ ದೇವರು ಒಬ್ಬನೇ
7 ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟವೆ.
8 ಒಬ್ಬನಿಗೆ ದೇವರಾತ್ಮನ ಮೂಲಕ ಜ್ಞಾನ ವಾಕ್ಯವು ಒಬ್ಬನಿಗೆ ಆ ಆತ್ಮನಿಗೆ ಅನುಗುಣವಾಗಿ ವಿದ್ಯಾವಾಕ್ಯವು
9 ಒಬ್ಬನಿಗೆ ಆ ಆತ್ಮನಿಂದಲೇ ನಂಬಿಕೆಯು, ಒಬ್ಬನಿಗೆ ಆ ಒಬ್ಬ ಆತ್ಮನಿಂದಲೇ ನಾನಾ ರೋಗಗಳನ್ನು ವಾಸಿಮಾಡುವ ವರವು,
10 ಒಬ್ಬನಿಗೆ ಮಹತ್ತುಗಳನ್ನು ಮಾಡುವ ವರವು, ಒಬ್ಬನಿಗೆ ಪ್ರವಾದನೆಯ ವರವು, ಒಬ್ಬನಿಗೆ ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವ ವರವು, ಒಬ್ಬನಿಗೆ ವಿವಿಧ ವಾಣಿಗಳನ್ನಾಡುವ ವರವು, ಒಬ್ಬನಿಗೆ ವಾಣಿಗಳ ಅರ್ಥವನ್ನು ಹೇಳುವ ವರವು ಕೊಡಲ್ಪಡುತ್ತವೆ.
11 ಈ ವರಗಳನ್ನೆಲ್ಲಾ ಆ ಒಬ್ಬ ಆತ್ಮನೇ ತನ್ನ ಚಿತ್ತಕ್ಕೆ ಬಂದ ಹಾಗೆ ಒಬ್ಬೊಬ್ಬನಿಗೆ ಹಂಚಿಕೊಟ್ಟು ನಡಿಸುತ್ತಾನೆ.

1 ಕೊರಿಂಥದವರಿಗೆ 12:1
ಸಹೋದರರೇ ಪವಿತ್ರಾತ್ಮದಿಂದುಂಟಾಗುವ ವರಗಳನ್ನು ಕುರಿತು ನಿಮಗೆ ತಿಳಿಯದಿರಬಾರದೆಂದು ಅಪೇಕ್ಷಿಸುತ್ತೇನೆ.

“ಆತ್ಮೀಕ” ಎಂಬ ಪದವು (ಗ್ರೀಕ್‌ನಲ್ಲಿ ನ್ಯೂಮ್ಯಾಟಿಕೋಸ್) “ಅಲೌಕಿಕ” ’ಅತ್ಯದ್ಭುತಕರ’ ಎಂಬುದಾಗಿ ಅರ್ಥ ಆದ್ದರಿಂದ ನಾವು ಅಪ್ರಾಕೃತ ವರಗಳ ಕುರಿತು ಮಾತಾಡುತ್ತಿದ್ದೇವೆ. ಈ ವರಗಳು ನೈಸರ್ಗಿಕವಾಗಿ ಸ್ವಾಧೀನಪಡಿಸಿಕೊಳ್ಳಲಾಗುವುದಿಲ್ಲ. ಉದಾಹರಣೆಗೆ, ಗುಣಪಡಿಸುವ ವರಗಳು ಒಂದು ವೈದಕೀಯ ವೈದನಲ್ಲ, ಜ್ಞಾನ ವಾಕ್ಯದ ವರವು ಪಿ.ಹೆಚ್.ಡಿ. ಪದವಿ ಸಂಪಾಧಿಸುವ ಮೂಲಕವಾಗಿ ಅಧಿಕವಾದ ಜ್ಞಾನ ಹೊಂದುವುದಲ್ಲ. ಅನ್ಯಭಾಷೆಯ ವರವು ಅನೇಕ ಭಾಷೆಗಳನ್ನು ಕಲಿಯುವ ಸಾಮರ್ಥ್ಯ ಮತ್ತು ಮಾತನಾಡುವುದಲ್ಲ. ಪವಿತ್ರಾತ್ಮದಿಂದ ನಮಗೆ ಕೊಡಲ್ಪಟ್ಟ ಅಪ್ರಾಕೃತ ವರಗಳನ್ನು ಪೌಲನು ಉಲ್ಲೇಖಿಸಿದ್ದಾನೆ.

ಇಂತಹ ಆತ್ಮಿಕ ವರಗಳನ್ನು ನಾವು ತಿಳಯಬೇಕು ಮತ್ತು ಅರ್ಥಮಾಡಿಕೊಳ್ಳಬೇಕೆಂದು ದೇವರು ಅಪೇಕ್ಷಿಸುತ್ತಾನೆ.

1 ಕೊರಿಂಥದವರಿಗೆ 12:2
ನೀವು ಅಜ್ಞಾನಿಗಳಾಗಿದ್ದಾಗ ನಿಮಗೆ ಪ್ರೇರಣೆಯಾದ ಹಾಗೆ ಮೂಕ ವಿಗ್ರಹಗಳ ಬಳಿಗೆ ಹೋಗುತ್ತಿದ್ದರೆಂದು ಬಲ್ಲಿರಿ.

ವಿಗ್ರಹಾರಾಧನೆಯ ಒಂದು ಜೀವಿತದಿಂದ ಹೊರಬಂದಂತಹ ಅವರ ಹಿನ್ನಲೆಯ ಕುರಿತು ಕೊರಿಂಥದಲ್ಲಿನ ವಿಶ್ವಾಸಿಗಳಿಗೆ ಪೌಲನು ಜ್ಞಾಪಿಸುತ್ತಾನೆ. ಇಲ್ಲಿರುವಂತಹ ಮಹತ್ವ "ಮೂಕ" ಇದರ ಮೇಲಿನದಾಗಿದೆ (ಇದರ ಅರ್ಥ ಧ್ವನಿರಹಿತ) ಈ ವಿಗ್ರಹಗಳು ಮಾತನಾಡಲಿಲ್ಲ ಅಥವಾ ತಮ್ಮನ್ನು ತಾವೇ ವ್ಯಕ್ತಿಪಡಿಸಲಿಲ್ಲ ಇದಕ್ಕೆ ವ್ಯತಿರಿಕ್ತವಾಗಿ ಮಾತನಾಡುವ, ಪ್ರಕಟಿಸುವ ಆತ್ಮನ ವರಗಳ ಮೂಲಕವಾಗಿ ತನ್ನನ್ನು ತೋರ್ಪಡಿಸುವ ಮತ್ತು ವ್ಯಕ್ತಪಡಿಸುವ ಜೀವಿಸುವ ದೇವರನ್ನು ನಾವು ಆರಾಧಿಸುತ್ತೇವೆ.

1 ಕೊರಿಂಥದವರಿಗೆ 12:3
ಹೀಗಿರುವದರಿಂದ ನಾನು ನಿಮಗೆ ತಿಳಿಸುವದನ್ನು ಕೇಳಿರಿ ದೇವರಾತ್ಮನ ಪ್ರೇರಣೆಯಿಂದ ಮಾತಾಡುವ ಯಾವ ಮನುಷ್ಯನಾದರೂ ಯೇಸುವನ್ನು ಶಾಪಗ್ರಸ್ತನೆಂದು ಹೇಳುವದಿಲ್ಲ ಮತ್ತು ಪವಿತ್ರಾತ್ಮನ ಪ್ರೇರಣೆಯಿಂದಲೇ ಹೊರತು ಯಾವ ಮನುಷ್ಯನಾದರೂ ಯೇಸುವನ್ನು ಕರ್ತನೆಂದು ಹೇಳಲಾರನು.

ಪವಿತ್ರಾತ್ಮನು ಜನರು (ವಿಶ್ವಾಸಿಗಳ) ಮೂಲಕವಾಗಿ ತನ್ನನ್ನು ವ್ಯಕ್ತಪಡಿಸಿಕೊಳ್ಳುತ್ತಾನೆ. ಪವಿತ್ರಾತ್ಮನ ಕಾರ್ಯನಿರತನಾಗಿದ್ದಾನೆ ಎಂಬುದಾಗಿ ನಮಗೆ ಗೊತ್ತು ಯಾಕೆಂದರೆ ಒಬ್ಬ ವ್ಯಕ್ತಿಯು ಪವಿತ್ರಾತ್ಮದಿಂದ ಮಾತನಾಡುವಾಗ ಅವರು ಕರ್ತನನ್ನು ಆಶೀರ್ವದಿಸುತ್ತಾರೆ ಮತ್ತು ಮಹಿಮೆಪಡಿಸುತ್ತಾರೆ ಮತ್ತು ಯೇಸುಕ್ರಿಸ್ತನ ಪ್ರಭುತ್ವವನ್ನು ಅಂಗೀಕರಿಸುತ್ತಾರೆ. ಪವಿತ್ರಾತ್ಮನ ತೋರ್ಪಡಿಸುವಿಕೆಯನ್ನು ಗುರ್ತಿಸಲು ಇದು ಮೊದಲ ಮಾರ್ಗಸೂಚಿಯಾಗಿದೆ.

1 ಕೊರಿಂಥದವರಿಗೆ 12:4
ವರಗಳಲ್ಲಿ ಬೇರೆ ಬೇರೆ ವಿಧಗಳುಂಟು ದೇವರಾತ್ಮನು ಒಬ್ಬನೇ.

"ವರಗಳು" ಎಂಬ ಪದವು ಗ್ರೀಕನಲ್ಲಿ "ಛರಿಸ್ಮಾ" ಮತ್ತು ಅದರ ಅರ್ಥವು "ಕೃಪೆಯ ವರ " 'ಛರಿಸ್' ಎಂಬ ಪದದ ಅರ್ಥ 'ಕೃಪೆ' ಆಗಿದೆ.

ಒಬ್ಬನೇ ಆತ್ಮನಿಂದ ಕೊಡಲ್ಪಟ್ಟ ವಿಭಿನ್ನಅಥವಾ ಬೇರೆ ಬೇರೆ ವಿಧದ ವರಗಳಿವೆ.

ಆತ್ಮನು ವಿಧವಿಧವಾಗಿ ಕೃಪೆಯ ವರಗಳನ್ನು ಕೊಡುತ್ತಾನೆ (ಅನೇಕ, ವಿಭಿನ್ನ ಮತ್ತು ವಿಧವಿಧವಾದ) ಆತನ ಕೃಪೆಯಿಂದ ಮತ್ತು ನಿಮಿತ್ತದಿಂದ ಆತ್ಮನ ವರಗಳು ಉಚಿತವಾಗಿ ಕೊಡಲ್ಪಟ್ಟಿವೆ ನಾವು ಮಾಡಿದ ಒಳ್ಳೆಯ ಕಾರ್ಯಗಳ ಆಧಾರದ ಮೇಲಿಲ್ಲ. ನಾವು ಆತ್ಮನ ವರಗಳನ್ನು ಸಂಪಾಧಿಸಲಾಗುವುದಿಲ್ಲ.

1 ಕೊರಿಂಥದವರಿಗೆ 12:5
ದೇವರಾತ್ಮನು ಒಬ್ಬನೇ, ಸೇವೆಗಳಲ್ಲಿ ಬೇರೆ ಬೇರೆ ವಿಧಗಳುಂಟು.

"ಸೇವೆಗಳು" ಎಂಬ ಪದವು ಗ್ರೀಕರಲ್ಲಿ "ಡೈಕೊನಿಯಾ" ಅರ್ಥವು "ಸೇವೆಗಳು" "ಕಾರ್ಯಸ್ಥಾನ" ಎಂಬುದಾಗಿದೆ.

ಕರ್ತನಾದ ಯೇಸುವಿನಿಂದ ಕೊಡಲ್ಪಟ್ಟಂತಹ ವಿವಿಧ ಸೇವೆಗಳು ಅಥವಾ ಕಾರ್ಯಸ್ಥಾನ ವಿಧವಿಧಗಳು ಬೇರೆ ಬೇರೆ ಮತ್ತು ಅನೇಕವಾದವುಗಳಿವೆ.

ಉದಾಹರಣೆ ಒಬ್ಬ ಬೋಧಕ, ಸಭಾಪಾಲಕ, ಸಭಾಧ್ಯಕ್ಷ, ಅಪೊಸ್ತಲ, ಪ್ರವಾದಿ, ಮಧ್ಯಸ್ಥಿಕೆ ಪ್ರಾರ್ಥನಾವೀರ ಮತ್ತು ಸೇವೆಗಳಿವೆ (ಸೇವೆಗಳು ಅಥವಾ ಕಾರ್ಯಸ್ಥಾನ)

1 ಕೊರಿಂಥದವರಿಗೆ 12:6
ಕರ್ತನು ಒಬ್ಬನೇ ಕಾರ್ಯಗಳಲ್ಲಿ ಬೇರೆ ವಿಧಗಳುಂಟು ಸರ್ವರಲ್ಲಿಯೂ ಸರ್ವಕಾರ್ಯಗಳನ್ನು ಸಾಧಿಸುವ ದೇವರು ಒಬ್ಬನೇ.

"ಕಾರ್ಯಚಟುವಟಿಕೆಗಳು" ಎಂಬ ಪದವು ಗ್ರೀಕನಲ್ಲಿ "ಎನರ್ಜೆಮಾಖಿ " "ಕಾರ್ಯಗಳು " 'ಬಾಹ್ಯ ಅಭಿವ್ಯಕ್ತತೆಗಳು' "ಪರಿಣಾಮಗಳು" ಎಂಬ ಅರ್ಥ ಹೊಂದಿದೆ. ಹೊಸಒಡಂಬಡಿಕೆಯಲ್ಲಿ ಈ ಪದವು ಅಪ್ರಾಕೃತ ಕಾರ್ಯಗಳೊಡನೆ ಯಾವಾಗಲು ಉಪಯೋಗಿಸಲ್ಪಟ್ಟಿದೆ. ಒಬ್ಬ ವಿಶ್ವಾಸಿಯ ಮೂಲಕವಾಗಿ ದೈವಿಕ ಶಕ್ತಿಯು ಬಾಹ್ಯ ಪ್ರದರ್ಶನಗಳು ಅಥವಾ ವಿಭಿನ್ನ ಕಾರ್ಯಚಟುವಟಿಕೆಗಳಲ್ಲಿ ಫಲಿತಾಂಶ ನೀಡುವ ಅನೇಕ, ವೈವಿಧ್ಯಮಯ, ವಿಧವಿಧ ಮತ್ತು ಬೇರೆ ಬೇರೆ ತೋರ್ಪಡಿಸುವಿಕೆಗಳಿವೆ.

ವಚನ 4-6 ನ್ನು ಎರಡು ರೀತಿಗಳನ್ನು ನಾವು ಅರ್ಥಮಾಡಿಕೊಳ್ಳಬಹುದು, ಎರಡು ಸಹ ಸರಿಯಾದುದು: ಇಂತಹ ವಿಭಿನ್ನ ಕೃಪಾ ವರಗಳ ಎಲ್ಲಾ ಮೂಲವು ಅದೇ ಆತ್ಮನಾಗಿದ್ದಾನೆ. ಅದೇ ಆತ್ಮನಾಗಿದ್ದಾನೆ. ಅದೇ ಕರ್ತನಾದ ಯೇಸುವು ಜನರಿಗೆ ಬೇರೆ ಬೇರೆ ಸೇವೆಗಳನ್ನು ಕೊಡುತ್ತಾನೆ (ಸೇವೆಗಳು ಕಾರ್ಯಸ್ಥಾನಗಳು) ಅದೇ ತಂದೆಯಾದ ದೇವರು ವಿಧವಿಧವಾದ ಕಾರ್ಯಮಾಡುತ್ತಾನೆ. (ವ್ಯಕ್ತಪಡಿಸುವಿಕೆ ಬಾಹ್ಯ ಪ್ರದರ್ಶನಗಳು) ಅಥವಾ ನಾವು ಈ ಮೂರು ವಚನಗಳನ್ನು ಈ ರೀತಿ ನೋಡಬಹುದು, ಒಂದೇ ಆತ್ಮನು ವಿಧವಿಧವಾದ ವರಗಳನ್ನು ನೀಡುತ್ತಾನೆ, ವೈವಿಧ್ಯ ಸೇವೆಗಳ ಅಧಿಕಾರ ನೀಡುತ್ತಾನೆ ಮತ್ತು ಜನರ ಮೂಲಕವಾಗಿ ಜರುಗುವಂತಹ ವಿವಿಧ ತೋರ್ಪಡಿಸುವಿಕೆ ಅಥವಾ ಕಾರ್ಯಚಟುವಟಿಕೆಗಳಿಗೆ ಕಾರಣವಾಗುತ್ತಾನೆ.

ವರಗಳು, ಸೇವೆಗಳು, ಕಾರ್ಯಚರಣೆಗಳು, :ವಿದ್ಯುತ್ಕಾರ್ಮಿಕ ಕೊಳಾಯಿಗಾರ, ಬಡಗಿ, ಸ್ವಯಂ ಯಂತ್ರಕರ್ಮಿ

ವಿದ್ಯುತ್ಕಾರ್ಮಿಕ, ಕೊಳಾಯಿಗಾರ, ಬಡಗಿ, ಮತ್ತು ಸ್ವಯಂ ಯಂತ್ರಕಾರ್ಮಿಕರನ್ನು ಪರಿಗಣಿಸಿರಿ ವಿಭಿನ್ನವಾದ ಆಡಳಿತಗಳಿವೆ (ಸೇವೆಗಳು ಅಥವಾ ಸೇವಾಸ್ಥಾನಗಳು) ಅವರಲ್ಲಿ ಪ್ರತಿಯೊಬ್ಬ ಒಂದು ಉಪಕರಣ ಪೆಟ್ಟಿಗೆ ಹೊಂದಿರುತ್ತಾರೆ ಅದು ಒಂದು ಸ್ಕ್ರೂಡ್ರೈವರು (ತಿರುಪುಳಿ) ಒಂದು ಸುತ್ತಿಗೆ ಮುಂತಾದವುಗಳನ್ನು ಹೊಂದಿರುತ್ತಾರೆ. ನಾವು ಪ್ರಸ್ತುತವಾಗಿ ಅಧ್ಯಯನ ಮಾಡುತ್ತಿರುವ ಪವಿತ್ರಾತ್ಮನ ವರಗಳನ್ನು ಉಪಕರಣ ಪೆಟ್ಟಿಗೆಗೆ ನಾವು ಹೋಲಿಸುತ್ತೇವೆ. ಆದಾಗ್ಯೂ ಪ್ರತಿಯೊಬ್ಬರು ಒಂದೇ ಸಾಧನದಿಂದ (ಉದಾ. ಸ್ಕ್ರೂಡ್ರೈವರ್) ಏನೂ ಸಾಧಿಸುತ್ತಾರೆ ಎಂಬುದು ಬದಲಾಗುತ್ತದೆ. ಆಚಾರಿಯು ಮರಕ್ಕೆ ಮೊಳೆ (ತಿರುಪು) ಯನ್ನು ಹಾಕಲು ಸ್ಕ್ರೂಡ್ರೈವರನ್ನು (ತಿರುಪುಳಿ) ಉಪಯೋಗಿಸುತ್ತಾನೆ. ವಿದ್ಯುತ್ಕಾರ್ಮಿಕ ವಿದ್ಯುತ್‌ಭಾಗಗಳನ್ನು ಸ್ಕ್ರೂಡ್ರೈವರ್‌ನಿಂದ ಒಟ್ಟಾಗಿ ಬಿಗಿಗೊಳಿಸಬಹುದು ಇನ್ನೂ ಮುಂತಾದವು. ಇವುಗಳು ವೈವಿಧ್ಯ ಕಾರ್ಯಚರಣೆಗಳು, ಚಟುವಟಿಕೆಗಳು ಅಥವಾ ಈ ಆಯಾ ಸೇವಾಸ್ಥಾನಗಳ ಮೂಲಕ ಒಂದೇ ವರಗಳ ಮೂಲಕವಾಗಿ ದೈವಿಕ ಬಲದ ಅಭಿವ್ಯಕ್ತತೆಗಳು ಆಗಿರುತ್ತವೆ ಆದರೂ ಒಂದೇ ಆತ್ಮನ ವರಗಳು ಕ್ರಿಸ್ತನ ದೇಹದಲ್ಲಿ ವಿಧವಿಧವಾದ ಸೇವಾಸ್ಥಾನಗಳ ಮೂಲಕವಾಗಿ ವಿಭಿನ್ನಮಾರ್ಗಗಳಲ್ಲಿ ವ್ಯಕ್ತಪಡಿಸಲ್ಪಡುತ್ತವೆ. ಆದರೆ ಅದೇ ದೇವರು ಮೂಲವಾಗಿದ್ದಾನೆ, ಸಲ್ಲಿಸ್ಪಡುವಂತಹ ಮತ್ತು ಅಂಗದಲ್ಲಿ ಈ ಎಲ್ಲಾ ಸೇವೆಗಳ ಮೂಲಕ ಬಲವು ತೋರ್ಪಡಿಸುವಂತಹವನು ಆಗಿದ್ದಾನೆ.

1 ಕೊರಿಂಥದವರಿಗೆ 12:7
ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟವೆ.

ಕೃಪೆಯ ವರವು 4ನೇ ವಚನದಲ್ಲಿ ಹೇಳಲ್ಪಟ್ಟಿದೆ, ಹಾಗೆಯೂ ಆತ್ಮನ ತೋರ್ಪಡಿಸುವಿಕೆಯಂತೆ ವ್ಯಾಖ್ಯಾನಿಸಲಾಗಿದೆ, ಆತ್ಮನ ಪ್ರಸನ್ನತೆ ಮತ್ತು ಬಲವನ್ನು ಅರ್ಥವಾಗುವಂತೆ ಮಾಡುವುದಾಗಿದೆ. ಇವುಗಳು "ಪ್ರತಿಯೊಬ್ಬರಿಗೂ" ಕೊಡಲ್ಪಟ್ಟಿವೆ ಇದು ಎಲ್ಲಾ ವಿಶ್ವಾಸಿಗಳಿಗಾಗಿ ಎಲ್ಲರ ಪ್ರಯೋಜನಕ್ಕಾಗಿಯೆ ಇದೆ. ಪ್ರತಿಯೊಬ್ಬ ವಿಶ್ವಾಸಿಯು ಆತ್ಮನ ಎಲ್ಲಾ ವರಗಳನ್ನು ಅವನ ಅಥವಾ ಅವಳ ಮೂಲಕವಾಗಿ ಬಿಡುಗಡೆಗೊಳಿಸಬಹುದು (ಅಥವಾ ಆತ್ಮವನ್ನು ಪ್ರದರ್ಶಿಸುವುದು).

1 ಕೊರಿಂಥದವರಿಗೆ 12:8-10
8 ಒಬ್ಬನಿಗೆ ದೇವರಾತ್ಮನ ಮೂಲಕ ಜ್ಞಾನವಾಕ್ಯವು ಒಬ್ಬನಿಗೆ ಆ ಆತ್ಮನಿಗೆ ಅನುಗುಣವಾಗಿ ವಿದ್ಯಾವಾಕ್ಯವು
9 ಒಬ್ಬನಿಗೆ ಆ ಆತ್ಮನಿಂದಲೇ ನಾನಾ ರೋಗಗಳನ್ನು ವಾಸಿ ಮಾಡುವ ವರವು
10 ಒಬ್ಬನಿಗೆ ಮಹತ್ತುಗಳನ್ನು ಮಾಡುವ ವರವು ಒಬ್ಬನಿಗೆ ಪ್ರವಾದನೆಯ ವರವು, ಒಬ್ಬನಿಗೆ ವಿವಿಧ ವಾಣಿಗಳನ್ನಾಡುವ ವರವು ಒಬ್ಬನಿಗೆ ವಾಣಿಗಳ ಅರ್ಥವನ್ನು ಹೇಳುವ ವರವು ಕೊಡಲ್ಪಡುತ್ತವೆ.

ಒಂದು ಸ್ಥಳೀಯ ಸಭೆಯ ಸೇರುವಿಕೆಯಲ್ಲ, ವಿಶ್ವಾಸಿಗಳು ಅನ್ಯೋನ್ಯತೆಗಾಗಿ ಸೇರಿಬಂದಾಗ, ಅಲ್ಲ ಹಾಜರಿರುವ ಪ್ರತಿಯೊಬ್ಬ ವ್ಯಕ್ತಿಯ ಮೂಲಕವಾಗಿ ವಿಭಿನ್ನ ಮಾರ್ಗದಲ್ಲಿ ದೇವರ ಆತ್ಮನು ತನ್ನನ್ನು ತೋರ್ಪಡಿಸುತ್ತಾನೆ. ಆತ್ಮನ ಒಂಭತ್ತು ವರಗಳನ್ನು ಪಟ್ಟಿಮಾಡಲಾಗಿದೆ ಮತ್ತು ಅವುಗಳ ಕುರಿತು ಆನಂತರ ವಿವರಣೆಯಾಗಿ ಪರೀಕ್ಷಿಸೋಣ.

1 ಕೊರಿಂಥದವರಿಗೆ 12:11
ಈ ವರಗಳನ್ನೆಲ್ಲಾ ಆ ಒಬ್ಬ ಆತ್ಮನೇ ತನ್ನ ಚಿತ್ತಕ್ಕೆ ಬಂದ ಹಾಗೆ ಒಬ್ಬೊಬ್ಬನಿಗೆ ಹಂಚಿಕೊಟ್ಟು ನಡಿಸುತ್ತಾನೆ.

'ಆದರೆ ಒಂದೇ ಮತ್ತು ಅದೇ ಆತ್ಮನು ಈ ಎಲ್ಲಾ ವಿಷಯಗಳ ಕಾರ್ಯ ಮಾಡುತ್ತಾನೆ' ಆತ್ಮನ ಎಲ್ಲಾ ವರಗಳು ಅದೇ ಪವಿತ್ರಾತ್ಮನಿಂದ ಕಾರ್ಯಚರಣೆಯಾಗುತ್ತವೆ. ಆದುದರಿಂದ ವರಗಳು ವಿಶ್ವಾಸಿಗಳಿಗೆ ಸಂಬಂಧಿಸಿದವುಗಳಲ್ಲ ಆದರೆ ಪವಿತ್ರಾತ್ಮನವು ಒಬ್ಬ ವಿಶ್ವಾಸಿಯ ಮೂಲಕವಾಗಿ ಈ ಎಲ್ಲಾ 9 ವರಗಳು ಕಾರ್ಯಗತಗೊಳ್ಳುತ್ತವೆ ಎಂಬುದು ಇದರ ಅರ್ಥವಾಗಿದೆ ಯಾಕೆಂದರೆ ಪವಿತ್ರಾತ್ಮನ ತಾನೆ ಎಲ್ಲಾ 9 ವರಗಳನ್ನು ಹೊಂದಿದ್ದಾನೆ ಮತ್ತು ವಿಶ್ವಾಸಿಗಳ ಮೂಲಕವಾಗಿ ಎಲ್ಲಾ 9 ವರಗಳಲ್ಲಿ ಕಾರ್ಯಚರಣೆ ಮಾಡುತ್ತಾನೆ.

’ವೈಯಕ್ತಿಕವಾಗಿ ಪ್ರತಿಯೊಬ್ಬನಿಗೂ ಹಂಚಿಕೊಡುವುದು’ ಪ್ರತಿಯೊಬ್ಬ ವಿಶ್ವಾಸಿಯ ಒಂದು ಕೊಡಲ್ಪಟ್ಟ ಕೂಡಿ ಬರುವಿಕೆಯಲ್ಲ ಪ್ರತಿಯೊಬ್ಬನ ಮೂಲಕವಾಗಿ ಈ ಎಲ್ಲಾ ಒಂಭತ್ತು ವರಗಳು (ಒಂದು ಅಥವಾ ಅಧಿಕ ಅಥವಾ ಎಲ್ಲಾ) ಬಿಡುಗಡೆಗೊಳ್ಳಬಹುದು.

’ಆತನ ಚಿತ್ತಕ್ಕೆ ಬಂದ ಹಾಗೆ’ ಪವಿತ್ರಾತ್ಮನ ಆತನ ಆಯ್ಕೆಯಂತೆ ಈ ವರಗಳನ್ನು ಬಿಡುಗಡೆಗೊಳಿಸುತ್ತಾನೆ ಆದಾಗ್ಯೂ ಪೌಲನು ಆನಂತರದಲ್ಲಿ ವ್ಯಾಖ್ಯಾನಿಸುವುದೇನೆಂದರೆ, ’ಬಯಸುವುದು’ ನಾವು ನಿರ್ವಹಿಸುವ ಮತ್ತು ಈ ವರಗಳನ್ನು ಹೇಗೆ ಸರಿಯಾಗಿ ತೋರಿಸಬೇಕೆಂಬುದಾಗಿ ತಿಳಿದುಕೊಳ್ಳಬೇಕು ಆದ್ದರಿಂದ ಆತ್ಮನ ತೋರ್ಪಡಿಸುವಿಕೆಗಳು (ಆತ್ಮನ ವರಗಳು) ಸಹಕಾರಿಯಾದ ಕಾರ್ಯವಾಗಿವೆ. ನಾವು ಪವಿತ್ರಾತ್ಮದೊಡನೆ ವರಗಳನ್ನು ತೋರಿಸಲು ಕಾರ್ಯಮಾಡುತ್ತೇವೆ. ಆತನ ಚಿತ್ತ ಆದರೆ ನಾವು ಸಹ ಚಿತ್ತವುಳ್ಳವರು, ಸಹಕಾರಿ, ಅಪೇಕ್ಷಿಸುವವರು, ನಂಬಿಕೆಯುಳ್ಳವರು ಮತ್ತು ವರಗಳನ್ನು ಕ್ರಮವಾಗಿ ಬಿಡುಗಡೆ ಮಾಡುವವರಾಗಿರಬೇಕು.

1ಕೊರಿಂಥದವರಿಗೆ 12:12-27 ರಲ್ಲಿ ಪೌಲನು ವೈಯಕ್ತಿಕ ಪಾತ್ರ, ಸ್ಥಳ ಮತ್ತು ಕ್ರಿಸ್ತನ ಅಂಗದಲ್ಲಿ ಪ್ರತಿ ವಿಶ್ವಾಸಿಯು ಹೊಂದಿರುವ ಕಾರ್ಯವೈಖರಿಯನ್ನು ಪ್ರಸ್ತುತ ಪಡಿಸುತ್ತಾನೆ.

1ಕೊರಿಂಥದವರಿಗೆ 12:28-30 ನ್ನು ವಿವರಿಸುವ ಮೊದಲು ಹೊಸ ಒಡಂಬಡಿಕೆಯಲ್ಲಿ ನಾವು ನೋಡುವ ಆತ್ಮಿಕ ವರಗಳನ್ನು ಮೂರು ಗುಂಪುಗಳಲ್ಲಿ ಸಂಕ್ಷಿಪ್ತವಾಗಿ ಅರ್ಥಮಾಡಿಕೊಳ್ಳೋಣ.

ಆತ್ಮನ ವರಗಳು, ವರಗಳ ಸದಸ್ಯತ್ವ ಮತ್ತು ಸೇವಾ ವರಗಳು

ಹೊಸಒಡಂಬಡಿಕೆಯಲ್ಲಿ ಆತ್ಮಿಕ ವರಗಳನ್ನು ಮೂರು ವಿಭಾಗಗಳಾಗಿ ನಾವು ನೋಡುತ್ತೇವೆ.

ಆತ್ಮಿಕ ವರಗಳ ವಿಭಾಗಗಳು		
ಆತ್ಮನ ವರಗಳು	**ಸದಸ್ಯತ್ವ ವರಗಳು**	**ಸೇವೆ ವರಗಳು**
1ಕೊರಿಂಥದವರಿಗೆ 12:7-11	**ರೋಮಾಪುರದವರಿಗೆ 12:6-8**	**ಎಫೆಸದವರಿಗೆ 4:11**
ಎಲ್ಲಾ 9 ಆತ್ಮನ ವರಗಳು ಎಲ್ಲಾ ವಿಶ್ವಾಸಿಗಳಿಗೆ ದೊರೆಯುತ್ತವೆ ಪ್ರತಿಯೊಬ್ಬ ವಿಶ್ವಾಸಿಯು ಆತ್ಮನ ವರಗಳನ್ನು ತೋರ್ಪಡಿಸಲು ಅಪೇಕ್ಷಿಸಬೇಕು	1ಕೊರಿಂಥದವರಿಗೆ 12:12-27 ಎಫೆಸದವರಿಗೆ 4:7 1 ಪೇತ್ರನು 4:10-11 ಕ್ರಿಸ್ತನ ದೇಹದಲ್ಲಿನ ಕ್ರಿಯೆಯಲ್ಲಿ ಪ್ರತಿಯೊಬ್ಬ ವಿಶ್ವಾಸಿಗೆ ಅವರ ಪಾತ್ರದ ಸಂಬಂಧದಲ್ಲಿ ಕ್ರಿಸ್ತನ ವರಗಳು ಕೊಡಲ್ಪಟ್ಟಿವೆ. ಪ್ರತಿಯೊಬ್ಬ ವಿಶ್ವಾಸಿಯು ಒಂದು ಅಥವಾ ಅಧಿಕವಾದ ಸದಸ್ಯತ್ವ ವರಗಳನ್ನು ಹೊಂದಿದ್ದಾರೆ ಉದಾಹರಣೆಗೆ: ಪ್ರವಾದನ ಸೇವೆ (ಕಾರ್ಯ), ಬೋಧನೆ, ಉಪದೇಶ (ಪ್ರೋತ್ಸಾಹ), ಕೊಡುವಿಕೆ, ನಾಯಕತ್ವ ಕರುಣೆ (ಅನುಕಂಪ) ಮತ್ತು ಇತರೆ ಅನೇಕವಾದವುಗಳು (ಸಹಾಯ, ಆಡಳಿತ ಅನ್ಯಭಾಷೆಗಳು) ಪ್ರತಿಯೊಬ್ಬ ವಿಶ್ವಾಸಿಯು ಗುರ್ತಿಸಬೇಕು, ಪೋಷಿಸಬೇಕು ಮತ್ತು ಅವರ ಸದಸ್ಯತ್ವವರಗಳು ಮತ್ತು ಕ್ರಿಯೆಗಳನ್ನು ಅಭ್ಯಾಸಿಸಬೇಕು.	ಕ್ರಿಸ್ತನ ವರಗಳು ನಿರ್ದಿಷ್ಟ ವ್ಯಕ್ತಿಗಳಿಗೆ ಕೊಡಲ್ಪಟ್ಟಿದೆ ಐದು ಸೇವೆ ವರಗಳು ಅಪೊಸ್ತಲ, ಪ್ರವಾದಿ, ಸಭಾಪಾಲಕ, ಬೋದಕ, ಸುವಾರ್ತಿಕ ಇಂತಹ ಸೇವಾ ವರಗಳು ಸೇವೆಯ ಕಾರ್ಯಗಳಿಗೆ ವಿಶ್ವಾಸಿಗಳನ್ನು ಸಜ್ಜುಗೊಳಿಸುತ್ತವೆ.

1ಕೊರಿಂಥದವರಿಗೆ 12:28-30
1ಕೊರಿಂಥದವರಿಗೆ 12:28-30 ರಲ್ಲಿ ಅಪೊಸ್ತಲನಾದ ಪೌಲನು ಸೇವೆ ವರಗಳ ವರ್ಗೀಕರಣದ ಪಟ್ಟಿಯನ್ನು (ಅಪೋಸ್ತಲರು ಪ್ರವಾಧಿಗಳು, ಉಪದೇಶಕರು, ಅದ್ಬುತಗಳು, ಸ್ವಸ್ಥತೆಗಳ ವರಗಳು) ಮತ್ತುಸದಸತ್ವವರಗಳು ಪಟ್ಟಿಯನ್ನು (ಸಹಾಯಗಳು,ಆಡಳಿತ,ವಿವಿಧ ಅನ್ಯಭಾಷೆಗಳು) ಮಾಡುತ್ತಾನೆ ಆದ್ದರಿಂದ ಎಲ್ಲಾ ಸದಸ್ಯರು ಒಂದೇ ಸೇವೆ ಅಥವಾ ಸದಸ್ಯತ್ವ ವರಗಳನ್ನು ಹೊಂದಿಲ್ಲ ಎಂಬುದಾಗಿ ಸ್ಪಷ್ಟವಾಗಿ ಸೂಚಿಸುತ್ತದೆ.

ಮೇಲಿನ ವರ್ಗೀಕರಣವು ಪ್ರಾಥಮಿಕವಾಗಿ ಸೂಚನಾ ಉದ್ದೇಶಗಳಿಗಾಗಿದೆ. ಅಭ್ಯಾಸದಲ್ಲಿ, ಈ ವರಗಳ ಗಮನಾರ್ಹ ವ್ಯಾಪಿಸುವಿಕೆಯಿದೆ ಮತ್ತು ಅದ್ದರಿಂದ ಇವುಗಳನ್ನು ಅತ್ಯಂತ ಕಠಿಣ ರೀತಿಯಲ್ಲಿ ವಿಭಾಗಿಸಬಾರದು. ಆತ್ಮನ ವರಗಳು ಪ್ರತಿಯೊಬ್ಬ ವಿಶ್ವಾಸಿಯನ್ನು ಅವರ ಸದಸ್ಯತ್ವ ಕಾರ್ಯವೈಕರಿಯಲ್ಲಿ ಮತ್ತು ಅಂತೆಯೇ ಸೇವೆ ಕಾರ್ಯಗಳನ್ನು ಹೊಂದಿರುವವರನ್ನು ಬಲಪಡಿಸುತ್ತವೆ. ಆತ್ಮನ ವರಗಳು ವಿಶ್ವಾಸಿಗಳು ಅವರ ಪಾತ್ರವನ್ನು ನೆರವೇರಿಸಲು (ಅಥವಾ ಜವಬ್ದಾರಿ) ಸದಸ್ಯತ್ವದ ಕಾರ್ಯ ಸಾಗಿಸಲು, ಮತ್ತು ಅವರ ಕಾರ್ಯಸ್ಥಾನದಲ್ಲಿ (ಸೇವಾಕಾರ್ಯಸ್ಥಾನಕ್ಕೆ ನೇಮಿತವಾದಂತವರಿಗಾಗಿ) ಕಾರ್ಯ ನಿರ್ವಯಿಸಲು ಅಧಿಕಾರ ನೀಡುತ್ತವೆ. ಆದ್ದರಿಂದ ಇವುಗಳನ್ನು ನಾವು ಅಧಿಕವಾಗಿ ಮೂರು ವಿಭಾಗಗಳಾಗಿ ಬೇರ್ಪಡಿಸಲಾಗದು ಮತ್ತು ಅತಿಕ್ರಮಣ ಅಥವಾ ಗಮನಾರ್ಹವಾದ ಪರಸ್ಪರ ಕ್ರಿಯೆ ಇದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಉದಾಹರಣೆ, 'ಪ್ರವಾದನೆಯ ವರವನ್ನು' (1ಕೊರಿಂಥದವರಿಗೆ 12:10), ಸದಸ್ಯತ್ವ ವರ/ಪ್ರವಾದನೆ ಕಾರ್ಯ (ರೋಮಾಪುರದವರಿಗೆ 12:6) ಮತ್ತು 'ಪ್ರವಾದನೆ' ಸೇವೆ ವರಗಳನ್ನು (ಎಫೆಸದವರಿಗೆ 4:13) ಪರಿಗಣಿಸಿರಿ ಪ್ರತಿ ವಿಶ್ವಾಸಿಯು ಭಕ್ತಿವೃದ್ದಿಯನ್ನೂ, ಪ್ರೋತ್ಸಾಹವನ್ನೂ, ಇತರರಿಗೆ ಸಂತೈಸುವಿಕೆಯನ್ನೂ ತರಲು ಪ್ರವಾದನೆ ವರವನ್ನು ತೋರ್ಪಡಿಸಬಹುದು (1ಕೊರಿಂಥದವರಿಗೆ 14:1,3) ಕೆಲವು ವಿಶ್ವಾಸಿಗಳು ಒಂದು ಸದಸ್ಯತ್ವವರ /ಪ್ರವಾದನೆ ಕಾರ್ಯಭಾರವನ್ನು ಅವರು ಪ್ರಾಥಮಿಕವಾಗಿ, ನಿರಂತರವಾಗಿ ಮತ್ತು ಸ್ಥಿರವಾಗಿ ಇತರರಿಗೆ ಪ್ರವಾದನೆ ಮೂಲಕ ಸೇವೆ ಮಾಡಲೂ ಹೊಂದಿರುತ್ತಾರೆ. ನಾವು ಅವರನ್ನು ಪ್ರವಾದಿಸುವ ವಿಶ್ವಾಸಿಗಳು ಎಂಬುದಾಗಿ ಕರೆಯುತ್ತೇವೆ ಮತ್ತು ಅವರು ಪ್ರವಾದನಾ ಸೇವೆ ಹೊಂದಿದ್ದಾರೆಂಬುದಾಗಿ ಇನ್ನೂ ಹೇಳುತ್ತೇವೆ. ಕೆಲವರು ಪ್ರವಾದನಾವರದ ಸೇವೆಗೆ ನೇಮಿತರಾಗಿರಬಹುದು, ಪ್ರವಾದನೆ ಸೇವೆಯ ಜೊತೆಗೆ ಕ್ರಿಸ್ತನ ದೇಹದಲ್ಲಿ ಇತರೆ ಕ್ಷೇತ್ರಗಳಲ್ಲಿ ಪ್ರಭಾವವನ್ನು ಸಹ ಒಳಗೊಂಡಿರಬಹುದು (ಸರ್ಕಾರಿ ಅಧಿಕಾರ, ಅತ್ಯುನ್ನತ ಪ್ರಭಾವನ ಕ್ಷೇತ್ರಗಳು, ದೇವರ ಚಲನೆಯನ್ನು ಸಾರುವುದು ಮುಂತಾದವು). ಪ್ರವಾದನೆ ವರವು ಸದಸ್ಯತ್ವ ಕ್ರಿಯೆ ಮತ್ತು ಸೇವೆ ವರದ ಕ್ರಿಯೆಯ ಮೂಲಕವಾಗಿ ವ್ಯಕ್ತಿವಾಗುತ್ತದೆ.

ಆದ್ದರಿಂದ 1 ಕೊರಿಂಥದವರಿಗೆ 12:28-30 ರ ಅರ್ಥವೇನು?

1 ಕೊರಿಂಥದವರಿಗೆ 12:28-30
28 ದೇವರು ತನ್ನ ಸಭೆಯಲ್ಲಿ ಮೊದಲನೇದಾಗಿ ಅಪೊಸ್ತಲರನ್ನು ಎರಡನೇದಾಗಿ ಪ್ರವಾದಿಗಳನ್ನು, ಮೂರನೇದಾಗಿ ಉಪದೇಶಕರನ್ನು ಇಟ್ಟಿದ್ದಾನೆ ಆ ಮೇಲೆ ಮಹಾತ್ಕಾರ್ಯ ಮಾಡುವ ಶಕ್ತಿಯನ್ನು ನಾನಾ ರೋಗಗಳನ್ನು ವಾಸಿಮಾಡುವ ವರವನ್ನೂ ಪರಸಹಾಯ ಮಾಡುವ ಗುಣವನ್ನೂ ಕಾರ್ಯಗಳನ್ನು ನಿರ್ವಹಿಸುವ ಜ್ಞಾನವನ್ನು ವಿವಿಧ ವಾಣಿಗಳನ್ನಾಡುವ ವರವನ್ನೂ ಅವರವರಿಗೆ ಕೊಟ್ಟಿದ್ದಾನೆ.

29 ಎಲ್ಲರೂ ಅಪೊಸ್ತಲರೋ? ಎಲ್ಲರೂ ಪ್ರವಾದಿಗಳೋ? ಎಲ್ಲರೂ ಉಪದೇಶಕರೋ? ಎಲ್ಲರೂ ಮಹತ್ಕಾರ್ಯಗಳನ್ನು ಮಾಡುವವರೋ?
30 ರೋಗ ವಾಸಿಮಾಡುವ ವರಗಳು ಎಲ್ಲರಿಗೂ ಉಂಟೋ? ಎಲ್ಲರೂ ವಾಣಿಗಳನ್ನಾಡುವವರೋ? ವಾಣಿಗಳ ಅರ್ಥವನ್ನು ಹೇಳುವದಕ್ಕೆ ಎಲ್ಲರಿಗೂ ಶಕ್ತಿಯುಂಟೋ?

12:28

"ನೇಮಿಸಿದ್ದಾನೆ" (ಇಟ್ಟಿದ್ದಾನೆ) – ಆತನ ಸ್ವಂತ ಉಪಯೋಗಕ್ಕಾಗಿ ಇರಿಸುವುದು ಎಂದು ಅರ್ಥ "ಇವು" ಕೆ.ಜೆ.ವಿ. ಸತ್ಯವೇದದಲ್ಲಿ "ಕೆಲವು" ಎಲ್ಲರನ್ನೂ ಅಲ್ಲ, ನಿರ್ದಿಷ್ಟ ಜನರನ್ನು ಸೂಚಿಸುತ್ತದೆ.

'ಮೊದಲ' (ಗ್ರೀಕನಲ್ಲಿ "ಪ್ರೋಟಾನ್") ಸಮಯದಲ್ಲಿ ಅಥವಾ ಸ್ಥಳದಲ್ಲಿ ಪ್ರಥಮ, ಶ್ರೇಣಿ, ಪ್ರಭಾವ, ಗೌರವದಲ್ಲಿ ಮೊದಲು ಎಂಬುದಾಗಿ ಅರ್ಥ, ದೇವರು ಕೆಲವು ಜನರನ್ನು ಇಂತಹ ಸ್ಥಳಗಳಲ್ಲಿ (ಪಾತ್ರಗಳು ಅಥವಾ ಕ್ರಿಯೆಗಳಲ್ಲಿ) ಅವರಿಗೆ ಸ್ಥಳ, ಶ್ರೇಣಿ, ಪ್ರಭಾವ ಮತ್ತು ಗೌರವವನ್ನು ಕೊಟ್ಟು ಇರಿಸಿದ್ದಾನೆ.

'ಪರಿಸಹಾಯ' - ಯಾವುದೇ ರೀತಿಯ ಸಹಾಯ, ಸೇವೆ, ನೆರವು, ಸಹಾಯಕ, ಸೇವೆ ಅಥವಾ ಸಹಾಯ ಸಹಾಯಕರುಗಳನ್ನು ಉಲ್ಲೇಖಿಸುತ್ತದೆ.

"ಆಡಳಿತಗಳು" ಕೆ.ಜೆ.ವಿ. ಸತ್ಯವೇದಲ್ಲಿ, 'ಸರ್ಕಾರಗಳು', 'ಆಡಳಿತನಡೆಸು' ಅಥವಾ 'ಆಳ್ವಿಕೆ' ಎಂಬುದಾಗಿ ಅರ್ಥ ಮತ್ತು ಸಾಮಾನ್ಯವಾಗಿ ಒಂದು ಹಡಗಿನ ಚುಕ್ಕಾಣಿ ಹಿಡಿಯುವವರಿಗೆ ಅನ್ವಯಿಸಲಾಗುತ್ತದೆ.

ಪೌಲನು ಸೇವೆಯ ವರಗಳು (ಅಪೊಸ್ತಲರು, ಪ್ರವಾದಿಗಳು, ಉಪದೇಶಕರು, ಅದ್ಭುತಕಾರ್ಯಗಳು, ಸ್ವಸ್ಥಮಾಡುವ ವರಗಳು) ಮತ್ತು ಸದಸ್ಯತ್ವ ವರಗಳು (ಪರಸಹಾಯ, ಆಡಳಿತಗಳು, ಅನ್ಯಭಾಷೆಯ ವಿವಿಧತೆಗಳು) ಎಂಬುದಾಗಿ ವಿಂಗಡನೆಯ ಪಟ್ಟಿ ಮಾಡುತ್ತಾನೆ ಮತ್ತು ಎಲ್ಲಾ ಸದಸ್ಯರುಗಳು ಒಂದೇ ಸೇವೆ ಅಥವಾ ಸದಸ್ಯತ್ವ ವರಗಳನ್ನು ಹೊಂದಿಲ್ಲ ಎಂದು ಸ್ಪಷ್ಟವಾಗಿ ಸೂಚಿಸುತ್ತದೆ.

ಸೇವೆ ವರಗಳು (ಅಪೊಸ್ತಲರು, ಪ್ರವಾದಿಗಳು, ಉಪದೇಶಕರು ಮಹಾತ್ಕಾರ್ಯ, ನಾನಾ ರೋಗಿಗಳನ್ನು ವಾಸಿಮಾಡುವುದು) 'ಮಹತ್ಕಾರ್ಯಗಳು' ಮತ್ತು ಸ್ವಸ್ಥತೆಯನ್ನು ಮಾಡುವ ವರಗಳು ಸುವಾರ್ತಿಕನನ್ನು ಪ್ರತಿನಿಧಿ ಎಂಬುದಾಗಿ ನಾವು ನೋಡುತ್ತೇವೆ.

ಸದಸ್ಯತ್ವ ವರಗಳು (ಪರಸಹಾಯ, ಆಡಳಿತಗಳು, ವೈವಿಧ್ಯ ಅನ್ಯಭಾಷೆಗಳು). ’ಅನ್ಯಭಾಷೆಗಳ ವಿಧಗಳು’ ಸದಸ್ಯತ್ವಕ್ರಿಯೆ ಮಾಡುವ ವಿಶ್ವಾಸಿಗಳು ನಿರಂತರವಾಗಿ ’ವಿವಿಧ ಅನ್ಯಭಾಷೆಗಳನ್ನು’ ವ್ಯಕ್ತಿಪಡಿಸುವ ಉದಾಹರಣೆಗೆ ಮಧ್ಯಸ್ಥಿಕೆ ಪ್ರಾರ್ಥನಾಗಾರರು, ಅನ್ಯಭಾಷೆಯಲ್ಲಿ ಸಾರ್ವಜನಿಕ ಸಂದೇಶ ತರುವಂತಹವರನ್ನು ಪ್ರತಿನಿಧಿಸುತ್ತವೆ.

ಆದ್ದರಿಂದ ವಚನ 29 ಮತ್ತು 30 ರಲ್ಲಿನ ಪ್ರತಿಯೊಂದು ವಾಕ್ಚರುರ್ಯದ ಪ್ರಶ್ನೆಗಳಿಗೆ, ಪೌಲನು ನಿರ್ದಿಷ್ಟವಾಗಿ ಪವಿತ್ರಾತ್ಮನ ವರಗಳಲ್ಲದೇ ಸೇವಾವರಗಳು ಮತ್ತು ಸದಸ್ಯತ್ವ ಕ್ರಿಯಾವರಗಳನ್ನು ಉದ್ದೇಶಿಸುತ್ತಿರುವುದರಿಂದ ಉತ್ತರವು “ಇಲ್ಲಾ” ಎಂಬುದಾಗಿದೆ.

ಆತ್ಮನ ವರಗಳು ಮತ್ತು ಸೇವೆಯ ವರಗಳ ನಡುವಿನ ವ್ಯತ್ಯಾಸಗಳು

1. ಆತ್ಮನ ವರಗಳು ಆತ್ಮನಿಂದ ಕೊಡಲ್ಪಟ್ಟಿವೆ. ಸೇವೆ ವರಗಳು ಕರ್ತನಾದ ಯೇಸುವಿನಿಂದ ಕೊಡಲ್ಪಟ್ಟಿವೆ.

2. ಆತ್ಮನ ವರಗಳ ಎಲ್ಲಾ ವಿಶ್ವಾಸಿಗಳಿಗೂ ದೊರೆಯುತ್ತವೆ. ಸೇವೆ ವರಗಳು ಕೆಲವರಿಗೆ ಮಾತ್ರವೇ ಕೊಡಲ್ಪಟ್ಟಿವೆ.

3. ಆತ್ಮನ ವರಗಳು ಪ್ರಾಥಮಿಕವಾಗಿ ದೇವರ ಜನರ ಆತ್ಮಿಕ ಭಕ್ತಿವೃದ್ಧಿಯ ಕಡೆಗೆ ಮಾರ್ಗದರ್ಶಿಸುತ್ತವೆ. ಸೇವೆ ವರಗಳು ಸೇವಾ ಕಾರ್ಯಗಳಿಗಾಗಿ ದೇವರ ಜನರನ್ನು ಸಜ್ಜುಗೊಳಿಸುವ ಕಡೆಗೆ ಮಾರ್ಗದರ್ಶಿಸುತ್ತದೆ.

4. ಆತ್ಮನ ವರಗಳು ಸಾಮಾನ್ಯವಾಗಿ ಒಂದು ಸ್ಥಳೀಯ ಅಂಗಕ್ಕೆ ಸೇವೆ ಸಲ್ಲಿಸುತ್ತವೆ. ಸೇವಾ ವರಗಳು ಇದನ್ನು ಮಾಡುತ್ತವೆ ಮತ್ತು ಜೊತೆಗೆ ಒಂದು ದೊಡ್ಡ ಸನ್ನಿವೇಶದಲ್ಲಿ (ದೇಶ, ದೇಶಗಳು, ಮುಂತಾದವು) ಅಂಗಕ್ಕೆ ಸೇವೆ ಸಲ್ಲಿಸುತ್ತವೆ.

ಅಪೊಸ್ತಲರು ಮತ್ತು ಪ್ರವಾದಿಗಳ ಸೇವೆಯ ವರವು ಇಂದು ಇನ್ನು ಅಸ್ತಿತ್ವದಲ್ಲಿವೆಯಾ ?

ಅಪೊಸ್ತಲರು ಮತ್ತು ಪ್ರವಾದಿಗಳ ಸೇವಾವರವು ಇಂದು ಇನ್ನೂ ಅಸ್ತಿತ್ವದಲ್ಲಿವೆಯೂ ಎಂಬ ಸಾಮಾನ್ಯವಾದ ಪ್ರಶ್ನೆಗಳು ಕೇಳಲ್ಪಡುತ್ತಿವೆ. ಸಭಾಪಾಲಕರು, ಉಪದೇಶಕರು ಮತ್ತು ಸುವಾರ್ತಿಕ ಸೇವೆ ವರಗಳನ್ನು ಅಂಗೀಕರಿಸುವುದರಲ್ಲಿ ಕೆಲವರಿಗೆ ತೊಂದರೆಯಿಲ್ಲ ಆದರೆ ಅಪೊಸ್ತಲರು ಮತ್ತು ಪ್ರವಾದಿಗಳ ಸೇವೆಯ ವರಗಳು ಇಂದಿಗೂ ಕಾರ್ಯಚರಣೆಯಲ್ಲಿದೆ ಎಂಬುದನ್ನು ಅಂಗೀಕರಿಸಲು ಹಿಂಜರಿಯುತ್ತಾರೆ.

ಅಪೊಸ್ತಲರು ಮತ್ತು ಪ್ರವಾದಿಗಳ ಸೇವೆ ವರಗಳು ಇಂದು ಕಾರ್ಯಚರಣೆಯಲ್ಲಿರುವ ಮತ್ತು ಅಸ್ತಿತ್ವದಲ್ಲಿರುವುದನ್ನು ದೃಡೀಕರಿಸುವ ಕೆಳಗಿನವುಗಳನ್ನು ಪರಿಗಣಿಸಿರಿ.

ಎಫೆಸದವರಿಗೆ 4:11-13
11 ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು.
13 ನಾವೆಲ್ಲರೂ ನಂಬಿಕೆಯಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ
12 ದೇವಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು.

1 ಕೊರಿಂಥದವರಿಗೆ 12:28
ದೇವರು ತನ್ನ ಸಭೆಯಲ್ಲಿ ಮೊದಲನೇದಾಗಿ ಅಪೊಸ್ತಲರನ್ನು ಎರಡನೇದಾಗಿ, ಪ್ರವಾದಿಗಳನ್ನು, ಮೂರನೇದಾಗಿ ಉಪದೇಶಕರವನ್ನು ಇಟ್ಟಿದ್ದಾನೆ,…………

ಎಫೆಸದವರಿಗೆ 4:1 ಎಲ್ಲಾ ಐದು ಸೇವೆ ವರಗಳನ್ನು ಪಟ್ಟಿಮಾಡುತ್ತದೆ. ನಾವು ಮೂರನ್ನು ಅಂಗೀಕರಿಸಿದರೆ (ಸುವಾರ್ತಿಕರು, ಸಭಾಪಾಲಕರು, ಉಪದೇಶಕರು) ಇತರೆ ಎರಡನ್ನು (ಅಪೊಸ್ತಲರು ಮತ್ತು ಪ್ರವಾದಿಗಳು) ಸಹ ಅಂಗೀಕರಿಸಿಕೊಳ್ಳಬೇಕು.

ಈ ಎಲ್ಲಾ ಐದು ಸೇವೆ ವರಗಳು ವಿಶ್ವಾಸಿಗಳನ್ನು ಸೇವೆಗಾಗಿ ಸಜ್ಜುಗೊಳಿಸಲು ಕೊಡಲ್ಪಟ್ಟಿವೆ ಮತ್ತು ನಾವೆಲ್ಲರು ನಂಬಿಕೆಯ ಐಕ್ಯತೆ ಬಿರುವವರೆಗೆ ಮತ್ತು ಒಬ್ಬ ಪ್ರೌಢ ಮನುಷ್ಯನಾಗುವವರೆಗೆ ಮುಂದುವರೆಯುತ್ತವೆ. ಕ್ರಿಸ್ತನು ಒಂದು ಮಹಿಮಾತಿಶಯದ ಸಭೆಗಾಗಿ ಬರಲಿದ್ದಾನೆ. ಈ ಪ್ರಕ್ರಿಯೆಯು ಇನ್ನೂ ಪ್ರಗತಿಯಲ್ಲಿರುವಾಗ, ಇನ್ನೂ ಈ ಎಲ್ಲಾ ಐದು ಸೇವೆ ವರಗಳು ಅಗತ್ಯವಾಗಿವೆ.

ಸಭೆಯಲ್ಲಿ ಇಂತಹ ಸೇವಾ ವರಗಳನ್ನು ದೇವರು ನೇಮಿಸಿದ್ದಾನೆ ಎಂಬುದಾಗಿ 1ಕೊರಿಂಥದವರಿಗೆ 12:28 ವ್ಯಾಖ್ಯಾನಿಸುತ್ತದೆ. ಸಭೆಯಿಂದ ಈ ವರಗಳು ಹಿಂತೆಗೆದುಕೊಳ್ಳಲಾಗಿದೆ ಎಂಬುದಾಗಿ ವಚನ ಭಾಗದಲ್ಲಿ ಯಾವ ಸ್ಥಳದಲ್ಲಿ ನೋಡುವುದಿಲ್ಲ. ಸಭೆಯು ಇನ್ನೂ ಭೂಲೋಕದ ಮೇಲಿರುವಾಗ, ಈ ನೇಮಕಗಳು ಇನ್ನೂ ಮಾನ್ಯವಾದವು ಆಗಿವೆ ಎಂಬು ವ್ಯಾಖ್ಯಾನಿಸುವುದು ಸರಿಯಾದುದಾಗಿದೆ.

ಈ ’ಅಡ್ಡ ಸಮಸ್ಯೆಗಳನ್ನು’ ಪರಿಹರಿಸಿದ ನಂತರ, ಆತ್ಮನ ವರಗಳನ್ನು ಅರ್ಥಮಾಡಿಕೊಳ್ಳೋಣ

ಆತ್ಮನ ವರಗಳನ್ನು ಅರ್ಥಮಾಡಿಕೊಳ್ಳುವುದು

ನಾವು ಈಗ ಆತ್ಮನ ವರಗಳ ಕುರಿತ ಮುಖ್ಯ ಸತ್ಯಗಳನ್ನು ಒದಗಿಸಲು ಪ್ರಯತ್ನಿಸೋಣ. ಇವುಗಳಲ್ಲಿ ಕೆಲವನ್ನು ಮೊದಲೇ ತಿಳಿಸಿದ್ದೇವೆ ಆದರೆ ಅವುಗಳನ್ನು ಪುನಃ ಮತ್ತೊಮ್ಮೆ ಸಂಪೂರ್ಣ ಅವಲೋಕನಕ್ಕಾಗಿ ಅವುಗಳನ್ನು ಪ್ರಸ್ತುತಪಡಿಸುತ್ತೇವೆ.

ಆತ್ಮನ ವರಗಳು ಎಲ್ಲಾ ವಿಶ್ವಾಸಿಗಳಿಗೂ ಕೊಡಲ್ಪಟ್ಟಿವೆ

ಆತ್ಮನ ತೋರ್ಪಡಿಸುವಿಕೆಗಳು "ಪ್ರತಿಯೊಬ್ಬರಿಗೂ" ಕೊಡಲ್ಪಟ್ಟಿವೆ (1ಕೊರಿಂಥದವರಿಗೆ 12:7) ಪವಿತ್ರಾತ್ಮನು "ಪ್ರತಿಯೊಬ್ಬರಿಗೂ" ಆತನ ವರಗಳನ್ನು ಹಂಚಿಕೊಡುತ್ತಾನೆ (1ಕೊರಿಂಥದವರಿಗೆ 12:11) ಎಲ್ಲಾ ವಿಶ್ವಾಸಿಗಳು ಪ್ರೀತಿಯ ಅತ್ಯಂತ ಶ್ರೇಷ್ಟವಾದ ಮಾರ್ಗದಲ್ಲಿ ನಡೆಯಬೇಕು ಮತ್ತು ಅತ್ಯುತ್ತಮ ವರಗಳನ್ನು ಅಪೇಕ್ಷಿಸಬೇಕು (1ಕೊರಿಂಥದವರಿಗೆ 12:31) ಎಲ್ಲಾ ವಿಶ್ವಾಸಿಗಳು ಪ್ರೀತಿಯನ್ನು ಅಭ್ಯಾಸಮಾಡಿಕೊಳ್ಳಬೇಕು, ಆತ್ಮಿಕ ವರಗಳನ್ನು ಅಪೇಕ್ಷಿಸಬೇಕು ಮತ್ತು ವಿಶೇಷವಾಗಿ ಪ್ರವಾದಿಸುವ ವರವನ್ನೇ ಅಪೇಕ್ಷಿಸಬೇಕು (1ಕೊರಿಂಥದವರಿಗೆ 14:1) ಎಲ್ಲಾ ವಿಶ್ವಾಸಿಗಳು ಪ್ರವಾದಿಸುವುದನ್ನು ಶ್ರದ್ದೆಯಿಂದ ಅಪೇಕ್ಷಿಸಲು ಪ್ರೋತ್ಸಾಹಿಸಲ್ಪಟ್ಟಿದ್ದಾರೆ ಮತ್ತು ಅನ್ಯಭಾಷೆಗಳೊಡನೆ ಮಾತನಾಡುವುದನ್ನು ನಿಲ್ಲಿಸಬಾರದು. (1ಕೊರಿಂಥದವರಿಗೆ 14:39)

ಆದ್ದರಿಂದ ಎಲ್ಲಾ ವಿಶ್ವಾಸಿಗಳು ಕಲಿಸಲ್ಪಡುವುದು ಮತ್ತು ಆತ್ಮನ ವರಗಳಲ್ಲಿ ಹರಿಯುವುದು ಮತ್ತು ಪವಿತ್ರಾತ್ಮನೊಡನೆ ಹೇಗೆ ಸಹಕರಿಸುವುದು ಎಂಬುದನ್ನು ಕಲಿಯಲು ಸಜ್ಜುಗೊಂಡಿರುವುದು ಪ್ರಾಮುಖ್ಯವಾಗಿದೆ.

ಆತ್ಮನ ವರಗಳು ಆತ್ಮನ ಅಪ್ರಾಕೃತ "ತೋರ್ಪಡಿಸುವಿಕೆಗಳಾಗಿವೆ"

1 ಕೊರಿಂಥದವರಿಗೆ 12:7
ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟವೆ.

ಆತ್ಮನ ವರದ ಕಾರ್ಯಚರಣೆಯು ಪವಿತ್ರಾತ್ಮನು ಸ್ವತಃ ತನ್ನನ್ನೇ ತೋರಿಸುವುದಾಗಿದೆ, ಆತನ ಪ್ರಸನ್ನತೆ ಮತ್ತು ಬಲವು ಕಾಣುವಂತೆ ಮಾಡುವುದಾಗಿದೆ. "ತೋರ್ಪಡಿಸುವಿಕೆ" ಗ್ರೀಕನಲ್ಲಿ "ಪ್ರದರ್ಶನ" ಮತ್ತು "ಅಭಿವ್ಯಕ್ತತೆ" ಎಂಬುದಾಗಿ ಅರ್ಥ. ಆದ್ದರಿಂದ ಆತ್ಮನ ವರಗಳು, ಪವಿತ್ರಾತ್ಮನು ತನ್ನನ್ನು ಸ್ವತಃ ಪ್ರಕಟಿಸುವ ಪ್ರದರ್ಶಿಸುವ ಮತ್ತು ಆತನ ಬಲ

ಮತ್ತು ಪ್ರಸನ್ನತೆಯನ್ನು ಅಭಿವ್ಯಕ್ತತೆ ಗೊಳಿಸುತ್ತಾನೆ ಎಂಬ ಅರ್ಥ ಅನೇಕ ಸಮಯಗಳಲ್ಲಿ ಜನರು ದೇವರನ್ನು “ನೋಡಬೇಕು” ಅಥವಾ ದೇವರನ್ನು ನೈಜವಾಗಿ

ಅನೇಕ ಸಮಯಗಳಲ್ಲಿ ಜನರು ದೇವರನ್ನು “ನೋಡಬೇಕು” ಅಥವಾ ವೈಯಕ್ತಿಕ ಅಥವಾ ಜೀವಿತ ಬದಲಾಗುವ ಮಾರ್ಗದಲ್ಲಿ ದೇವರನ್ನು ನೈಜವಾಗಿ “ಸಂಧಿಸಬೇಕೆಂದು” ಅಪೇಕ್ಷಿಸುತ್ತಾರೆ. ಆತ್ಮನ ವರಗಳು ದೇವರು ತೋರಿಬರುವುದನ್ನು ಪ್ರದರ್ಶಿಸಿದ್ದನ್ನು ಮತ್ತು ಅಭಿವ್ಯಕ್ತಗೊಂಡಿದ್ದನ್ನು ಜನರು ನೋಡುವಂತೆ ಕಾರಣವಾಗುತ್ತವೆ. ಜನರು ದೇವರನ್ನು “ನೋಡುತ್ತಾರೆ” ಮತ್ತು ಅವರು ಆತ್ಮನ ವರಗಳಿಂದ ಸೇವೆ ಸಲ್ಲಿಸಿದಾಗ, ನೈಜ ವೈಯಕ್ತಿಕ ವಿಧಾನದಲ್ಲಿ ದೇವರು “ಸಂಧಿಸುತ್ತಾರೆ” .

ಆತ್ಮನ ವರಗಳು ಕೃಪೆಯ ವರಗಳು ಆಗಿವೆ

1 ಕೊರಿಂಥದವರಿಗೆ 12:4
ವರಗಳಲ್ಲಿ ಬೇರೆ ಬೇರೆ ವಿಧಗಳುಂಟು ದೇವರಾತ್ಮ ಒಬ್ಬನೇ.

ಪ್ರತಿಯೊಬ್ಬ ವಿಶ್ವಾಸಿಗೂ ಈ ವರಗಳನ್ನು (ಗ್ರೀಕನಲ್ಲಿ “ಛರಿಸ್ಮಾ”) ಪವಿತ್ರಾತ್ಮನು ನೀಡುತ್ತಾನೆ. ’ಛರಿಸ್ಮಾ’ ಎಂಬ ಪದವು ಕೃಪೆಯ ವರಗಳು ಅಥವಾ ಕೃಪೆಯಿಂದ ಕೊಡಲ್ಪಟ್ಟವರಗಳನ್ನು ಸೂಚಿಸುತ್ತದೆ. ಆದುದರಿಂದ ನಾವು, ಆತ್ಮನ ವರಗಳನ್ನು ಸಂಪಾದಿಸಲಾಗುವುದಿಲ್ಲ. ಆತ್ಮನ ವರಗಳು ದೇವರ ಕೃಪೆಯಿಂದ ಮತ್ತು ಉಚಿತವಾಗಿ ಕೊಡಲ್ಪಟ್ಟ ಕೃಪೆಯ ವರಗಳಾಗಿವೆ. ಈ ವರಗಳು ಮಹತ್ತಾದ ಆತ್ಮಿಕ ಪರಿಪಕ್ವತೆಯ ಒಂದು ಸೂಚನೆ ಅಥವಾ ಒಬ್ಬ ವಿಶ್ವಾಸಿಯು ಧರಿಸಿರುವ ವೈಯಕ್ತಿಕ ಸಾಧನೆಯ ಕೆಲವು ಲಾಂಛನವಾಗಿದೆ. ಬದಲಿಗೆ ವಿಶ್ವಾಸಿಯ ಮೂಲಕವಾಗಿ ವ್ಯಕ್ತಪಡಿಸಿಕೊಂಡ ಕೃಪೆಯ ಕಾರ್ಯಗಳಾಗಿವೆ. ಆದ್ದರಿಂದ ಈ ವರಗಳನ್ನು ಪವಿತ್ರಾತ್ಮದೊಡನೆ ತೋರಿಸಲೂ ನಾವು ಹೇಗೆ ಸಹಕಾರಿಯಾಗಿರಬೇಕೆಂಬುದನ್ನು ಕಲಿಯಬೇಕು ಮತ್ತು ಸಿದ್ಧಪಡಿಸಿಕೊಂಡಿರಬೇಕು ಮತ್ತು ಲಾಭವಾಗುವಂತೆ ಇರಬೇಕು.

ಆತ್ಮನ ವರಗಳು ಜನರಿಗೆ ಭಕ್ತಿವೃದ್ಧಿ ಮಾಡಲೂ ಮತ್ತು ಕ್ರಿಸ್ತನನ್ನು ಮಹಿಮೆ ಪಡಿಸಲೂ ಕೊಡಲ್ಪಟ್ಟಿವೆ

1 ಕೊರಿಂಥದವರಿಗೆ 12:7
ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟವೆ.

1 ಕೊರಿಂಥದವರಿಗೆ 14:12
ಹಾಗೆಯೇ ನೀವೂ ಆತ್ಮ ಪ್ರೇರಿತವಾದ ನುಡಿಗಳಿನ್ನಾಡುವದಕ್ಕೆ ಅಪೇಕ್ಷಿಸುವವರಾಗಿರುವದರಿಂದ ಸಭೆಗೆ ಭಕ್ತಿವೃದ್ಧಿ ಉಂಟಾಗುವ ಹಾಗೆ ಅದಕ್ಕಿಂತಲೂ ಹೆಚ್ಚಾದದ್ದನ್ನೂ ಮಾಡುವದಕ್ಕೆ ಪ್ರಯತ್ನಿಸಿರಿ.

ನಾವು ಯಾವಾಗಲೂ ಆತ್ಮನ ವರಗಳನ್ನು ತೋರ್ಪಡಿಸುವುದು ಮತ್ತು ಅಪೇಕ್ಷಿಸುವುದನ್ನು ಪಾಲಿಸುವುದರಲ್ಲಿ ಇರುವ ಸರಿಯಾದ ಪ್ರೇರಣೆಯು ಜನರ ಸೇವೆಮಾಡುವುದು ಮತ್ತು ಕ್ರಿಸ್ತನಿಗೆ ಮಹಿಮೆಪಡಿಸುವುದಾಗಿದೆ. ವರಗಳು "ಎಲ್ಲರ ಪ್ರಯೋಜನಾರ್ಥವಾಗಿ" ಮತ್ತು "ಸಭೆಯ ಭಕ್ತಿವೃದ್ಧಿಗಾಗಿ" ಕೊಡಲ್ಪಟ್ಟಿವೆ. ಆತ್ಮನ ವರಗಳು ನಮ್ಮನು ಅತ್ಯುತ್ತಮವಾಗಿ ಕಾಣುವಂತೆ ಮಾಡಲೂ ಅಥವಾ ಯಾವುದೇ ಸ್ವಯಂ – ಪದನೋತ್ತಿಗಾಗಿ ಇಲ್ಲ. ನಾವು ಒಬ್ಬರಿಗೊಬ್ಬರು ಸ್ವರ್ಧೆಯಿಂದ ವರಗಳಲ್ಲಿ ಕಾರ್ಯಚರಣೆ ಮಾಡುವುದನ್ನು ಹುಡುಕಬಾರದು.

ನಾವು ಪವಿತ್ರಾತ್ಮದೊಡನೆ ವರಗಳನ್ನು ತೋರ್ಪಡಿಸಲು ಸಹಕರಿಸುವಾಗ, ಜನರು ಪ್ರಯೋಜನಗಳನ್ನು ಪಡೆಯುತ್ತಾರೆ ಮತ್ತು ಭಕ್ತಿವೃದ್ಧಿ ಹೊಂದುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು 1ಕೊರಿಂಥದವರಿಗೆ 14:18-19 ರಲ್ಲಿ ಅಪೊಸ್ತಲನಾದ ಪೌಲನು ಹೇಳಿದ್ದನ್ನು ಪರಿಗಣಿಸಿರಿ. "ನಾನು ನಿಮ್ಮೆಲ್ಲರಿಗಿಂತಲೂ ಹೆಚ್ಚಾಗಿ ವಾಣಿಗಳನ್ನಾಡುತ್ತೇನೆಂದು ದೇವರನ್ನು ಕೊಂಡಾಡುತ್ತೇನೆ. ಆದರೂ ಸಭೆಯಲ್ಲಿ ವಾಣಿಯಿಂದ ಹತ್ತು ಸಾವಿರ ಮಾತುಗಳನ್ನಾಡುವದಕ್ಕಿಂತ ತನ್ನ ಬುದ್ಧಿಯಿಂದ ಪದೇ ಮಾತುಗಳನ್ನಾಡಿ ಇತರರಿಗೆ ಉಪದೇಶಮಾಡುವದು ನನಗೆ ಇಷ್ಟವಾದದ್ದು." ಅಪೊಸ್ತಲನಾದ ಪವಲನು ಅನ್ಯಭಾಷೆಗಳ ಉಪಯೋಗದಲ್ಲಿ ಸಂಯಮದಿಂದ ಅಭ್ಯಾಸಿಸುವುದನ್ನು ನಾವು ಗಮನಿಸುತ್ತೇವೆ. ಆದ್ದರಿಂದ ಜನರಿಗೆ ಬೋಧನೆಯ ಮೂಲಕವಾಗಿ ಅರವನ್ನು ಕಟ್ಟುವ ಕ್ರಮದಲ್ಲಿ ಆತನು ಅರ್ಥಪೂರ್ಣವಾಗಿ ಮಾತಾನಾಡಬಹುದಿತ್ತು.

ಅಪೊಸ್ತಲನಾದ ಪೌಲನು ಸಭಿಕರಿಗೆ ಜನರನ್ನು ಕಟ್ಟುವುದಕ್ಕಾಗಿ ಎಲ್ಲವನ್ನು ಮಾಡಬೇಕೆಂಬುದಾಗಿ ಉಪದೇಶಿಸುತ್ತಾನೆ. 1ಕೊರಿಂಥದವರಿಗೆ 14:26 ರಲ್ಲಿ ಹೀಗೆ ವ್ಯಾಖ್ಯಾನಿಸಿದ್ದಾನೆ. "ಹಾಗದರೇನು ಸಹೋದರರೇ ? ನೀವು ಕೂಡಿ ಬಂದಿರುವಾಗ ಒಬ್ಬನು ಹಾಡುವದೂ ಒಬ್ಬನು ಉಪದೇಶಮಾಡುವದೂ ಒಬ್ಬನು ಅದರ ಅರ್ಥವನ್ನು ಹೇಳವದೂ ಉಂಟಷ್ಟೆ. ನೀವು ಏನೂ ನಡಿಸಿದರೂ ಭಕ್ತಿವೃದ್ಧಿಗಾಗಿಯೇ ನಡಿಸಿರಿ."

ರೋಮಾಪುರದವರಿಗೆ 1:11-12 ರಲ್ಲಿ ಒಂದು ಅಥವಾ ಅಧಿಕವಾದ ಆತ್ಮೀಕ ವರಗಳನ್ನು ಪಾಲುಹೊಂದುವುದು ಅಥವಾ ಹಂಚಿಕೊಳ್ಳುವಾಗ ವಿಶ್ವಾಸಿಗಳು ಸ್ಥಾಪಿಸಲ್ಪಟ್ಟಿದ್ದು, ಬಲಗೊಂಡಿರದ್ದರು ಮತ್ತು ದೃಢವಾಗಿ ಮಾಡಲ್ಪಟ್ಟಿದ್ದರು ಎಂಬುದಾಗಿ ನೋಡುತ್ತೇವೆ. "ನನ್ನ ಮುಂಖಾಂತರವಾಗಿ ನಿಮಗೆ ಪಾರಮಾರ್ಥಿಕವರವೇನಾದರೂ ದೊರಕಿ ನೀವು

ದೃಢವಾಗುವದಕ್ಕೋಸ್ಕರ ಅಂದರೆ ನಾನು ನಿಮ್ಮ ನಂಬಿಕೆಯಿಂದ ನಿವು ನನ್ನ ನಂಬಿಕೆಯಿಂದ ಸಹಾಯ ಹೊಂದಿ ಈ ಪ್ರಕಾರ ನಿಮ್ಮೊಂದಿಗೆ ನಾನು ಧೈರ್ಯಗೊಳ್ಳುವದಕ್ಕೋಸ್ಕರ ನಿಮ್ಮನ್ನು ನೋಡಬೇಕೆಂದು ಅಪೇಕ್ಷಿಸುತ್ತೇನೆ." "ಪಾಲುಹೊಂದಿ" ಎಂಬ ಪದವು ಗ್ರೀಕ್‌ನಲ್ಲಿ "ಮೆಟಾಡಿಡೋಮಿ" ಅಂದರೆ "ಒಂದು ಪಾಲನ್ನು ಕೊಡುವುದು, ಹಂಚುವುದು" ಎಂಬ ಅರ್ಥವಾಗಿದೆ 'ಮೆಟಾ' = ಜೊತೆ 'ಡಿಡೋಮಿ = ಕೊಡು, ಇದೇ ಪದವು ರೋಮಾಪುರದವರಿಗೆ 12:8, ಎಫೆಸದವರಿಗೆ 4:28 ಮತ್ತು ಲೂಕ 3:11 ರಲ್ಲಿ ಉಪಯೋಗಿಸಲ್ಪಟ್ಟಿದೆ. ಆದ್ದರಿಂದ ಆತ್ಮಿಕ ವರಗಳ ಹಂಚಿಕೆಯಿರುವಾಗ, ಕೊಡುವವನು ಮತ್ತು ಸ್ವೀಕರಿಸುವವರು ಇಬ್ಬರು ಬಲಪಡಿಸಲ್ಪಡುತ್ತಾರೆ. ಮತ್ತು ಒಟ್ಟಾಗಿ ಪ್ರೋತ್ಸಾಹ ಹೊಂದಿಕೊಳ್ಳುತ್ತಾರೆ.

ಪವಿತ್ರಾತ್ಮನು ಯಾವಾಗಲೂ ಯೇಸುಕ್ರಿಸ್ತನಲ್ಲಿ ಮಹಿಮೆ ಹೊಂದುತ್ತಾನೆ ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು. ಕರ್ತನಾದ ಯೇಸು ಯೋಹಾನ 16:14 ರಲ್ಲಿ ಪವಿತ್ರಾತ್ಮನ ಕುರಿತು "ನನ್ನನ್ನೇ ಮಹಿಮೆ ಪಡಿಸುವನು" ಎಂಬುದಾಗಿ ಹೇಳಿದ್ದಾನೆ.

ನಾವು ಪ್ರೀತಿಯಲ್ಲಿ ನಡೆಯುವಾಗ, ವರಗಳನ್ನು ಅಪೇಕ್ಷಿಸುವಾಗ ಮತ್ತು ನಂಬಿಕೆಯಿಂದ ಹೆಜ್ಜೆಯನ್ನಿಡುವಾಗ ಆತ್ಮನ ವರಗಳು ತೋರಿಬರುತ್ತವೆ

ನಾವು ವಚನಭಾಗದಲ್ಲಿ ನೋಡುವಾಗ, ನಾವು ಮೂರು ಅಗತ್ಯಕರ ಆತ್ಮನ ವರಗಳ ತೋರಿಬರುವಿಕೆ ನೋಡುತ್ತೇವೆ. ನಾವುಗಳು 1) ಪ್ರೀತಿಯಲ್ಲಿ ನಡೆಯಬೇಕು 2) ವರಗಳನ್ನು ಅಪೇಕ್ಷಿಸಬೇಕು ಮತ್ತು 3) ನಂಬಿಕೆಯಿಂದ ಹೆಜ್ಜೆಯನ್ನಿಡಬೇಕು. ವಿಶ್ವಾಸಿಗಳು ಇದನ್ನು ಮಾಡಲೂ ಉಪದೇಶಿಸಲ್ಪಟ್ಟಿದ್ದಾರೆ.

1 ಕೊರಿಂಥದವರಿಗೆ 12:11
ಈ ವರಗಳನ್ನೆಲ್ಲಾ ಆ ಒಬ್ಬ ಆತ್ಮನೇ ತನ್ನ ಚಿತ್ತಕ್ಕೆ ಬಂದ ಹಾಗೆ ಒಬ್ಬೊಬ್ಬನಿಗೆ ಹಂಚಿಕೊಟ್ಟು ನಡಿಸುತ್ತಾನೆ.

ಕೆಲವು ಸಾರಿ ಜನರು 1ಕೊರಿಂಥದವರಿಗೆ 12:11 ನೇ ವಚನವನ್ನು ಓದುತ್ತಾರೆ ಮತ್ತು "ಆತನ ಚಿತ್ತಕ್ಕೆ" ಎಲ್ಲವನ್ನು ಬಿಟ್ಟುಬಿಡುತ್ತಾರೆ ಮತ್ತು ಸಂಪೂರ್ಣವಾಗಿ ತಮ್ಮನ್ನೇ ತಾವೇ ಮನ್ನಿಸಿಕೊಳ್ಳುತ್ತಾರೆ. ಹೇಗಾದರೂ ನಾವು ಆತ್ಮನ ವರಗಳ ಕುರಿತು ಇತರೆ ಉಪದೇಶಗಳನ್ನು ನೋಡಬೇಕು ಮತ್ತು ಎಲ್ಲಾ ಸಲಹೆ ಸೂಚನೆಗಳಲ್ಲಿ ನಾವು ನಡೆಯಬೇಕು. ಹೌದು ಪವಿತ್ರಾತ್ಮನ ವರಗಳು ಪವಿತ್ರಾತ್ಮನನಿಂದ ಕಾರ್ಯಗತಗೊಳ್ಳುತ್ತವೆ. ಅಥವಾ ಕಾರ್ಯಚರಣೆಯಾಗುತ್ತವೆ ಎಂಬುದು ಸತ್ಯಕರವಾಗಿದೆ. ಇನ್ನೊಂದು ಕಡೆಯಲ್ಲಿ ನಾವು ಎರಡು ವಿಷಯಗಳನ್ನು ಪರಿಗಣಿಸಬೇಕು: ಮೊದಲನೇದಾಗಿ ಪವಿತ್ರಾತ್ಮನು ತುಂಬಾ

ಚಿತ್ತವುಳ್ಳವನಾಗಿದ್ದಾನೆ ಯಾಕೆಂದರೆ ಜೀವಿತಗಳನ್ನು ಆಶೀರ್ವದಿಸಲು ಮತ್ತು ಕ್ರಿಸ್ತನನ್ನು ಮಹಿಮೆಪಡಿಸಲು ತನ್ನನ್ನು ತಾನೇ ತೋರ್ಪಡಿಸಲು ಇಷ್ಟಪಡುತ್ತಾನೆ. ನಿಜವಾದ ಸಮಸ್ಯೆಯೆಂದರೆ, ಪವಿತ್ರಾತ್ಮನು ಸಿದ್ದನಾಗಿದ್ದಾನೆ ಆದರೆ ವಿಶ್ವಾಸಿಗಳೂ ಸಹ ಸಿದ್ದರಾಗಿದ್ದಾರಾ ? ಅನೇಕ ವಿಶ್ವಾಸಿಗಳು ಚಿತ್ತಪೂರ್ವರಾಗಿಲ್ಲ ಯಾಕಂದರೆ ಅವರಿಗೆ ಆತ್ಮಿಕ ವರಗಳ ಕುರಿತು ದೇವರ ವಾಕ್ಯದಲ್ಲಿ ತರಬೇತಿ ಹೊಂದಿಲ್ಲ ಮತ್ತು ಕಲಿಸಲ್ಪಟ್ಟಿಲ್ಲ ಎರಡನೇದಾಗಿ, ಪವಿತ್ರಾತ್ಮನ ವರಗಳನ್ನು ತೋರ್ಪಡಿಸಲು ಏನು ಮಾಡಬೇಕೆಂಬುದರ ಮೇಲೆ ವಿಶ್ವಾಸಿಗಳಿಗೆ ಸಲಹೆಗಳನ್ನು ಕೊಡಲ್ಪಟ್ಟಿವೆ ನಾವು ಆತ್ಮನ ವರಗಳ ತೋರ್ಪಡಿಸುವಿಕೆಗಳನ್ನು ನೋಡಬೇಕಾದರೆ, ಇಂತಹ ಸಲಹೆಗಳ ಮೇಲೆ ಕ್ರಿಯೆ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ.

1 ಕೊರಿಂಥದವರಿಗೆ 12:31
ಇವುಗಳಲ್ಲಿ ಶ್ರೇಷ್ಠವರಗಳನ್ನು ಆಸಕ್ತಿಯಿಂದ ಅಪೇಕ್ಷಿಸಿರಿ ಇನ್ನೂ ಉತ್ಕೃಷ್ಟವಾದ ಮಾರ್ಗವನ್ನು ನಿಮಗೆ ತೋರಿಸುತ್ತೇನೆ.

1 ಕೊರಿಂಥದವರಿಗೆ 14:1
ಪ್ರೀತಿಯನ್ನು ಅಭ್ಯಾಸಮಾಡಿಕೊಳ್ಳಿರಿ, ಆದರೂ ಪವಿತ್ರಾತ್ಮನಿಂದುಂಟಾಗುವ ವರಗಳನ್ನು ಅವುಗಳೊಳಗೆ ವಿಶೇಷವಾಗಿ ಪ್ರವಾದಿಸುವ ವರವನ್ನೇ ಆಸಕ್ತಿಯಿಂದ ಅಪೇಕ್ಷಿಸಿರಿ.

ಪ್ರೀತಿಯಲ್ಲಿ ನಡೆಯಿರಿ

ಆತ್ಮನ ವರಗಳ ಕುರಿತು ವಚನ ಭಾಗದಲ್ಲಿನ ಸೂಚ್ಯವು ಪ್ರೀತಿಯ ಅಧಿಕವಾಗಿ ಶ್ರೇಷ್ಠವಾದ ಮಾರ್ಗದಲ್ಲಿ ನಡೆಯುವುದು ಮತ್ತು ಪ್ರೀತಿಯನ್ನು ಹಿಂಬಾಲಿಸುವ ಸಲಹೆಯಾಗಿದೆ. ನಾವು ಜನರಿಗಾಗಿ ಪ್ರೀತಿಯಿಂದ ಪ್ರೇರಣೆಗೊಂಡಿರಬೇಕು ಮತ್ತು ಆತ್ಮನ ವರಗಳ ನಮ್ಮ ಅಭಿವ್ಯಕ್ತತೆಯು ಜನರು ಪ್ರೀತಿಯಿಂದ ಒಳಕವಚ ಹಾಕಿಕೊಳ್ಳಬೇಕು ಆದ್ದರಿಂದ ಆತ್ಮನ ವರಗಳನ್ನು ತೋರ್ಪಡಿಸುವುದರಲ್ಲಿ ಪ್ರೀತಿಯು ಮಾಡುವಂತದ್ದನ್ನು ನಾವು ಮಾಡುವವರಾಗಿರಬೇಕು. ಇದರ ಕುರಿತು ಅಧಿಕವಾಗಿ ಮುಂದಿನ ಅಧ್ಯಾಯದಲ್ಲಿ ನೋಡೋಣ.

ವರಗಳನ್ನು ಅಪೇಕ್ಷಿಸಿರಿ

ಪ್ರೀತಿಯಲ್ಲಿ ನಡೆಯುವುದರೊಂದಿಗೆ ಕೈ ಜೋಡಿಸಿಕೊಂಡು ಹೋಗುವಂತಹ ಧರ್ಮಶಾಸ್ತ್ರದಲ್ಲಿನ ಮತ್ತೊಂದು ಪ್ರಾಮುಖ್ಯ ತಡೆಯಾಜ್ಞೆಯು ಶ್ರದ್ದೆಯಿಂದ ಆತ್ಮಿಕ ವರಗಳನ್ನು ಅಪೇಕ್ಷಿಸುವುದಾಗಿದೆ. ಅದೇ ಗ್ರೀಕರ ಪದವಾದ “ಝೆಲೂ”

1ಕೊರಿಂಥದವರಿಗೆ 12:31 "ಆಸಕ್ತಿಯಿಂದ ಅಪೇಕ್ಷಿಸಿರಿ" ಎಂಬುದಾಗಿ ಭಾಷಾಂತರಿಸಲಾಗಿದೆ ಮತ್ತು 1ಕೊರಿಂಥದವರಿಗೆ 14:1 ದಲ್ಲಿ "ಅಪೇಕ್ಷಿಸಿರಿ" ಎಂಬುದಾಗಿ ಭಾಷಾಂತರಿಸಲಾಗಿದೆ. ಸ್ಟ್ರಾಂಗ್ಸ್ ಇಬ್ರಿಯ ಮತ್ತು ಗ್ರೀಕ್ ಶಬ್ದಕೋಶಗಳ ಪ್ರಕಾರವಾಗಿ "ಝೆಲೋ" ಪರವಾಗಿ ಅಥವಾ ವಿರುದ್ಧವಾಗಿ ಭಾವನೆಯ ಉಷ್ಣತೆಯನ್ನು ಹೊಂದಿರುವುದು, ಇದರ ಅರ್ಥವು ಶ್ರದ್ಧೆಯಿಂದ ಆಶೆಪಡುವುದು, ಅಪೇಕ್ಷೆ ಹೊಂದಿರುವುದು, ಅಸೂಯೆಯಿಂದ ಚಲಿಸುವುದು, ಅದರ ಮೇಲೆ ಹೊಟ್ಟೇಕಿಚ್ಚು ಹೊಂದುವುದು, ಉತ್ಸಾಹದಿಂದ ಪರಿಣಾಮ ಬೀರುವುದು ಎಂಬುದಾಗಿ ಅರ್ಥ.

ಥಾಯರ್ಸ್ ಗ್ರೀಕನ ವಿವರಣೆಗಳ ಪ್ರಕಾರವಾಗಿ "ಝೆಲೊ" ಎಂಬ ಕ್ರಿಯಾಪದವು, ಉತ್ಸಾಹದೊಡನೆ ಉರಿಯುವುದು; ಬಿಸಿಯಾಗಿರುವುದು ಅಥವಾ ಅಸೂಯೆಯಿಂದ ಕುದಿಯುತ್ತಿರುವುದು, ದ್ವೇಷ, ಕೋಪ, ಒಂದು ಒಳ್ಳೆಯ ಪ್ರಜ್ಞೆಯಲ್ಲಿ, ಒಳ್ಳೆಯದನ್ನು ಅನ್ವೇಷಿಸಲು ಉತ್ಸಾಹಭರಿತರಾಗಿರುವುದು, ಆಸಕ್ತಿಯಿಂದ ಅಪೇಕ್ಷಿಸುವುದು, ಹಿಂಬಾಲಿಸು, ಶ್ರದ್ಧೆಯಿಂದ ಒಬ್ಬರನ್ನು ಅಪೇಕ್ಷಿಸುವುದು, ನಂತರ ಶ್ರಮಿಸಲು, ಸ್ವತಃ ಕಾರ್ಯನಿರತವಾಗಿರು ಒಬ್ಬರಿಗಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದು (ಅವನು ನನ್ನಿಂದ ಹರಿದುಹೋಗದಂತೆ) ಇತರರ ಉತ್ಸಾಹದ ವಸ್ತುವಾಗಿರುವುದು, ಉತ್ಸಾಹದಿಂದ ಹುಡುಕುವುದು, ಅಸೂಯೆ ಪಡುವುದು.

ಆದ್ದರಿಂದ ಒಬ್ಬ ವಿಶ್ವಾಸಿಯು ಆತ್ಮಿಕ ವರಗಳನ್ನು ಅನ್ವೇಷಿಸುವುದು ಆಕಸ್ಮಿಕವಾಗಿರುವುದು ಅಥವಾ ಅವಸರದ ಅಥವಾ ನಿರ್ಲಕ್ಷ್ಯವಾದುದಲ್ಲ ಬದಲಿಗೆ ಎಲ್ಲಾ ವಿಶ್ವಾಸಿಗಳು ಆಸಕ್ತಿಯಿಂದ ಅಪೇಕ್ಷಿಸಿರಿ, ಉರಿಯುವ ಉತ್ಸಾಹದೊಡನೆ ಹಿಂಭಾಲಿಸುವುದು, ನಂತರ ಶ್ರಮಿಸುವುದು, ಯಾವುದಾದರ ಕಡೆಗೆ ನಿರಂತರ ಪರಿಶ್ರಮ ಮತ್ತು ಅದರ ಕುರಿತು ಕಾರ್ಯ ನಿರತವಾಗಿರುವುದು. ಯಾವುದೇ ಪರಿಸ್ಥಿತಿಯಲ್ಲೂ, ವರಗಳನ್ನು ಅಪೇಕ್ಷಿಸಿರಿ.

ನಂಬಿಕೆಯಿಂದ ಹೆಜ್ಜೆಹಾಕಿರಿ

ಗಲಾತ್ಯದವರಿಗೆ 3;2,5,14
2 ಒಂದು ಸಂಗತಿಯನ್ನು ಮಾತ್ರ ನಿಮ್ಮಿಂದ ತಿಳುಕೊಳ್ಳಬೇಕೆಂದಿದ್ದೇನೆ ನೀವು ದೇವರಾತ್ಮನನ್ನು ಹೊಂದಿದ್ದು ನೇಮನಿಷ್ಟೆಗಳನ್ನು ಅನುಸರಿಸಿದ್ದರಿಂದಲೋ? ಕೇಳಿ ನಂಬಿದ್ದರಿಂದಲೋ
5 ದೇವರು ತನ್ನ ಆತ್ಮನನ್ನು ನಿಮಗೆ ಹೇರಲವಾಗಿ ಕೊಟ್ಟು ನಿಮ್ಮಲ್ಲಿ ಮಹಾತ್ಕಾರ್ಯಗಳನ್ನು ನಡಿಸುತ್ತಾ ಬಂದದ್ದು ಯಾತರಿಂದಾಯಿತು? ನೀವು ನೇಮನಿಷ್ಟೆಗಳನ್ನನುಸರಿದ್ದರಿಂದಲೋ? ಕೇಳಿ ನಂಬಿದ್ದರಿಂದಲೋ ? ನಂಬಿದ್ದರಿಂದಲೇ.

14 ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ.

ದೇವರು ನಮಗೆ ಅತ್ಮನನ್ನು ಪೂರೈಸುತ್ತಾನೆ ಮತ್ತು ನಂಬಿಕೆಗೆ ಪ್ರತಿಕ್ರಿಯಿಸುವಾಗ ನಮ್ಮ ಮಧ್ಯದಲ್ಲಿ ಅದ್ಭುತ ಕಾರ್ಯಗಳನ್ನು ಮಾಡುತ್ತಾನೆ.

ರೋಮಾಪುರದವರಿಗೆ 12:6
ದೇವರು ನಮಗೆ ಕೃಪೆಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ. ಹೊಂದಿದ ವರವು ಪ್ರಾವದನೆಯ ರೂಪವಾಗಿದ್ದರೆನಮ್ಮ ವಿಶ್ವಾಸವರಕ್ಕೆ ತಕ್ಕ ಹಾಗೆ ಪ್ರವಾದನೆಹೇಳೋಣ.

ಆತ್ಮಿಕ ವರಗಳು ಮತ್ತು ಕೃಪೆಯನ್ನು ಅಭ್ಯಾಸಿಸುವುದರಲ್ಲಿ ನಂಬಿಕೆಯು ತೊಡಗಿಸಲ್ಪಟ್ಟಿದೆ ಮತ್ತು ನಾವು ಹೊಂದಿರುವ ನಂಬಿಕೆಯ ಪ್ರಮಾಣದಲ್ಲಿ ಇದನ್ನು ನಾವು ಮಾಡಬೇಕು ನಮ್ಮ ನಂಬಿಕೆಯು ಬೆಳೆಯುತ್ತದೆ (2ಥೆಸಲೋನಿಕದವರಿಗೆ 1:3) ಮತ್ತು ನಮ್ಮ ನಂಬಿಕೆಯ ಪ್ರಮಾಣವು ಹೆಚ್ಚಾಗುವಂತೆ, ಹೆಚ್ಚಿನ ತೋರ್ಪಸಿಸುವಿಕೆಗಳು ಮತ್ತು ದೊಡ್ಡದಾದ ಅಳತೆಗಳಲ್ಲ ಪ್ರವಾಧಿಸಲೂ ನಾವು ಶಕ್ತರಾಗುತ್ತೇವೆ.

ಗಲಾತ್ಯದವರಿಗೆ 5:6
ಕ್ರಿಸ್ತ ಯೇಸುವಿನಲ್ಲಿರುವವರಿಗೆ ಸುನ್ನತಿಯಾದರೂ ಪ್ರಯೋಜನವಿಲ್ಲ, ಆಗದಿದ್ದರೂ ಪ್ರಯೋಜನವಿಲ್ಲ ಪ್ರತಿಯಿಂದ ಕೆಲಸ ನಡಿಸುವ ನಂಬಿಕೆಯಿಂದಲೇ ಪ್ರಯೋಜನವಾಗಿದೆ.

ನಂಬಿಕೆಯ ಪ್ರೀತಿಯ ಮೂಲಕವಾಗಿ ಕೆಲಸ ನಡಿಸುತ್ತದೆ – ಮತ್ತು ನಾವು ಪ್ರೀತಿಯನ್ನು ಹಿಂಭಾಲಿಸುವಾಗ, ವಾಸ್ತವವಾಗಿ ನಂಬಿಕೆಯನ್ನು ಚಲಾಯಿಸುವುದಕ್ಕೆ ನಮ್ಮನ್ನು ನಾವೇ ಇರಿಸಿಕೊಳ್ಳುತ್ತೇವೆ.

ಒಟ್ಟಾರೆಯಾಗಿ, ವಿಶ್ವಾಸಿಗಳಾಗಿ, ನಾವು ನಿಷ್ಕ್ರಿಯರಾಗಿರಲು ಸಾಧ್ಯವಿಲ್ಲ. ಮತ್ತು ಪವಿತ್ರಾತ್ಮನು ತನ್ನ ವರಗಳನ್ನು ನಮ್ಮಿಂದ ಸ್ವತಂತ್ರವಾಗಿ ತೋರ್ಪಡಿಸುವುದನ್ನು ನಿರೀಕ್ಷಿಸಬಹುದು. ನಾವು ತೊಡಗಿಸಿಕೊಳ್ಳಬೇಕೆಂದು ಆತನು ಬಯಸುತ್ತಾನೆ. ನಾವು ಪ್ರತಿಯಲ್ಲ ನಡೆಯಬೇಕು, ಆತ್ಮಕ ವರಗಳನ್ನು ಅಪೇಕ್ಷಿಸಬೇಕು ಮತ್ತು ಆತ್ಮನ ವರಗಳನ್ನು ಪ್ರತಿ ಸಮಯದಲ್ಲಿ ತೋರ್ಪಡಿಸಲು ನಂಬಿಕೆಯಲ್ಲ ಹೆಜ್ಜೆಯನ್ನಿಡಬೇಕು.

ಪ್ರೀತಿಯಲ್ಲಿ ನಮ್ಮ ನಡೆಯುವಿಕೆ, ನಮ್ಮ ಆಸಕ್ತಿಯುಳ್ಳ ಅಪೇಕ್ಷೆ ಮತ್ತು ನಂಬಿಕೆಯಲ್ಲಿ ನಾವು ಹೆಜ್ಜೆಯನ್ನಿಡುವುದು, ಎಲ್ಲಾ ಕೆಲಸಗಳು ಪವಿತ್ರಾತ್ಮನ ಚಿತ್ತದೊಡನೆ ಮತ್ತು ವರಗಳನ್ನು ಕಾರ್ಯಮಾಡುವುದರೊಡನೆ ಸಂಯೋಜನೆಯಲ್ಲಿರುತ್ತದೆ. ಪವಿತ್ರಾತ್ಮನು

ಚಿತ್ತವುಳ್ಳವನಾಗಿದ್ದಾನೆ, ನೀವು ? ನೀವು ಪ್ರೀತಿಯಲ್ಲಿ ನಡೆಯಲು ಸಿದ್ದರಿದ್ದೀರಿ, ವರಗಳನ್ನು ಅಪೇಕ್ಷಿಸುತ್ತೀರ ಮತ್ತು ನಂಬಿಕೆಯಿಂದ ಹೆಜ್ಜೆಯಿಡುತ್ತಿರೊ ?

ಪ್ರತಿಯೊಬ್ಬ ವಿಶ್ವಾಸಿಯು ಎಲ್ಲಾ 9 ಆತ್ಮನ ವರಗಳನ್ನು ತೋರ್ಪಡಿಸಬಹುದು

1 ಕೊರಿಂಥದವರಿಗೆ 12:31
ಇವುಗಳಲ್ಲಿ ಶ್ರೇಷ್ಟ ವರಗಳನ್ನು ಆಸಕ್ತಿಯಿಂದ ಅಪೇಕ್ಷಿಸಿರಿ ಇನ್ನೂ ಉತ್ಕೃಷ್ಟವಾದ ಮಾರ್ಗವನ್ನು ನಿಮಗೆ ತೋರಿಸುತ್ತೇನೆ.

1 ಕೊರಿಂಥದವರಿಗೆ 14:11
ಪ್ರೀತಿಯನ್ನು ಅಭ್ಯಾಸಮಾಡಿಕೊಳ್ಳಿರಿ, ಆದರೂ ಪವಿತ್ರಾತ್ಮನಿಂದುಂಟಾಗುವ ವರಗಳನ್ನು ಅವುಗಳೊಳಗೆ ವಿಶೇಷವಾಗಿ ಪ್ರವಾದಿಸುವವರವನ್ನೇ ಆಸಕ್ತಿಯಿಂದ ಅಪೇಕ್ಷಿಸಿರಿ.

ಎಲ್ಲಾ ವಿಶ್ವಾಸಿಗಳು ಉತ್ತಮ ವರಗಳನ್ನು ಆಶೆಪಡಬೇಕೆಂದು ಮತ್ತು ಆತ್ಮಿಕ ವರಗಳನ್ನು ಅಪೇಕ್ಷಿಸಬೇಕೆಂದು ಸಲಹೆ ಹೊಂದಿದ್ದಾರೆ. ನಿಶ್ಚಿತವಾಗಿ ಯಾವ ವರಗಳನ್ನು ಅಥವಾ ವರಗಳ ಸಂಖ್ಯೆ ಇವರಡರಲ್ಲೂ ನಿರ್ಬಂಧಗಳಿಲ್ಲ – ಆತ್ಮನ 9 ವರಗಳಲ್ಲಿ ಯಾವುದನ್ನಾದರೂ ಬೇಕಾದರೂ ವಿಶ್ವಾಸಿಗಳು ಅಪೇಕ್ಷಿಸಬಹುದು ಎಂದು ಸೂಚಿಸುತ್ತದೆ. ಆದ್ದರಿಂದ ಆತ್ಮನ ಎಲ್ಲಾ 9 ವರಗಳನ್ನು ಪ್ರತಿಯೊಬ್ಬ ವಿಶ್ವಾಸಿಯೂ ತೋರ್ಪಡಿಸಬಹುದೆಂದು ನಾವು ವ್ಯಾಖ್ಯಾನಿಸುತ್ತೇವೆ.

ಆತ್ಮನ ವರಗಳು ಪವಿತ್ರಾತ್ಮನಿಗೆ ಸಂಬಂಧಿಸದವುಗಳಾಗಿವೆ ಆದ್ದರಿಂದ ಆತನು ಕಾರ್ಯ ಮಾಡುತ್ತಾನೆ, ಹಂಚುತ್ತಾನೆ ಮತ್ತು ಆತನ ವರಗಳನ್ನು ತೋರ್ಪಡಿಸಲು ಆತನೊಡನೆ ಸಹಕರಿಸಲೂ ಚಿತ್ತವುಳ್ಳವರಾಗಿರುವ ಯಾವುದೇ ವಿಶ್ವಾಸಿಯ ಮೂಲಕವಾಗಿ ಕಾರ್ಯಚರಣೆ ಮಾಡುತ್ತಾನೆ.

“ಒಬ್ಬನಿಗೆ ನೀಡಲಾಗಿದೆ ......” (1 ಕೊರಿಂಥದವರಿಗೆ 12:8) ನಿರ್ದಿಷ್ಟ ತ್ವರಿತ ಸಮಯದಲ್ಲಿನ ಗೌರವದೊಡನೆ ಮತ್ತು ವರಗಳನ್ನು ತೋರ್ಪಡಿಸುವ ಸಾಮರ್ಥ್ಯದ ದೃಷ್ಟಿಯಿಂದ ಅಲ್ಲವೆಂಬಂತೆ ಅರ್ಥಮಾಡಿಕೊಳ್ಳಬೇಕು1 ಕೊರಿಂಥದವರಿಗೆ 12,13 ಮತ್ತು 14 ಎಲ್ಲರೂ ಆಲೋಚನೆಯಲ್ಲಿ ಒಟ್ಟಿಗೆ ಹರಿಯುತ್ತಾರೆ. ಒಂದು ನಿರ್ದಿಷ್ಟ ಕೂಟದಲ್ಲಿ ವಿಶ್ವಾಸಿಗಳು ಒಟ್ಟಾಗಿ ಸೇರಿಬಂದಿರುವಾಗ (1 ಕೊರಿಂಥದವರಿಗೆ 12:26) ವಿಭಿನ್ನ ವರಗಳು ವಿಭಿನ್ನ ಜನರಿಗೆ ಆತ್ಮನಿಂದ ಹಂಚಲ್ಪಡುತ್ತವೆ. ಆನಂತರದ ಕೂಟಗಳಲ್ಲಿ ಹಂಚುವಿಕೆಯು ವಿಭಿನ್ನವಾಗಿರಬಹುದು ಅದು ಒಂದು ಕೂಟದಲ್ಲಿ ಜ್ಞಾನದ ವಾಕ್ಯಗಳನ್ನು ಪಡೆದವನು ಇನ್ನೊಂದು ಕೂಟದಲ್ಲಿ ಸ್ವಸ್ಥತೆಗಳ ವರವನ್ನು ತೋರ್ಪಡಿಸಬಹುದು.

“ಅತ್ಯುತ್ತಮ ವರಗಳು” ಸಂದರ್ಭಕ್ಕೆ ಅಗತ್ಯವಾದ ವರಗಳು ಮತ್ತು ಇರುವ ನಿರ್ದಿಷ್ಟ ಅಗತ್ಯತೆಗಳನ್ನು ಪೂರೈಸಲು ಮತ್ತು ಯೇಸುವನ್ನು ಮಹಿಮೆಪಡಿಸಲೂ ನಿಮ್ಮ ಕಾರ್ಯಕ್ಕೆ ಸೂಕ್ತವಾಗಿರುತ್ತದೆ

1 ಕೊರಿಂಥದವರಿಗೆ 12:31
ಇವುಗಳಲ್ಲಿ ಶ್ರೇಷ್ಟ ವರಗಳನ್ನು ಆಸಕ್ತಿಯಿಂದ ಅಪೇಕ್ಷಿಸಿರಿ ಇನ್ನೂ ಉತ್ಕೃಷ್ಟವಾದ ಮಾರ್ಗವನ್ನು ನಿಮಗೆ ತೋರಿಸುತ್ತೇನೆ.

ನಾವು ಶ್ರೇಷ್ಟವಾದ ವರಗಳನ್ನು ಅಪೇಕ್ಷಿಸಬೇಕು “ಶ್ರೇಷ” (ಉತ್ತಮ) ಎಂಬ ಪದವು ಗ್ರೀಕ್‌ನಲ್ಲಿ “ಅಧಿಕವಾಗಿ ಉಪಯುಕ್ತ, ಅಧಿಕ ಸೇವೆಗೆ ಯೋಗ್ಯವಾದದ್ದು, ಅಧಿಕ ಅನುಕೂಲಕರವಾಗಿರುವುದು, ಅಧಿಕ ಅತ್ಯುತ್ತಮವಾದದ್ದು” (ಥಾಯರ್ ಅವರ ಗ್ರೀಕ್ ವ್ಯಾಖ್ಯಾಗಳು) ಎಂಬುದಾಗಿ ಅರ್ಥ ಹೊಂದಿದೆ. “ಅತ್ಯುತ್ತಮ ವರ” ಇದು ಪರಿಸ್ಥಿತಿಗೆ ಶ್ರೇಷ್ಟವಾಗಿ ಸೂಕ್ತವಾಗಿರುವುದು ಮತ್ತು ನಿಮ್ಮ ಕ್ರಿಯೆಗೆ ಸೂಕ್ತವಾಗಿರುವವ ವರವಾಗಿದೆ.

ಆದ್ದರಿಂದ ಉದಾಹಣರಣೆಗೆ, ಒಬ್ಬ ವ್ಯಕ್ತಿಯು ಅಸ್ವಸ್ಥನಾಗಿದ್ದರೆ, ಸ್ವಸ್ಥತೆಯ ಅಗತ್ಯವಾಗಿದ್ದರೆ, ಅತ್ಯುತ್ತಮವಾದ ವರವು ಸ್ವಸ್ಥತೆಗಳ ವರಗಳಾಗಿದೆ ಮತ್ತು ಕೆಲವು ಪರಿಸ್ಥಿತಿಗಳಲ್ಲಿ ಒಬ್ಬ ವ್ಯಕ್ತಿಗಾಗಿ ಸಂಪೂರ್ಣತೆ ಮತ್ತು ಸ್ವಸ್ಥತೆಯನ್ನು ತರುವ ಕ್ರಮದಲ್ಲಿ ಗ್ರಹಿಕೆಯ ಆತ್ಮಗಳು ಮತ್ತು ನಂಬಿಕೆಯ ವರ, ಅದ್ಭುತ ಕಾರ್ಯಗಳನ್ನು ಮಾಡುವ, ಸ್ವಸ್ಥತೆಯನ್ನು ಮಾಡುವ ವರಗಳ ಸಂಯೋಜನೆಯು ಅವಶ್ಯಕವಾಗಿರುತ್ತದೆ. ಪ್ರವಾದನೆಯ ವರವು ರೋಗವುಳ್ಳ ವ್ಯಕ್ತಿಯನ್ನು ಪ್ರೋತ್ಸಾಹಿಸಬಹುದು ಆದರೆ ಅದು ಆ ಒಂದು ಪರಿಸ್ಥಿತಿಯಲ್ಲಿ ಅಗತ್ಯತೆಯನ್ನು ಪೂರೈಸುವ “ಶ್ರೇಷ್ಟ ವರಗಳು” ಆಗಿರುವುದಿಲ್ಲ.

ಆದ್ದರಿಂದ ಕೊಡಲ್ಪಟ್ಟಂತಹ ಪ್ರತಿಯೊಂದು ನಿದರ್ಶನಗಳಲ್ಲಿ ನಾವು ಸೇವೆ ಸಲ್ಲಿಸುವ ಜನರ ಅಗತ್ಯತೆಗಳನ್ನು ಪೂರೈಸಲು ತುಂಬಾ ಉಪಯುಕ್ತವಾದ ಆತ್ಮನ ವರಗಳನ್ನು ಆಸಕ್ತಿಯಿಂದ ನಾವು ಅಪೇಕ್ಷಿಸಬೇಕು.

ಆತ್ಮಿಕ ವಿಷಯಗಳನ್ನು ಕಲಿಸಬಹುದಾದ ಕಾರಣದಿಂದ, ವಿಶ್ವಾಸಿಗಳಿಗೆ ಆತ್ಮನ ವರಗಳನ್ನು ಬಿಡುಗಡೆಗೊಳಿಸಲು ಪವಿತ್ರಾತ್ಮನೊಡನೆ ಹೇಗೆ ಸಹಕರಿಸಬೇಕೆಂದು ಕಲಿಯಲು ತರಬೇತಿ ನೀಡಬಹುದು ಮತ್ತು ಕಲಿಸಬಹುದು

ಈ ಪುಸ್ತಕದಲ್ಲಿ ಪ್ರಸ್ತುತ ಪಡಿಸಿರುವಂತೆ ತರಬೇತಿ ಮತ್ತು ಕಲಿಯಬಹುದು ಎಂಬುದಾಗಿ ಕೆಲವು ಬಾರಿ ಜನರು ಪ್ರಶ್ನೆ ಕೇಳಬಹುದು. ಎಲ್ಲಾ ಆತ್ಮಿಕ ವರಗಳು ಪವಿತ್ರಾತ್ಮನ ಸಂಪೂರ್ಣವಾದ ಒಂದು ವಿಶೇಷ ಹಕ್ಕು ಮತ್ತು ಅಂತಹ ವಿಷಯಗಳಲ್ಲಿ ಜನರನ್ನು ನಾವು ತರಬೇತಿ ನೀಡಲಾಗುವುದಿಲ್ಲ ಎಂಬುದಾಗಿ ಅಭಿಪ್ರಾಯ ಹೊಂದಿರಬಹುದು. ಆದಾಗ್ಯೂ, ಜನರಿಗೆ ಆತ್ಮಿಕ ವಿಷಯಗಳಲ್ಲಿ ತರಬೇತಿ ನೀಡುವ ಹಲವಾರು ಸತ್ಯವೇದದ ಮತ್ತು ಪ್ರಯೋಗಿಕವಾದ ಉದಾಹರಣೆಗಳನ್ನು ಪರಿಗಣಿಸಿರಿ:

ಶಿಷ್ಯರನ್ನಾಗಿ ಮಾಡುವುದು ಆತ್ಮಿಕ ಶಿಸ್ತುಕ್ರಮ ಅಥವಾ ಆತ್ಮಿಕ ತರಬೇತಿಯ ಮೂಲಕವಾಗಿ ಜರುತ್ತದೆ

ಆತ್ಮಿಕ ವಿಷಯಗಳನ್ನು ಅನುಭವಿಸಲು ನಾವು ಜನರನ್ನು ಮುನ್ನಡೆಸಬಹುದು ಮತ್ತು ಕಲಿಸಬಹುದು. ಯೇಸುವು ಅವರಿಗೆ ಬೋಧಿಸಿದ ಎಲ್ಲಾ ವಿಷಯಗಳನ್ನು ಜನರಿಗೆ ಕಲಿಸುವಂತೆ ಅಪೊಸ್ತಲರು ಆದೇಶಾಧಿಕಾರ ಹೊಂದಿದ್ದರು - ಇದು ಒಂದು ಮಾಹಿತಿಯ ಕೇವಲ ಬೌದ್ಧಿಕ ಪ್ರಸರಣವಾಗಿರಲಿಲ್ಲ – ಆದರೆ ಒಂದು “ಶಿಷ್ಯರನ್ನಾಗಿ ಮಾಡುವಂತಹ” ಹೊಸ ಶಿಷ್ಯರುಗಳು ಅಪೊಸ್ತಲರು ಮಾಡಿದ ಅದೇ ವಿಷಯಗಳನ್ನು ಮಾಡಲೂ ಮತ್ತು ಗುರುವಿನಂತೆಯೇ ಇರುವ ಕೊನೆಯ ಫಲಿತಾಂಶದೊಡನೆ ಇರುವ ಪ್ರಕ್ರಿಯೆಯಾಗಿತ್ತು.

ಉದಾಹರಣೆಗೆ, ಉಚಿತವಾದ ರಕ್ಷಣೆಯ ವರವನ್ನು ಪಡೆಯಲು ಜನರನ್ನು ನಾವು ಮುನ್ನಡೆಸಬಹುದು (2 ಕೊರಿಂಥದವರಿಗೆ 6:1-2) ನಾವು ಸುವಾರ್ತೆ ಸಾರಿದಾಗ, ಯೇಸು ಕ್ರಿಸ್ತನಲ್ಲಿ ನಂಬಿಕೆಯಿಂದ ಈಗ ಅವರು ರಕ್ಷಿಸಲ್ಪಡುತ್ತಾರೆ ಎಂಬುದನ್ನು ಜನರು ತಿಳಿಯುವಂತೆ ಮಾಡುತ್ತೇವೆ. ಆಮೇಲೆ ಒಂದು ಹೆಜ್ಜೆ ಮುಂದೆ ಹೋಗಿ “ಪಾಪಿಗಳ ಪ್ರಾರ್ಥನೆ” ಅಥವಾ “ರಕ್ಷಣೆ ಪ್ರಾರ್ಥನೆ” ಇದರಲ್ಲಿ ಅವರನ್ನು ಮುನ್ನಡೆಸುತ್ತೇವೆ. ಆ ಮೇಲೆ ಅವರು ರಕ್ಷಣೆ ಹೊಂದಿದ್ದಾರೆ ಎಂಬುದಾಗಿ ಸಂತೋಷದಿಂದ ಘೋಷಿಸುತ್ತೇವೆ! ನಾವು ಒಬ್ಬ ವ್ಯಕ್ತಿಯನ್ನು ಉನ್ನತವಾದ ಆತ್ಮಿಕ ಅನುಭವಕ್ಕೆ ಅದು ಸುವಾರ್ತೆ ಸಾರುವುದರಿಂದ ಮತ್ತು ಯೇಸುವಿನ ಹೆಸರನ್ನು ಕರೆಯಲು ಅವರಿಗೆ ಸಹಾಯ ಮಾಡುವುದರಿಂದ ಮತ್ತು ಅವರ ನಂಬಿಕೆಯನ್ನು ಯೇಸು ಕ್ರಿಸ್ತನಲ್ಲಿ ತೋರಿಸುವುದರಿಂದ ಹೊಸದಾಗಿ ಹುಟ್ಟುವಂತದ್ದಕ್ಕೆ ಮುನ್ನಡೆಸುತ್ತೇವೆ. ವಾಸ್ತವವಾಗಿ ನಾವು ಇತರರನ್ನು ಸುವಾರ್ತೆಯಲ್ಲಿ ಮತ್ತು ಆತ್ಮಗೆಲ್ಲುವುದರಲ್ಲಿ ತರಬೇತಿಗೊಳಿಸುತ್ತೇವೆ. ಸುವಾರ್ತೆ ಸಾರುವುದು ಹೇಗೆ ಮತ್ತು ಹೊಸದಾಗಿ ಹುಟ್ಟುವುದರ ಅನುಭವಕ್ಕೆ ಜನರನ್ನು

ಮುನ್ನೆಡೆಸಲು ಅವರಿಗೆ ತರಬೇತಿ ನೀಡುತ್ತೇವೆ. ಆದ್ದರಿಂದ ರಕ್ಷಣೆಗಾಗಿ ನಾವು ಇದನ್ನು ಮಾಡುವುದಾದರೆ ಆತನ ವರಗಳನ್ನು ತೋರ್ಪಡಿಸಲು ಪವಿತ್ರಾತ್ಮದೊಡನೆ ಸಹಕರಿಸುವುದು ಹೇಗೆ, ಇತರೆ ಆತ್ಮಿಕ ವಿಷಯಗಳನ್ನು ಅನುಭವಿಸುವದಕ್ಕೆ ಹೆಜ್ಜೆಯಿಡುವುದು ಹೇಗೆ ಎಂಬುದನ್ನು ಖಂಡಿತವಾಗಿ ಜನರಿಗೆ ಬೋದಿಸಬಹುದು.

ಆ ಮೇಲೆ ಅವರನ್ನು ಕಟ್ಟುವಂತಹ ದೇವರ ವಾಕ್ಯವನ್ನು ಜನರಿಗೆ ಕಲಿಸಬಹುದು ಮತ್ತು ಅವರ ಆತ್ಮಿಕ ಸ್ವಾಸ್ಥ್ಯದಲ್ಲಿ ನಡೆಯಲು ಮತ್ತು ಪಡೆಯಲು ಅವರನ್ನು ಶಕ್ತಗೊಳಿಸಬಹುದು (ಅಪೊಸ್ತಲರ ಕೃತ್ಯಗಳು 20:32)

ಪೌಲನಿಂದ ತಿಮೊಥೆಯನು ಆತ್ಮಿಕ ವಿಷಯಗಳಲ್ಲಿ ತರಬೇತಿ ಹೊಂದಿದ್ದನು

1 ಕೊರಿಂಥದವರಿಗೆ 16:10
ತಿಮೊಥೆಯನು ಬಂದರೆ ಅವನು ನಿಮ್ಮ ಬಳಿಯಲ್ಲಿ ಭಯವಿಲ್ಲದೆ ಇರುವಂತೆ ನೋಡಿಕೊಳ್ಳಿರಿ ನನ್ನ ಹಾಗೆಯೇ ಕರ್ತನ ಕೆಲಸವನ್ನು ನಡಿಸುತ್ತಾನೆ.

2 ತಿಮೊಥೆಯನಿಗೆ 2:2
ನೀನು ನನ್ನಿಂದ ಅನೇಕ ಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸ ಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು.

"ನನ್ನ ಹಾಗೆಯೇ ಕರ್ತನ ಕೆಲಸವನ್ನು ನಡಿಸುತ್ತಾನೆ" ಎಂಬುದಾಗಿ ಪೌಲನು ತಿಮೊಥೆಯನಿಗೆ ಹೇಳುವಂತಹ ಸೇವೆಯಲ್ಲಿ ಒಂದು ಸ್ಥಳಕ್ಕೆ ತರಲ್ಪಡಲು ಅಪೊಸ್ತಲನಾದ ಪೌಲನಿಂದ ತರಬೇತಿ ಹೊಂದಿದ್ದ ಮತ್ತು ಕಲಿಸಲ್ಪಟ್ಟಂತಹ ಯೌವ್ವನಸ್ಥನು ತಿಮೊಥೆಯನಾಗಿದ್ದನು. ಆನಂತರ ಅಪೊಸ್ತಲನಾದ ಪೌಲನು ತಿಮೊಥೆಯನಿಗೆ ಕಲಿತದ್ದನ್ನು ಮುಂದೆ ದಾಟಿಸಲು ಮತ್ತು ಆತನು ಹೊಂದಿದ್ದನ್ನು ಇತರರಲ್ಲಿ ಸೇರಿಸಲು (ಅರ್ಥ ಠೇವಣಿಯಿಡಲೂ) ಉಪದೇಶಿಸಿದನು ಆದ್ದರಿಂದ ಅವರು ಸಹ ಇತರರಿಗೆ ಬೋಧಿಸುವವರಾಗಿರುತ್ತಿದ್ದರು. ಇವೆಲ್ಲವೂಗಳು ದೈವಿಕ ಸಿದ್ಧಾಂತವು ಮಾತ್ರವಲ್ಲದೆ ಆತ್ಮಿಕ ವಿಷಯಗಳೊಡನೆ ಮಾಡಲ್ಪಡಬೇಕು ಆದರೆ ಸೇವೆಯ ಅಭ್ಯಾಸದಲ್ಲಿರಬೇಕು.

ಆತ್ಮಿಕ ವರಗಳನ್ನು ಪ್ರಚೋದಿಸಲು ಪೌಲನ ನೀತಿಭೋಧೆ

ನಿರ್ದಿಷ್ಟ ವರಗಳಲ್ಲಿ ಅಧಿಕವಾದ ಹರಿಯುವಾಗ ಮತ್ತು ಅಭ್ಯಾಸಿಸುವಾಗ, ಆತ್ಮನ ಅಂತಹ ತೋರ್ಪಡಿಸುವಿಕೆಗಳನ್ನು ಅಧಿಕವಾಗಿ ಹೊಂದುವುದು ಸುಲಭವಾಗಿ ಕಂಡು ಬರುತ್ತದೆ. ವರಗಳು ಪ್ರೇರಿತಗೊಂಡಿರುವುದು ಅವಶ್ಯಕ, ಇಲ್ಲವಾದರೆ ನಿರ್ಲಕ್ಷ್ಯ ಅಥವಾ

ಭಯ ಮೂಲಕವಾಗಿ ಅವುಗಳ ಅಭಿವ್ಯಕ್ತತತೆಯಲ್ಲಿ ಅವರು ಕ್ಷೀಣವಾಗುತ್ತಾರೆ ವರಗಳ ಪಾಲುಕೊಡಬಹುದು, ಪ್ರಚೋದಿಸಲ್ಪಟ್ಟಂತಹ, ಸಕ್ರಿಯಗೊಂಡ ಅಥವಾ ನಾವು ಸಹಕಾರಿಯಾದಂತೆ ವರ್ದಿಸುವುದು, ಯಾರಿಂದ ಪಡೆದುಕೊಂಡೆವೆಂಬ ಅರ್ಥದಲ್ಲಿ ಮತ್ತು ತೋರ್ಪಡಿಸುವಿಕೆಗಳು ಮತ್ತು ಅಂತಹ ಆತ್ಮಿಕ ವರಗಳನ್ನು ಅಭ್ಯಾಸಿಸುವುದರೊಡನೆ ಮುಂದಿರುವ ಇತರರೊಡನೆ ಕೆಲಸ ಮಾಡಬಹುದು.

1 ತಿಮೊಥೆಯನಿಗೆ 4:14
ನಿನ್ನಲ್ಲಿರುವ ವರವನ್ನು ಅಲಕ್ಷ್ಯಮಾಡಬೇಡ ಸಭೆಯ ಹಿರಿಯರು ಪ್ರವಾದನೆಯ ಸಹಿತವಾಗಿ ನಿನ್ನ ಮೇಲೆ ಹಸ್ತಗಳನ್ನಿಟ್ಟಾಗ ಅದು ನಿನಗೆ ಕೊಡಲ್ಪಟ್ಟಿತಲ್ಲಾ.

2 ತಿಮೊಥೆಯನಿಗೆ 1:6-7
6 ಆದಕಾರಣ ನಾನು ನಿನ್ನ ತಲೆಯ ಮೇಲೆ ಹಸ್ತವನ್ನಿಟ್ಟಿದರ ಮೂಲಕ ನಿನಗೆ ಕೊರಕಿದ ದೇವರ ಕೃಪಾ ವರವು ಪ್ರಜ್ವಲಿಸುವಂತೆ ಮಾಡಬೇಕೆಂದು ನಿನಗೆ ಜ್ಞಾಪಕ ಕೊಡುತ್ತೇನೆ
7 ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ

ರೋಮಾಪುರದವರಿಗೆ 1:11
ನನ್ನ ಮುಖಾಂತರವಾಗಿ ನಿಮಗೆ ಪಾರಮಾರ್ಥಿಕವರವೇನಾದರೂ ದೊರಕಿ ನೀವು ದೃಡವಾಗುವದಕ್ಕೋಸ್ಕರ

ಕೊರಿಂದವರಿಗೆ ಪೌಲನ ಬರವಣಿಗೆಗಳು

ಅಪೊಸ್ತಲನಾದ ಪೌಲನು 18 ತಿಂಗಳನ್ನು ಕೊರಿಂಥದಲ್ಲಿ ಸಭೆಯನ್ನು ಸ್ಥಾಪಿಸಲು ಕಳೆದನು (ಅಪೊಸ್ತಲರ ಕೃತ್ಯಗಳು 18:11,18) ನಾವು ಹಿಂದೆ ನೋಡಿದಂತೆ, ಕೊರಿಂಥ ಸಭೆಯು ಎಲ್ಲಾ ಆತ್ಮನ ವರಗಳನ್ನು ಪ್ರದರ್ಶಿಸಿತ್ತಿತ್ತು. ಪೌಲನು ಆನಂತರ ಕೊರಿಂಥ ಸಭೆಗೆ ಪವಿತ್ರಾತ್ಮನ ವರಗಳನ್ನು ಸರಿಯಾದ ಕ್ರಮದಲ್ಲಿ ಉಪಯೋಗಿಸಬೇಕೆಂಬುದರ ಮೇಲೆ ಅವರಿಗೆ ಸಲಹೆಗಳನ್ನು ಬರೆಯುತ್ತಾನೆ(1ಕೊರಿಂಥದವರಿಗೆ 12-14). ಆದ್ದರಿಂದ ಆತ್ಮನ ವರಗಳನ್ನು ಕ್ರಮವಾಗಿ ಹೇಗೆ ಚಲಾಯಿಸಬೇಕು ಎಂಬುದರ ಮೇಲೆ ಅವರಿಗೆ ಮೂಲಭೂತವಾಗಿ ಅವನು ಸಲಹೆ (ತರಬೇತಿ, ಮಾರ್ಗದರ್ಶಿಸು, ಬೋಧಿಸುವುದು) ನೀದಿದ್ದಾನೆ, ಇಂದಿನ ವಿಶ್ವಾಸಿಗಳಿಗೆ ಸಲಹೆಗಳು,ತರಬೇತಿ ಮತ್ತು ಆತ್ಮನ ವರಗಳನ್ನು ತೋರ್ಪಡಿಸಲು ಪವಿತ್ರಾತ್ಮದೊಡನೆ ಹೇಗೆ ಸಹಕರಿಸಬೇಕೆಂಬುದರ ಮಾಗದರ್ಶನ ಬೇಕು.

ಹಳೇ ಒಡಂಬಡಿಕೆಯಲ್ಲಿ ಪ್ರವಾದಿಗಳ ಶಾಲೆಗಳು

ಹಳೇ ಒಡಂಬಡಿಕೆಯಲ್ಲಿ ಪ್ರವಾದಿಗಳ ಶಾಲೆಗಳಿದ್ದವು ಅಲ್ಲಿ ಪ್ರವಾದಿಗಳು ಪ್ರವಾದನೆ ಸೇವೆಗೆ ತರಬೇತಿ ಪಡೆದುದ್ದನ್ನು ನೋಡುವುದು ತುಂಬ ಆಸಕ್ತಿಕರವಾಗಿದೆ ಇದು ಹಳೇ ಒಡಂಬಡಿಕೆಯ ಅಧೀನದಲ್ಲಿ ಸಾಧ್ಯಕರವಾಗುವುದಾದರೆ ಹೊಸ ಒಡಂಬಡಿಕೆಯಲ್ಲಿ ಆತ್ಮೀಕ ವಿಷಯಗಳಲ್ಲಿ ತರಬೇತಿಯ ಸಾಧ್ಯತೆಯಗನ್ನು ತಳ್ಳಿಹಾಕಬಾರದು ದೇವರು ಸಮುವೇಲನನ್ನು ಪೋಷಿಸಿದನು ಮತ್ತು ಒಬ್ಬ ಪ್ರವಾದಿಯಾಗಿ ಎಬ್ಬಿಸಿದನು (1 ಸಮುವೇಲ 3:1-7 19-21,4-1) ಸಮುವೇಲನು ಆಮೇಲೆ ಇತರರಿಗಾಗಿ ತನ್ನ ಆರಂಭಿಕ ದಿನಗಳಲ್ಲಿ ಅವನು ಅಗತ್ಯವೆಂದು ಗ್ರಹಿಸಿದ್ದನ್ನು ಮಾಡಿದನು. ಸಮುವೇಲನು, ಇತರೆ ಪುರುಷರನ್ನು ಪ್ರವಾದನೆಯಲ್ಲಿ ತರಬೇತಿಗೋಳಿಸುವ "ಪ್ರವಾದಿಗಳ ಶಾಲೆಗಳು" ಎಂಬುದಾಗಿ ನಾವು ನೋಡುವುದನ್ನು ಸ್ಥಾಪಿಸಿದನು ಇದರ ಆರಂಭಿಕ ಉಲೇಖಗಳಲ್ಲಿ ಒಂದನ್ನು ನಾವು ನೋಡುತೇವೆ. ಸೌಲನು ಗಿಬಿಯಾ ನಗರಕ್ಕೆ ಹಿಂತಿರುಗಿ ಬಂದಾಗ "ದೇವಗಿರಿಯನ್ನು ಮುಟ್ಟಿದಾಗ ಮುಂಗಡೆಯಲ್ಲಿ ಸ್ವರಮಂಡಲ, ದಮ್ಮಡಿ ಕೊಳಲು, ಕಿನ್ನರಿ, ಈ ವಾದ್ಯಗಾರರೊಡನೆ ಗುಡ್ಡದಿಂದಿಳಿದು ಬರುತ್ತಿರುವ ಪ್ರವಾದಿ ಸಮೂಹವನ್ನು ಕಾಣುವಿ, ಅವರು ಪರವಶರಾಗಿ ಪ್ರವಾದಿಸುವರು" (1 ಸಮುವೇಲನು 10:5) ಹೀಗೆ ಅವನು ಸಂಧಿಸಿದನು. ಆನಂತರ 1 ಸಮುವೇಲನು 19:20 ರಲ್ಲಿ ನಾವು ಹೀಗೆ ಓದುತ್ತೇವೆ "ಅವರು ಹೋಗಿ ಅಲ್ಲಿನ ಪ್ರವಾದಿ ಸಮೂಹವು ಪರವಶರಾಗಿ ಮಾತಾಡುವುದನ್ನೂ ಸಮುವೇಲನು ಅವರ ನಾಯಕನಾಗಿ ನಿಂತಿರುವುದನ್ನು ಕಂಡಾಗ" ಈ ಪ್ರವಾದಿ ಸಮೂಹದವರಿಂದ, "ಪ್ರವಾದಿಗಳ ಶಾಲೆಗಳು" ಎಂಬ ವಿಚಾರವನ್ನು ನಾವು ಪಡೆಯುತ್ತೇವೆ. ಪ್ರವಾದನ ಸೇವೆ ಕಾರ್ಯಚಾರಣೆಯಲ್ಲಿ ಕರೆಯಲ್ಪಟ್ಟಂತಹ ಪುರುಷರು ಅವನಿಂದ ಕಲಿಯಲು ಸ್ಥಾಪಿತ ಪ್ರವಾದಿಯ ಸುತ್ತಲೂ ಒಟ್ಟುಗೂಡಿದರು ಎಂದು ತೋರುತ್ತದೆ. ಎಲೀಯ ಮತ್ತು ಎಲೀಷನ ಅವಧಿಯಲ್ಲಿ ಈ ಪ್ರವಾದಿಗಳ ಸಮೂಹದವರನ್ನು "ಪ್ರವಾದಿಗಳ ಪುತ್ರರು" ಎಂಬುದಾಗಿ ವರ್ಣಿಸಲಾಗಿದೆ. ಪ್ರವಾದಿಗಳ ಪುತ್ರರು (ಅಥವಾ ಪ್ರವಾದಿಗಳ ಶಾಲೆಗಳು) ವಿಭಿನ್ನ ಸ್ಥಳಗಳಲ್ಲಿ, ಬಹುಶಃ ಪ್ರಧಾನ ಕಛೇರಿಗಳಾಗಿದಂತಹ ಗಿಲ್ಗಾಲ (2ಅರಸುಗಳು2:1;4:38) ಬೇತೇಲ್ (2ಅರಸುಗಳು2:3) ಮತ್ತು ಯೆಹೋವಿನಲ್ಲಿ (2ಅರಸುಗಳು2:5) ವಾಸಿಸುತ್ತಿದ್ದರು. ಪ್ರವಾದಿಮಂಡಲಿಯವರು ಗಿಲ್ಗಾಲಿನಲ್ಲಿ ಪ್ರವಾದಿಯೊಡನೆ ವಾಸಿಸಿದರು. (2ಅರಸುಗಳು6:1) ಈ" ತರಬೇತುದಾರರು" ಒಬ್ಬ ಸೇವಕನ ಪಾತ್ರ ನಿರ್ವಹಿಸಿದರು ಮತ್ತು ಪ್ರವಾದಿಯ ಸೇವಕರು ಎಂಬುದಾಗಿಯು ಸಹ ವರ್ಣಿಸಲ್ಪಟ್ಟಿದ್ದಾರೆ(2ಅರಸುಗಳು 9:1,4). ಪ್ರವಾದಿಯ ಸೇವೆಗೆ ಕರೆಯಲ್ಪಟ್ಟವರು ಅಧಿಕ ಸಕಾಲದ ಪ್ರವಾದಿಯಿಂದ ಆ ಒಂದು ಸೇವೆಯಲ್ಲಿ ಕಾರ್ಯಮಾಡಲೂ ಸಜ್ಜುಗೊಂಡಿದ್ದಾರೆ ಮತ್ತು ತರಬೇತಿ ಹೊಂದಿರುತ್ತಾರೆ ಎಂಬುದಾಗಿ ನಾವು ಕಲ್ಪಿಸಿಕೊಳ್ಳಬಹುದು.

ಆಗಾಗ್ಗೆ, ಅನೇಕರ ವರಗಳು ದೇವರು ನೆರವೇರಿಸಬೇಕೆಂಬುದಾಗಿ ಬಯಸುವ ಒಂದು ನಿರ್ಧಿಷ್ಟ ಕೆಲಸವನ್ನು ಸಾಧಿಸಲೂ ಒಬ್ಬರಿಗೊಬ್ಬರೊಡನೆ ಸಂಯೋಗದಲ್ಲಿ ಹರಿಯಬಹುದು

ಆತ್ಮೀಕ ವರಗಳ / ವರ್ಗೀಕರಣ/ ವಿಂಗಡನೆ ಕುರಿತು ತುಂಬಾ ಕಠಿಣವಾಗಿ ನಾವುಗಳು ಕಂಡುಬರಬಾರದು. ಅನೇಕ ವರಗಳು ಒಟ್ಟಿಗೆ ಹರಿಯುವ " ವರ ಕಂತೆಗಳು" ಎಂಬಂತೆ ಇವುಗಳನ್ನು ನಾವು ವರ್ಣಿಸಲು ಬಯಸುತ್ತೇವೆ. ಉದಾಹರಣೆಗೆ ಜ್ಞಾನವಾಕ್ಯವು ಮತ್ತು ಸ್ವಸ್ಥತೆಯ ವರಗಳು ಆಗಾಗ್ಗೆ ಒಟ್ಟಾಗಿ ಹರಿಯುತ್ತವೆ, ಸ್ವಸ್ಥತೆಯು ಜರುಗುವುದರೊಡನೆ , ದೇವರು ಸ್ವಸ್ಥ ಮಾಡುವ ನಿರ್ದಿಷ್ಟ ಸ್ಥಿತಿಗತಿಗಳನ್ನು ಪ್ರಕಟಿಸುತ್ತದೆ.

ವರಗಳು ಸದಸ್ವತ್ವದ ವರಗಳು ಮತ್ತು ಸೇವೆ ವರಗಳನ್ನು ಬಲಗೊಳಿಸುತ್ತವೆ

ರೋಮಾಪುರದವರಿಗೆ 12-4-8
4 ಯಾಕೆಂದರೆ ನಮಗೆ ಒಂದೇ ದೇಹದಲ್ಲಿ ಬಹಳ ಅಂಗಗಳಿರಲಾಗಿ ಆ ಎಲ್ಲಾ ಅಂಗಗಳಿಗೆ ಹೇಗೆ ಒಂದೇ ಕೆಲಸ ಇರುವುದಿಲ್ಲವೋ
5 ಹಾಗೆಯೇ ನಾವೆಲ್ಲರು ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ.
6 ದೇವರು ನಮಗೆ ಕೃಪೆ ಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನುಹೊಂದಿದ್ದೇವೆ. ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸ ವರಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ
7 ಅದು ಸಭಾ ಸೇವೆಯ ರೂಪವಾಗಿದ್ದರೆ ಸಭಾ ಸೇವೆಯನ್ನು ಮಾಡುತ್ತಾ ಇರೋಣ.
8 ಬೋಧಿಸುವವನು ಬೋಧಿಸುವದರಲ್ಲಿಯೂ ಬುದ್ಧಿ ಹೇಳುವವನು ಬುದ್ಧಿ ಹೇಳುವುದರಲ್ಲಿಯೂ ನಿರತನಾಗಿರಲಿ. ದಾನ ಕೊಡುವವನು. ಆಸಕ್ತಿಯಿಂದ ನಡಿಸಲಿ ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವವನು ಸಂತೋಷವಾಗಿ ಮಾಡಲಿ

ಒಂಭತ್ತು ಆತ್ಮನ ವರಗಳು ವಿಶ್ವಾಸಿಗಳನ್ನು "ಉಪಕರಣಪೆಟ್ಟಿಗೆ" ರೀತಿ ರೂಪಿಸುತ್ತವೆ. ನಿಮ್ಮ ಸದಸ್ಯತ್ವ ವರಗಳು, ಪಾತ್ರ ಮತ್ತು ಕ್ರಿಯೆಯನ್ನು ಲೆಕ್ಕಿಸದೆ ನಿಮಗೆ ಆತ್ಮನ ವರಗಳು ಅಗತ್ಯವಾಗಿ ಬೇಕಾಗಿವೆ. ಅದೇರೀತಿಯಾಗಿ ನೀವು ಸೇವೆ ವರದ ಕ್ರಿಯೆಯಲ್ಲದ್ದರೆ, ಜನರಿಗೆ ಪರಿಣಾಮಕಾರಿಯಾಗಿ ಸೇವೆ ಮಾಡಲು ಇನ್ನೂ ನಿಮಗೆ ಆತ್ಮನ ವರಗಳು ಅವಶ್ಯಕವಾಗಿವೆ.

ಆತ್ಮನ ವರಗಳು ಆತ್ಮಿಕ ಪರಿಪಕ್ವತೆಯ ಸೂಚನೆಯಲ್ಲ

ನಾವು ಕೊರಿಂಥ ಸಭೆಯಲ್ಲಿ ನೋಡುವಂತೆ, ಅವರು ಆತ್ಮನ ಕಾರ್ಯಗಳಿಗೆ ತೆರೆದವರಾಗಿದ್ದರು ಮತ್ತು ಆತ್ಮನ ಅಧಿಕವಾದ ತೋರ್ಪಡಿಸುವಿಕೆಗಳನ್ನು ಹೂಂದಿದ್ದರು. ಅವರಿಗೆ ಯಾವುದೇ ಆತ್ಮಿಕ ವರಗಳಲ್ಲಿ ಕೊರತೆಯಿರಲಿಲ್ಲಿ. ಆದಾಗ್ಯೂ ಅಪೋಸ್ತಲನಾದ ಪೌಲನು ಅವರನ್ನು ಕ್ರಿಸ್ತರಲ್ಲಿ ಆತ್ಮಿಕ ಶಿಶುಗಳೆಂದು ಕರೆಯುತ್ತಾನೆ.

1 ಕೊರಿಂಥದವರಿಗೆ 1:4-7
4 ಕ್ರಿಸ್ತ ಯೇಸುವಿನಲ್ಲಿ ದೇವರು ನಿಮಗೆ ಅನುಗ್ರಹಿಸಿದ ಕೃಪೆಯ ನಿಮಿತ್ತ ನಾನು ನಿಮ್ಮ ವಿಷಯದಲ್ಲಿ ಯಾವಾಗಲೂ ದೇವರನ್ನು ಕೊಂಡಾಡಯತ್ತೇನೆ
5-6 ಯಾಕೆಂದರೆ ಕ್ರಿಸ್ತನ ವಿಷಯವಾದ ಸಾಕ್ಷಿಯು ನಿಮ್ಮಲ್ಲಿ ದೃಢವಾಗಿ ನೆಲೆಗೊಂಡ ಕಾರಣ ನೀವು ಎಲ್ಲಾ ನುಡಿಯಲ್ಲಿಯೂ ಎಲ್ಲಾ ತಿಳುವಳಿಕೆಯಲ್ಲಿಯೂ ಆತನಲ್ಲಿ ಸಮೃದ್ಧಿ ಹೊಂದಿದವರಾಗಿದ್ದೀರಿ
7 ಹೀಗೆ ನೀವು ಯಾವ ಕೃಪಾವರದಲ್ಲಿಯೂ ಕೊರತೆಯಿಲ್ಲದವರಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ ಇದ್ದೀರಿ.

1 ಕೊರಿಂಥದವರಿಗೆ 3.1
ಸಹೋದರರೇ ನಾವಂತೂ ದೇವರಾತ್ಮನಿಂದ ನಡಿಸಿಕೊಳ್ಳುವವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಲಾರದೆ ಪ್ರಾಪಂಚಿಕರೂ, ಕ್ರಿಸ್ತನ ವಿಷಯದಲ್ಲಿ ಎಳೆಗೂಸುಗಳೂ ಆಗಿರುವಂಥವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಬೇಕಾಯಿತು.

ಆತ್ಮಿಕ ಸೂಕ್ಷ್ಮತೆ ಮತ್ತು ಆತ್ಮಿಕ ಪರಿಪಕ್ವತೆ ನಡುವೆ ವ್ಯತ್ಯಾಸವಿದೆ ನಾವು ಆತ್ಮಿಕವಾಗಿ ಸೂಕ್ಷ್ಮತೆಯುಳ್ಳವರಾಗಿರಬಹುದು ಮತ್ತು ಆತ್ಮನ ವಿಷಯಗಳಿಗೆ ತೀಕ್ಷ್ಣವಾಗಿರಬಹುದು ಆತನ ವರಗಳ ತೋರಿಬರುವಿಕೆ ಮತ್ತು ಪವಿತ್ರಾತ್ಮನ ಚಲನೆಗೆ ನಾವು ತೀಕ್ಷ್ಣತೆಯುಳ್ಳವರು ಮತ್ತು ಹೊಣೆಗಾರರಾಗಿದ್ದೇವೆ ಇದು ನಮ್ಮನ್ನು ಉತ್ಸಾಹಭರಿತರು, ಭಾವೋದ್ರಿಕ್ತರು ಅಪ್ರಾಕೃತದ ಕುರಿತು ಪರಿಪೂರ್ಣ ನಂಬಿಕೆಯುಳ್ಳವರಾಗಿ ಮಾಡುತ್ತದೆ. ಆತ್ಮಿಕ ಪರಿಪಕ್ವತೆಯು ನಮ್ಮ ಗುಣನಡತೆ ಆತ್ಮಿಕ ತಿಳುವಳಿಕೆಯಲ್ಲಿನ ಬೆಳವಣಿಗೆ ಮತ್ತು ಕ್ರಿಸ್ತನ ಸ್ವಾರೂಪ್ಯದಲ್ಲಿ ಬೆಳೆಯುವುದರೊಂದಿಗೆ ವ್ಯವಹರಿಸುವುದಾಗಿದೆ. ಎರಡರಲ್ಲೂ ನಾವು ಪ್ರಗತಿ ಹೊಂದುವುದು ಅವಶ್ಯಕ.

ಆದಾಗ್ಯೂ, ಅಪಾಯಕಾರಿಯಾದುದೆಂದರೆ ವಿಶ್ವಾಸಿಯು ತುಂಬಾ ಆತ್ಮಿಕವಾಗಿ ಸೂಕ್ಷ್ಮತೆಯುಳ್ಳವರಾಗಿರಬಹುದು ಆದಾಗ್ಯೂ ಆತ್ಮಿಕವಾಗಿ ತುಂಬಾ ಪರಿಪಕ್ವವಲ್ಲದರಾಗಿರಬಹುದು ಆದುದರಿಂದ ಈ ಎರಡು ಕ್ಷೇತ್ರಗಳಲ್ಲಿ ಒಬ್ಬರಿಗೊಬ್ಬರು ಸಹಾಯಮಾಡಲೂ ಒಬ್ಬರಿಗೊಬ್ಬರು ಬೆಳೆಯಲು ಅವಶ್ಯಕರಾಗಿದ್ದಾರೆ.

ಆತ್ಮನ ವರಗಳು ಯಾವುದೇ ಸಮಯ, ಎಲ್ಲಿಯಾದರೂ ತೋರ್ಪಡಿಸಲ್ಪಡಬಹುದು

ಆತ್ಮನ ವರಗಳು ವಿಶ್ವಾಸಗಳ ಮೂಲಕವಾಗಿ ಎಲ್ಲಿಯಾದರೂ ಮತ್ತು ಯಾವುದೇ ಸಮಯದಲ್ಲಿ ತೋರ್ಪಡಿಸಲ್ಪಡಬಹುದು. ಅದ್ದರಿಂದ ಎಲ್ಲಾ ಸಮಯದಲ್ಲಿ ವರಗಳನ್ನು ಅಪೇಕ್ಷಿಸಬಹುದು. ಅದರಿಂದ ಎಲ್ಲಾ ಸಮಯದಲ್ಲಿ ವರಗಳನ್ನು ಅಪೇಕ್ಷಿಸಬೇಕು, ದೇವರ ಆತ್ಮದೊಡನೆ ಕೆಲಸ ಮಾಡಲು ಸಿದ್ದರಿರಬೇಕು. ಆತ್ಮನ ವರಗಳು ಪ್ರತಿದಿನದ ಜೀವಿತದಲ್ಲಿ ನಿಮ್ಮ ಮನೆಯಲ್ಲಿ ನಿಮ್ಮ ಶಾಲೆಯಲ್ಲಿ/ಕಾಲೇಜಿನಲ್ಲಿ/ ಕೆಲಸದ ಸ್ಥಳದಲ್ಲಿ ಮತ್ತು ಎಲ್ಲಿಯಾದರು ಜನರಿಗೆ ಸೇವೆಸಲ್ಲಿಸುವಾಗ ತೋರ್ಪಡಿಸಲ್ಪಡುತ್ತವೆ. ಈ ಬೋಧನೆಗಳಲ್ಲಿ

ವಿಶ್ವಾಸಗಳು ತರಬೇತಿ ಹೊಂದುವುದು ಮತ್ತು ಯಾವುದೇ ಸಮಯ ಎಲ್ಲಿಯಾದರೂ ಆತ್ಮನ ವರಗಳನ್ನು ಬಿಡುಗಡೆಗೊಳಿಸಲು ಹರಿಯುವುದು ನಮ್ಮ ಗುರಿಯಾಗಿದೆ.

ಆತ್ಮನ ವರಗಳು ಎಲ್ಲಾ ಬಗೆಯ ಜನರಿಗೆ ಸೇವೆ ಸಲ್ಲಿಸಲು ಉಪಯೋಗಿಸಲ್ಪಡುತ್ತವೆ

1 ಕೊರಿಂಥದವರಿಗೆ 14:22-25
22 ಆದದರಿಂದ ವಾಣಿಗಳನ್ನಾಡುವದು ನಂಬದವರಿಗೆ ಸೂಚನೆಗಳಾಗಿದೆ ಹೊರತು ನಂಬುವವರಿಗೆ ಸೂಚನೆಯಲ್ಲವೆಂದು ನಾವು ತಿಳುಕೊಳ್ಳಬೇಕು, ಆದರೆ ಪ್ರವಾದನೆಯು ನಂಬದವರಿಗೋಸ್ಕರವಲ್ಲ ನಂಬದವರಿಗೆ ಸೂಚನೆಗಾಗಿದೆ ಹೊರತು ನಂಬುವವರಿಗೆ ಸೂಚನೆಲ್ಲವೆಂದು ನಾವು ತಿಳುಕೊಳ್ಳಬೇಕು ಆದರೆ ಪ್ರವಾದನೆಯು ನಂಬದವರಿಗೋಸ್ಕರವಲ್ಲ ನಂಬುವವರಿಗೋಸ್ಕರವಾಗಿದೆ
23 ಹೀಗಿರುವಲ್ಲಿ ಸಭೆಯಲ್ಲಿ ಒಂದೇ ಸ್ಥಳದಲ್ಲಿ ಕೂಡಿ ಬಂದಾಗ ಎಲ್ಲರೂ ವಾಣಿಗಳನ್ನಾಡಿದರೆ ಈ ವರವನ್ನು ಹೊಂದದಿರುವ ಸಭೆಯವರು ಅಥವಾ ಕ್ರಿಸ್ತ ನಂಬಿಕೆಯಿಲ್ಲದವರು ಒಳಗೆ ಬಂದು ನೋಡಿ ನಿಮ್ಮಲ್ಲಿ ಹುಚ್ಚು ಹಿಡಿದಿದೆ ಎಂದು ಹೇಳುವದಿಲ್ಲವೋ?
24 ಆದರೆ ನೀವೆಲ್ಲರು ಪ್ರವಾದಿಸುತ್ತಿರಲು ಕ್ರಿಸ್ತ ನಂಬಿಕೆಯಿಲ್ಲದವನಾಗಲಿ ಈ ವರವಿಲ್ಲದವನಾಗಲಿ ಒಳಗೆ ಬಂದರೆ ಅವನು ಎಲ್ಲರ ಮಾತನ್ನು ಕೇಳಿ ತಾನು ಪಾಪಿಯೆಂಬ ಅರುಹನ್ನು ಹೊಂದವನು ಎಲ್ಲರ ಮಾತಿನಿಂದ ಪರಿಶೋಧಿತನಾಗುವನು
25 ಅವನ ಹೃದಯದ ರಹಸ್ಯಗಳು ಬೈಲಾಗುವವು ಮತ್ತು ಅಡ್ಡಬಿದ್ದು ದೇವರನ್ನು ಆರಾಧಿಸಿ ದೇವರು ನಿಜವಾಗಿ ನಿಮ್ಮಲ್ಲಿದ್ದಾನೆಂಬದನ್ನು ಪ್ರಚಾರ ಪಡಿಸುವನು.

ದೇವರ ಆತ್ಮನು ವಿಶ್ವಾಸಿಗಳ ಮೂಲಕವಾಗಿ ಕಾರ್ಯಮಾಡಬಹುದು ಮತ್ತು ಎಲ್ಲಾ ವಿಧವಾದ ಜನರನ್ನು ಮುಟ್ಟಲು ಈ ವರಗಳ ಮೂಲಕವಾಗಿ ತನ್ನನ್ನೇ ತೋರ್ಪಡಿಸಬಹುದು: ವಿಶ್ವಾಸಿಗಳು, ಅವಿಶ್ವಾಸಿಗಳು, ನಾಸ್ತಿಕರು: ವಿಶ್ವಾಸಿಗಳು, ಅಜ್ಞೇಯತಾವಾದಿಗಳು ಮುಂತಾದವರು ಆದ್ದರಿಂದ ನಾವು ಸೀಮಿತಗೊಳ್ಳಬಾರದು ಅಥವಾ ಎಲ್ಲಾ ಬಗೆಯ ಜನರನ್ನು ಸಂಧಿಸಲು ಮತ್ತು ಆತ್ಮನ ವರಗಳ ಮೂಲಕ ಅವರಿಗೆ ತನ್ನನ್ನು ತೋರ್ಪಡಿಸಲು ಪವಿತ್ರಾತ್ಮನು ಅಪೇಕ್ಷಿಸುವುದರಿಂದ ನಮ್ಮನ್ನು ಹಿಡಿದಿಟ್ಟುಕೊಳ್ಳಬಾರದು.

ಆತ್ಮನ ತೋರ್ಪಡಿಸುವಿಕೆಗಳು ಒಂದು ನಿರ್ಧಿಷ್ಟ ವೈಯಕ್ತಿಕ ಅಥವಾ ಇತರೆ ಸಮಯಗಳಲ್ಲಿ ಒಬ್ಬ ವ್ಯಕ್ತಿಗಿಂತ ಅಧಿಕವಾದವರಿಗೆ ಸಂಬಂಧಿತವಾಗಿರಬಹುದು

ಉದಾಹರಣೆಗೆ ಒಬ್ಬ ನಿರ್ಧಿಷ್ಟವಾದ ವ್ಯಕ್ತಿಗೆ ಪ್ರವಾದನೆಯ ವಾಕ್ಯವನ್ನು ಕೊಡಲು ಪವಿತ್ರಾತ್ಮನು ನಿಮಗೆ ವಾಕ್ಯ ಕೊಡುವ ಸಮಯಗಳುಂಟು. ಪ್ರವಾದನೆಯ ವಾಕ್ಯಗಳು ಒಂದು ಗುಂಪಿಗಾಗಿ ಅಥವಾ ಅನೇಕ ವ್ಯಕ್ತಿಗಳಿಗಾಗಿರುವ ಸಮಯಗಳುಂಟು. ಅದೇ ರೀತಿಯಾಗಿ ಇತರೆ ಎಲ್ಲಾ ವರಗಳೊಡನೆ ಪವಿತ್ರಾತ್ಮನು ನಿರ್ಧಿಷ್ಟವಾಗಿ ಒಬ್ಬ ವ್ಯಕ್ತಿಗೆ

ಸೇವೆಸಲ್ಲಿಸಲು ಮತ್ತು ಇತರೆ ಸಮಯದಲ್ಲಿ ಏಕಕಾಲದಲ್ಲಿ ಅನೇಕ ಜನರನ್ನು ಮುಟ್ಟುವುದರಲ್ಲಿ ಸೇವೆ ಸಲ್ಲಿಸಬಹುದು ಇಲ್ಲಿ ಮತ್ತೊಮ್ಮೆ ದೇವರ ಆತ್ಮದೊಡನೆ ನಾವು ಹರಿಯಬೇಕು ಮತ್ತು ಆತನು ಸೇವೆಸಲ್ಲಿಸಲು ಆರಿಸಿಕೊಳ್ಳುತ್ತಾನೆ. ಎಂಬುದನ್ನು ಅಥವಾ ನಮ್ಮ ಮೂಲಕವಾಗಿ ತನ್ನನ್ನು ತೋರ್ಪಡಿಸಲು ಆತ್ಮನು ಆರಿಸಿಕೊಳ್ಳುವುದನ್ನು ಮಿತಿಗೊಳಿಸಬಾರದು.

ಸಾಮೂಹಿಕ ನಿರೀಕ್ಷೆ ಮತ್ತು ಬಯಕೆಯು ಒಂದು ಸೇರಿಬರುವಿಕೆಯಲ್ಲಿ ಆತ್ಮನ ವರಗಳ ತೋರ್ಪಡಿಸುವಿಕೆಯನ್ನು ಹೆಚ್ಚಿಸುತ್ತವೆ

ನಾವು ಹಿಂದೆ ಹೇಳಿದಂತೆ, ಕೋರಿಂಥ ಸಭೆಯು ಆತ್ಮಿಕ ವರಗಳಿಗೆ ತುಂಬಾ ಉತ್ಸಾಹಭರಿತರಾಗಿದ್ದಂತಹ ಜನರ ಗುಂಪು ಆಗಿತ್ತು ಮತ್ತು ಅವರ ಸ್ಥಳೀಯ ಸಭೆಯ ಕೂಡಿಬರುವಿಕೆಯಲ್ಲಿ ಒಟ್ಟಾಗಿ, ತುಂಬಾ ಉತ್ಸಾಹದೊಡನೆ, ಬಂದಿದ್ದರು ಆದ್ದರಿಂದ ಅವರು ಒಬ್ಬರಿಗೊಬ್ಬರು ಆತ್ಮನ ವರಗಳೊಡನೆ ಆಶೀರ್ವದಿಸಿದರು ಮತ್ತು ಅದನ್ನು ಅವರು ಅನುಭವಿಸಿದರು.

1 ಕೊರಿಂಥದವರಿಗೆ 14:12
ಹಾಗೆಯೇ ನೀವೂ ಆತ್ಮ ಪ್ರೇರಿತವಾದ ನುಡಿಗಳನ್ನಾಡುವದಕ್ಕೆ ಅಪೇಕ್ಷಿಸುವವರಾಗಿರುವದರಿಂದ ಸಭೆಗೆ ಭಕ್ತಿವೃದ್ಧಿ ಉಂಟಾಗುವ ಹಾಗೆ ಅದಕ್ಕಿಂತಲೂ ಹೆಚ್ಚಾದದ್ದನ್ನು ಮಾಡುವುದಕ್ಕೆ ಪ್ರಯತ್ನಿಸಿರಿ.

1 ಕೊರಿಂಥದವರಿಗೆ 14:26
ಹಾಗಾದರೇನು, ಸಹೋದರರೇ? (ಏನು, ಆಮೇಲೆ ಇದರರ್ಥ, ಸಹೋದರರೇ ? ಎಂಬುದಾಗಿ ಅರ್ಥ) ನೀವು ಕೂಡಿ ಬಂದಿರುವಾಗ ಒಬ್ಬನು ಹಾಡುವದು. ಒಬ್ಬನು ಉಪದೇಶ ಮಾಡುವದೂ, ಒಬ್ಬನು ತನಗೆ ಪ್ರಕಟವಾದದ್ದನ್ನು ತಿಳಿಸುವದೂ, ಒಬ್ಬನು ವಾಣಿಯನ್ನಾಡುವದೂ ಒಬ್ಬನು ಅದರ ಅರ್ಥವನ್ನು ಹೇಳುವದೂ ಉಂಟಷ್ಟೇ ನೀವು ಏನು ನಡಿಸಿದರೂ ಭಕ್ತಿವೃದ್ಧಿಗಾಗಿಯೇ ನಡಿಸಿರಿ

ಕೂಡಿಬರುವಿಕೆಯಲ್ಲಿ ಜನರ ನಂಬಿಕೆ, ಅಪೇಕ್ಷೆ ಮತ್ತು ನಿರೀಕ್ಷೆಯನ್ನು ಹೆಚ್ಚಿಸಲು ಸೇವೆಸಲ್ಲಿಸುವಾಗ ನಾವು ಮಾಡಬೇಕಾದುದೇನು:

- **ಕಥೆಗಳನ್ನು ಹಂಚಿರಿ** : ಎಲ್ಲಿಯಾದರೂ ಮತ್ತು ಯಾವಾಗಲಾದರೂ ಸಾಧ್ಯವಾದರೆ ನಿಜ ಜೀವನದ ಕಥೆಗಳನ್ನು ಹಂಚಿಕೊಳ್ಳಿರಿ. ಆದರೆ ಯಾವಾಗಲೂ ಇದನ್ನು ಜನರನ್ನು ಕರ್ತನ ತಡೆಗೆ ದೃಷ್ಟಿಸಲು ಮತ್ತು ಯಾವುದೇ ವ್ಯಕ್ತಿಯ ಕಡೆಗೆ ಗಮನ ಸೆಳೆಯದಂತೆ ಮಾಡಿರಿ.

• **ವಾಕ್ಯವನ್ನು ಬೋಧಿಸಿರಿ/ಪ್ರಸರಿಸಿರಿ** : ಜನರ ಹೃದಯಗಳಲ್ಲಿ ನಂಬಿಕೆಯನ್ನು ಕಟ್ಟಲು, ಅವರ ಮೂಲಕವಾಗಿ ಮತ್ತು ಅವರ ಮಧ್ಯದಲ್ಲಿ ದೇವರ ಕಾರ್ಯ ಮಾಡುತ್ತಾನೆಂಬುದನ್ನು ಪ್ರಕಟಿಸಲು ದೇವರವಾಕ್ಯವನ್ನು ಬೋಧಿಸಿರಿ ಮತ್ತು ಪ್ರಸಂಗಿಸುವುದನ್ನು ಮುಂದುವರೆಸಿರಿ. ಅವರಿಗಾಗಿ ಎಲ್ಲವನ್ನು ದೇವರ ಪುರುಷ ಅಥವಾ ಸ್ತ್ರೀಯು ಮಾಡಲಿ ಎಂಬುದಾಗಿ ಆತುಕೊಂಡಿರುವ ಮತ್ತು ಪ್ರೇಕ್ಷಕರಾಗಿರುವುದರಿಂದ ದೂರ ಸೆಳೆಯಿರಿ.

• **ತೋರಿಸಿರಿ** : ಮಾದರಿಯಾಗಿರಿ. ಆತ್ಮನು ಚಲಿಸುವಂತೆ ದೇವರ ಬಲವನ್ನು ತೋರ್ಪಡಿಸಿರಿ. ಮತ್ತು ಜನರು ಕೇಳಲಿ ಮತ್ತು ಆತ್ಮದ ಕೆಲಸವು ಹೇಗಿರುತ್ತದೆ ಎಂದು ನೋಡಲಿ. ಆಮೇಲೆ ಅವರು ತಮ್ಮಲ್ಲೆ ಮಾಡಿಕೊಳ್ಳಲೂ ಭರವಸೆಯುಳ್ಳವರಾಗುತ್ತಾರೆ.

ಆತ್ಮನ ವರಗಳು" ಪರೀಕ್ಷಿಸಲ್ಪಡಬೇಕು"

1 ಥೆಸಲೋನಿಕದವರಿಗೆ 5:19-21
19 ಪವಿತ್ರಾತ್ಮನನ್ನು ನಂದಿಸಬೇಡಿರಿ,
20 ಪ್ರವಾದನೆಗಳನ್ನು ಹೀನೈಸಬೇಡಿರಿ
21 ಆದರೆ ಎಲ್ಲವನ್ನೂ ಪರಿಶೋಧಿಸಿ ಒಳ್ಳೆದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ.

ಪವಿತ್ರಾತ್ಮನ ಕೆಲಸಕ್ಕೆ ಕುರಿತಂತೆ, ಆತನ ಕಾರ್ಯವನ್ನು ನಂದಿಸಬಾರದು, ಪ್ರವಾದನೆಗಳನ್ನು ಸ್ವಾಗತಿಸಬೇಕು ಮತ್ತು ಆತ್ಮನ ತೋರ್ಪಡಿಸುವಿಕೆಗಳನ್ನು "ಪರಿಶೋಧಿಸಿ ಒಳ್ಳೇದನ್ನು ತೆಗೆದುಕೊಳ್ಳಬೇಕು "ಪರಿಶೋಧಿಸು" ಎಂಬುದರ ಅರ್ಥವು, ಗ್ರಹಿಸು, ಪರೀಕ್ಷಿಸು, ಅನುಮೋದಿಸು ಅಥವಾ ಅನುಮತಿಸು." ಒಳ್ಳೇಯದು" ಎಂಬ ಪದವು ಯಾವುದು ಮೌಲ್ಯಯುತ, ಪ್ರಮಾಣಿಕ ಮತ್ತು ಯೋಗ್ಯವಾದದ್ದು ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ ನಾವು ಪ್ರವಾದನೆ ಪಡೆಯುವ ಅಥವಾ ತೆಗೆದುಕೊಳ್ಳುವ ಅಥವಾ ಇತರೆ ಬಹಿರಂಗ ತೋರ್ಪಡಿಸುವಿಕೆಗಳಾದ(ಜ್ಞಾನದ ವಾಕ್ಯ, ವಿವೇಕದವಾಕ್ಯ, ಆತ್ಮಗಳ ಗ್ರಹಿಕೆ) ಇವುಗಳನ್ನು ಪಡೆಯುವ ಮೊದಲು ಅವುಗಳು ಸತ್ಯವಾಗಿ ದೇವರಿಂದ ಬಂದವುಗಳ ಎಂಬುದನ್ನು ಪರಿಶೋಧಿಸಬೇಕು ಮತ್ತು ಒಳ್ಳೇದನ್ನು ಹಿಡಿದಿಟ್ಟುಕೊಳ್ಳಬೇಕು ಮತ್ತು ದೇವರಿಂದ ನಾವು ಗ್ರಹಿಸಲಾಗದ್ದನ್ನು ದೂರವಿರಿಸಬೇಕು.

ಪುನ: ಕೊರಿಂಥದಲ್ಲಿ ಅಪೊಸ್ತಲನಾದ ಪೌಲನು ಸಭೆಯಾಗಿ ಕೂಡ ಬರುವಿಕೆಯಲ್ಲಿ ಪ್ರವಾದಿಗಳ ಕುರಿತು ಅದೇ ರೀತಿಯಾದ ಸಲಹೆಗಳನ್ನು ಒದಗಿಸುತ್ತಾನೆ:

1 ಕೊರಿಂಥದವರಿಗೆ 14:29
ಪ್ರವಾದಿಗಳು ಇಬ್ಬರಾಗಲಿ ಮೂವರಾಗಲಿ ಮಾತಾಡಲಿ ಮಿಕ್ಕಾದವರು ಕೇಟ್ಟು ವಿವೇಚನೆ ಮಾಡಲಿ

ವಿವೇಚನೆ ಎಂಬ ಪದವು ಗ್ರಹಿಸು, ಸಂಪೂರ್ಣವಾಗಿ ಬೇರ್ಪಡಿಸಲು, ವ್ಯತ್ಯಾಸವನ್ನು ಮಾಡಲು ಎಂಬ ಅರ್ಥವಿದೆ.

ವರಗಳನ್ನು ಏಕೆ ಪರಿಶೋಧಿಸಬೇಕು? ಏಕೆ ಅಲ್ಲಿ ತಪ್ಪುಗಳಿರಬಹುದು?

ದೇವರ ಪರಿಪೂರ್ಣವಾದವನು ಪವಿತ್ರಾತ್ಮನು ಪರಿಪೂರ್ಣನು ಆತನ ವರಗಳು ಪರಿಪೂರ್ಣವಾದವು. ಆದರೆ ಅಪರಿಪೂರ್ಣವಾದ ಮಾನವ ಪಾತ್ರೆಗಳ ಮೂಲಕವಾಗಿ ಆತನ ವರಗಳು ಬಿಡುಗಡೆಗೊಳ್ಳುತ್ತವೆ. ಆದ್ದರಿಂದ ಆತ್ಮದಿಂದ ಬರುವ ಸಂಗತಿಗಳು ಆತ್ಮದ ಸಂಗತಿಗಳೊಂದಿಗೆ ಬೆರೆಯಲು ಸಾಧ್ಯವಿದೆ. ವ್ಯಕ್ತಿಯು ಪ್ರಕಟನೆಯನ್ನು ಸಂಪರ್ಕ ಮಾಡುವಾಗ ದೋಷವು ಹರಿದಾಡಲು ಸಾಧ್ಯತೆಯಿರುತ್ತದೆ.

ದೇವರು ವಾಕ್ಯವನ್ನು ಪ್ರಸಂಗಿಸುವ ಉದಾಹರಣೆಯನ್ನು ತೆಗೆದುಕೊಳ್ಳಿರಿ ದೇವರ ವಾಕ್ಯದಲ್ಲಿ ಇಬ್ಬರು ಅದೇ ವಚನಭಾಗ ತೆಗೆದುಕೊಳ್ಳಬಹುದು ಮತ್ತು ಒಬ್ಬನು ಸಮರ್ಥವಾಗಿ ವಾಕ್ಯವನ್ನು ತಪ್ಪಾಗಿ ಅರ್ಥವಿವರಣೆ ನೀಡಬಹುದು. ದೇವರ ವಾಕ್ಯವು ಪರಿಪೂರ್ಣ ಆದರೆ ಅರ್ಥವಿವರಣೆ ಮತ್ತು ಪ್ರಸಂಗಿಸುವ ವ್ಯಕ್ತಿಯು ತಪ್ಪಾಗಿರಬಹುದು. ಆದಾಗ್ಯೂ ನಾವು ಹೀಗೆ ಸಲಹೆ ಹೊಂದಿದ್ದೇವೆ. " ನೀನು ದೇವರ ದೃಷ್ಟಿಗೆ ಯೋಗ್ಯವಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡು. ಅವಮಾನಕ್ಕೆ ಗುರಿಯಾಗದ ಕೆಲಸವನ್ನು ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು" (2 ತಿಮೊಥೆಯನಿಗೆ 2:15)

ಅದೇ ರೀತಿಯಾಗಿ ಆತ್ಮನ ವರಗಳನ್ನು ಅಭ್ಯಾಸಿಸುವಲ್ಲಿ ತೋರಿಬರುವಿಕೆಗಳನ್ನು ಪರಿಶೋಧಿಸಿರಿ ಮತ್ತು ಒಳ್ಳೇದನ್ನು ಹಿಡಿದುಕೊಳ್ಳೀರಿ ಎಂಬುದಾಗಿ ವಚನಭಾಗವು ಸಲಹೆ ನೀಡುತ್ತದೆ.

ಕಾನೂನಿನ ಅಧೀನದಲ್ಲಿ ಕಾರ್ಯ ಮಾಡುವಾಗ, ಏನಾದರೂ ತಪ್ಪಿದ್ದರೆ ಪ್ರವಾದಿಯು ಕಲ್ಲೆಸೆದು ಕೊಲ್ಲಲ್ಪಡುತ್ತಿದ್ದನು. ಕೃಪೆಯ ಅಧೀನದಲ್ಲಿ ಕಾರ್ಯ ಮಾಡುವಾಗ, ವರಗಳು ಪರಿಶೋಧಿಸಬೇಕು ಮತ್ತು ತಪ್ಪಾಗಿರುವುದು ಸುಮ್ಮನೇ ತಿರಸ್ಕರಿಸಬೇಕು ಮತ್ತು ವಿಶ್ವಾಸಿಗಳು ಮುಂದುವರೆದು ಕಲಿಯಬೇಕು ಮತ್ತು ಪರಿಪೂರ್ಣತೆ ಕಡೆಗೆ ಬೆಳೆಯಬೇಕು ಆದುದರಿಂದ ತಗ್ಗಿಸಲ್ಪಟ್ಟವರಾಗಿರುವುದು ಕಲಿಸಬಹುದಾಗಿರುವುದು, ಮತ್ತು ಆತ್ಮನ ವರಗಳನ್ನು ತೋರ್ಪಡಿಸಲು ನಾವು ಬೆಳೆಯುವುದರಲ್ಲಿ ತಿದ್ದು ಪಡಿಯನ್ನು ಪಡೆಯಲು ಚಿತ್ತವುಳ್ಳರಾಗಿರುವುದು ಪ್ರಾಮುಖ್ಯವಾಗಿದ

5.ದೇವರ ಪ್ರೀತಿ, ನಮ್ಮ ಪ್ರೇರಣೆ

ಹೆಚ್ಚು ಅತ್ಯುತ್ತಮ ಮಾರ್ಗ

1 ಕೊರಿಂಥದವರಿಗೆ 12: 31
ಇವುಗಳಲ್ಲಿ ಶ್ರೇಷ್ಟ ವರಗಳನ್ನು ಆಸಕ್ತಿಯಿಂದ ಅಪೇಕ್ಷಿಸಿರಿ ಇನ್ನೂ ಉತ್ಕೃಷ್ಟವಾದ ಮಾರ್ಗವನ್ನು ನಿಮಗೆ ತೋರಿಸುತ್ತೇನೆ.

1 ಕೊರಿಂಥದವರಿಗೆ 13:1-13
1 ನಾನು ಮನುಷ್ಯರ ಭಾಷೆಗಳನ್ನು ದೇವದೂತರ ಭಾಷೆಗಳನ್ನು ಆಡುವವನಾದರೂ ಪ್ರೀತಿಯಿಲ್ಲದವನಾಗಿದ್ದರೆ ನಾದಕೊಡುವ ಕಂಚೂ ಗಣಗಣಿಸುವ ತಾಳವೂ ಆಗಿದ್ದೇನೆ.
2 ನನಗೆ ಪ್ರವಾದನೆ ವರವಿದ್ದರೂ ಎಲ್ಲಾ ರಹಸ್ಯಗಳೂ ಸಕಲ ವಿಧವಾದ ವಿದ್ಯೆಯೂ ತಿಳಿದರೂ ಬೆಟ್ಟಗಳನ್ನು ತೆಗೆದಿಡುವುದಕ್ಕೆ ಬೇಕಾದಷ್ಟು ನಂಬಿಕೆಯಿದ್ದರೂ ನಾನು ಪ್ರೀತಿಯಿಲ್ಲದವನಾಗಿದ್ದರೆ ಏನು ಅಲ್ಲದವನಾಗಿದ್ದೇನೆ
3 ನನಗಿರುವುದೆಲ್ಲವನ್ನು ಅನ್ನದಾನ ಮಾಡಿದರೂ ನನ್ನ ದೇಹವನ್ನು ಸುಡುವುದಕ್ಕೆ ಒಪ್ಪಿಸಿದರೂ ಪ್ರೀತಿಯು ನನಗಿಲ್ಲದಿದ್ದರೆ ನನಗೇನೂ ಪ್ರಯೋಜನವಾಗುವುದಿಲ್ಲ
4 ಪ್ರೀತಿ ಬಹುತಾಳ್ಮೆಯುಳ್ಳದ್ದು ಪ್ರೀತಿ ದಯೆ ತೋರಿಸುವದು ಪ್ರೀತಿಯು ಹೊಟ್ಟೆಕಿಚ್ಚುಪಡುವದಿಲ್ಲ ಹೊಗಳಿಕೊಳ್ಳುವದಿಲ್ಲ ಉಬ್ಬಿಕೊಳ್ಳುವುದಿಲ್ಲ
5 ಮಾರ್ಯಾದೆಗೆಟ್ಟು ನಡೆಯುವುದಿಲ್ಲ ಸ್ವಯೋಜನೆಯನ್ನು ಚಿಂತಿಸುವುದಿಲ್ಲ ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ
6 ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗಲಿ ಸಂತೋಷಪಡುತ್ತದೆ
7 ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ. ಎಲ್ಲವನ್ನೂ ನಂಬುತ್ತದೆ ಎಲ್ಲವನ್ನು ನಿರೀಕ್ಷಿಸುತ್ತದೆ ನಿರೀಕ್ಷೀಸುತ್ತದೆ ಸಹಿಸಿಕೊಳ್ಳುತ್ತದೆ.
8 ಪ್ರೀತಿಯು ಎಂದಿಗೂ ಬಿದ್ದು ಹೋಗುವದಿಲ್ಲ ಪ್ರವಾದನೆಗಳಾದರೋ ಇಲ್ಲದಂತಾಗುವವು ವಾಣಿಗಳೋ ನಿಂತು ಹೋಗುವವು ವಿದ್ಯೆಯೋ ಇಲ್ಲದಂತಾಗುವದು
9 ಅಪೂರ್ಣವಾಗಿ ತಿಳುಕೊಳ್ಳುತ್ತೇವೆ, ಅಪೂರ್ಣವಾಗಿ ಪ್ರವಾದಿಸುತ್ತೇವೆ
10 ಆದರೆ ಸಂಪೂರ್ಣವಾದದ್ದು ಬಂದಾಗ ಅಪೂರ್ಣವಾದದ್ದು ಇಲ್ಲದಂತಾಗುವುದು
11 ನಾನು ಬಾಲಕನಾಗಿದ್ದಾಗ ಬಾಲಕನ ಮಾತುಗಳನ್ನಾಡಿದೆನು ಬಾಲಕನ ಸುಖ ದುಃಖಗಳನ್ನು ಅನುಭವಿಸಿದೆನು ಬಾಲಕನ ಆಲೋಚನೆಗಳನ್ನು ಮಾಡಿಕೊಂಡೆನು ಪ್ರಾಯಸ್ಥನಾದ ಮೇಲೆ ಬಾಲ್ಯದವುಗಳನ್ನು ಬಿಟ್ಟುಬಿಟ್ಟೆನು
12 ಈಗ ಕಂಚಿನ ದರ್ಪಣದಲ್ಲಿ ಕಾಣಿಸುವಂತೆ [ದೇವರ ಮುಖವು] ನಮಗೆ ಮೊಬ್ಬಾಗಿ ಕಾಣಿಸುತ್ತದೆ. ಆಗ ಮುಖಾಮುಖಿಯಾಗಿ ಆತನನ್ನು ನೋಡುವೆವು ಈಗ ಸ್ವಲ್ಪ ಮಾತ್ರ ನನಗೆ ತಿಳಿದಿದೆ. ಆಗ ದೇವರು ನನ್ನನ್ನು ಸಂಪೂರ್ಣವಾಗಿ ತಿಳುಕೊಳ್ಳುವೆನು
13 ಹೀಗಿರುವದರಿಂದ ನಂಬಿಕೆ ನಿರೀಕ್ಷೆ ಪ್ರೀತಿ ಈ ಮೂರೇ ನಿಲ್ಲುತ್ತವೆ. ಇವುಗಳಲ್ಲಿ ದೊಡ್ಡದು ಪ್ರೀತಿಯೇ.

1 ಕೊರಿಂಥದವರಿಗೆ 14:1
ಪ್ರೀತಿಯನ್ನು ಅಭ್ಯಾಸ ಮಾಡಿಕೊಳ್ಳಿರಿ ಆದರೂ ಪವಿತ್ರಾತ್ಮನಿಂದುಂಟಾಗುವ ವರಗಳನ್ನು ಅವುಗಳೊಳಗೆ ವಿಶೇಷವಾಗಿ ಪ್ರವಾದಿಸುವ ವರವನ್ನೇ ಆಸಕ್ತಿಯಿಂದ ಅಪೇಕ್ಷಿಸಿರಿ.

ಅಪೊಸ್ತಲನಾದ ಪೌಲನು ಆತ್ಮನ ವರಗಳು ಮತ್ತು ಸದಸ್ಯತ್ವದ ಕ್ರಿಯೆಗಳ(ಮುನ್ನೆಡೆಸುವುದು, ಉಪದೇಶಿಸುವುದು, ಆಡಳಿತ ಮುಂತಾದವು) ಕುರಿತು ವಿವರಿಸುತ್ತಾನೆ. 1 ಕೊರಿಂಥದವರಿಗೆ 12ರಲ್ಲಿ ಕ್ರಿಸ್ತನ ಅಂಗದಲ್ಲಿ ಈ ವರಗಳನ್ನು ಅಪೇಕ್ಷಿಸಬೇಕುಂಬುದಾಗಿ ಅವನು ಪ್ರೋತ್ಸಾಹಿಸುತ್ತಾನೆ. ಆದರೆ ಅವನು ನಮಗೆ " ಅಧಿಕವಾದ ಶ್ರೇಷ್ಟವಾದ ಮಾರ್ಗ " ಅಥವಾ ಇನ್ನೂ ಅತ್ಯುತ್ತಮವಾದ ಅಥವಾ ತುಂಬಾ ಮಹೋನ್ನತವಾದದ್ದಕ್ಕೆ ದೃಷ್ಟಿ ತೋರಿಸಿ ವ್ಯಾಖ್ಯಾನಿಸುತ್ತಾನೆ. ಇಲ್ಲಿರುವ ಸೂಚನೆಯೇನೆಂದರೆ ಜನರಿಗೆ ಸೇವೆ ಸಲ್ಲಿಸಲು ಮತ್ತು ಕ್ರಿಸ್ತನ ದೇಹದಲ್ಲಿ ಸೇವೆ ಮಾಡಲು ಇನ್ನೂ ಅತ್ಯುತ್ತಮವಾದ ಮಾರ್ಗವಿದೆ. ಆತ್ಮನ ವರಗಳಿಗಿಂತ ಮತ್ತು ಸದಸ್ಯತ್ವದ ಕ್ರಿಯೆಗಳನ್ನು ಅಭ್ಯಾಸಿಸುವುದಕ್ಕಿಂತ ಶ್ರೇಷ್ಟವಾದ ಮಾರ್ಗ ಇದೆ. ಜನರಿಗಾಗಿರುವ ದೇವ ಬಗೆಯ ಪ್ರೀತಿಯಲ್ಲ ನಾವು ನಡೆಯಬೇಕೆಂದು ಅವನು ತೋರಿಸುತ್ತಾನೆ.

1.ಕೊರಿಂಥದವರಿಗೆ 13ರಲ್ಲಿ ಪೌಲನು ವಿವರಿಸುವುದೇನೆಂದರೆ ನಾವು ಆತ್ಮ ವರಗಳನ್ನು ಮತ್ತು ಸದಸ್ಯತ್ವ ಕ್ರಿಯೆಗಳನ್ನು ಅಭ್ಯಸಿಸಿದರೆ ಮತ್ತು ದೇಹವನ್ನು ಸುಡುವದಕ್ಕೆ ಒಪ್ಪಿಸುವಷ್ಟರವರೆಗೂ ದೊಡ್ಡದಾದ ದಾನದತ್ತಿ ಕ್ರಿಯೆಗಳನ್ನು ಮಾಡಿದರು, ದೇವರ ಬಗೆಯ ಪ್ರೀತಿಯಿಂದ ಪ್ರೇರಿಸದಿದ್ದರೆ ಮತ್ತು ಮಾರ್ಗದರ್ಶಿಸದಿದ್ದರೆ, ಎಲ್ಲವೂ ಖಾಲಿಯಾಗಿರುತ್ತದೆ, ಏನೂ ಇರುವುದಿಲ್ಲ ಮತ್ತು ಯಾವುದೇ ಪ್ರಯೋಜನವಿಲ್ಲ ನಾವು ಸೇವೆ ಮಾಡುವಾಗ ಮತ್ತು ಕೆಲಸಮಾಡುವಾಗ ಪ್ರೀತಿಯಲ್ಲಿ ನೆಲೆಗೊಂಡಿರುವುದನ್ನು ಇದು ತೋರಿಸುತ್ತದೆ.

ನಾವು ಏನೇ ಮಾಡಿದರೂ, ದೇವ-ಬಗೆಯ ಪ್ರೀತಿಯಿಂದ ಪ್ರೇರಿತಗೊಂಡು ಮತ್ತು ಮಾರ್ಗದರ್ಶಿಸಲ್ಪಟ್ಟವರಾಗಿ , ಆಧಿಪತ್ಯದಿಂದ ಮಾಡುವವರಾಗಿರಬೇಕು ಪ್ರೀತಿಯಿಂದ ಇವೆಲ್ಲವನ್ನೂ ಮಾಡಬೇಕು ಮತ್ತು ಜನರಿಗಾಗಿ ಇರುವ ಪ್ರೀತಿಯ ನಿಮಿತ್ತದಿಂದ ಮಾಡಬೇಕು. ಪೌಲನು 4-8 ವಚನಗಳನ್ನು ವಿವರಿಸುವಂತೆ ಅಸಹನೆ, ನಿರ್ದಯ, ಅಸೂಯೆ, ಹೆಮ್ಮೆ ಉಬ್ಬಿಕೊಂಡರೆ ಮಾರ್ಯಾದೆಗೆಟ್ಟು ನಡೆಯುವುದು, ಸ್ವ-ಪ್ರಯೋಜನ ಚಿಂತಿಸುವುದು, ಸಿಟ್ಟುಗೊಳ್ಳುವುದು, ಅಪಕಾರ ಮನಸ್ಸಿನಲ್ಲಿ ಇಟ್ಟುಕೊಂಡಿರುವುದು, ಕಿರಿಕಿರಿ, ದುಷ್ಟ ಆಲೋಚನೆ ಅಥವಾ ಉದ್ವೇಶವನ್ನು ಹೊಂದಿರುವುದು, ಅನ್ಯಾಯ ಅಥವಾ ಅಸತ್ಯವನ್ನು ಉತ್ತೇಜಿಸುವುದನ್ನು ಮಾಡಿದರೆ ಆಗ ನಾವು ಪ್ರೀತಿಯಿಂದ ಪ್ರೇರಿತಗೊಂಡವರು ಮಾರ್ಗದರ್ಶಿಸಲ್ಪಟ್ಟವರು ಮತ್ತು ಪ್ರಭಾವ ಬೀರುವವರು ಆಗಿರುವುದಿಲ್ಲ ಆತ್ಮನ ವರಗಳನ್ನು ಕ್ರಮವಿಲ್ಲದೆ ಪ್ರೇರಣೆಯಿಂದ ಅಭ್ಯಾಸಿಸುವುದು ವ್ಯರ್ಥವಾದದ್ದು ಖಾಲಿಯಾದದ್ದು ಮತ್ತು ಯಾವ ಪ್ರಯೋಜನ ತರುವುದಿಲ್ಲ.

ಆತ್ಮನ ವರಗಳು ಸೇವಾ ಕ್ರಿಯೆಗಳು, ದಾನದತ್ತಿ ಕ್ರಿಯೆಗಳು ಮತ್ತು ನಂಬಿಕೆ ಮತ್ತು ನಿರೀಕ್ಷೆಯನ್ನು ಅಭ್ಯಾಸಿಸುವುದಕ್ಕಿಂತ ಪ್ರೀತಿಯು ದೊಡ್ಡವಾಗಿರುವುದಕ್ಕೆ ಕಾರಣವೆಂದರೆ ಪ್ರೀತಿಯು ಎಲ್ಲವನ್ನು ಸಹಿಸಿಕೊಳ್ಳುತ್ತದೆ. ಇನ್ನೂ ಕಾರ್ಯರೂಪಕ್ಕೆ ಬರುವ ಏಕೈಕ ವಿಷಯವೆಂದರೆ- ಅದು ಪ್ರೀತಿಯಾಗಿದೆ.ಉಳಿದೆಲ್ಲವುಗಳೂ ಇನ್ನು ಮುಂದೆ ಬಳಕೆಯಲ್ಲಿಲ್ಲದೆ ದೂರವಾಗುತ್ತವೆ. [ಸೂಚನೆ: ವಚನ 8 ರಲ್ಲಿ ಪ್ರವಾದನೆಗಳ ಸನ್ನಿವೇಶದಲ್ಲಿ ["ಪ್ರವಾದನೆಗಳು ಬಿದ್ದುಹೋಗುತ್ತವೆ.]" ಮತ್ತು ಜ್ಞಾನ (" ಜ್ಞಾನವು

ಇಲ್ಲದಂತಾಗುತ್ತದೆ") ಅದೇ ಗ್ರೀಕ ಪದವು" ಕಟಾರೆಜಿಯೋ" "ಅವರು ವಿಫಲರಾಗುತ್ತಾರೆ" ಮತ್ತು " ಇದು ಕಣ್ಮರೆಯಾಗುತ್ತದೆ" ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ. ಇದರ ಅರ್ಥವೇನೆಂದರೆ ಇಂತಹ ವರಗಳು ಕಾರ್ಯರೂಪದಲ್ಲಿರುವುದಿಲ್ಲ. ನಿಷ್ಕ್ರಿಯತೆಗೆ ಕಡಿಮೆಯಾಗುತ್ತದೆ]

ಆತ್ಮನ ವರಗಳನ್ನು ಅಥವಾ ನಮ್ಮ ಸದಸ್ಯತ್ವ ಕ್ರಿಯೆಗಳನ್ನು ಅಭ್ಯಾಸಿಸಬಾರದೆಂಬುದಾಗಿ ಹೇಳುವುದಕ್ಕೆ ಅಲ್ಲ. ಪ್ರೀತಿಯಲ್ಲಿ ನಡೆಯುವುದರ ಸರಿಯಾದ ನಮ್ಮ ಪ್ರಾಧ್ಯಾನತೆ ಹೊಂದಿದವರಾಗಿ ಆಮೇಲೆ 1 ಕೊರಿಂಥದವರಿಗೆ 14:1 ರಲ್ಲಿ " ಪ್ರೀತಿಯನ್ನು ಅಭ್ಯಾಸಮಾಡಿಕೊಳ್ಳಿರಿ, ಆದರೂ ಪವಿತ್ರಾತ್ಮದಿಂದುಂಟಾಗುವ ವರಗಳನ್ನು ಅವುಗಳೊಳಗೆ ವಿಶೇಷವಾಗಿ ಪ್ರವಾದಿಸುವ ವರವನ್ನೇ ಆಸಕ್ತಿಯಿಂದ ಅಪೇಕ್ಷಿಸಿರಿ" - ಪೌಲನು ಒಟ್ಟು ಗೂಡಿಸುವಂತೆ ಆತ್ಮಿಕ ವರಗಳು ಮತ್ತು ಸದಸ್ಯತ್ವದ ಕ್ರಿಯೆಗಳನ್ನು ಅಭ್ಯಾಸ ಮಾಡಿಕೊಳ್ಳಬೇಕು.

ನಂಬಿಕೆಯು ಪ್ರೀತಿಯ ಮೂಲಕ ಕಾರ್ಯ ಮಾಡುತ್ತದೆ (ಗಲಾತ್ಯದವರಿಗೆ 5-6), ಪ್ರೀತಿಯಿಲ್ಲದೆ, ನಂಬಿಕೆಯು ಬಿದ್ದು ಹೋಗುತ್ತದೆ. ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ನಾವು ನಂಬಿಕೆಯನ್ನು ಅಭ್ಯಾಸಿಸುವ ಯಂತ್ರ ಶಾಸ್ತ್ರದ ಮೂಲಕ ಹಾದು ಹೋಗಬಹುದು ಆದರೆ ಪ್ರೀತಿಯಿಲ್ಲದಿರುವಾಗ ನಂಬಿಕೆಯು ಫಲನೀಡುವುದಿಲ್ಲ ಜನರಿಗಾಗಿರುವ ಯಥಾರ್ಥ ಪ್ರೀತಿಯ ಹೃದಯವನ್ನು ಪಾಲಿಸಿರಿ ಪವಿತ್ರಾತ್ಮನು ದೇವರ ಪ್ರೀತಿಯೊಡನೆ ನಮ್ಮ ಹೃದಯಗಳನ್ನು ತುಂಬಿಸುತ್ತಾನೆ. (ರೋಮಾಪುರದವರಿಗೆ 5:5) ಆದ್ದರಿಂದ ಆತನಿಗೆ ಒಳಗಾಗಿರಿ. ನೀವು ಸೇವೆ ಮಾಡುವಂತಹ ಜನರಿಗೆ ಕ್ರಿಸ್ತನ ಪ್ರೀತಿಯು ಪ್ರೇರೆಪಿಸಲಿ, ಸ್ಪೂರ್ತಿ ನೀಡಲಿ ಮತ್ತು ಕಾರ್ಯರೂಪಕ್ಕೆ ಹುರಿದುಂಬಿಸಲಿ (2ಕೊರಿಂಥದವರಿಗೆ 5:14)

ಆತ್ಮನ ವರಗಳನ್ನು ಪ್ರೀತಿಯೊಡನೆ ಅಭ್ಯಾಸಮಾಡಿಕೊಳ್ಳಿರಿ

ಆತ್ಮನ ವರಗಳು ಯಾವರೀತಿಯಾಗಿ ಅಭ್ಯಾಸಿಸಲ್ಪಡಬೇಕೆಂಬುದನ್ನು 1ಕೋರಿಂಥದವರಿಗೆ 13 ರ ಪ್ರಾಥಮಿಕ ಸನ್ನಿವೇಶದಲ್ಲಿ ಪ್ರಸ್ತುತ ಪಡಿಸುವ ರೀತಿಯನ್ನು ಅರ್ಥಮಾಡಿಕೊಂಡ ಮೇಲೆ ದೇವರ ಪ್ರೀತಿಯು ಹೇಗೆ ಪ್ರೇರೇಪಿಸುತ್ತದೆ, ಮಾರ್ಗದರ್ಶಿಸುತ್ತದೆ ಮತ್ತು ಆತ್ಮನ ವರಗಳನ್ನು ಅಭ್ಯಾಸಿಸುವುದನ್ನು ನಿರ್ಣಯಿಸುತ್ತದೆಂಬುದನ್ನು ಸಂಕ್ಷಿಪ್ತವಾಗಿ ನಾವು ಪರಿಗಣಿಸೋಣ ಆದ್ದರಿಂದ ಇದು ಜನರ ಯಥಾರ್ಥವಾದ ಭಕ್ತಿ ವೃದ್ಧಿಯನ್ನುಂಟು ಮಾಡುವ ಮತ್ತು ಯೇಸು ಕ್ರಿಸ್ತನಿಗೆ ಮಹಿಮೆಯನ್ನು ತರುವ ಫಲಿತಾಂಶ ನೀಡುತ್ತದೆ. ಕೆಳಗಿನವುಗಳು ಪ್ರೀತಿಯು ಆತ್ಮನ ವರಗಳನ್ನು ಅಭ್ಯಾಸಿಸುವುದು ಹೇಗೆ ಪ್ರೇರೆಪಿಸುವುದು ಮತ್ತು ಮಾರ್ಗದರ್ಶನ ನೀಡುವುದು ಹೇಗೆ ಎಂಬುದರ ಬಗ್ಗೆ ಸಮಗ್ರವಾದ ಚರ್ಚೆಯಲ್ಲಿ ಬದಲಿಗೆ ಒಂದು ಪ್ರಾರಂಭಿಸುವುದಾಗಿದೆ ಮತ್ತು ಪವಿತ್ರಾತ್ಮದ ಸಹಾಯದಿಂದ ಇದನ್ನು ಇನ್ನಷ್ಟು ಕಟ್ಟೋಣ

ಪ್ರೀತಿ ಬಹು ತಾಳ್ಮೆಯುಳ್ಳದ್ದು ಮತ್ತು ದಯೆ ತೋರಿಸುವುದು

ಜನರಿಗೆ ಸೇವೆ ಸಲ್ಲಿಸುವಾಗ ಅವರೊಂದಿಗೆ ತಾಳ್ಮೆಯಿಂದಿರಿ. ಜನರು ಆತ್ಮೀಯ ತಿಳುವಳಿಕೆಯ ವಿಭಿನ್ನ ಹಂತಗಳಲ್ಲಿದ್ದಾರೆ ಮತ್ತು ಆತ್ಮನ ಯಥಾರ್ಥ ತೋರ್ಪಡಿಸುವಿಕೆಗಾಗಿ ನೀವು ಎದುರು ನೋಡುವ ರೀತಿಯಲ್ಲಿ ಯಾವಾಗಲೂ ಅವರು ಪ್ರತಿಕ್ರಿಯೆ ತೋರಿಸುವುದಿಲ್ಲ.

ಧೈರ್ಯವಾಗಿರಿ, ದೃಢವಾಗಿರಿ, ಭರವಸೆಯಿಂದಿರಿ, ಆದರೆ ನೀವು ಮಾತಾಡುವಾಗ ಮತ್ತು ಸೇವೆ ಮಾಡುವಾಗ ಮೃಧುವಾಗಿ ಮತ್ತು ದಯೆಯುಳ್ಳವರಾಗಿರಿ. ಧೈರ್ಯಶಾಲಿ, ಕಠಿಣ ಅಥವಾ ಒರಟಾಗಿ ಏನನ್ನಾದರೂ ಮಾಡಲು ದೇವರ ಆತ್ಮನು ನಿಮಗೆ ಸೂಚಿಸುವ ಅಥವಾ ಪ್ರೇರೇಪಿಸುವ ಸಮಯಗಳಿವೆ ಆದರೆ ದೇವರ ಆತ್ಮನು ನಿಮಗೆ ಸಲಹೆ ನೀಡಿದಾಗ- ಸ್ವತಃ ಮಾತನಾಡುವುದು ಫಲಿತಾಂಶವಾಗಿರುತ್ತದೆ ಮತ್ತು ಒರಟು ಅಥವಾ ಕಠೋರತೆಯ ಯಾವುದೇ ತಾತ್ಕಾಲಿಕ ಕಾಳಜಿಗಳನ್ನು ನಿವಾರಸುತ್ತದೆ..

ಪ್ರೀತಿಯು ಹೊಟ್ಟೆಕಿಚ್ಚು ಪಡುವುದಿಲ್ಲ

ಹೊಟ್ಟೆಕಿಚ್ಚಿಗೆ ವಿರುದ್ಧವಾಗಿ ನಿಮ್ಮ ಹೃದಯವನ್ನು ಸಂರಕ್ಷಿಸಿಕೊಳ್ಳಿ ಮತ್ತು ದೇವರ ಕಾರ್ಯ ಮಾಡುತ್ತಿರುವಂತವರಾದ ಇನ್ನೊಬ್ಬರ ಕುರಿತು ನೀವು ಹೊಟ್ಟೆಕಿಚ್ಚಿನ ಕಾರಣದಿಂದ ಆತ್ಮನ ವರಗಳನ್ನು ನಿಶ್ಚಯವಾಗಿ ಅಪೇಕ್ಷಿಸಬೇಡಿರಿ. ಯಾರಾದರೊಬ್ಬರ ಮೂಲಕವಾಗಿ ದೇವರ ಆತ್ಮನು ಅದ್ಭುತಕರವಾಗಿ ತೋರಿಬರುತ್ತಿದ್ದರೆ ದೇವರಿಗೆ ಸ್ತೋತ್ರ ಸಲ್ಲಿಸಿ ಮತ್ತು ಜರುಗುತ್ತಿರುವುದನ್ನು ಆಚರಿಸಿರಿ. ದೇವರು ಇನ್ನೊಬ್ಬರ ಮೂಲಕವಾಗಿ ಏನು ಮಾಡುತ್ತಿದ್ದಾನೆ ಮತ್ತು ಹೇಗೆ ಕಾರ್ಯ ಮಾಡುತ್ತಿದ್ದಾನೆಂಬುದನ್ನು ನೋಡುವುದರಿಂದ ಕಲಿಯಿರಿ ಮತ್ತು ಗಮನಿಸಿರ. ಆದರೆ ನಿಮ್ಮ ಹೃದಯದಲ್ಲಿ ಹೊಟ್ಟೆಕಿಚ್ಚಿನ ಜಾಡಿಗೂ ಅವಕಾಶ ನೀಡಬೇಡಿರಿ ಹೊಟ್ಟೆಕಿಚ್ಚು ಅನಾರೋಗ್ಯಕರ ಸ್ಪರ್ಧೆ , ಕೆಟ್ಟಭಾವನೆ, ಜಗಳ ಮತ್ತು ಇತರೆ ತಪ್ಪು ವಿಷಯಗಳಿಗೆ ನಡೆಸುತ್ತದೆ.

ಪ್ರೀತಿಯು ಹೊಗಳಿಕೊಳ್ಳುವುದಿಲ್ಲ, ಉಬ್ಬಿಕೊಳ್ಳುವುದಿಲ್ಲ ಮತ್ತು ಮರ್ಯಾದೆಗೆಟ್ಟು ನಡೆಯುವುದಿಲ್ಲ

ನಿಮ್ಮ ಮೂಲಕವಾಗಿ ಪವಿತ್ರಾತ್ಮನು ಬಲಯುತವಾಗಿ ತೋರ್ಪಡಿಸುವಾಗ ಎಲ್ಲಾ ಮಹಿಮೆಯನ್ನು ಕರ್ತನಿಗೆ ಕೊಡಿರಿ. ನೀವು ಯೋಚಿಸುವುದಕ್ಕಿಂತ ಅಧಿಕವಾಗಿ ಶ್ರೇಷ್ಟವೆಂದು ನಿಮ್ಮ ಬಗ್ಗೆ ಯೋಚಿಸಬೇಡಿರಿ ಕ್ರಿಸ್ತನಲ್ಲಿ ನಮ್ಮ ಗುರುತಿನಲ್ಲಿ ನಾವು

ಯಾವಾಗಲೂ ಬಲಿಷ್ಟವಾಗಿ ಮತ್ತು ಭರವಸೆಯಿದಿರಬೇಕು ಆದರೆ ಶರೀರದಲ್ಲಿ ಮಹಿಮೆ ಪಡದೆ ಆತನ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿರುವ ತಗ್ಗಿಸಲ್ಪಟ್ಟ ಹೃದಯದೊಡನೆ ಯಾವಾಗಲೂ ನಡೆಯಬೇಕು. ನಿಮ್ಮ ಮೂಲಕವಾಗಿ ಜರುಗಿದ ಕಾರ್ಯಗಳ ಕುರಿತು ನೀವು ಮಾತಾಡುವಾಗ ನಿಮ್ಮತ್ತ ಗಮನ ಸೆಳೆಯದಂತೆ ನಿಮ್ಮ ಮಾತುಗಳ ಮೇಲೆ ಜಾಗರೂಕರಾಗಿರಿ.

ಪ್ರೀತಿಯು ಒರಟಾದದು ಅಥವಾ ಕೆಟ್ಟ-ನಡತೆಯುಳ್ಳದ್ದಲ್ಲ

ನಾವು ಹಿಂದೆಯೇ ಹೇಳಿದಂತೆ, ಆತ್ಮನ ವರಗಳು ಅಥವಾ ಅಭಿಷೇಕದ ಅಧೀನದಲ್ಲಿ ಜನರಿಗೆ ಸೇವೆ ಸಲ್ಲಿಸುವಾಗ ಒರಟಾಗಿರಬೇಕೆ ಅಥವಾ ಕೆಟ್ಟ ನಡತೆಯುಳ್ಳವರಾಗಿಬೇಡಿರಿ. ಸೃಜನರಾಗಿರಿ, ವಿನಯಶೀಲರು ಮತ್ತು ಸಾಧ್ಯವಾದಷ್ಟು ಪ್ರೀತಿಸುವವರಾಗಿರಿ. ನಾವು ಮೊದಲೇ ಹೇಳಿದಂತೆ ಅಪವಾದಗಳಿರುತ್ತದೆ ಅಪರಿಚಿತ, ಅಸಾಮಾನ್ಯ, ಅಥವಾ ಅನಿರೀಕ್ಷಿತ ಅನಾನುಕೂಲಕರ ವಿಷಯಗಳನ್ನು ಮಾಡಲು ಪವಿತ್ರಾತ್ಮನು ಮುನ್ನಡುಸುವ ಸಮಯಗಳಿವೆ. ಆದರೆ ದೇವರ ಆತ್ಮನು ನಿಮ್ಮನ್ನು ನಡೆಸುತ್ತಿದ್ದಾನೆಂಬುದರಲ್ಲಿ ಸ್ಪಷ್ಟವಾಗಿರಿ ಆಮೇಲೆ ಆತನು ಮುನ್ನಡೆಸಿದಂತೆ ಮುಂದುವರಿದು ಕಾರ್ಯ ಮಾಡಿರಿ. ಫಲಿತಾಂಶವು (ಫಲ, ಪರಿಕಾಯ) ತಮ್ಮಷ್ಟಕ್ಕೆ ಮಾತಾಡುತ್ತವೆ. ಮತ್ತು ಪ್ರಶ್ನೆಯನ್ನು ಹೊಂದಿರುವವರು ಶಾಂತವಾಗುತ್ತಾರೆ.

ಪ್ರೀತಿಯು ಸ್ವ-ಕೇಂದ್ರಿತ, ಸ್ವ-ಅನ್ವೇಷಣೆ, ಸ್ವಯಂ ಪ್ರಚಾರದಲ್ಲ

ಆತ್ಮನ ವರಗಳು ನಾವು ಉತ್ತಮವಾಗಿ ಕಾಣುವಂತೆ ಮಾಡುವವುಗಳಲ್ಲ ಆದರೆ ಜನರಿಗೆ ಸೇವೆಸಲ್ಲಿಸಲು, ಜನರ ಅಗತ್ಯತೆಗಳನ್ನು ಪೂರೈಸಲು, ಜನರನ್ನು ಕಟ್ಟಲು ಮತ್ತು ಯೇಸುಕ್ರಿಸ್ತನಿಗೆ ಮಹಿಮೆ ಸಲ್ಲಿಸಲು ಎಂಬುದನ್ನು ನೆನಪಿಸಿಕೊಳ್ಳಿರಿ. ನಿಮ್ಮನ್ನು ಪ್ರಚಾರಮಾಡಲು, ನಿಮ್ಮ ಬಳಿಗೆ ಜನರನ್ನು ಸೆಳೆಯಲು, ನಿಮಗಾಗಿ ದಯೆಯನ್ನು ಪಡೆಯಲು (ಹಣ, ಪ್ರಖ್ಯಾತಿ, ಭೌತಿಕ ಲಾಭಗಳು ಮುಂತಾದವು) ಉಪಯೋಗಿಸಬೇಡಿರಿ.

ಇತರರು ಸಹ ಹೆಜ್ಜೆಯನ್ನಿಡಲು ಮತ್ತು ಅತ್ಮನ ವರದಲ್ಲಿ ಬೆಳೆಯಲು ಪ್ರೋತ್ಸಾಹಪಡಿಸಿರಿ. ಇದು ಬರೀ ನಿಮ್ಮ ಬಗ್ಗೆ ಮಾತ್ರವಲ್ಲ. ದೇವರಿಂದ ಅಧಿಕವಾದ ಜನರು ಉಪಯೋಗಿಸಲ್ಪಡುವಾಗ, ಅಧಿಕವಾದ ಜನರು ಸೇವೆ ಹೊಂದಬಹುದು ಮತ್ತು ಅತ್ಯಧಿಕವಾದ ಪರಿಣಾಮ ಬೀರಬಹುದು.

ಪ್ರೀತಿಯು ಮುಂಗೋಪದ ಅಥವಾ ಸುಲಭವಾಗಿ ಕೋಪಗೊಳ್ಳುವುದಿಲ್ಲ

ನೀವು ಜನರಿಗಾಗಿರುವ ಪ್ರೀತಿಯಲ್ಲ ಚಲಿಸುವಾಗ, "ತಪ್ಪಾಗಿಹೋಗುವ" ಸಣ್ಣ ವಿಷಯಗಳ ಮೇಲೆ ಎದ್ದು ನಿಲ್ಲುತ್ತೀರ ಮತ್ತು ಪವಿತ್ರಾತ್ಮನ ಬಲದೊಡನೆ ಜನರನ್ನು ಸೇವೆಸಲ್ಲಿಸುವ ಪ್ರಾಥಮಿಕ ಗುರಿಯ ಮೇಲೆ ದೃಷ್ಟಿಯನ್ನಾಡಿರಿ ಉದಾಹರಣೆಗೆ, ಅನೇಕ ತಪ್ಪು ವಿಷಯಗಳು ಜರುಗುತ್ತಿರುವ ಸ್ಥಳಕ್ಕೆ ನಿಮ್ಮನ್ನು ಸೇವೆ ಮಾಡಲು ಆಹ್ವಾನಿಸಿದ್ದರೆ, ನೀವು ನಿರೀಕ್ಷಿಸುವುದಕ್ಕಿಂತ ಅತಿ ಕಡಿಮೆ ಜನರು ಹಾಜರಿರಬಹುದು ಧ್ವನಿ ವ್ಯವಸ್ಥೆಯಲ್ಲಿ ತೊಂದರೆಯಿರಬಹುದು, ಕೂಟವು ತಡವಾಗಬಹುದಿತ್ತು ವಿದ್ಯುಚ್ಛಕ್ತಿ-ವಿಫಲವಾಗಬಹುದು ಮತ್ತು ಇತರೆ ಅನೇಕ ವಿಷಯಗಳು " ತಪ್ಪಾಗಿ ಹೋಗುವಂತೆ" ಕಾಣಿಸಬಹದು. ದೇವರ ಪ್ರೀತಿಯಲ್ಲಿ ನಿಮ್ಮನ್ನು ಇರಿಸಿರಿ. ಜನರ ಪರಿಸ್ಥಿತಿಗಳ ಕಡೆಗೆ ಕೋಪಗೊಳ್ಳುವುದು ಅಥವಾ ಕಿರಿಕಿರಿಯಾಗಿರುವುದು, ಆಕ್ರೋಶ ಹೊಂದುವುದನ್ನು ತಿರಸ್ಕರಿಸಿರಿ (ಖಚಿತವಾಗಿ ವೈರಿಯು ಮಧ್ಯ ಪ್ರಮಾಣಿಸಲು ಪ್ರಯತ್ನಿಸಿದರೆ ಆತ್ಮದಲ್ಲಿ ಅದರೊಡನೆ ವ್ಯವಹರಿಸಿರಿ) ಜನರ ಕಡೆಗೆ ನಿಮ್ಮ ಹೃದಯದಲ್ಲಿ ಸಂಪೂರ್ಣ ಪ್ರೀತಿಯನ್ನು ಹೊಂದಿರಿ. ಪವಿತ್ರಾತ್ಮದಲ್ಲಿ ಪ್ರಾರ್ಥಿಸಿರಿ (ಯೂದ 1 : 20) ಸೇವೆ ಪಡೆಯಲು ಬಂದಂತಹ ಜನರಿಗಾಗಿ ದೇವರನ್ನು ನೋಡಿರಿ.

ಪ್ರೀತಿಯು ಯಾವುದೇ ಕೆಟ್ಟ ಉದ್ದೇಶ ಹೊಂದಿಲ್ಲ

ಆತ್ಮನ ವರಗಳಲ್ಲಿ ಸೇವೆ ಮಾಡುವಾಗ "ಯಾವುದೇ ಕೆಟ್ಟ ಉದ್ದೇಶದಿಂದ ನಿಮ್ಮ ಹೃದಯಗಳನ್ನು ಸ್ವತಂತ್ರವಾಗಿರಿಸಿ. ನಿಯಂತ್ರಿಸಲು ಯಾವುದೇ ಆಸೆ, ಸೇಡು ತಿರಿಸಿಕೊಳ್ಳುವುದು ಮತ್ತು ಕೈವಾಡ ತೋರಿಸುವುದರಿಂದ ನಿಮ್ಮ ಹೃದಯ ಸ್ವತಂತ್ರದಲ್ಲಿರಿಸಿ. ಉದಾಹರಣೆಗೆ, ನಿಮ್ಮ ಕುರಿತು ಯಾರಾದರೊಬ್ಬರು ಬಹಳ ಕೆಟ್ಟದಾಗಿ ಮಾತನಾಡಿದ್ದರೆ ಅಥವಾ ಕೆಲವು ಮಾರ್ಗದಲ್ಲಿ ನೋವುಂಟು ಮಾಡಿದ್ದರೆ, ನೀವು ಸೇವೆ ಮಾಡುವಂತ ಸಭಿಕರಲ್ಲಿ ಕುಳಿತಿದ್ದರೆ ಅಥವಾ ವೈಯಕ್ತಿಕವಾಗಿ ನಿಮ್ಮ ಬಳಿಗೆ ಸೇವೆಗಾಗಿ ಬಂದರೆ – ಆ ವೈಯಕ್ತಿಕವಾಗಿ ನಿಮ್ಮ ಬಳಿಗೆ ಸೇವೆಗಾಗಿ ಬಂದರೆ-ಆ ವ್ಯಕ್ತಿಯ ತಡೆಗೆ ದೇವರ ಪ್ರೀತಿಯು ನಿಮ್ಮ ಹೃದಯಗಳನ್ನು ತುಂಬಿಸಲಿ. ಆ ವ್ಯಕ್ತಿಯ ಕಡೆಗೆ ಪ್ರೀತಿಯಿಂದ ಸೇವೆ ಸಲ್ಲಿಸಿರಿ. " ಪ್ರವಾದನೆಯ ವರ " ಅಥವಾ ಬೇರೆ ಯಾವುದೇ ವರವನ್ನು ಆ ವ್ಯಕ್ತಿಗೆ ಸೇಡು ತೀರಿಸಲು "ಹಿಂತುರುಗಿ" ಕೊಡಲು ಪ್ರಯತ್ನಿಸಬೇಡಿರಿ. ನಿಮ್ಮ ಪ್ರೇರಣೆಗಳನ್ನು ಯಾವಾಗಲೂ ಶುದ್ಧ ನಿರ್ಮಲ, ಯಥಾರ್ಥ ಮತ್ತು ಕರ್ತನನ್ನು ಮಾತ್ರವೇ ಮಹಿಮೆ ಪಡಿಸುವುದನ್ನು ಹುಡುಕುವ ಕಡೆಗೆ ಇರಿಸಿಕೊಂಡಿರಿ.

ಪ್ರೀತಿಯು ಸತ್ಯ, ಪ್ರಮಾಣಿಕ ಮತ್ತು ಪವಿತ್ರ

ಆತ್ಮನ ವರಗಳನ್ನು ಪ್ರಮಾಣಿಕತೆ, ಶುದ್ದತೆ ಮತ್ತು ಪವಿತ್ರತೆಯಿಂದ ನಿರ್ವಹಿಸಿರಿ. ಇವುಗಳು ಪವಿತ್ರಾತ್ಮನ ತೋರಿ ಬರುವಿಕೆಗಳಾಗಿವೆ. ಈ ವರಗಳು ವ್ಯಕ್ತಗೊಳ್ಳುವಂತಹದೊಡನೆ ಪವಿತ್ರತೆ ಮತ್ತು ವಿಸ್ಮಯದ ಒಂದು ಪ್ರಜ್ಞೆಯಿರುತ್ತದೆ. ದೇವರು ಏನಾದರೊಂದನ್ನು ಮಾಡುತ್ತಿದ್ದರೆ ಅಥವಾ ಮಾತಾಡುತ್ತಿದ್ದರೆ ಆತನೊಡನೆ ಅದರಲ್ಲಿ ಹರಿಯಿರಿ. ದೇವರು ನಿಶ್ಯಬ್ದವಾಗಿದ್ದರೆ ಏನನ್ನಾದರೂ ಬೇಡಿಕೊಳ್ಳಬೇಡಿ ಮತ್ತು ಅದನ್ನು ನಕಲಿ ಮಾಡಬೇಡಿ ಆತ್ಮನ ವರಗಳನ್ನು ನಕಲಿ ಮಾಡುವುದಕ್ಕೆ ಒತ್ತಾಯಿಸಲ್ಪಡಬೇಡಿರಿ. ನಕಲಿ ಮಾಡುವುದನ್ನು ದೇವರು ಅಪೇಕ್ಷಿಸುವುದಿಲ್ಲ, ಆತನು ನಂಬಿಗಸ್ತನಾಗಿ ಪ್ರಕಟಿಸುವುದನ್ನು ಮಾತನಾಡಿರಿ(ಯೆರೆಮಿಯ 23: 28)

ಪ್ರೀತಿ ಎಲ್ಲವನ್ನು ಅಡಗಿಸಿಕೊಳ್ಳುತ್ತದೆ, ನಂಬುತ್ತದೆ, ನಿರೀಕ್ಷಿಸುತ್ತದೆ ಸಹಿಸಿಕೊಳ್ಳುತ್ತದೆ

ಪ್ರೀತಿಯು ನಿರೀಕ್ಷೆಯನ್ನು ಹುಟ್ಟಿಸುತ್ತದೆ, ಪ್ರತಿಯೊಬ್ಬ ವ್ಯಕ್ತಿಗಾಗಿ ದೇವರ ಉತ್ತಮಮಾದದ್ದನ್ನು ನಂಬುತ್ತದೆ, ವಿಷಯಗಳು ತಪ್ಪಾಗಿ ಹೋಗುವಂತೆ ಕಾಣಿಸುವಾಗ ಅಡಗಿಸಿಕೊಳ್ಳುತ್ತದೆ ಮತ್ತು ಒಬ್ಬನು ಇಷ್ಟ ಪಡುವಂತೆ ವೇಗವಾಗಿ ವಿಷಯಗಳು ಜರುಗದಿರುವಾಗ ಇದು ಬಲವಾಗಿ ಸಹಿಸಿಕೊಳ್ಳುತ್ತದೆ. ಆತ್ಮನ ವರಗಳಲ್ಲಿ ಸೇವೆ ಮಾಡುವಾಗ, ಕಠಿಣ ವಿಷಯಗಳೊಡನೆ ವ್ಯವಹರಿಸುವಾಗ (ಉದಾಹರಣೆಗೆ ಪಾಪ, ಸೋಲು, ತಪ್ಪು ಉದ್ದೇಶಗಳು ಮುಂತಾದವು ವೈಯಕ್ತಿಕವಾಗಿ ದೇವರ ಉತ್ತಮವಾದದ್ದನ್ನು ತರಲೂ ಪ್ರಯತ್ನಿಸಿರಿ ಮತ್ತು ವೈಯಕ್ತಿಕವಾಗಿ ಅವರ ಜೀವಿತಗಳಿಗೆ ದೇವರ ಅತ್ಯುತ್ತಮವಾದದರ ಕಡೆಗೆ ನಡೆಯಿರಿ. ಕರ್ತನಾದ ಯೇಸು ಪಾಪವನ್ನು ಬಹಿರಂಗಗೊಳಿಸಿದಾಗ ಮತ್ತು ಸಮಾರ್ಯದಲ್ಲಿ ಬಾವಿಯ ಬಳಿಯಲ್ಲಿದ್ದ ಸ್ತ್ರೀಯ ತೊಂದರೆಯನ್ನು ತಿಳಿಸಿದಾಗ ಅವಳು ನಿರೀಕ್ಷೆಯಿಲ್ಲದವಳಾಗಿ ತಿರಸ್ಕರಿಸಲ್ಪಟ್ಟ ಮತ್ತು ಕೈಬಿಡಲ್ಪಟ್ಟಂತೆ ಹೋಗಲಿಲ್ಲ ಮೆಸ್ಸಿಯನ ವಿಸ್ಮಯದಲ್ಲಿ ನಿಂತುಕೊಂಡದ್ದು ಕೊನೆಯ ಫಲಿತಾಂಶವಾಗಿತ್ತು ಮತ್ತು ಸಂಪೂರ್ಣ ಹಳ್ಳಿಯು ಯೇಸುವನ್ನು ಸಂಧಿಸಲು ಅವಕಾಶ ಹೊಂದಿತ್ತು (ಯೋಹಾನ 4)

ಪ್ರೀತಿಯು ಎಂದಿಗೂ ಬಿದ್ದು ಹೋಗುವುದಿಲ್ಲ

" ವಿಫಲವಾಗುವುದಿಲ್ಲ" ಎಂಬ ಗ್ರೀಕ ಪದವು " ಎಕೆಪಿಪಿತೋ " ಪ್ರೀತಿಯ ಸಂಬಂಧಿತವಾಗಿ ಉಪಯೋಗಿಸಲ್ಪಟ್ಟಿದೆ, ಇದು ಸ್ಟ್ಯಾಂಗ್ಸ್ ಇಬ್ರಿಯ ಮತ್ತು ಗ್ರೀಕನ ಡಿಕ್ಸನರಿಯ ಪ್ರಕಾರವಾಗಿ, "ಒಬ್ಬರ ಅಭ್ಯಾಸ ಕ್ರಮದಿಂದ ಹೊರಹಾಕುವುದು"

ಸಾಂಕೇತಿಕವಾಗಿ ಕಳೆದುಕೊಳ್ಳುವುದು, ಅಸಮರ್ಥನಾಗಿ ಕಂಡುಬರುವುದು ಎಂಬುದಾಗಿ ಅರ್ಥ ಮತ್ತು ಥಾಯರ್ ಅವರ ಗ್ರೀಕ್ ವ್ಯಾಖ್ಯಾಗಳು ಇದನ್ನು ಒಳಗೊಂಡಿದೆ " ಒಬ್ಬ ವ್ಯಕ್ತಿಯು ಇರಿಸಿಕೊಳ್ಳಲು ಸಾಧ್ಯವಾಗದ ಸ್ಥಳದಿಂದ ಬೀಳುವುದು ಸ್ಥಾನದಿಂದ

ಬೀಳುವುದು, ಶಕ್ತಿಹೀನವಾಗಿ ಬೀಳುವುದು, ನೆಲಕ್ಕೆ ಬೀಳುವುದು, ಪರಿಣಾಮವಿಲ್ಲದೆ ಇಡುವುದು" .

ನಾವು ಇವೆಲ್ಲವನ್ನು ಒಟ್ಟಾಗಿ ಸೇರಿಸಿದರೆ, ನಾವು ಪ್ರೀತಿಯಲ್ಲಿ ನಡೆಯುವಾಗ, ನಾವು ಹಾದಿಯಿಂದ ಹೊರಹೋಗುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುತ್ತೇವೆ ಪ್ರೀತಿಯಲ್ಲಿ ನಡೆಯುವುದು ಸರಿಯಾದ ಅಭ್ಯಾಸಕ್ರಮದಲ್ಲಿ, ಸರಿಯಾದ ದಾರಿಯಲ್ಲಿ ನೆಲೆಸಿರುವುದಾಗಿದೆ. ಹಾಗೆಯೇ, ನಾವು ಪ್ರೀತಿಯಲ್ಲಿ ನಡೆಯುವಾಗ ನಾವು ಬಲಹೀನವಾಗಿ ಬಿದ್ದು ಹೋಗುವುದಿಲ್ಲ, ನಾವುಗಳು ಅಗೌರಕ್ಕೆ ತರಲ್ಪಡುವುದಿಲ್ಲ ಇಲ್ಲವೇ ನಾವು ನಿರುಪಯುಕ್ತರಾಗುವುದಿಲ್ಲ. ಬದಲಿಗೆ ನಾವು ಪರಿಣಾಮ ಮತ್ತು ಪ್ರಭಾವವುಳ್ಳವರಾಗುತ್ತೇವೆ.

ನಾವು ಪ್ರೀತಿಯಲ್ಲಿ ನಡೆಯುವಾಗ, ನಾವು ವಿಫಲವಾಗದೇ ಇರುವಂತಹ ಒಂದು ಹಾದಿಯಲ್ಲಿ ನಡೆಯುತ್ತೇವೆ. ದೇವರ ಬಗೆಯ ಪ್ರೀತಿಯಿಂದ ಪ್ರೇರಿತರಾಗಿ, ಮಾರ್ಗದರ್ಶಿಸುವವರಾಗಿ ಮತ್ತು ಪ್ರಭಾವಬೀರುವವರಾಗಿ ಏನನ್ನಾದರೂ ಮಾಡಿದರು ನಾವು ಇದರ ಪರಿಣಾಮವನ್ನು ಹೊಂದಿರುತ್ತೇವೆ. ದೇವರ ಪ್ರೀತಿಯಿಂದ ಪ್ರೇರೇಪಿಸಲ್ಪಟ್ಟು, ಮಾರ್ಗದರ್ಶಿಸಲ್ಪಟ್ಟು ಮತ್ತು ಆಳ್ವಿಕೆಗೆ ಒಳಪಟ್ಟು ಸೇವೆಸಲ್ಲಿಸುವಾಗ ಯಾವಾಗಲು ಸರಿಯಾದ ಹಾದಿಯಲ್ಲಿ ನಿಮ್ಮನ್ನು ಇರಿಸುತ್ತದೆ.

6.ಪವಿತ್ರಾತ್ಮನು ಹೇಗೆ ವರಗಳನ್ನು ಬಿಡುಗಡೆಗೊಳಿಸಲು ಆರಂಭಿಸುತ್ತಾನೆ

ಈ ಒಂದು ಅಧ್ಯಾಯನದಲ್ಲಿ ಪವಿತ್ರಾತ್ಮನಿಂದ ನಾವು ಸಾಮಾನ್ಯವಾಗಿ ಹೇಗೆ ಕೇಳಿಸಿಕೊಳ್ಳಬೇಕೆಂಬುದರ ಕೆಲವು ಪ್ರಾಯೋಗಿಕ ಒಳನೋಟಗಳನ್ನು ನೋಡೋಣ. ಜನರಿಗೆ ದೇವರು ಮಾತಾನಾಡುತ್ತಿರುವದನ್ನು ಪಡೆದುಕೊಳ್ಳಲು ಅವರು ಕಲಿಯುವುದು ಹೇಗೆ ಎಂಬುದಾಗಿ ಸಹಾಯ ಸುಲಭವಾಗಿ ಸಹಾಯ ಮಾಡಲು ಮತ್ತು ಸರಳ ವಿಧಾನ ಅನುಸರಿಸುವುದನ್ನು ನಾವು ಗುರ್ತಿಸಬಹುದು.

ಆತ್ಮ ಪ್ರಾಣ, ಶರೀರ

1 ಥೆಸಲೋನಿಕದವರಿಗೆ 5:23
ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ, ನಮ್ಮ ಕರ್ತನಾದ ಯೇಸುಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮ ಪ್ರಾಣ ಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ.

ನಾವು ಪ್ರತಿಯೊಬ್ಬರು, ಒಂದು ಆತ್ಮ ಪ್ರಾಣ ಹೊಂದಿದ್ದೇವೆ ಮತ್ತು ದೇಹದಲ್ಲಿ ವಾಸಿಸುತ್ತೇವೆ ಎಂದು ಅರ್ಥಮಾಡಿಕೊಳ್ಳುತ್ತೇವೆ. ಆತ್ಮವು ನಮ್ಮ ನಿತ್ಯತ್ವದ ಅಂಗವಾಗಿದೆ. ಇದು ಎಂದಿಗೂ ಸಾಯುವುದಿಲ್ಲ ಅಥವಾ ಸರ್ವನಾಶವಾಗುವುದಿಲ್ಲ ಆತ್ಮದ ಕ್ಷೇತ್ರಕ್ಕೆ ನಮ್ಮ ಸಂಬಂಧಿಸುವಂತಹ ಅಂಗವು ಸಹ ಇದೆ. ಆಗಿದೆ ನಾವು ಹೊಸದಾಗಿ ಹುಟ್ಟಿದಾಗ, ನಮ್ಮ ಮಾನವ ಆತ್ಮವು ದೇವರ ಗುಣಸ್ವಭಾವ ಮತ್ತು ಜೀವವನ್ನು ಪಡೆದುಕೊಳ್ಳುತ್ತದೆ. ನಮ್ಮ ಆತ್ಮಗಳಲ್ಲಿ ಪವಿತ್ರಾತ್ಮನಾದ ದೇವರು ಬಂದು ವಾಸಿಸುತ್ತಾನೆ. “ಹೃದಯ “ ಎಂಬ ಪದವು ಸತ್ಯವೇದದಲ್ಲಿ ಅನೇಕ ಸಮಯಗಳಲ್ಲಿ ಆತ್ಮವನ್ನು ವ್ಯಾಖ್ಯಾನಿಸುತ್ತದೆ. ಇತರೆ ಸಮಯಗಳಲ್ಲಿ “ಹೊಟ್ಟೆ” ಅಥವಾ” “ಒಳಗಿನ ಜೀವಿಯು” ಮಾನವನ ಆತ್ಮವನ್ನು ಉಲ್ಲೇಖಿಸಲು ಉಪಯೋಗಿಸಲ್ಪಟ್ಟಿದೆ. “ ಆಂತರ್ಯ ಮನುಷ್ಯ” ಎಂಬ ಪದವು ಸಹ ನಮ್ಮ ಆತ್ಮಗಳನ್ನು ಉಲ್ಲೇಖಿಸಲು ಉಪಯೋಗಿಸಲ್ಪಟ್ಟಿದೆ. ಪ್ರಾಣವು ನಮ್ಮ ಶಾರೀರಿಕವಾದ ಅಂಗವಾಗಿದೆ ಇದು ಮನಸ್ಸು, ಚಿತ್ತ ಮತ್ತು ಭಾವನೆಗಳಾಗಿದೆ ಪ್ರಾಣದೊಡನೆ ನಾವು ಸ್ಪರ್ಶ, ಯೋಚನೆ, ಕಾರಣ ಮುಂತಾದವುಗಳನ್ನು ಅನುಭವಿಸುತ್ತೇವೆ, ಪ್ರಾಣವು ಲೌಕಿಕವಾದದ್ದು (ಅಥವಾ ಶಾರೀರಿಕ) ಅಥವಾ ಪ್ರಾಣಾತ್ಮವು ರೂಪಾಂತರಗೊಂಡ ಅಥವಾ ನವೀಕರಣಗೊಂಡಂತದ್ದಾಗಿದೆ. ಪ್ರಾಣಾವು ಸಂಸ್ಕರಿಸುವಂತೆ ಇದೆ. ಇದು ಆತ್ಮವನ್ನು ಒಳಕ್ಕೆ ಸೇರಿಸುವ ಮತ್ತು ನಮ್ಮ ದೇಹದ ಮೂಲಕವಾದ ಒಳಸೇರಿಕೆಯ ಕಾರ್ಯವಿಧಾನಗಳನ್ನು ಮಾಡುತ್ತದೆ. ದೇಹವು ನಮ್ಮ ಶರೀರದ ಅಂಗವಾಗಿದೆ ಇದರ ಮೂಲಕವಾಗಿ ದೈಹಿಕ ನೈಸರ್ಗಿಕ ಪ್ರಪಂಚದೊಡನೆ ಸಂಪರ್ಕಿಸಲ್ಪಡುತ್ತೇವೆ ದೈಹಿಕ ಪ್ರಪಂಚದಿಂದ ಒಳಸೇರಿಕೆಗಳನ್ನು ಸಂಗ್ರಹಿಸುವ ಮೂಲಕವಾಗಿ ಮತ್ತು ನಮ್ಮ ಪ್ರಾಣದ ಪ್ರಕ್ರಿಯೆಯನ್ನು ಪೋಷಿಸುವಂತಹ ಐದು

ಇಂದ್ರಿಯಗಳು ಅಥವಾ ಕವಲುಗಳನ್ನು ದೇಹವು ಹೊಂದಿದೆ. ದೇಹವು ಕೆಲವು ಸಮಯಗಳಲ್ಲಿ ನಮ್ಮ ಬಾಹ್ಯ ಮನುಷ್ಯನಿಗೆ ಉಲ್ಲೇಖಿಸಲಾಗಿದೆ. ದೇಹದ ನೈಸರ್ಗಿಕ ದುಷ್ಪ ದುರಾಸೆಗಳು ಮತ್ತು ಪ್ರಾಣವನ್ನು ಒಟ್ಟಾಗಿ ಸೇರಿಸಿ ಸತ್ಯವೇದವು “ಶರೀರ” ಎಂಬುದಾಗಿ ಉಲ್ಲೇಖಿಸುತ್ತದೆ.

ಆತ್ಮದಿಂದ ಆತ್ಮಕ್ಕೆ

ಯೋಹಾನ 16:13-15
13 ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವೆನು.
14 ಆತ್ಮನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆ ಪಡಿಸುವನು ತಂದೆಗೆ ಇರುವದೆಲ್ಲಾ ನನ್ನದು ಆದದರಿಂದಲೇ ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತೆ ನನ್ನನ್ನೆ ಮಹಿಮೆ ಪಡಿಸುವನು.
15 ತಂದೆಗೆ ಇರುವದೆಲ್ಲಾ ನನ್ನದು; ಆದದರಿಂದಲೇ ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವನೆಂದು ಹೇಳಿದೆನು.

ರೋಮಾಪುರದವರಿಗೆ 8:14,16
14 ಯಾರಾರು ದೇವರ ಆತ್ಮದಿಂದ ನಡೆಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು,
16 ನಾವು ದೇವರ ಮಕ್ಕಳಾಗಿದ್ದೇವೆಂಬುದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ.

ದೇವರ ಮಕ್ಕಳಾಗಿ, ದೇವರ ಆತ್ಮದಿಂದ ನಡೆಸಲ್ಪಡುವಂತಹ ಅದ್ಭುತಕರವಾದ ಅವಕಾಶಗಳನ್ನು ನಾವು ಹೊಂದಿದ್ದೇವೆ. ನಮ್ಮ ಆತ್ಮಗಳಲ್ಲಿ ಪವಿತ್ರಾತ್ಮನು ವಾಸಿಸುತ್ತಾನೆ. ಮತ್ತು ಇಲ್ಲಿಯೇ ನಮ್ಮೊಂದಿಗೆ ಆತನು ಸಂಪರ್ಕಿಸುವುದಾಗಿದೆ. ಪವಿತ್ರಾತ್ಮನು ನಮ್ಮೊಂದಿಗೆ ಮಾತಾಡುತ್ತಾನೆ, ನಮ್ಮನ್ನು ಮಾರ್ಗದರ್ಶಿಸುತ್ತಾನೆ. ಸಮಯಕ್ಕಿಂತ ಮುಂಚಿತವಾಗಿ ನಮಗೆ ವಿಷಯಗಳನ್ನು ಪ್ರಕಟಿಸುತ್ತಾನೆ. ಮತ್ತು ನಮಗೆ ದೇವರ ಬಹಳ ಮನಸ್ಸನ್ನು ನಮಗೆ ಪ್ರಕಟಿಸುತ್ತಾನೆಂಬುದಾಗಿ ಯೇಸುವು ಹೇಳಿದ್ದಾನೆ. ದೇವರ ಆತ್ಮನು ನಮ್ಮೊಂದಿಗೆ ಸಂಬಂಧಿಸಿಕೊಳ್ಳುವ ಮುಖ್ಯ ಕ್ಷೇತ್ರವು ನಮ್ಮ ಆತ್ಮಗಳೇ ಆಗಿವೆ. ಹಳೆ ಒಡಂಬಡಿಕೆಯು ಆತ್ಮ ಮನುಷ್ಯನನ್ನು ಉಲ್ಲೇಖಿಸಲು “ದೀಪ” ಅಥವಾ “ಮೇಣದ ಬತ್ತಿ” ಎಂಬ ಪದವನ್ನು ಉಪಯೋಗಿಸಿದೆ. ಜ್ಞಾನೋಕ್ತಿಗಳು 20:27 ಹೀಗೆ ಹೇಳುತ್ತದೆ. “ ಮನುಷ್ಯನ ಆತ್ಮವು ಯೆಹೋವನ ದೀಪವಾಗಿದೆ. ಅದು ಅಂತರಂಗವನ್ನೆಲ್ಲಾ ಶೋಧಿಸುತ್ತದೆ” . ನಮ್ಮ ಸತ್ಯ ಪರಿಸ್ಥಿತಿಯನ್ನು ನಿಶ್ಚಯಿಸಲು ನಮ್ಮ ಆತ್ಮಗಳನ್ನು ದೇವರು ಉಪಯೋಗಿಸುತ್ತಾನೆ.ಹಾಗೆಯೇ ಆತ್ಮದಲ್ಲಿ ದೇವರು ಜ್ಞಾನೋದಯವನ್ನು ಆತನ ಸಲಹೆ ಮತ್ತು ನಿರ್ದೇಶನವನ್ನು ನಮಗೆ ಕೊಡುತ್ತಾನೆ. ದಾವೀದನು ಹೀಗೆ ಹೇಳಿದ್ದಾನೆ” ನೀನೆ ನನ್ನ ದೀಪವನ್ನು ಹೊತ್ತಿಸುವವನಲ್ಲವೇ ನನ್ನ ದೇವರಾದ ಯೆಹೋವನು ನನಗೆ ಬೆಳಕನ್ನು ಕೊಟ್ಟು ಕತ್ತಲನ್ನು ಪರಿಹರಿಸುವವನು “(ಕೀರ್ತನೆಗಳು 18:28) ಆಳವು ಆಳಕ್ಕೆ

ಕರೆಯುತ್ತದೆ. (ಕೀರ್ತನೆಗಳು 42:7) ಅಥವಾ ದೇವರ ಆತ್ಮನು ನಮ್ಮ ಆತ್ಮಕ್ಕೆ ಸಂಪರ್ಕಿಸುತ್ತಾನೆ. ದೇವರಾದ ಸಂಪರ್ಕವು ಸಾಮಾನ್ಯವಾಗಿ ಆತ್ಮದಿಂದ ಆತ್ಮಕ್ಕೆ ಜರುಗುತ್ತದೆ.

ಧರ್ಮೋಪದೇಶಕಾಂಡ 29:2-4
2 ಮೋಶೆ ಇಸ್ರಾಯೇಲ್ಲರೆಲ್ಲರನ್ನು ಕರೆದು ಹೀಗೆಂದನು ಯೆಹೋವನು ಐಗುಪ್ತದೇಶದಲ್ಲಿ ನಮ್ಮ ಕಣ್ಣು ಮುಂದೆ ಫರೋಹನಿಗೂ ಅವನ ಪರಿವಾರದವರಿಗೂ
3 ಸಮಸ್ತ ಪ್ರಜೆಗಳಿಗೂ ಮಾಡಿದ ಮಹಾಮನಶ್ಯೋಧನೆ ಉತ್ಪಾತ ಮಹತ್ಕಾರ್ಯಗಳನ್ನು ನೀವು ನೋಡೇ ನೋಡಿದ್ದೀರಷ್ಟೆ
4 ಆದರೂ ಗ್ರಹಿಸುವ ಬುದ್ಧಿ, ನೋಡುವ ಕಣ್ಣು ಕೇಳುವ ಕಿವಿ ಇವುಗಳನ್ನು ಯೆಹೋವನು ಇಂದಿನವರೆಗೂ ನಿಮಗೆ ಅನುಗ್ರಹಿಸಲಿಲ್ಲ.

ಯೆಶಾಯ 6:9-10
9 ಅದಕ್ಕೆ ಆತನು ನೀನು ಈ ಜನರ ಬಳಿಗೆ ಹೋಗಿ ನೀವು ಕಿವಿಯಾರ ಕೇಳಿದರೂ ತಿಳಿಯಬಾರದು, ಕಣ್ಣಾರೆ ಕಂಡರೂ ಗ್ರಹಿಸಬಾರದು ಎಂದು ತಿಳಿಸಿ
10 ಕಣ್ಣಿನಿಂದ ಕಂಡು ಕಿವಿಯಿಂದ ಕೇಳಿ ಹೃದಯದಿಂದ ಗ್ರಹಿಸಿ ನನ್ನ ಕಡೆಗೆ ತಿರುಗಿಕೊಂಡು ನನ್ನಿಂದ ಸ್ವಸ್ಥತೆಯನ್ನು ಹೇಗೂ ಹೊಂದದ ಹಾಗೆ ಈ ಜನರ ಹೃದಯಕ್ಕೆ ಕೊಬ್ಬೇರಿಸಿ ಕಿವಿಯನ್ನು ಮಂದಮಾಡಿ ಕಣ್ಣಿಗೆ ಅಂಟುಬಳಿ ಎಂದು ನನಗೆ ಹೇಳಿದನು.

(ಕರ್ತನಾದ ಯೇಸುವು ಇವುಗಳನ್ನು ಮತ್ತಾಯ 13:14-15 ರಲ್ಲಿ ಉಲ್ಲೇಖಿಸಿದ್ದಾನೆ ಹಾಗೆಯೇ ಅಪೊಸ್ತಲರ ಕೃತ್ಯಗಳು 28-27 ರಲ್ಲಿಯು ಉಲ್ಲೇಖಿಸಲಾಗಿದೆ).

ಪವಿತ್ರಾತ್ಮ ನಮ್ಮ ಆತ್ಮದೊಡನೆ ಸಾಕ್ಷಿಕೊಡುತ್ತಾನೆ ನಮ್ಮ ಆತ್ಮ, ಪ್ರಾಣ, ಶರೀರಗಳ ಮೇಲೆ ಚಲಿಸುತ್ತಾನೆ.			
	ಆತ್ಮ	ಪ್ರಾಣ	ಶರೀರ
ಪವಿತ್ರಾತ್ಮ	ಸ್ಪರ್ಶ ನೋಡುವುದು ಕೇಳುವುದು ರುಚಿ ವಾಸನೆ	ಕಾರಣ ವಿಶ್ಲೇಷಿಸು ನಿಶ್ಚಯಿಸು ಕ್ರಿಯಾರೂಪ	ಸ್ಪರ್ಶ ನೋಡುವುದು ಕೇಳುವುದು ರುಚಿ ವಾಸನೆ

ಮಾನವನ ದೇಹದ ದೈಹಿಕ ಇಂದ್ರಿಯಗಳ ರೀತಿಯಂತೆ ಮನುಷ್ಯನ ಆತ್ಮವು ಇಂದ್ರಿಯಗಳನ್ನು ಹೊಂದಿದೆ ಎಂಬುದಾಗಿ ಧರ್ಮಶಾಸ್ತ್ರದಿಂದ ನಿಖರವಾಗಿ

ಸ್ಪಷ್ಟವಾಗಿದೆ. ಮನುಷ್ಯನ ಆತ್ಮವು ಸಮರ್ಥವಾಗಿರುವಂತಹ ಐದು ಆತ್ಮ ಇಂದ್ರಿಯಗಳನ್ನು ಐದು ದೈಹಿಕ ಇಂದ್ರಿಯಗಳ ಸಮಾನಾಂತರತೆಯಲ್ಲಿ ಸ್ಪಷ್ಟವಾಗಿ ನಾವು ಸ್ಥಾಪಿಸಬಹುದು. ಭೌತಿಕ ಜಗತ್ತಿಗೆ ಸಂಬಂಧಿಸಿದಂತೆ ಭೌತಿಕ ದೇಹವು ಸಮರ್ಥವಾಗಿರುವದಕ್ಕಿಂತ ಕಾಣದ ಆತ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದಾಗ ಆತ್ಮವು ಇನ್ನೂ ಹೆಚ್ಚಿನ ಸಾಮರ್ಥ್ಯವನ್ನು ಹೊಂದುತ್ತದೆ. ಈಗ ಈ ಐದು –ಆತ್ಮದಿಂದ-ಇಂದ್ರಿಯಗಳ ಕುರಿತು ಚರ್ಚಿಸೋಣ ಮತ್ತು ಈ ಐದು ಕವಲುಗಳ ಮೂಲಕವಾಗಿ ನಮಗೆ ದೇವರ ಆತ್ಮನು ಸಂಪರ್ಕಿಸುವುದು ಹೇಗೆ ಎಂಬುದನ್ನು ವಚನಗ್ರಂಥದಿಂದ ತೋರಿಸೋಣ. ನಾವು "ಆತ್ಮ " ಇದನ್ನು ಮಾನವನ ಆತ್ಮ ಉಲ್ಲೇಖಿಸಲು ಮತ್ತು 'ಆತ್ಮ' ಇದನ್ನು ಪವಿತ್ರಾತ್ಮನನ್ನು ಉಲ್ಲೇಖಿಸಲು ಉಪಯೋಗಿಸುತ್ತದೆ.

ಆತ್ಮನ ಭಾವನೆಯ ಇಂದ್ರಿಯ

ದೈಹಿಕ ಸ್ಪರ್ಶ/ಅನುಭವದ ಇಂದ್ರಿಯದ ಹೋಲಿಕೆಯಂತೆ ನಮ್ಮ ಆತ್ಮಗಳು ಅನುಭವ ಪಡೆಯುತ್ತವೆ. ನಮ್ಮ ಆತ್ಮಗಳಲ್ಲಿ ಸಮಾಧಾನ, ಶಾಂತತೆ ಮತ್ತು ಸಂತೋಷದ ಭಾವನೆಗಳನ್ನು ನಾವು ಹೊಂದಬಹುದು. ನಾವು ಚಡಪಡಿಕೆ, ಆತಂಕ, ಕ್ರಿಯೆಗೆ ಸ್ಫೂರ್ತಿದಾಯಕ ಅಥವಾ ಪ್ರೇರಣೆ, ಬಿಗಿತ, ಅಥವಾ ಅಸ್ವಸ್ಥತೆಯ ಭಾವನೆ, ಕಹಿ ಅಥವಾ ಕೋಪ, ಭಾರವಾದ ಭಾವನೆ ಮುಂತಾದವುಗಳನ್ನು ನಾವು ಅನುಭವಿಸಬಹುದು. ಈ ಭಾವನೆಗಳು ಒಂದು ಮಿಂಚಿನಂತೆ ಬಂದು ಹೋಗಬಹುದು ಅಥವಾ ನಮ್ಮ ಆತ್ಮಗಳಲ್ಲಿ ಸ್ವಲ್ಪ ಕಾಲದ ಅವಧಿಯವರೆಗೂ ಮುಂದುವರೆಯಬಹುದು. ಪ್ರತಿಯೊಂದು ಭಾವನೆಯೊಡನೆ ಪವಿತ್ರಾತ್ಮನು ನಮಗೆ ಸಾಮಾನ್ಯವಾಗಿ ಸಂಪರ್ಕಿಸುವ ಒಂದು ಸಂದೇಶವಿರುತ್ತದೆ.

ವಚನಗ್ರಂಥಭಾಗದಲ್ಲಿನ ಕೆಲವು ಉದಾಹರಣೆಗಳು ಇಲ್ಲಿವೆ;

● ಶಾಂತಿ (ಕೊಲೊಸ್ಸೆಯವರಿಗೆ 3:15): ಶಾಂತಿಯ ಒಂದು ಭಾವನೆಯು ಎಲ್ಲವೂ ಉತ್ತಮವಾಗಿದೆ ಎಂಬುದನ್ನು ಸೂಚಿಸುತ್ತದೆ.

● ಕದಲಿಕೆ ಅಥವಾ ಪ್ರಚೋದಿಸುವುದು (ಅಪೊಸ್ತಲರ ಕೃತ್ಯಗಳು 17:16:17): ನಿಮ್ಮ ಆತ್ಮದಲ್ಲಿ ಒಂದು ಕದಲುವಿಕೆಯು ಕಾರ್ಯರೂಪಕ್ಕೆ ಪರಿಸ್ಥಿತಿಯ ಬಗ್ಗೆ ಏನಾದರೂ ಮಾಡಲು ಒಂದು ಕರೆಯಲಾಗಿದೆ.

● ಒತ್ತಾಯಪಡಿಸು (ಅಪೊಸ್ತಲರ ಕೃತ್ಯಗಳು 18:5) : ಸಾಮಾನ್ಯವಾಗಿ ಕಾರ್ಯರೂಪಕ್ಕೆ, ಪರಿಸ್ಥಿತಿಯ ಕುರಿತು ಏನಾದರೂ ಮಾಡಲು ಒತ್ತಾಯಪಡಿಸುವ ಒಂದು ಕರೆಯಾಗಿದೆ.

● ಬದ್ಧ (ಅಪೊಸ್ತಲರ ಕೃತ್ಯಗಳು 20:22-23): ಏನಾದರೂ ಮಾಡದಿರಲು ಅಥವಾ ಹೋಗದಿರಲು ಮತ್ತು ಕೆಲವು ಅಪಾಯ ಸಮೀಪವಾಗಿದೆ ಎಂಬ ಒಂದು ಎಚ್ಚರಿಕೆಯ ಬಿಗಿತ ಅಥವಾ ಅಸೌಖ್ಯತೆಯ ಒಂದು ಭಾವನೆ.

• ಚಡಪಡಿಕೆ (2 ಕೊರಿಂಥದವರಿಗೆ 2:13): ಕ್ರಿಯಾರೂಪಕ್ಕೆ ಚಲಿಸುವುದು, ಏನಾದರೂ ಮಾಡಲು ಅಥವಾ ಏನನ್ನಾದರೂ ಗಮನಿಸಬೇಕಾದ ಸೂಚನೆ.

• ಕಹಿ, ಶಾಖ (ಯೆಹೆಜ್ಕೇಲ 3:14): ಕೋಪದ ಭಾವನೆ ಸಾಮಾನ್ಯವಾಗಿ ಮತ್ತೊಮ್ಮೆ ಕ್ರಿಯೆಯ ಒಂದು ಕರೆ.

• ಆತ್ಮನು ನನ್ನ ಮೇಲೆ ಬಂದಿತ್ತು (ಯೆಹೆಜ್ಕೇಲನು 11:15): ಒಂದು ಭಾರವಾದ ಭಾವನೆ ಸಾಮಾನ್ಯವಾಗಿ ನಿಮ್ಮ ಮೇಲಿರುವ ಆತನ ಪ್ರಸನ್ನತೆ, ನಿಮ್ಮ ಮೇಲೆ ಬರಲಿರುವ ಅಭಿಷೇಕ ಮುಂತಾದವುಗಳ ಒಂದು ಸೂಚನೆಯಾಗಿದೆ.

ನಮ್ಮ ಆತ್ಮಗಳಲ್ಲಿ ಇಂತಹ ಭಾವನೆಗಳನ್ನು ಗುರ್ತಿಸುವ ಸಾಮರ್ಥ್ಯವನ್ನು ನಾವು ಬೆಳೆಸಿಕೊಳ್ಳಬೇಕು ಮತ್ತು ಆಮೇಲೆ ಆ ಭಾವನೆಯ ಮೂಲಕವಾಗಿ ನಮಗೆ ಪವಿತ್ರಾತ್ಮನು ಹೇಳುವುದು ಸಾಕ್ಷಿ ಹೇಳುವುದೇನು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಉದಾಹರಣೆಗೆ ಪೌಲನು "ಆತ್ಮದಲ್ಲಿ ಬದ್ಧ" ಎಂಬ ಅನುಭವ ಪಡೆದನು. ಅಂದರೆ ಅರ್ಥವು ಅವನು ತುಂಬಾ ಪ್ರತಿಬಂಧಿಸಲ್ಪಟ್ಟನು, ಅವನ ಒಳಗಡೆ ಒಂದು ಬಿಗಿಯಾದ ಭಾವನೆಯನ್ನು ಹೊಂದಿದ್ದನು ಆದರೆ ಯೆರೂಸಲೇಮಿನಲ್ಲ ಮುಂದೆ ತೊಂದರೆಗಳು ಉಂಟಾಗುತ್ತವೆ ಎಂಬುದಾಗಿ ಅವನಿಗೆ ಪವಿತ್ರಾತ್ಮನು ಹೇಳಿದ ಸಂದೇಶವನ್ನು ಅರ್ಥಮಾಡಿಕೊಂಡನು.

ಯೋಹಾನ 3:8
ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ. ಅದರ ಸಪ್ಪಳವನ್ನು ಕೇಳುತ್ತಿ ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು ಆತ್ಮನಿಂದ ಹುಟ್ಟಿದವರೆಲ್ಲರು ಅದರಂತೆಯೇ ಅಂದನು.

ನೀವು ಯಾವಾಗಲೂ ಎಲ್ಲವನ್ನು ವಿವರಿಸಲು ಆಗುವುದಿಲ್ಲ ಆದರೆ ಪವಿತ್ರಾತ್ಮನು ಕಾರ್ಯನಿರತನಾಗಿದ್ದಾನೆಂಬುದು ನಿಮಗೆ ಗೊತ್ತಿದೆ.

ನೋಡುವ ಆತ್ಮನ ಇಂದ್ರಿಯ

ಮನುಷ್ಯನ ಆತ್ಮವು "ಕಣ್ಣುಗಳನ್ನು" ಅಥವಾ "ನೋಡಲು" ಸಾಮರ್ಥ್ಯವನ್ನು ಮತ್ತು "ಕಿವಿಗಳು" ಅಥವಾ "ಕೇಳುವ" ಸಾಮರ್ಥ್ಯ ಹೊಂದಿದೆ ಎಂಬುದು ನಮಗೆ ತಿಳಿದದೆ. ಉದಾಹರಣೆಗೆ, ಯೇಸುವು ಸಾಮ್ಯರೂಪದಲ್ಲಿ ಆತನು ಮಾತಾನಾಡಿದ್ದು ಏಕೆ ಎಂಬುದಾಗಿ ಆತನ ಶಿಷ್ಯರು ಕೇಳಿದಾಗ, ಆತನು ಹೀಗೆ ಪ್ರತಿಕ್ರಿಯಿಸಿದನು: "ನಾನು ಅವರ ಸಂಗಡ ಸಾಮ್ಯರೂಪವಾಗಿ ಮಾತಾಡುವದಕ್ಕೆ ಕಾರಣವೇನೆಂದರೆ ಅವರಿಗೆ ಕಣ್ಣಿದ್ದರೂ

ನೋಡುವದಿಲ್ಲ ಕಿವಿಯಿದ್ದರೂ ಕೇಳುವದಿಲ್ಲ ಮತ್ತು ತಿಳುಕೊಳ್ಳುವದಿಲ್ಲ ಯೆಶಾಯನು ಹೇಳಿದ ಪ್ರವಾದನೆಯು ಅವರಲ್ಲಿ ನೆರವೇರುತ್ತದೆ.ಅದೇನಂದರೆ ನೀವು ಕಿವಿಯಿದ್ದು ಕೇಳಿದರೂ ತಿಳುಕೊಳ್ಳುವದೇ ಇಲ್ಲ ಕಣ್ಣಿದ್ದು ನೋಡಿದರೂ ಕಾಣುವದೇ ಇಲ್ಲ ಈ ಜನರ ಹೃದಯವು ಕೊಬ್ಬಿತು ಇವರ ಕಿವಿ ಮಂದವಾಯಿತು ಇವರು ಕಣ್ಣು ಮುಚ್ಚಿಕೊಂಡಿದ್ದಾರೆ ತಾವು ಕಣ್ಣಿನಿಂದ ಕಂಡು ಕವಿಯಿಂದ ಕೇಳಿ ಹೃದಯದಿಂದ ತಿಳಿದು ನನ್ನ ಕಡೆಗೆ ತಿರುಗಿಕೊಂಡು ನನ್ನಿಂದ ಸ್ವಸ್ಥತೆಯನ್ನು ಹೇಗೂ ಹೊಂದಬಾರದೆಂದು ಮಾಡಿಕೊಂಡಿದ್ದಾರೆ ಎಂಬುಂದು ಆದರೆ ನಿಮ್ಮ ಕಣ್ಣು ಕಾಣುತ್ತವೆ. ನಿಮ್ಮ ಕಿವಿ ಕೇಳುತ್ತವೆ ಆದದರಿಂದ ನೀವು ಧನ್ಯರು" (ಮತ್ತಾಯ 13:13:16), ಕರ್ತನಾದ ಯೇಸುವು ಸ್ಪಷ್ಟವಾಗಿ ಹೃದಯದ "ಕಣ್ಣುಗಳು" ಮತ್ತು "ಕಿವಿಗಳು" ಉಲ್ಲೇಖಿಸಿದ್ದಾನೆ ಮತ್ತು ಸ್ವಾಭಾವಿಕ ಅಂಗಾಂಗದ ನೋಡುವುದು ಅಥವಾ ಕೇಳುವುದನ್ನು ಅಲ್ಲ. ನಾವು ಚಿತ್ರಗಳನ್ನು ನೋಡುತ್ತೇವೆ ಮತ್ತು ಮಾತುಗಳನ್ನು ಕೇಳುತ್ತೇವೆ.

ತುಂಬಾ ಆಗಾಗ್ಗೆ ಚಿತ್ರಗಳು ಮತ್ತು ಆಕೃತಿಗಳು ನಮ್ಮ ಆತ್ಮಗಳಿಗೆ ಬಂದು ನಮ್ಮ ಮನಸ್ಸಿನೊಳಗೆ ಬರುವುದನ್ನು ನಾವು ಪಡೆಯುತ್ತೇವೆ. ಇವುಗಳು ಸತ್ಯವಾಗಿ ಪವಿತ್ರಾತ್ಮನಿಂದ ಸಂದೇಶಗಳಾಗಿವೆ. ಚಿತ್ರವು ಸಾವಿರ ಪದಗಳ ಮೌಲ್ಯದ್ದಾಗಿರುವುದರಿಂದ ಅವು ಸಂಪರ್ಕದ ಉತ್ತಮ ರೂಪವಾಗಿದೆ. ನಾವು ನೋಡುವ ಚಿತ್ರಗಳು ಮೂಲಭೂತವಾಗಿ ಆತ್ಮಿಕ ದರ್ಶನಗಳ ಮೂಲ ರೂಪವಾಗಿದೆ. ಕೆಲವು ಬಾರಿ ಚಲನಚಿತ್ರದಲ್ಲಿ ನೋಡುವಂತೆ ಚಿತ್ರಗಳನ್ನು ನೋಡುತ್ತೇವೆ ಅದು ನಡೆಯುತ್ತಿರುವ ಚಿತ್ರಗಳ ಅನುಕ್ರಮವಾಗಿರುತ್ತದೆ. ನಾವು ಭಾವಪರವಶತೆಯಲ್ಲಿ ಅಥವಾ ನಾವು ನಿದ್ರಿಸುವಾಗ ಕನಸುಗಳ ಮೂಲಕ ಅಥವಾ ರಾತ್ರಿಯ ದರ್ಶನಗಳಲ್ಲಿ ಚಿತ್ರಗಳನ್ನು ಸಹ ನೋಡುತ್ತೇವೆ. ನಮ್ಮ ಆತ್ಮದ ಕಣ್ಣುಗಳು ಆತ್ಮ ಕ್ಷೇತ್ರದ ಏನಾದರೊಂದನ್ನು ನೋಡುತ್ತಿದೆಂಬುದಾಗಿ ಇನ್ನೊಬ್ಬ ವ್ಯಕ್ತಿಯ ಆತ್ಮದೊಳಗೆ ಏನು ನಡೆಯುತ್ತದೆ ಅಥವಾ ಆತ್ಮ ಜಗತ್ತಿನಲ್ಲಿ ಏನು ನಡೆಯುತ್ತಿದೆ ಎಂಬುದಾಗಿ ತೋರುತ್ತದೆ. ತದನಂತರ ಏನಾದರೂ ಸಂಭವಿಸಬಹುದು, ಪ್ರವಾದಿಯಾದ ಯೆಹೆಜ್ಕೇಲನ ಆಗಾಗ್ಗೆ ಅನುಭವಿಸುವಂತೆ ನಮ್ಮ ಆತ್ಮಗಳು ದೃಷ್ಟಿಗೋಚರ ಪ್ರವಾಸದಲ್ಲಿ ಪ್ರಯಾಣಿಸುವಂತೆ ದೇಹದ ಹೊರಗಿನ ಅನುಭವಗಳನ್ನು ಹೊಂದಿರಬಹುದಾಗಿರುತ್ತದೆ.

ನಾವು ನೋಡುವಂತಹ ಚಿತ್ರಗಳು ಮತ್ತು ರೂಪಗಳಲ್ಲಿನ ಅತ್ಯಂತ ಸಾಮಾನ್ಯವಾದ ಅನುಭವವೇನೆಂದರೆ-ನಾವು ಚಿತ್ರಗಳ ಅರ್ಥವಿವರಣೆಯನ್ನು ನಿಖರವಾಗಿ ಮಾಡಬೇಕು ಮತ್ತು ಅವುಗಳ ಮೂಲಕವಾಗಿ ದೇವರು ನಮಗೆ ತಿಳಿಸುತ್ತಿರುವ ಸಂದೇಶವನ್ನು ಹೊಂದಬೇಕು.

ಇಲ್ಲಿ ಕೆಲವು ವಚನ ಗ್ರಂಥಭಾಗದ ಉದಾಹರಣೆಗಳಿವೆ:

- ಕನಸ್ಸುಗಳು (ಯೋಬ 33:14-17)
- ದರ್ಶನಗಳು (ದಾನಿಯೇಲನು 8:1-3, ದಾನಿಯೇಲನು 10:4-9)
- ಚಿತ್ರಗಳು (ಯೆರೆಮಿಯಾ 1:11-14 ಆಮೋಸ 8:1-2)

- ಘಟನೆಗಳನ್ನು/ಜರುಗುತ್ತಿರುವುದನ್ನುನೋಡುವುದು*(ಯೋಹಾನ1:46-48)*
- ಭಾವಪರವಶತೆ (ಅಪೋಸ್ತಲರ ಕೃತ್ಯಗಳು 10:9-17)
- ಆತ್ಮನ ಕ್ಷೇತ್ರದಲ್ಲಿ ನೋಡುವುದು (ಅರಣ್ಯಕಾಂಡ 22:31, 2 ಅರಸುಗಳ 6:15:17, ಯೆಶಾಯ 6:1:8)
- ಒಂದು ದರ್ಶನದಲ್ಲಿ ಪ್ರಯಾಣಿಸಬಹುದು ಮತ್ತು ನೋಡುವುದು (ಯೆಹೆಜ್ಕೇಲನು 8:1:3: ಯೆಹೆಜ್ಕೇಲನು 11:1,24-25 ,2ಅರಸುಗಳು 5:25-26)

ದೇಹದ ಹೊರಗಿನ ಅನುಭವಗಳು ಭಾಷಾಂತರದ, ಸಾಗಣೆಯ ಮತ್ತು ದ್ವಿ-ಸ್ಥಳದ್ವಾಗಿರಬಹುದು. (2 ಅರಸುಗಳು 2:16: ಯೆಹೆಜ್ಕೇಲನು 37:1-2: ಯೆಹೆಜ್ಕೇಲನು 43:5-6. ಅಪೊಸ್ತಲರ ಕೃತ್ಯಗಳು 8:39-40 2ಕೊರಿಂಥದವರಿಗೆ 12:1-4), ಭಾಷಾಂತರವು ಆತ್ಮವು ನಿಮ್ಮ ದೇಹದಿಂದ ಹೊರಗೆ ಪ್ರಯಾಣಿಸುವುದಾಗಿರುವುದಾಗಿದೆ. ರವಾನೆಯು ಪವಿತ್ರಾತ್ಮನು ನಿಮ್ಮನ್ನು ಸಂಪೂರ್ಣವಾಗಿ (ಆತ್ಮ , ಪ್ರಾಣ ಮತ್ತು ಶರೀರ) ಇನ್ನೊಂದು ಸ್ಥಳಕ್ಕೆ ಚಲಿಸುವಂತೆ ಮಾಡುವುದಾಗಿದೆ. ದ್ವಿಸ್ಥಳವು ಒಂದೇ ಸಮಯದಲ್ಲಿ ಭೂಮಿಯ ಮೇಲೆ ಎರಡು ಸ್ಥಳಗಳನ್ನು ನೀವು ನೋಡುವುದಾಗಿದೆ. ದ್ವಿ-ಸ್ಥಳವು ಹೇಗೆ ಜರುಗುತ್ತದೆಂಬುದನ್ನು ನಾವು ಅರ್ಥಮಾಡಿಕೊಳ್ಳಲಾಗುವುದಿಲ್ಲ.

ನೀವು ನೋಡುವುದನ್ನು ಅರ್ಥವಿವರಣೆ ಮತ್ತು ಸಂಪರ್ಕ ಮಾಡುವುದು

ಆತ್ಮದಲ್ಲಿ ನಾವು ನೋಡುವುದನ್ನು ಅರ್ಥವಿವರಣೆ ಮತ್ತು ಸಂಪರ್ಕ ಮಾಡುವಾಗ ಹಿಂಬಾಲಿಸಬೇಕಾದ 2 ಸರಳ ಮಾರ್ಗ ಸೂಚನೆಗಳಿವೆ.

(ಅ) ಇದು ಅಕ್ಷರಶಃವಾಗಿದ್ದರೆ ಇದನ್ನು ವಿವರಿಸಿರಿ---ದೇವರು ನಿಮಗೆ ತೋರಿಸುತ್ತಿರುವಂತದ್ದು ಒಂದು ಅಕ್ಷರಶಃ ಚಿತ್ರ, ದೃಶ್ಯ, ಜನರ ಘಟನೆಗಳ, ಸ್ಥಳಗಳ ಮತ್ತು ಸಂಗತಿಗಳ ಅನುಕ್ರಮವಾಗಿದ್ದರೆ ಆತನು ತೋರಿಸುತ್ತಿರುವ ರೀತಿಯಲ್ಲಿಯೇ ಅದನ್ನು ವಿವರಿಸಿರಿ. ಆತನು ನಿಮಗೆ ಹೆಸರುಗಳು, ಸದಸ್ಯರುಗಳು,ದಿನಾಂಕಗಳು ಮುಂತಾದವುಗಳನ್ನು ತೋರಿಸಬಹುದು ಎಲ್ಲವೂ ತೋರಿಸಿದಂತೆಯೇ ಮಾತನಾಡಲ್ಪಡಬೇಕು.

(ಆ) ಇದು ಸಾಂಕೇತಿಕವಾಗಿದ್ದರೆ ಅದನ್ನು ಅರ್ಥವಿವರಿಸಿರಿ- ದೇವರ ಆತ್ಮನು ನಿಮಗೆ ಸಾಂಕೇತಿಕವಾಗಿ ಅಥವಾ ಪ್ರಾತಿನಿಧಿಕವಾಗಿ ತೋರಿಸುತ್ತಿದ್ದರೆ, ಆಮೇಲೆ ತೋರಿಸಲ್ಪಟ್ಟದು ಏನು ಎಂಬುದರ ಅರ್ಥವನ್ನು ವಿವರಿಸಿವುದು ಮತ್ತು ಅದನ್ನು ಸಂಪರ್ಕಿಸುವುದು ಪ್ರಾಮುಖ್ಯವಾಗಿದೆ.

ಯಾವಾಗಲೂ ಸತ್ಯವೇದದ ಚಿತ್ರಣ ಉಪಯೋಗಿಸಿ

ನೀವು ನೋಡಿದ್ದನ್ನು ಸತ್ಯವೇದದ ಚಿತ್ರಣವನ್ನು ಧರ್ಮಶಾಸ್ತ್ರದ ವಚನದಲ್ಲಿ ಈ ಸಂಕೇತಗಳ ಅರ್ಥವೇನು ಎಂಬುದನ್ನು ಮೊದಲೂ ಉಪಯೋಗಿಸುವ ಮೂಲಕ ಯಾವಾಗಲೂ ಅರ್ಥವಿವರಿಸಿರಿ.ಸತ್ಯವೇದದಲ್ಲಿ ಇಲ್ಲದಿರುವ ವಿಷಯಗಳ ಚಿತ್ರಗಳನ್ನು ಅನೇಕ ಸಮಯಗಳಲ್ಲಿ ನೋಡುವುದು ಸತ್ಯಕರವಾಗಿದೆ. ಅಂತಹ ಪರಿಸ್ಥಿತಿಗಳಲ್ಲಿ ಪವಿತ್ರಾತ್ಮನನ್ನು ಕೇಳಿರಿ, ಆತನ ಅರ್ಥವನ್ನು ಪಡೆದುಕೊಳ್ಳಿರಿ ಮತ್ತು ಅರ್ಥವಿವರಣೆ ಪಡೆಯಿರಿ ಮತ್ತು ಸಂದೇಶ ಬಿಡುಗಡೆ ಮಾಡಿರಿ.

ಸತ್ಯವೇದದ ಪಾತ್ರಧಾರಿಗಳು, ಘಟನೆಗಳು ಅಥವಾ ಪಠ್ಯಗಳನ್ನು ಅರ್ಥವಿವರಣೆ ಮಾಡುವುದು

ಪವಿತ್ರಾತ್ಮನು ಸತ್ಯವೇದದ ಪಾತ್ರಧಾರಿಗಳು, ಘಟನೆಗಳು ಅಥವಾ ಗ್ರಂಥಭಾಗಗಳಿಂದ ಒಂದು ಸಂದೇಶ ಬಿಡುಗಡೆ ಮಾಡಲು ಪ್ರಮುಖಾಂಶಗಳನ್ನು ತೋರಿಸುವ ಸಮಯಗಳುಂಟು.

ಅದೇ ಪ್ರಾಧಾನ್ಯತೆಯೊಡನೆ ಸಂಪರ್ಕ ಮಾಡಿ ಮತ್ತು ಪವಿತ್ರಾತ್ಮನು ಸಂಪರ್ಕಿಸಲು ಅಪೇಕ್ಷಿಸುತ್ತಿರುವುದರ ಮಟ್ಟಿಗೆ ಅದನ್ನೇ ಹೇಳಿರಿ, ಉದಾಹರಣೆಗೆ ವ್ಯಕ್ತಿಗೆ ಸೇವೆ ಸಲ್ಲಿಸುವಾಗ, ಪವಿತ್ರಾತ್ಮನು ದಾವೀದನು ಗೊಲ್ಯತನನ್ನು ಕೊಂದ ಘಟನೆಯನ್ನು ಎತ್ತಿ ತೋರಿಸಬಹುದು, ಆಮೇಲೆ ವೈಯಕ್ತಿಕವಾದದರ ಮೇಲೆ ಇರುವ ಅಂಶಗಳನ್ನೇ ಮಾತ್ರ ಮಾತಾನಾಡಿರಿ.

ದಾವೀದನು ಗೋಲ್ಯಾತನನ್ನು ಕೋದಂತೆಯೇ, ನೀವು ಪ್ರಸ್ತುತ ಎದುರಿಸುತ್ತಿರುವ ಗೋಲ್ಯಾತನ ಮೇಲೆ ದೊಡ್ಡ ವಿಜಯವನ್ನು ದೇವರು ಕೊಡುವನು ಎಂಬುದಾಗಿ ನೀವು ಹೇಳಬಹುದು ಪವಿತ್ರಾತ್ಮನು ಐದು ನುಣುಪಾದ ಕಲ್ಲುಗಳು ಮತ್ತು ದಾವೀದನು ಉಪಯೋಗಿಸಿದ ಕವಣೆಯ ಬಗ್ಗೆ ತೋರಿಸದಿದ್ದರೆ, ಪ್ರವಾದನೆ ಸಂದೇಶಕ್ಕೆ ಅದನ್ನು ಸೇರಿಸಬೇಡಿರಿ. ದೇವರ ಆತ್ಮನು ಪ್ರಾಧಾನ್ಯತೆ ತೋರಿಸುವವಗಳ ಮೇಲೆ ಇರುವವರಾಗಿರಿ,

ಚಿಹ್ನೆಗಳು ಮತ್ತು ಆಕೃತಿಗಳ ಅಧಿಕವಾದ ಅರ್ಥ ವಿವರಣೆಗಾಗಿ ಏ.ಪಿ.ಸಿ. ಪುಸ್ತಕವಾದ “ ಪ್ರವಾದನೆ ಅರ್ಥಮಾಡಿಕೊಳ್ಳುವುದು” ಎಂಬ ಪುಸ್ತಕವನ್ನು ದಯವಿಟ್ಟು ನೋಡಿರಿ.

ಕೇಳಿಸಿಕೊಳ್ಳುವ ಆತ್ಮದ ಇಂದ್ರಿಯ

ಮನುಷ್ಯನ ಆತ್ಮ ಕಿವಿಗಳನ್ನು ಹೊಂದಿದೆ ಎಂಬುದು ನಮಗೆ ಗೊತ್ತು ಸತ್ಯವೇದದಲ್ಲಿ ಈ ರೀತಿಯಾಗಿ ವಚನಗಳನ್ನು ನಾವು ಓದುತ್ತೇವೆ. “ಕಿವಿಯುಳ್ಳವನು, ಸಭೆಗಳಿಗೆ ಆತ್ಮನು “ಹೇಳುವುದೇನೆಂಬುದನ್ನು ಕೇಳಲಿ” ಉಲ್ಲೇಖವು ಆತ್ಮಿಕ ಕಿವಿಗಳಿಗೆ.

ಮತ್ತಾಯ 11:15
ಕಿವಿಯುಳ್ಳವನು ಕೇಳಲಿ

ಪ್ರಕಟನೆ 2:7
ಸಭೆಗಳಿಗೆ ಹೇಳುವುದನ್ನು ಕಿವಿಯುಳ್ಳವನು ಕೇಳಲಿ.

ಯೆಶಾಯ 30:20-21
20 ಕರ್ತನು ಕಷ್ಟವನ್ನೂ ಶ್ರಮವನ್ನೂ ನಿಮಗೆ ಅನ್ನಪಾನಗಳನ್ನಾಗಿ ಕೊಟ್ಟರು ನಿಮ್ಮ ಬೋಧಕನು ಇನ್ನು ಮರೆಯಾಗಿರನು ನಿಮ್ಮ ಬೋಧಕನನ್ನು ಕಣ್ಣಾರೆ ಕಾಣುವಿರಿ.
21 ನೀವು ಬಲಕ್ಕಾಗಲಿ ಎಡಕ್ಕಾಗಲಿ ತಿರುಗಿಕೊಳ್ಳುವಾಗ ಇದೇ ಮಾರ್ಗ ಇದರಲ್ಲೇ ನಡೆಯಿರಿ ಎಂದು ನಿಮ್ಮ ಹಿಂದೆ ಆಡುವ ಮಾತು ನಿಮ್ಮ ಕಿವಿಗೆ ಬೀಳುವುದು.

ಯೆಶಾಯ 50:4-5
4 ಬಳಲಿ ಹೋದವರನ್ನು ಮಾತುಗಳಿಂದ ಸುಧಾರಿಸುವದಕ್ಕೆ ನಾನು ಬಲ್ಲವನಾಗುವಂತೆ
5 ಕರ್ತನಾದ ಯೆಹೋವನು ಶಕ್ತಿತರ ನಾಲಿಗೆಯನ್ನು ನನಗೆ ದಯಪಾಲಿಸಿದ್ದಾನೆ. ಬೆಳಬೆಳಗೂ ನನ್ನನ್ನು ಎಚ್ಚರಿಸಿ ಶಿಕ್ಷಕರಂತೆ ನಾನು ಕೇಳುವ ಹಾಗೆ ನನ್ನ ಕಿವಿಯನ್ನು ಜಾಗರಗೊಳಿಸುತ್ತಾನೆ. ಕರ್ತನಾದ ಯೆಹೋವನು ನನ್ನ ಕಿವಿಯನ್ನು ತೆರೆದಿದ್ದಾನೆ ನಾನು ಎದುರು ಬೀಳಲಿಲ್ಲ ವಿಮುಖನಾಗಲೂ ಇಲ್ಲ.

ನಾವು ಆತ್ಮದಲ್ಲಿ ”ಕೇಳಿದಾಗ” ನಾವು ಸಾಮಾನ್ಯವಾಗಿ ಶಬ್ದಗಳನ್ನು ಕೇಳುವುದಿಲ್ಲ ಆದರೆ ಬದಲಿಗೆ ಪದ, ಪದಗಳು, ವಾಖ್ಯಾನಗಳು ಅಥವಾ ಮನುಷ್ಯ- ಆತ್ಮಕ್ಕೆ ಅಪ್ರಾಕೃತವಾಗಿ ಪಾಲುಕೊಟ್ಟ ವಾಕ್ಯವೃಂದಗಳನ್ನು ಪಡೆದುಕೊಳ್ಳುತ್ತೇವೆ. ಕೆಲವು ಸಮಯಗಳಲ್ಲಿ ಒಂದು ಮಿಂಚಿನಂತೆ ಮಾಹಿತಿಗಳು ತಕ್ಷಣವೇ ನಮ್ಮ ಆತ್ಮಗಳೊಳಗೆ ಬರುತ್ತವೆ. ಕೆಲವು ಸಮಯಗಳಲ್ಲಿ ನಾವು “ ಕೇಳುವುದು” ನಮಗೆ ಗೊತ್ತಿರುವಂತಹ ಅಪ್ರಾಕೃತ ತಿಳುವಳಿಕೆಯಾಗಿ ಬರುತ್ತವೆ. ಅಧಿಕವಾದ ಮಾಹಿತಿಗಳ ಪಾಲುಕೊಡುವಿಕೆಯಿರುತ್ತದೆ ಮತ್ತು ಅದು ನಮ್ಮ ಆತ್ಮಗಳೊಳಗೆ ಬರುತ್ತದೆ.

ಮಾಹಿತಿಗಳು ನಮ್ಮ ಆತ್ಮಗಳಿಗೆ ಆಂತರಿಕ ತಿಳುವಳಿಕೆ, ಆಂತರಿಕ ಸಾಕ್ಷಿ, ಆಂತರಿಕ ಸ್ವರ ಮತ್ತು ಕೆಲವು ಸಮಯಗಳಲ್ಲಿ (ಆದರೂ ಬಹಳ ವಿರಳ) ಸಮುವೇಲನು ದೇವರ ಸ್ವರವನ್ನು ಕೇಳಿಕೊಂಡ ನಿದರ್ಶನದಲ್ಲಿ ನಿಜವಾದ ಶ್ರವ್ಯ(ಕೇಳಿಸುವ) ಸ್ವರದಲ್ಲಿ ಬರುತ್ತವೆ. ಉದ್ದೇಶಿತ

ಪ್ರೇಕ್ಷಕರು ಮಾತ್ರವೇ ದೇವರ ಕೇಳಿಸುವ ಸ್ವರವನ್ನು ಕೇಳಲು ಶಕ್ತರಾಗಿರುತ್ತಾರೆ. ಅವರೊಂದಿಗೆ ಇರುವವರು ಸಾಮಾನ್ಯವಾಗಿ ಅದನ್ನು ಕೇಳಿಸಿಕೊಳ್ಳುವದಿಲ್ಲ.

ಆತನು ಆರಿಸಿದಂತೆ ದೇವರು ಮಾತನಾಡುತ್ತಾನೆ. ಕೆಲವುಬಾರಿ ನೀವು ಒಂದೇ ಪದವನ್ನು ಒಂದೇ ಪದವನ್ನು ಪಡೆದುಕೊಳ್ಳಬಹುದು ಆದರೆ ಅದು ಇನ್ನೊಬ್ಬರಿಗಾಗಿ ಜೀವನವನ್ನೇ ಬದಲಾಯಿಸುವಂತದ್ದು ಆಗಿರಬಹುದು. ಕೆಲವು ಸಮಯಗಳಲ್ಲಿ ಬರೀ ಒಂದು ಸಾಮಾನ್ಯ ವಾಕ್ಯ ಅಥವಾ ಹೇಳಿಕೆಯಾಗಿರಬಹುದು ಆಮೇಲೆ ಸಂಪೂರ್ಣವಾದ ಮಾಹಿತಿಗಳು ಇರುವಂತಹ ಸಮಯಗಳು ಇವೆ. ದೇವರು ಸಂಪರ್ಕಿಸುತ್ತಿರುವ ಮಾಹಿತಿಯ ಪರಿಮಾಣವನ್ನು ಲೆಕ್ಕಿಸದೆ ಆತನ ಮಾತನಾಡುವ ಎಲ್ಲವನ್ನು ಗಂಭೀರವಾಗಿ ತೆಗೆದುಕೊಳ್ಳುತ್ತೇವೆ ಮತ್ತು ಅದನ್ನು ನಂಬಿಗಸ್ತರಾಗಿ ಬಿಡುಗಡೆಗೊಳಿಸಲು ಹುಡುಕುತ್ತೇವೆ.

ಸತ್ಯವೇದದಲ್ಲಿ ಅನೇಕಬಾರಿ, “ಕರ್ತನ ವಾಕ್ಯವು ಬಂದಿತು” ಎಂಬ ನುಡಿಗಟ್ಟನ್ನು ಓದುತ್ತೇವೆ. ಕೆಲವು ನಿದರ್ಶನಗಳಲ್ಲಿ, ಇದು ಕೇಳಿಸುವ ಸ್ವರ, ಒಂದು ದರ್ಶನ ಅಥವಾ ಕನಸು ಮುಂತಾದವು ಎಂಬುದಾಗಿ ಸತ್ಯವೇದವು ಸೂಚಿಸುತ್ತದೆ. ಆದರೆ ಅನೇಕ ಪ್ರಕರಣಗಳಲ್ಲಿ ಅದು ಆಗುವುದಿಲ್ಲ.

“ಕರ್ತನ ವಾಕ್ಯವು ಬಂದಿತು” ಎಂಬ ನುಡಿಗಟ್ಟನು ನಾವು ಓದುವಂತಹ ಹೆಚ್ಚಿನ ಪ್ರಕರಣಗಳಲ್ಲಿ ಇದು ಪ್ರವಾದಿಗೆ ಕೊಡಲ್ಪಟ್ಟಂತಹ ಅವನ ಆತ್ಮದ ಕಿವಿಗಳು ಮೂಲಕವಾಗಿ ಸಂದೇಶವನ್ನು ಪಡೆದು ಆಮೇಲೆ ಅದನ್ನು ಮಾತಾಡಿದಂತಹ ಕೇಳಿಸಿಕೊಳ್ಳಲಾಗದ್ದು ಆಗಿತ್ತು ಎಂಬುದಾಗಿ ನಾನು ನಂಬುತ್ತೇನೆ.

ಕೇಳಿಸಿಕೊಳ್ಳುವುದು ಮಾಹಿತಿಯ ಸಂಪರ್ಕವಾಗಿದೆ. ಸ್ವಾಭಾವಿಕ ಕ್ಷೇತ್ರದಲ್ಲಿ ಈ ಸಂಪರ್ಕ ಅಥವಾ ಮಾತುಗಳ ವರ್ಗಾವಣೆ ಸಾಮಾನ್ಯವಾಗಿ ಧ್ವನಿಯ ಮಾಧ್ಯಮದ ಮೂಲಕವಾಗಿ ಜರುಗುತ್ತದೆ. ಆತ್ಮಿಕ ಕ್ಷೇತ್ರದಲ್ಲಿ ಸಾಮಾನ್ಯವಾಗಿ ಧ್ವನಿಯ ಮಾಧ್ಯಮ ಉಪಯೋಗಿಸಲ್ಪಡುವುದಿಲ್ಲ. ಆದರೂ ನೀವು ಆತನ ಸ್ವರದ ಧ್ವನಿಯನ್ನು ಕೇಳುವ ಅಥವಾ ಪರಲೋಕದ ಆರಾಧನೆಯ ಧ್ವನಿ ಮುಂತಾದವುಗಳನ್ನು ಕೇಳಿದ ನಿದರ್ಶನಗಳಿವೆ. ವಿಶಿಷ್ಟವಾಗಿ ನೀವು ಆತನ ಸ್ವರವನ್ನು ಕೇಳುತ್ತೀರಿ, ಯಾವುದೇ ಧ್ವನಿಯಿಲ್ಲದೆ ಆತನು ಸಂಪರ್ಕಿಸುತ್ತಿರುವ ಸಂದೇಶ ಅಥವಾ ವಾಕ್ಯವನ್ನು ಪಡೆದುಕೊಳ್ಳುತ್ತೀರಿ. ಈ ಜ್ಞಾನವು ನಿಮ್ಮ ಆತ್ಮಗಳಿಗೆ ನೀಡಲಾದಂತಹ ಸಮಯಗಳಿವೆ ಮತ್ತು ನೀವು ಸುಮ್ಮನೆ ನಿಮ್ಮ ಆತ್ಮದಲ್ಲಿ “ ತಿಳಿಯುತ್ತೀರಿ” , ನಾವು ಇದನ್ನು “ಗ್ರಹಿಸುವುದು” ಎಂದು ಕರೆಯುತ್ತೇವೆ. ಇದು ಆತ್ಮದಲ್ಲಿ ಗುರ್ತಿಸುವುದು ಅಥವಾ ತಿಳಿಯುವ ಸಾಮಾರ್ಥ್ಯ ಇದಾಗಿದೆ.

ಯೇಸುವು ಮನುಷ್ಯರ ಆಲೋಚನೆಗಳನ್ನು ತಿಳಿದಿದ್ದನು ಎಂದು ಒಂದಕ್ಕಿಂತ ಹೆಚ್ಚು ಸಂದರ್ಭಗಳಲ್ಲಿ ಬರೆಯಲಾಗಿದೆ. “ಹೀಗೆ ಅಂದುಕೊಳ್ಳುವದನ್ನು ಕೂಡಲೆ ಯೇಸು ತನ್ನ ಆತ್ಮದಲ್ಲಿ ತಿಳಿದುಕೊಂಡು ಅವರಿಗೆ ನೀವು ನಿಮ್ಮ ಮನಸ್ಸಿನಲ್ಲಿ ಯಾಕೆ ಹೀಗೆ ಅಂದುಕೊಳ್ಳುತ್ತೀರಿ?” (ಮಾರ್ಕ 2:8)

ಕೆಲವು ಧರ್ಮಗ್ರಂಥದ ಉದಾಹರಣೆಗಳು ಇಲ್ಲಿವೆ:

- ಒಂದೇ ವಾಕ್ಯ(ಅಪೊಸ್ತಲರ ಕೃತ್ಯಗಳು8:29)
- ಕೆಲವು ವಾಕ್ಯಗಳು(ಅಪೊಸ್ತಲರ ಕೃತ್ಯಗಳು 10:19-20)
- ವೈಯಕ್ತಿಕ ವಿವರಗಳು (2 ಅರಸುಗಳು 6:8-12 ಯೋಹಾನ 4:16-18)
- ಸಂಖ್ಯೆಗಳು (ಅಪೊಸ್ತಲರ ಕೃತ್ಯಗಳು 5:1:-10)
- ಹೆಸರುಗಳು, ಸಂಖ್ಯೆಗಳು, ವಿಳಾಸಗಳು(ಮನೆ ಅಥವಾ ಕೊಠಡಿ ಸಂಖ್ಯೆ, ಹುಟ್ಟಿದ ದಿನಾಂಕಗಳು) (ಅಪೊಸ್ತಲರ ಕೃತ್ಯಗಳು 9:10-12:10:1-6,19-20).

ವಾಸನೆ ಮತ್ತು ರುಚಿಯ ಆತ್ಮದ ಇಂದ್ರಿಯಗಳು

ಮನುಷ್ಯನ –ಆತ್ಮವು ರುಚಿ ಮತ್ತು ವಾಸನೆಯನ್ನು ಸಹ ಹೊಂದಬಲ್ಲದು ಎಂದು ನಮಗೆ ತಿಳಿದಿದೆ.

ಸತ್ಯವೇದವು ನಮಗೆ ಹೀಗೆ ಹೇಳುತ್ತದೆ ”ಯೆಹೋವನು ಸರ್ವೋತ್ತಮನೆಂದು ಅನುಭವದಿಂದ ತಿಳಿದುಕೊಳ್ಳಿರಿ……”(ಕೀರ್ತನೆಗಳು 34:8) ಯೆಹೆಜ್ಕೇಲನು ಆತ್ಮಿಕವಾಗಿ ಸುರುಳಿಯನ್ನು ತಿನ್ನುವ ಮತ್ತು ಅದರ ರುಚಿನೋಡುವ ಅನುಭವವನ್ನು ವ್ಯಾಖ್ಯಾನಿಸುತ್ತಾನೆ. “ನಾನು ಬಾಯಿ ತೆರೆಯಲು ಆತನು ಅಸುರುಳಿಯನ್ನು ನನಗೆ ತಿನ್ನಿಸಿದನು ಆಗ ಆತನು ನನಗೆ ನರಪುತ್ರನೇ ನಾನು ಕೊಡುವ ಈ ಸುರುಳಿಯನ್ನು ತಿಂದು ಹೊಟ್ಟೆತುಂಬಿಸಿಕೋ ಎಂದು ಹೇಳಲು ಅದನ್ನು ತಂದುಬಿಟ್ಟೆನು ಅದು ನನ್ನ ಬಾಯಲ್ಲಿ ಜೇನಿನಂತೆ ಸಿಹಿಯಾಗಿತ್ತು” (ಯೆಹೆಜ್ಕೇಲನು 3:2,3) ಇದು ನಿಜಕ್ಕೂ ಆತ್ಮಿಕ ಅನುಭವವಾಗಿದು ಆತ್ಮದಲ್ಲಿ ಏನನ್ನಾದರೂ ರುಚಿಸುವಂತದ್ದು ಆಗಿತ್ತು. ಪ್ರಕಟನೆ 10:8-10 ನೋಡಿರಿ.

ಅನೇಕ ಸಮಯಗಳಲ್ಲಿ ದೇವರು ವಾಸನೆ ಮೂಲಕವಾಗಿ ಆತನ ಪ್ರಸನ್ನತೆ ತೋರ್ಪಡಿಸುತ್ತಾನೆ. ರುಚಿಯಂತೆ, “ಆತ್ಮದಲ್ಲಿ” ವಾಸನೆಯು ಇದೆ. ನೀವು ನಿರ್ದಿಷ್ಟವಾದ

ಸುವಾಸನೆಯನ್ನು ಗುರ್ತಿಸುತ್ತೀರಿ ಮತ್ತು ದೇವರು ಆ ಸುವಾಸನೆಯನ್ನು ಉಪಯೋಗಿಸಿ ಆತನ ಮಾಡಲು ಅಪೇಕ್ಷಿಸುತ್ತಿರುವ ಕಾರ್ಯವನ್ನು ಅಥವಾ ನೀವು ಮಾಡಬೇಕೆಂಬುದಾಗಿ ಆತನು ಅಪೇಕ್ಷಿಸುವುದನ್ನು ಸೂಚಿಸುತ್ತದೆ. ನಿಮ್ಮ ಸುತ್ತಲಿರುವ ಇತರರ ಈ ವಾಸನೆಯನ್ನು ಹೊಂದುವುದಿಲ್ಲ ಯಾಕೆಂದರೆ ದೇವರು ನಿಮ್ಮ ಇಂದ್ರಿಯದ ವಾಸನೆಯನ್ನು ನಿಮ್ಮೊಂದಿಗೆ ಸಂಪರ್ಕಿಸಲು ಉಪಯೋಗಿಸುತ್ತಿದ್ದಾನೆ. ಸುಗಂಧ ಅಥವಾ ಸುವಾಸನೆಯನ್ನು ದೇವರ ಮುಂದೆ ನಮ್ಮ ಕಾರ್ಯಗಳು ಹೇಗಿದೆ ಎಂಬುದರ ವಿವರಣೆಯಾಗಿ ಬಳಸುವ ವಚನಭಾಗಗಳನ್ನು ನೋಡಿರಿ.(ಕೀರ್ತನೆಗಳು 141:2:2ಕೊರಿಂಥದವರಿಗೆ 2:14-16, ಎಫೆಸದವರಿಗೆ 5:2: ಫಿಲಿಪ್ಪಿಯವರಿಗೆ 4:18: ಪ್ರಕಟನೆ 5:8, ಪ್ರಕಟನೆ 8:3-4).

ದೇವರು ಒಂದು ನಿರ್ಧಿಷ್ಟವಾದ ರುಚಿ/ವಾಸನೆಯನ್ನು ಗುರ್ತಿಸುವಂತೆ ಮಾಡುತ್ತಾನೆ. ಆಮೇಲೆ ಆತನು ಏನನ್ನು ಸಂಪರ್ಕಿಸುತ್ತಿದ್ದಾನೆ ಎಂಬುದರ ವಿಶಿಷ್ಟ ತಿಳುವಳಿಕೆಯನ್ನು ಕೊಡುತ್ತಾನೆ. ಆಹ್ಲಾದಕರ ಅಭಿರುಚಿಗಳು) ವಾಸನೆಗಳು ನಾವು ಏನು ಮಾಡುತ್ತಿದ್ದೆವೆಂಬುದವರಲ್ಲಿ ದೇವರ ಸಂತೋಷವನ್ನು ಸೂಚಿಸಲು ಉಪಯೋಗಿಸಲ್ಪಟ್ಟಿದೆ: ದೇವರು ಇದ್ದಾನೆ. ದೇವರ ಅಭಿಷೇಕವು ಕಾರ್ಯನಿರತವಾಗಿದೆ: ದೇವರು ಸ್ವಸ್ಥತೆಯನ್ನು ತರಲು ಚಲಿಸುತ್ತಿದ್ದಾನೆ: ದೇವರು ಸಂತೈಸುವಿಕೆ ತರಲು ಚಲಿಸುತ್ತಿದ್ದಾನೆ: ದೇವರು ನಿರ್ಧಿಷ್ಟ ಬಗೆಯ ಅಗತ್ಯತೆಗಳನ್ನು ಪೂರೈಸಲು ಚಲಿಸುತ್ತಿದ್ದಾನೆ.ಅಹಿತಕರ ರುಚಿಗಳು/ವಾಸನೆಗಳು ಜರಗುತ್ತಿರುವುದರ ಬಗ್ಗೆ ಜಾಗರೂಕರಾಗಿರಲು ನಿಮಗೆ ಸೂಚಿಸುವ ಎಚ್ಚರಿಕೆ ಆಗಿರಬಹುದು.(ಉದಾಹರಣೆಗೆ ಪ್ರಸಂಗಿಸಲ್ಪಟ್ಟ ಒಂದು ತಪ್ಪು ದೈವಶಾಸ್ತ್ರ, ಸುಳ್ಳು ಪ್ರವಾದಿಯು ಜನರಿಗೆ ವಂಚಿಸುತ್ತಿರುವುದು ದುರಾತ್ಮಗಳ ಬಲ, ಭ್ರಷ್ಟಗೊಳಿಸುವ ದುರಾತ್ಮಗಳು, ಕಾರ್ಯನಿರತ ಅಶುದ್ಧ ಆತ್ಮಗಳು ಮುಂತಾದವು), ನೀವು ಈ ಪರಿಸ್ಥಿತಿಗಳಿಂದ ಹೊರಬರಲು (ಉದಾಹರಣೆಗೆ ಈಗಲೇ, ಹೊರಡು, ನೀವು ಇಲ್ಲಿ, ಇರಬೇಕಾಗಿಲ್ಲ, ಈ ಜನರೊಂದಿಗೆ ಸಂಭಾಷಣೆ ಮಾಡಬೇಡ ಮುಂತಾದವು) ಸೂಚಿಸುವ ಎಚ್ಚರಿಕೆಯಾಗಿದೆ.

ಸುಂಗಧ, ದ್ರವ್ಯಗಳು, ವಾಸನೆನಾಶಕ(ಡಿಯೋಡರೆಂಟ) ಗಾಳಿ ಶುದ್ಧಕಗಳಿಂದ ಉಂಟಾಗುವ ನೈಸರ್ಗಿಕ ವಾಸನೆಗಳೊಡನೆ ಇದನ್ನು ಗೊಂದಲಗೊಳಿಸಬೇಡಿರಿ. ಆತ್ಮಿಕ ಮೂಲವನ್ನು ಹೊಂದಿರುವ ಮತ್ತು ಆತ್ಮಗಳಿಗೆ ನೈಸರ್ಗಿಕ ವಾಸನೆಗಳು ಮತ್ತು ರುಚಿಗಳಿಗೆ ಸಮಾನರೂಪದ ವಾಸನೆಗಳ ಮತ್ತು ರುಚಿಗಳನ್ನು ನಾವು ಉಲ್ಲೇಖಿಸುತ್ತಿದ್ದೇವೆ.

ನಮ್ಮ ಆತ್ಮಿಕ ಇಂದ್ರಿಯಗಳಿಗೆ ತರಬೇತಿ ನೀಡುವುದು

ನಮ್ಮಲ್ಲಿರುವ ಐದು ನೈಸರ್ಗಿಕ ಇಂದ್ರಿಯಗಳಿಗೆ ಹೋಲುವಂತಹ ಮಾನವ ಆತ್ಮದ ಬೋಧನೆಗಳ ಮೇಲೆ ನಾವು ವಿವರಿಸಿದ್ದೇವೆ. ಐದು ಆತ್ಮದ ಇಂದ್ರಿಯಗಳು ಪರಸ್ಪರ ಪ್ರತ್ಯೇಕತೆಯಲ್ಲಿ ಕೆಲಸ ಮಾಡುವುದಿಲ್ಲವೆಂಬುದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು ಅವುಗಳನ್ನು ವಿಭಾಗೀಕರಿಸಲಾಗಿಲ್ಲ. ತುಂಬಾ ಅಗ್ಗಾಗ್ಗೆ ದೇವರು ಸಂಪರ್ಕಿಸುವಾಗ ಅನುಭವಿಸಿ ಕೇಳಿ ಮತ್ತು ನೋಡುವ ಸಂಗತಿಗಳಿರುತ್ತವೆ. ಈ ಎಲ್ಲಾ ಕವಲುಗಳು ಸಂಪರ್ಕದ ತುಣುಕುಗಳನ್ನು ಪಡೆದುಕೊಳ್ಳುತ್ತವೆ. ಮತ್ತು ನೀವು ಅವುಗಳನ್ನು ಜೊತೆಗೂಡಿಸಬೇಕು ಆಮೇಲೆ ಅವುಗಳನ್ನು ಪ್ರಸ್ತುತ ಪಡಿಸಬೇಕು ಅಥವಾ ಅವುಗಳ ಮೇಲೆ ಕ್ರಿಯೆ ಮಾಡಬೇಕು.

ಅಂತಹ ಕವಲುಗಳ ಮೂಲಕವಾಗಿ ದೇವರ ಸಂಪರ್ಕಿಸುವುದನ್ನು ಎತ್ತಿಕೊಳ್ಳಲು ನಮ್ಮ ಆತ್ಮ ಇಂದ್ರಿಯಗಳು ತರಬೇತಿಗೊಂಡಿರುವುದು ಮತ್ತೊಂದು ಪ್ರಾಮುಖ್ಯ ಅಂಶ ಎಂಬುದನ್ನು ನಾವು ತಿಳಿಯಬೇಕು ನಾವು ಅಧಿಕವಾಗಿ ದೇವರಿಂದ ಕೇಳುವಾಗ ಮತ್ತು ಪಡೆದುಕೊಳ್ಳುವಾಗ ನಾವು ಅಧಿಕ ಸೂಕ್ಷ್ಮತೆಯುಳ್ಳವರಾಗಿ ಕಂಡು ಬರುತ್ತೇವೆ ಮತ್ತು ದೇವರು ಹೇಳುತ್ತಿರುವುದನ್ನು ಎತ್ತಿ ಹಿಡಿದುಕೊಳ್ಳಲು ಬಹಳ ಸುಲಭವಾಗುತ್ತದೆ ಇದು ಯಾರಾದರೊಬ್ಬರ ಧ್ವನಿಯನ್ನು ಕೇಳುವಂತಿರುತ್ತದೆ. ನೀವು ಅನೇಕಬಾರಿ ಅವರ ಸ್ವರವನ್ನು ಕೇಳಿಸಿಕೊಂಡಿದ್ದರಿಂದ ವ್ಯಕ್ತಿ ಯಾರು ಮತ್ತು ನೀವು ಅವರ ಧ್ವನಿಯನ್ನು ಗುರುತಿಸಬಹುದು ದೇವರನ್ನು ಕೇಳಿಸಿಕೊಳ್ಳಲು ಕಲಿಯುವುದೂ ಅದೇ ಆಗಿದೆ.

ಇಬ್ರಿಯರಿಗೆ 5:13-14
13 ಹಾಲು ಬೇಕಾದವನು ಕೂಸಿನಂತಿದ್ದು ನೀತಿವಾಕ್ಯದಲ್ಲಿ ಅನುಭವವಿಲ್ಲದವನಾಗಿದ್ದಾನೆ
14 ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೋಸ್ಕರ ಅಂದರೆ ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಇದು ಒಳ್ಳೇದು ಅದು ಕೆಟ್ಟದ್ದು ಎಂಬ ಭೇದವನ್ನು ತಿಳಿದವರಿಗೋಸ್ಕರವಾಗಿದೆ.

ದೇವರ ವಾಕ್ಯದಲ್ಲಿರುವುದರ ಮೂಲಕವಾಗಿ ನಮ್ಮ ಇಂದ್ರಿಯಗಳನ್ನು ತರಬೇತಿಗೊಳಿಸುವುದು ಒಂದು ಪ್ರಾಮುಖ್ಯವಾದ ಮಾರ್ಗವಾಗಿದೆ. " ಇಂದ್ರಿಯಗಳು" ಎಂಬ ಪದದ ಅರ್ಥವು " ಗ್ರಹಿಕೆಯ ಅಂಗ" . ಆತ್ಮಿಕ ಮತ್ತು ಭಾವನೆಗಳ ಎರಡು ಗ್ರಹಿಕೆಯ ಅಂಗಾಗಳು ದೇವರ ವಾಕ್ಯದ ಧೃಡವಾದ ಉಪಯೋಗದ ಮೂಲಕ ತರಬೇತಿ ಹೊಂದುವುದು ಅಗತ್ಯವಾಗಿದೆ. ದೇವರವುಗಳು ಏನು ಮತ್ತು ದೇವರದಲ್ಲವುಗಳು ಏನು ಎಂಬುದರ ಗ್ರಹಿಕೆಯ ಸಾಮರ್ಥ್ಯವನ್ನು ಇದು ನಮ್ಮ ಇಂದ್ರಿಯಗಳಿಗೆ ಕೊಡುತ್ತದೆ.

ಒಮ್ಮೆ ನಮ್ಮ ಆತ್ಮಗಳಲ್ಲಿ ವಿಷಯಗಳನ್ನು ಎತ್ತಿಕೊಂಡಾಗ, ಆಮೇಲೆ ಸಾಮಾನ್ಯವಾಗಿ ಇದು ನಿಜಕ್ಕೂ ದೇವರಿಂದ ಬಂದಿದ್ದ ಎಂದು ದೃಢಿಕರಿಸಲು ನಮ್ಮ ಪ್ರಾಣಾತ್ಮ (ಮನಸ್ಸು

ಚಿತ್ತ, ಭಾವನೆಗಳು)ಇದರಲ್ಲಿ ಪ್ರಕ್ರಿಯೆಗೊಳಿಸುತ್ತವೆ. ಆಮೇಲೆ ಇದರೊಡನೆ ಏನು ಮಾಡಬೇಕು, ಯಾವಾಗ, ಹೇಗೆ ಎಂಬುವುಗಳನ್ನು ನಿಶ್ಚಯಿಸಿಕೊಳ್ಳುತ್ತೇವೆ ಆದ್ದರಿಂದ ಆತ್ಮದ ಮೂಲಕವಾಗಿ ನಾವು ಏನನ್ನು ಪಡೆದುಕೊಳ್ಳುತ್ತವೆಂಬುದನ್ನು ಪ್ರಕ್ರಿಯೆಗೊಳಿಸಲು ನಮ್ಮ ಮನಸ್ಸುಗಳನ್ನು ಸಹ ತರಬೇತಿಗೊಳಿಸಬೇಕು ನಮ್ಮ ಮನಸ್ಸುಗಳು ದೇವರ ವಾಕ್ಯದೊಡನೆ ನವೀಕರಿಸಲ್ಪಟ್ಟಿರಬೇಕು. ಮತ್ತು ಆತ್ಮದಲ್ಲಿ ಉತ್ಸಾಹದಿಂದ ತೆಗೆದುಕೊಳ್ಳುವುದನ್ನು ನಿಖರವಾಗಿ ಪ್ರಕ್ರಿಯೆಗೊಳಿಸಲು ದೇವರ ಸಂಪೂರ್ಣ ಸಲಹೆ ಬೇಕು. ಈ ತರಬೇತಿ ಕೈಪಿಡಿ ನಮ್ಮ ಆತ್ಮಗಳನ್ನು ತರಬೇತಿಗೊಳಿಸಲು ಒಂದು ಉಪಕರಣಸಾಧನವಾಗಿದೆ ಮತ್ತು ದೇವರಿಂದ ಕೇಳಿಸಿಕೊಳ್ಳುವ ಮನಸ್ಸುಗಳು ಮತ್ತು ನಾವು ಕೇಳುತ್ತಿರುವುದನ್ನು ಪ್ರಕ್ರಿಯೆಗೊಳಿಸಲು ಇರುವುದಾಗಿದೆ.

ನಮ್ಮ ಪ್ರಾಣದ ಸ್ವರದಿಂದ ಆತ್ಮ ಸ್ವರವನ್ನು ಪ್ರತ್ಯೇಕಿಸುವುದು

ಈ ತರಬೇತಿ ಪ್ರಕ್ರಿಯೆಯ ದೊಡ್ಡ ಸವಾಲು ಆತ್ಮದ್ದು ಯಾವುದು ಮತ್ತು ನಮ್ಮ ಸ್ವಂತ ಕಲ್ಪನೆಯು ಯಾವುದು ಎಂಬುದನ್ನು ಹೇಗೆ ಪ್ರತ್ಯಕಿಸುವುದಾಗಿದೆ. ಆತ್ಮನ ವರಗಳನ್ನು ನೀವು ತೋರ್ಪಡಿಸುವ ಪ್ರತಿಯೊಂದು ಅನುಭವದಿಂದ ಕಲಿಯಿರಿ ಮತ್ತು ಪ್ರತಿಬಿಂಬಿಸಿರಿ. ಯಾವುದು ಸರಿಯಾಗಿ ಆಯಿತು ಮತ್ತು ಯಾವುದು ತಪ್ಪಾಯಿತು ಎಂಬುದನ್ನು ನಿಮ್ಮ ಸ್ವಂತ ಗ್ರಂಥಾಲಯವನ್ನು ಅಭಿವೃದ್ಧಿಪಡಿಸಿರಿ. ಇದು ನೀವು ನಿರ್ವಹಿಸಬೇಕಾದ ನಿರಂತರ ಕಲಿಕೆಯ ಪ್ರಕ್ರಿಯೆಯಾಗಿದೆ ಇದರಿಂದಾಗಿ ಸಮಯದೊಂದಿಗೆ ನೀವು ಆತ್ಮನ ಧ್ವನಿಯನ್ನು ಮತ್ತು ನಿಮ್ಮ ಸ್ವಂತ ಪ್ರಾಣಾತ್ಮದ ಧ್ವನಿಯನ್ನು ಪ್ರತ್ಯೇಕಿಸಲು ಸಾಧ್ಯವಾಗುತ್ತದೆ.

ಒಬ್ಬ ವ್ಯಕ್ತಿಯು ಈಜು ಕಲಿಯಲು ಬಯಸಿದಾಗ, ನಾವು ಆಳವಿಲ್ಲದ ತುದಿಯಲ್ಲಿ ಪ್ರಾರಂಭಿಸುತ್ತೇವೆ. ಕೊಳದ ಆಳವಾದ ತುದಿಯಲ್ಲಿಲ್ಲ. ನೀರಿನಲ್ಲಿರಲು ಅವರಿಗೆ ಅವಕಾಶ ಮಾಡಿಕೊಡುತ್ತೇವೆ. ಕೆಲವು ಮೂಲಭೂತ ಹೊಡೆತಗಳಿಂದ ಪ್ರಾರಂಭಿಸಿ ನಂತರ ಕ್ರಮೇಣ ಹೆಚ್ಚು ಸವಾಲಿನ ಶೈಲಿಗಳಾಗಿ ಮುಂದುವರಿಯುತ್ತೇವೆ. ಅದೇ ರೀತಿಯಾಗಿ ಪವಿತ್ರಾತ್ಮನಿಂದ ಕೇಳಿಸಿಕೊಳ್ಳುವುದನ್ನುಕಲಿಯುವಾಗ ಸರಳ ಮಾರ್ಗಗಳಲ್ಲಿ ಪ್ರಾರಂಭಿಸಿರಿ. ಸಣ್ಣ ವಿಷಯಗಳಲ್ಲಿಯು ವಿಧೇಯರಾಗುವುದು ಮತ್ತು ಕೇಳಿಸಿಕೊಳ್ಳುವುದನ್ನು ಕಲಿಯಿರಿ. ಉದಾಹರಣೆಗೆ: ಭಕ್ತಿವೃದ್ಧಿ, ಉಪದೇಶ ಮತ್ತು ಸಂತೈಸುವಿಕೆ ತರುವ ಪ್ರವಾದನೆಯ ಸರಳ ಮಾತುಗಳನ್ನು ಬಿಡುಗಡೆ ಮಾಡುವುದನ್ನು ಕಲಿಯಿರಿ. ಮುನ್ಸೂಚಕ ಸರಿಪಡಿಸುವ ಮತ್ತು ನಿರ್ದೇಶನ ಪ್ರವಾದನೆಗಳ ಆಳವಾದ ತುದಿಗೆ ತಕ್ಷಣವೇ ನಗೆಯುವುದಕ್ಕೆ ಪ್ರಯತ್ನಿಸಬೇಡಿರಿ. ಒಮ್ಮೆ ನೀವು ಮೂಲಮಟ್ಟದಲ್ಲಿ ಪ್ರವಾದನೆ ಸೇವೆಸಲ್ಲಿಸಲು ಹಿತಕರವೆನಿಸಿದರೆ, ನಿಶ್ಚಯವಾಗಿ ನೀವು ದೇವರೊಂದಿಗೆ ಪ್ರವಾದನೆಯ ಆಳವಾದ ಕ್ಷೇತ್ರಕ್ಕೆ ಹೋಗಬಹುದು.

ಪವಿತ್ರಾತ್ಮನಿಂದ ಕೇಳಿಸಿಕೊಳ್ಳುವುದನ್ನು ಕಲಿಯುವಾಗ ಉಪಯುಕ್ತವಾಗಿದೆ ಕೆಲವು ಒಳನೋಟಗಳು ಇಲ್ಲಿವೆ:

ನಿಮ್ಮ ಪ್ರಾಣಾತ್ಮ ಶಾಂತಪಡಿಸಿ ಮತ್ತು ಆಮೇಲೆ ಪವಿತ್ರಾತ್ಮನನ್ನು ಆಲಿಸಿ

ತುಂಬಾ ಆಗಾಗ್ಗೆ ನಮ್ಮ ಮನಸ್ಸು ಮತ್ತು ಭಾವನೆಗಳು ವಿಚಲಿತವಾಗಿದ್ದರೆ, ತೊಂದರೆಗೆ ಒಳಗಾಗಿದ್ದರೆ ಲೌಕಿಕ ವಿಷಯಗಳಿಂದ ಮುಳುಗಿದ್ದರೆ, ಆಮೇಲೆ ದೇವರ ಆತ್ಮನು ಹೇಳುತ್ತಿರುವುದನ್ನು ಪಡೆಯಲೂ ದೇವರ ಆತ್ಮನು ಹೇಳುತ್ತಿರುವುದನ್ನು ಪಡೆಯಲು ಖಂಡಿತವಾಗಿ ಕಠಿಣಕರವಾಗುತ್ತದೆ(ಅಸಾಧ್ಯವಲ್ಲದಿದ್ದರೂ) ಆದ್ದರಿಂದ ಮುಖ್ಯವಾದದ್ದು " ಶಾಂತವಾಗಿರುವುದನ್ನು" ಕಲಿಯಬೇಕು ಆದ್ದರಿಂದ ದೇವರು ಮಾತನಾಡುತ್ತಿರುವುದನ್ನು "ಅಂತುಕೊಳ್ಳಬಹುದು" .

ಮೊದಲ ಧ್ವನಿಯು ದೇವರ ಧ್ವನಿಯಾಗಿದೆ

ಇನ್ನೊಂದು ಉಪಯುಕ್ತ ಒಳನೋಟವೇನೆಂದರೆ, ಮೊದಲ ಧ್ವನಿಯನ್ನು ತೆಗೆದುಕೊಳ್ಳರಿ ಮತ್ತು ಅದರೊಳಗೆ ನೆಲೆಸಿರಿ ಇದರ ಅರ್ಥವೇನೆಂದರೆ, ಆಗಾಗ್ಗೆ ನಾವು ನಿಜವಾದ ವಾಕ್ಯವನ್ನು ದೇವರಿಂದ ಕೇಳಿದಾಗ, ನಮ್ಮ ಮನಸ್ಸು, ತಾರ್ಕಿಕ ಕ್ರಿಯೆ, ಒಳಒಡೆತ ವಿಶ್ಲೇಷಿಸುವುದು ಮತ್ತು ನಾವು ಅನುಮಾನಿಸಲು ಪ್ರಶ್ನಿಸಲು, ಭಯಭೀತರಾಗಲು ಪ್ರಾರಂಭಿಸುತ್ತೇವೆ.

ದೇವರು ಮಾತಾಡಿದ ವಿಷಯದಿಂದ ನಾವು ನಮ್ಮನ್ನು ತರ್ಕಿಸುತ್ತೇವೆ. ಆಮೇಲೆ ನಾವು ದೇವರಿಂದ ಮೊದಲು ಕೇಳಿದ್ದನ್ನು ಅಂದರೆ ದೇವರ ಯಥಾರ್ಥವಾದ ವಾಕ್ಯದ ಯಥಾರ್ಥವಾದ ವಾಕ್ಯದ ಅನುಸಾರವಾಗಿ ಮಾತಾಡುವುದಿಲ್ಲ ಅಥವಾ ಕ್ರಿಯೆ ಮಾಡುವುದಿಲ್ಲ. ನಮ್ಮ ತಾರ್ಕಿಕ ಕ್ರಿಯೆಯು ನಮಗೆ ಉತ್ತಮವಾದಂತೆ ಅನ್ನಿಸುತ್ತದೆ ಮತ್ತು ಆತ್ಮನು ಹೇಳುತ್ತಿರುವುದನ್ನು ನಮ್ಮಿಂದ ಕದ್ದುಕೊಳ್ಳುತ್ತದೆ.

ಆತ್ಮದೊಡನೆ ಹರಿಯಲು "ನಿಮ್ಮ ಮನಸ್ಸಿನಿಂದ ಹೊರಬನ್ನಿರಿ"

ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳರಿ ನಮ್ಮ ಮನಸ್ಸು ಅಥವಾ ಬುದ್ಧಿಶಕ್ತಿಯನ್ನು ತ್ಯಜಿಸುವುದನ್ನು ನಾವು ಸಮರ್ಥಿಸುತ್ತಿಲ್ಲ. ದೇವರು ನಮ್ಮ ಮನಸ್ಸು ಮತ್ತು ಬುದ್ಧಿಶಕ್ತಿಯನ್ನು ಕೊಟ್ಟಿದ್ದಾನೆ ಮತ್ತು ಅದನ್ನು ಒಳ್ಳೆಯ ಉಪಯೋಗಕ್ಕಾಗಿ ನಾವು ಇಡಬೇಕು. ಆದಾಗ್ಯೂ ನಮ್ಮ ಮನಸ್ಸು ಮತ್ತು ಬುದ್ಧಿಶಕ್ತಿಗಿಂತ ದೇವರು ಉನ್ನತವಾದವನು ನಮ್ಮ ತಾರ್ಕಿಕ ಕ್ರಿಯೆ ಅಥವಾ ವಿಶ್ಲೇಷಣೆ, ನಾವು ಯೋಚಿಸುವ ಮಾರ್ಗದೊಡನೆ ದೇವರ ಆತ್ಮದಿಂದ ಬರುವ ಸಲಹೆಗಳು ಮತ್ತು ಪ್ರಕಟನೆಗಳು ಹೊಂದಿಕೆಯಾಗುವುದಿಲ್ಲ ಅಥವಾ ಎಣಿಕೆಯಾಗುವುದಿಲ್ಲ. ನಾವು ತಿಳಿಯುವುದು ಅಥವಾ ಅರ್ಥಮಾಡಿಕೊಳ್ಳುವ ನಮ್ಮ ಸಾಮರ್ಥ್ಯಕ್ಕಿಂತ ಇನ್ನೂ ಮೇಲಾದ ಮಾರ್ಗದಲ್ಲಿ ದೇವರ ವಿಷಯಗಳನ್ನು ಪ್ರಕಟಿಸುತ್ತಾನೆ.

ಇಲ್ಲಿ ನಾವು ದೇವರನ್ನು ನಂಬಲು ಚಲಿಸುತ್ತೇವೆ ಮತ್ತು ಸಂಪೂರ್ಣವಾಗಿ ಒಂದು ಪ್ರಜ್ಞೆಯಲ್ಲಿ ಪವತ್ರಾತ್ಮನನ್ನು ಹಿಂಬಾಲಿಸುವಾಗ " ನಮ್ಮ ಮನಸ್ಸಿನಿಂದ ಹೊರಗೆ ಇರುವಂತೆ" ಅನ್ನಿಸುತ್ತದೆ. ದೇವರ ವಿಷಯಗಳಲ್ಲಿ ಚಲಿಸಲು ಬೇರೆ ಇತರ ಮಾರ್ಗಗಳಿಲ್ಲ. ನಮ್ಮ ಸೀಮಿತ ಮನಸ್ಸುಗಳು ಬುದ್ಧಿಶಕ್ತಿ ಅಥವಾ ತಾರ್ಕಕ್ರಿಯೆ ಹಂತಕ್ಕೆ ಅಪರಿಮಿತವಾದ ದೇವರನ್ನು ಸೀಮಿತಗೊಳಿಸಲಾಗುವುದಿಲ್ಲ. ಆತನು ಅಪರಿಮಿತವಾಗಿ ದೊಡ್ಡವನು ಮತ್ತು ಆತ್ಮದಲ್ಲಿ ಆತನೊಡನೆ ಚಲಿಸಲು ಚಿಕ್ಕ ಮಕ್ಕಳಂತೆ ನಂಬಿಕೆಯನ್ನು ನಾವು ಹೊಂದಿರಬೇಕು.

ಖಚಿತವಿಲ್ಲದಿರುವಾಗ, ಹಂಚಿಕೊಳ್ಳಿ ಮತ್ತು ಮೌಲ್ಯೀಕರಿಸಿ

ಪವಿತ್ರಾತ್ಮನಿಂದ ಆಲಿಸುವುದು ಹೇಗೆ ಎಂಬುದನ್ನು ಕಲಿಯುವ ಆರಂಭಿಕ ಹಂತಗಳಲ್ಲಿ ವಿಶಿಷ್ಟವಾಗಿ ದೇವರ ಆತ್ಮನಿಂದ ಪಡೆದುಕೊಳ್ಳುತ್ತಿರುವುದನ್ನು ನೀವು ಆಲೋಚಿಸುವುದನ್ನು ಹಂಚಿಕೊಳ್ಳುವುದು ಪರಿಪೂರ್ಣವಾಗಿ ಉತ್ತಮವಾದದ್ದು ಮತ್ತು ಇದು ತಪ್ಪಾದುದಾ ಅಥವಾ ಸರಿಯಾ ಎಂಬುದನ್ನು ಬೇರೊಬ್ಬರು ಮೌಲ್ಯಕರಿಸುವಂತೆ ಕೇಳಿರಿ, ಇದನ್ನು ಕಲಿಕೆಯ ಪ್ರಕ್ರಿಯೆಯಾಗಿ ಉಪಯೋಗಿಸಿರಿ. ತಪ್ಪನ್ನು ಮಾಡುವಂತದ್ದು ಸರಿಯಾಗಿದೆ. ತಪ್ಪುಗಳಿಂದ ಕಲಿಯಿರಿ ಆದ್ದರಿಂದ ದೇವರ ಆತ್ಮದಿಂದ ಯಥಾರ್ಥವಾಗಿ ಆಲಿಸುವಾಗ ಅದು ನಿಮಗೆ ತಿಳಿಯುವುದು ಮತ್ತು ನಿಮ್ಮ ಸ್ವಂತ ಮನಸ್ಸಿನದು ಅಥವಾ ಇತರೆ ಕಾರ್ಯಭಂಗಗಳು ಸಹ ತಿಳಿಯುವವು.

ದೇವರು ನಮ್ಮ ಪ್ರಾಣಾತ್ಮ ಮತ್ತು ದೇಹವನ್ನು ಮುಟ್ಟುತ್ತಾನೆ

ನಾವು ಆತ್ಮದಿಂದ ಕೇಳುವುದು ಮತ್ತು ನಮ್ಮ ಪ್ರಾಣಾತ್ಮದಲ್ಲಿ ನಮಗೆ ಏನನ್ನಿಸುತ್ತದೆ ಎಂಬುದನ್ನು ಬೇರ್ಪಡಿಸುವ ಮಹತ್ವವನ್ನು ನಾವು ಒತ್ತಿ ಹೇಳಿದ್ದಾಗಲೂ, ದೇವರು ನಮ್ಮ ಪ್ರಾಣಾತ್ಮ (ಭಾವನೆಗಳು) ಮತ್ತು ನಮ್ಮ ದೇಹವನ್ನು ಸ್ಪರ್ಶಿಸಬಹುದು ಎಂಬುದನ್ನು ನಾವು ನೆನಸಿಕೊಳ್ಳಬೇಕು ಆದ್ದರಿಂದ ನಿಜವಾಗಿಯು ಕರ್ತನಿಂದ ನಮ್ಮ ಪ್ರಾಣಾತ್ಮ ಅಥವಾ ದೇಹದಲ್ಲಿ ಸಂವೇದನೆಗಳು ಮತ್ತು ಬಲವಾದ ಭಾವನೆಗಳನ್ನು ಹೊಂದಿರುವ ಸಮಯಗಳಿವೆ. ನಮ್ಮ ಪ್ರಾಣಾತ್ಮ ಅಥವಾ ದೇಹದಲ್ಲಿ ಇದು ಕರ್ತನದು ಎಂಬುದಾಗಿ ಅಂದುಕೊಳ್ಳುತ್ತೇವೆ ಮತ್ತು ಅದು ಆತನಿಂದ ಇಲ್ಲದಿದ್ದಾಗ ಅದನ್ನು ತಿಳಿಯಲು ಕಲಿಯುವ ಪ್ರಕ್ರಿಯೆ ಇದೆ. ಉದಾಹರಣೆಗೆ, ನಿಮ್ಮ ಭಾವನೆಗಳಲ್ಲಿ ಅಥವಾ ನಿಮ್ಮ ದೈಹಿಕ ದೇಹದಲ್ಲಿ ಆತನು ಸಂಬೋಧಿಸುವ ಅಥವಾ ವ್ಯವಹರಿಸುವ ಯಾವುದನ್ನಾದರೂ ಅನುಭವಿಸಲು ದೇವರು ಕ್ಷಣಾರ್ಧದಲ್ಲಿ ನಿಮಗೆ ಅವಕಾಶ ನೀಡಬಹುದು.ನಿಮ್ಮ ದೇಹದ ಒಂದು ನಿರ್ಧಿಷ್ಟ ಭಾಗದಲ್ಲಿ ಸುಡುವ,ಜುಮ್ಮೆನಿಸುವಿಕೆ, ನೋವಿನ ಕ್ಷಣಿಕ ಸಂವಾದನೆಯನ್ನು ನೀವು ಹೊಂದಿರಬಹುದು ಮತ್ತು ದೇವರು ಜನರಿಗೆ ಅವರ ದೇಹದಲ್ಲಿ ಆ ಭಾಗಕ್ಕೆ ಸ್ವಸ್ಥತೆಯನ್ನು ಆತನು ತರುತ್ತಿರುವುದನ್ನು ಇದರ ಮೂಲಕ ಸೂಚಿಸಬಹುದು.

ಅಧ್ಯಯನ ಸೂಚನೆ

ಬೋಧನಾ ಉದ್ದೇಶಗಳಿಗಾಗಿ ಆತ್ಮನ ಒಂಭತ್ತು ವರಗಳನ್ನು ಸಾಮಾನ್ಯವಾಗಿ ಮೂರು ಗುಂಪುಗಳಾಗಿ ವರ್ಗೀಕರಿಸಲಾಗಿದೆ

ಆತ್ಮನ ವರಗಳು		
ಉಚ್ಚಾರದ ವರಗಳು	**ಪ್ರಕಟಣೆ ವರಗಳು**	**ಬಲದ ವರಗಳು**
(ಏನನ್ನಾದರೂ ಹೇಳುವ ವರಗಳು) ಅನ್ಯಭಾಷೆಗಳು ಅನ್ಯಭಾಷೆಗಳ ಅರ್ಥವಿವರಣೆ ಪ್ರವಾದನೆ	(ಏನನ್ನಾದರೂ ಪ್ರಕಟಿಸುವ ವರಗಳು) ಜ್ಞಾನದ ವಾಕ್ಯ ವಿವೇಕದ ವಾಕ್ಯ ಆತ್ಮಗಳ ಗ್ರಹಿಕೆ	(ಏನನ್ನಾದರೂ ಮಾಡುವ ವರಗಳು) ಸ್ವಸ್ಥತೆಯ ವರಗಳು ಮಹತ್ತುಗಳನ್ನು ಮಾಡುವುದು ನಂಬಿಕೆ

ಮೇಲಿನ ವಿಂಗಡನೆಯು ಕೇವಲ ಬೋಧನೆಗಳು/ ತರಬೇತಿ ಉದ್ದೇಶಗಳಾಗಿದೆ. ವಾಸ್ತವತೆಯಲ್ಲಿ, ಜನರ ಸೇವೆ ಮಾಡಲೂ ಯಾವುದೇ ವರಗಳ ಸಂಯೋಜನೆಯು ಒಟ್ಟಾಗಿ ಹರಿಯುವುದನ್ನು ನಾವು ಗುರುತಿಸುತ್ತೇವೆ.

ಪ್ರತಿ ವರಗಳಿಗೆ ನಾವು ವ್ಯಾಖ್ಯಾನವನ್ನು ಒದಗಿಸುತ್ತೇವೆ ಧರ್ಮಶಾಸ್ತ್ರದಲ್ಲಿ ವಚನಭಾಗದಿಂದ ಸಂಬಂಧಿತ ಉದಾಹರಣೆಗಳನ್ನು ಉಲ್ಲೇಖಿಸುತ್ತೇವೆ, ವರಗಳು ಕ್ರಮವಾಗಿ ಹೇಗೆ ಬಿಡುಗಡೆಯಾಗುತ್ತವೆ. ಮತ್ತು ವರಗಳು ಹೇಗೆ ಪಡೆಯಲ್ಪಡುತ್ತವೆ, ಎಂಬುದರ ಕೆಲವು ಇದರ ಕಾರ್ಯಚರಣೆಗಳನ್ನು (ಎಲ್ಲಿ ಮತ್ತು ಇಂದು ಹೇಗೆ ಅವುಗಳು ಉಪಯೋಗಿಸಲ್ಪಡಬೇಕು) ಪಟ್ಟಿ ಮಾಡೋಣ ಇವೆಲ್ಲವೂ ಸಜ್ಜುಗೊಳಿಸುವ ಉದ್ದೇಶಕ್ಕಾಗಿ ಮಾತ್ರ ಎಂಬುದನ್ನು ದಯವಿಟ್ಟು ಮನಸ್ಸಿನಲ್ಲಿಟ್ಟುಕೊಳ್ಳಿರಿ. ತಿಳಿದುಕೊಂಡಿರುವುದು ಮತ್ತು ಸರಿಯಾದ ಮಾರ್ಗಸೂಚಿಕೆಗಳನ್ನು ಹೊಂದಿರುವುದು ನಮಗೆ ಪ್ರಾರಂಭಿಸಲು ಸಹಾಯ ಮಾಡುತ್ತದೆ ಮತ್ತು ಪವಿತ್ರಾತ್ಮನಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವ ವಿಶ್ವಾಸವನ್ನು ನೀಡುತ್ತದೆ.

ಪ್ರಾಯೋಗಿಕವಾಗಿ ಪವಿತ್ರಾತ್ಮನು ವಿವಿಧ ರೀತಿಯಲ್ಲಿ ಚಲಿಸುತ್ತಾನೆ. ಮತ್ತು ಆತನ ವ್ಯಕ್ತಪಡಿಸುವಿಕೆಗಳು ಯಾವುದೇ ಪುಸ್ತಕ ಅಥವಾ ತರಬೇತಿ ಕಾರ್ಯಕ್ರಮದಲ್ಲಿ ಸೆರೆಹಿಡಿಯಬಹುದಾದ ವ್ಯಾಖ್ಯಾನಗಳು ಮತ್ತು ಕಾರ್ಯಚರಣೆಗಳನ್ನು ಮೀರಿವೆ. ಪವಿತ್ರಾತ್ಮನು ಅಪರಿಮಿತವಾದವನು ಮತ್ತು ಆತನ ಅಭಿವ್ಯಕ್ತತೆಗಳ ವೈವಿಧ್ಯತೆಗಳು ಸಹ ಅಪರಿಮಿತವಾಗಿವೆ.

7.ಅನ್ಯಭಾಷೆಗಳ ವಿಧಗಳು

ಅರ್ಥನಿರೂಪಣೆ

ಅನ್ಯಭಾಷೆಗಳ ವೈವಿಧ್ಯಮಯ ಬಗೆಯ ವರವು ಮನುಷ್ಯನಾದ ಅಥವಾ ದೇವದೂತರ ಭಾಷೆಗಳಲ್ಲಿ ಮಾತಾಡುವುದರ ಅಪ್ರಾಕೃತ ಸಾಮರ್ಥ್ಯವಾಗಿದೆ. ಅನ್ಯಭಾಷೆಗಳ ವೈವಿಧ್ಯತೆಯ ಉಪಯೋಗದಲ್ಲಿ ವಿವಿಧ ಬಗೆಗಳಿವೆ. (ಅ) ದೇವರೊಂದಿಗೆ ಸಂಪರ್ಕಮಾಡಲು ವೈಯಕ್ತಿಕ ಪ್ರಾರ್ಥನೆ ಭಾಷೆ(ಆ) ಇತರಿಗಾಗಿ ಆಳವಾದ ಮಧ್ಯಸ್ಥಿಕೆಯಲ್ಲಿ (ಇ) ಸಭೆಯ ಸಭಿಕರಿಗೆ ಅರ್ಥವಿವರಣೆಯೊಡನೆ ಒಂದು ಸಂದೇಶದಂತೆ (ಈ) ಕ್ರಿಸ್ತನಿಗಾಗಿ ರಕ್ಷಿಸಲ್ಪಡದಿರುವವರನ್ನು ಸಂಧಿಸುವ ಅರ್ಥದಂತೆ ಮುಂತಾದವು.

ಪವಿತ್ರಾತ್ಮನ ವರಗಳು ಅಲೌಕಿಕ ಕಾರ್ಯವಾಗಿದೆ ಮತ್ತು ಆದ್ದರಿಂದ ಕಲಿತ ಭಾಷೆಗಳ ಸ್ವಾಧೀನಪಡಿಸಿಕೊಂಡ ಕೌಶಲ್ಯಕ್ಕೆ ಸಮನಾಗಿರುವುದಿಲ್ಲ(ಉದಾ. ಭಾಷಾಶಾಸ್ತ್ರಜ್ಞನಾಗಿ)

ಸತ್ಯವೇದದ ಉದಾಹರಣೆಗಳು :ಹಳೇ ಒಡಂಬಡಿಕೆ

ಅನ್ಯಭಾಷೆಗಳ ವೈವಿಧ್ಯತೆಯ ವರವು ಹಳೇ ಒಡಂಬಡಿಕೆಯಲ್ಲಿ ಕಾರ್ಯಚರಣೆಯಲ್ಲಿ ಕಾಣುವುದಿಲ್ಲ. ಆದಿಕಾಂಡ11:1-9 ರಲ್ಲಿ ಭೂಮಿಯ ಮೇಲೆ ಅನ್ಯಭಾಷೆಗಳ ವೈವಿಧ್ಯತೆಗಳು ಮೊದಲಬಾರಿಗೆ ಬಿಡುಗಡೆಗೊಂಡಿದ್ದನ್ನು ನಾವು ನೋಡುತ್ತೇವೆ. ಹಾಗೆಯೇ ಇತರೆ ಅನ್ಯಭಾಷೆಗಳೊಡನೆ ಮಾತನಾಡುವುದನ್ನು ಹೊಸ ಒಡಂಬಡಿಕೆಯ ವಿಶ್ವಾಸಿಗಳು ಅನುಭವಿಸುವರು ಎಂಬುದರ ಕುರಿತು ಪ್ರವಾದಿ ಯೆಶಾಯನು ಪ್ರವಾದಿಸಿದ್ದನು (ಯೆಶಾಯ28:1-12:1 ಕೊರಿಂಥದವರಿಗೆ 14:21).

ಸತ್ಯವೇದದ ಉದಾಹರಣೆಗಳು: ಹೊಸ ಒಡಂಬಡಿಕೆ

ಕರ್ತನಾದ ಯೇಸುವು ಈ ಚಿಹ್ನೆಯನ್ನು ಮೊದಲೆ ಹೇಳಿದ್ದನು

ಕರ್ತನಾದ ಯೇಸುವು ಆತನಲ್ಲಿ ನಂಬಿಕೆಯಿಟ್ಟವರು ಅನ್ಯಭಾಷೆಯಲ್ಲಿ ಮಾತಾನಾಡುತ್ತಾರೆ ಎಂಬುದಾಗಿ ಮೊದಲೆ ಹೇಳಿದ್ದಾನೆ." ಇದಲ್ಲದೆ ನಂಬುವವರಿಂದ ಈ ಸೂಚಕ ಕಾರ್ಯಗಳು ಉಂಟಾಗುವವು ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು ಹೊಸ ಭಾಷೆಗಳಿಂದ ಮಾತಾಡುವರು ಹಾವುಗಳನ್ನು ಎತ್ತುವರ

ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಯಾವ ಕೇಡು ಆಗುವುದಿಲ್ಲ ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಎಂದು ಹೇಳಿದನು" (ಮಾರ್ಕ 16:17-18)

ಆಧಿಸಭೆಯ ಉದ್ದಕ್ಕೂ

ಪಂಚಾಶತ್ತಮ ದಿನದ ಪ್ರಾರಂಭದಿಂದಲೂ, ಆದಿಸಭೆಯಲ್ಲಿ ಅನ್ಯಭಾಷೆಯಲ್ಲಿ, ಮಾತಾನಾಡುವುದರ ಅನೇಕ ದಾಖಲೆಗಳನ್ನು ನಾವು ನೋಡುತ್ತೇವೆ:

1) ಪಂಚಾಶತ್ತಮ ದಿನ (ಅಪೊಸ್ತಲರ ಕೃತ್ಯಗಳು 2:1-4)

2) ಸಮಾರ್ಯದಲ್ಲಿನ ಸಭೆ (ಅಪೊಸ್ತಲರ ಕೃತ್ಯಗಳು 8:14-18) ಅವರು ಅನ್ಯಭಾಷೆಯಲ್ಲಿ ಪ್ರಾರ್ಥಿಸಿದರೂ ಎಂಬುದಾಗಿ ಸ್ಪಷ್ಟವಾಗಿ ವ್ಯಾಖ್ಯಾನಿಸಿದಿದ್ದಾಗಲೂ, ಪವಿತ್ರಾತ್ಮನು ಕೊಡಲ್ಪಟ್ಟಾಗ (ಸೀಮೋನನು ಅವರಿಗೆ ಹಣವನ್ನು ಕೊಟ್ಟನು 1) ಅಪ್ರಾಕೃತವಾದದ್ದು ಏನೋ ಜರುಗಿತ್ತು ಎಂಬುದಾಗಿ ಊಹಿಸಿಕೊಳ್ಳಬಹುದು ಅವರು ಪಂಚಾಶತ್ತಮ ದಿನದಂತೆ ಅನ್ಯಭಾಷೆಯಲ್ಲಿ ಮಾತಾನಾಡಿದರು, ಕೊರ್ನೇಲ್ಯನ ಮನೆಯಲ್ಲಿ ನಡೆದದ್ದು ಅಪೊಸ್ತಲರ ಕೃತ್ಯ 10ರಲ್ಲಿ ಅಪೊಸ್ತಲರ ಪ್ರತಿಕ್ರಿಯೆಯಿಂದ ನೋಡಿದಂತಹ ಪರಿಮಾಣದಿಂದ ಈ ತೀರ್ಮಾನ ಮಾಡಲು ನಾವು ಸುರಕ್ಷಿತವಾಗಿರುತ್ತೇವೆ.

3) ಸೌಲನು ಅವನ ಮಾನಾಸಾಂತರದ ನಂತರ (ಅಪೊಸ್ತಲರ ಕೃತ್ಯಗಳು 9:17:1ಕೊರಿಂಥದವರಿಗೆ 14:18). ಅನನೀಯನು ಸೌಲನ ಮೇಲೆ ಕೈಗಳನ್ನಿಟ್ಟಾಗ ಅವನು ಆತ್ಮದೊಡನೆ ತುಂಬಿಸಲ್ಪಟ್ಟನು ಸೌಲನು ಅಧಿಕವಾಗಿ ಅನ್ಯಭಾಷೆಯಲ್ಲಿ ಮಾತಾನಾಡಿದನು ಎಂಬುದು ನಮಗೆ ಗೊತ್ತು.

4) ಕೊರ್ನೇಲ್ಯನು ಮತ್ತು ಅವನ ಮನೆಯವರು (ಅಪೊಸ್ತಲರ ಕೃತ್ಯಗಳು 10:44-46)

5) ಎಫೆಸದಲ್ಲಿನ ವಿಶ್ವಾಸಿಗಳು(ಅಪೊಸ್ತಲರ ಕೃತ್ಯಗಳು 19:1-6)

6) ಕೊರಿಂಥದಲ್ಲಿನ ಸಭೆ (1ಕೊರಿಂಥದವರಿಗೆ 12:7-11,28:1ಕೊರಿಂಥದವರಿಗೆ 14:1-40).

7) ಎಫೆಸದ ಸಭೆ (ಎಫೆಸದವರಿಗೆ 6:15) ಪೌಲನ ಬರವಣಿಗೆಗಳಿಗನುಸಾರವಾಗಿ ಆತ್ಮದಲ್ಲಿ ಪ್ರಾರ್ಥಿಸುವುದು ಅಥವಾ ಆತ್ಮದೊಡನೆ ಪ್ರಾರ್ಥಿಸುವುದು)(1 ಕೊರಿಂಥದವರಿಗೆ14:14-15) ಅನ್ಯಭಾಷೆಯಲ್ಲಿ ಮಾತಾಡುವುದಾಗಿದೆ.

8) ಇತರೆ ಸಭೆಗಳು ಸುವಾರ್ತೆ ಸಾರುವುದರ ಮೂಲಕವಾಗಿ ಪವಿತ್ರಾತ್ಮದ ಬಲದೊಡನೆ ಸ್ಥಾಪಿಸಲ್ಪಟ್ಟವು ಎಂಬುದು ನಮಗೆ ತಿಳಿದದೆ.ಎಲ್ಲಾ ಸಭೆಗಳ ಉದ್ದಕ್ಕೂ ಎಲ್ಲಾ ವಿಶ್ವಾಸಿಗಳಿಗೆ ಆತನು ಪಾಲಕೊಟ್ಟದ್ದನ್ನು ಪೌಲನು ಕೊರಿಂಥದವರಿಗೆ ಬೋಧಿಸಿದ್ದನ್ನು ಎಂಬುದನ್ನು ಭರವಸೆಯೊಡನೆ ನಾವು ವ್ಯಾಖ್ಯಾನಿಸಬಹುದು.

9) ಯೂದನು, ಎಲ್ಲಾ ವಿಶ್ವಾಸಿಗಳಿಗೆ ಬರೆಯುತ್ತಾನೆ(ಯೂದನು 1:20).

ಕಾರ್ಯಾಚರಣೆಗಳು

ಪವಿತ್ರಾತ್ಮದಿಂದ ಅಪ್ರಾಕೃತವಾಗಿ ಕೊಡಲ್ಪಟ್ಟಂತಹ ಭಾಷೆಗಳಲ್ಲಿ ಮಾತಾನಾಡುವುದು ಅಥವಾ ಅನ್ಯಭಾಷೆಗಳ ವೈವಿಧ್ಯತೆಗಳು ಅನೇಕ ಉಪಯೋಗಗಳನ್ನು ಹೊಂದಿದೆ ವಿಶಾಲವಾಗಿ ಹೇಳುವುದಾದರೆ, ಅನ್ಯಭಾಷೆಗಳು ವೈಯಕ್ತಿಕ ಜೀವಿತದಲ್ಲಿ ಅಥವಾ ಸಾರ್ವಜನಿಕ ಸೇವೆಯಲ್ಲಿ ಉಪಯೋಗಿಸಲ್ಪಡುತ್ತವೆ ಎಂಬುದನ್ನು ನೋಡುತ್ತೇವೆ. ಸಾರ್ವಜನಿಕ ಸೇವೆಯು ವಿಶ್ವಾಸಿಗಳಿಗಾಗಿರುವ ಸಭಿಕರ ವ್ಯವಸ್ಥೆ ಅಥವಾ ರಕ್ಷಿಸಲ್ಪಡದಿರುವವರು(ಅವಿಶ್ವಾಸಿಗಳು) ಕಡೆಗೆ ಇದೆ.

1. ಎಲ್ಲಾ ವಿಶ್ವಾಸಿಗಳು ಅನ್ಯಭಾಷೆಯಲ್ಲಿ ಮಾತಾಡಬಹುದು (ಮಾರ್ಕ 16:17)

2. ನೀವು ಅನ್ಯಭಾಷೆಯಲ್ಲಿ ಮಾತಾನಾಡುವಾಗ, ನೀವು ದೇವರ ಅದ್ಭುತ ಕಾರ್ಯಗಳನ್ನು ಘೋಷಿಸುತ್ತೀರಿ (ಅಪೊಸ್ತಲರ ಕೃತ್ಯಗಳು 2:11)

3. ನೀವು ಅನ್ಯಭಾಷೆಯಲ್ಲಿ ಮಾತಾಡುವಾಗ, ನೀವು ಸ್ತೋತ್ರ, ಸ್ತುತಿ, ಕೊಂಡಾಡು ಮತ್ತು ದೇವರಿಗೆ ಮಹಿಮೆ ಸಲ್ಲಿಸಬಹುದು (ಅಪೊಸ್ತಲರ ಕೃತ್ಯಗಳು10:46)

4. ಆತ್ಮನ ಬಲ ಮತ್ತು ಪ್ರಸನ್ನತೆಯು ಸ್ಪಷ್ಟತೆಯಾಗಿ ಮಾಡಲ್ಪಟ್ಟಿರುವ ಆತ್ಮನ ತೋರ್ಪಡಿಸುವಿಕೆಯ ಒಂದು ಆತ್ಮಭಾಷೆಯಾಗಿದೆ. (1 ಕೊರಿಂಥದವರಿಗೆ 12:7-11).

5. ನೀವು ಅನ್ಯಭಾಷೆಯಲ್ಲಿ ಮಾತಾಡುವಾಗ, ನೀವು ಭೂಲೋಕದ ಅಥವಾ ಪರಲೋಕದ ಭಾಷೆಗಳನ್ನು ಮಾತಾಡುತ್ತೀರಿ (1 ಕೊರಿಂಥದವರಿಗೆ 13:1)

6. ಅನ್ಯಭಾಷೆಯು ರಹಸ್ಯರ್ಥಗಳನ್ನು, ನಿಮಗೆ ವೈಯಕ್ತಿಕವಾಗಿ ತಿಳಿದಿರುವುದಕ್ಕಿಂತ ಅತ್ಯುನ್ನತವಾದ ವಿಷಯಗಳನ್ನು ಪ್ರಾರ್ಥಿಸಲು ಸಹಾಯ ಮಾಡುತ್ತದೆ. (1ಕೊರಿಂಥದವರಿಗೆ 14:2)

7. ಅನ್ಯಭಾಷೆಯು ವೈಯಕ್ತಿಕವಾಗಿ ಭಕ್ತಿ ವೃದ್ಧಿ ಬೆಳವಣಿಗೆ, ಬಲಪಡಿಸುವಿಕೆ, ಪ್ರಗತಿಯನ್ನು ಒಂದು ಕಟ್ಟಡವನ್ನು ಕಟ್ಟುವ ರೀತಿಯಲ್ಲಿ ತರುತ್ತದೆ (1 ಕೊರಿಂಥದವರಿಗೆ 14:4)

8. ಸಭಿಕರಿಗೆ ಅರ್ಥವಿವರಣೆಯೊಡನೆ ಅನ್ಯಭಾಷೆಯು ಸೇರಿಬರುಬಿಕೆಗೆ ಭಕ್ತಿವೃದ್ಧಿಯನ್ನು ತರುತ್ತದೆ (1 ಕೊರಿಂಥದವರಿಗೆ 14:5)

9. ನೀವು ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ ನಿಮ್ಮ ಆತ್ಮವು ಪ್ರಾರ್ಥನೆಯನ್ನು ಮಾಡುತ್ತಿರುತ್ತದೆ. ನಿಮ್ಮ ಮನಸ್ಸು ಇದರಲ್ಲಿ ತೊಡಗಿಸಿಕೊಂಡಿರುವುದಿಲ್ಲ "ನಾವು ಅನ್ಯಭಾಷೆಯಲ್ಲಿ ಪ್ರಾರ್ಥಿಸಿದರೆ, ನನ್ನ ಆತ್ಮವು (ನನ್ನೊಳಗಿರುವ ಪವಿತ್ರಾತ್ಮದಿಂದ)

ಪ್ರಾರ್ಥಿಸುತ್ತದೆ ಆದರೆ ನನ್ನ ಮನಸ್ಸು ಅನುತ್ಪಾದಕವಾಗಿದೆ (ಅದು ಫಲ ನೀಡುವುದಿಲ್ಲ ಮತ್ತು ಯಾರಿಗೂ ಸಹಾಯ ಮಾಡುವುದಿಲ್ಲ)" (1 ಕೊರಿಂಥದವರಿಗೆ 14:14,ಎ.ಎಂ.ಪಿ.ಸಿ)

10. ಅನ್ಯಭಾಷೆಯಲ್ಲಿ ಪ್ರಾರ್ಥಿಸುವುದು ಮತ್ತು ಹಾಡುವುದು ನಿಮ್ಮ ಸ್ವಂತ "ಚಿತ್ತದಿಂದ" ನಡೆಯುತ್ತದೆ, ತಿಳು ಅರ್ಥದೊಡನೆ ತಿಳಿದ ಭಾಷೆಯಲ್ಲಿ ಹಾಡುವಂತೆ ಅಥವಾ ಪ್ರಾರ್ಥಿಸುವಂತಹ ಅದೇ ರೀತಿಯಲ್ಲಿ ನೀವು ಪ್ರಾರಂಭಿಸಬಹುದು ಮತ್ತು ನಿಮಗೆ ಬೇಕಾದಾಗ ನಿಲ್ಲಿಸಬಹುದು. "ಹಾಗಾದರೇನು? ನಾನು ಆತ್ಮದಿಂದ ಪ್ರಾರ್ಥಿಸುವೆನು, ಬುದ್ಧಿಯಿಂದಲೂ ಪ್ರಾರ್ಥಿಸುವೆನು ಆತ್ಮದಿಂದ ಹಾಡುವೆನು, ಬುದ್ಧಿಯಿಂದಲೂ ಹಾಡುವೆನು" (1 ಕೊರಿಂಥದವರಿಗೆ 14:15)

11. ಅನ್ಯಭಾಷೆಯಲ್ಲಿ ಪ್ರಾರ್ಥಿಸುವುದು ಆತ್ಮದೊಡನೆ ಪ್ರಾರ್ಥಿಸುವುದು ಎಂಬುದಾಗಿ ಕರೆಯಲ್ಪಡುತ್ತದೆ. ನನ್ನ ಆತ್ಮವು ದೇವರ ಆತ್ಮದಿಂದ ಅಧಿಕಾರ ಹೊಂದಿ ಪ್ರಾರ್ಥಿಸುವುದಾಗಿದೆ. "ಆಮೇಲೆ ನಾನು ಏನು ಮಾಡಬೇಕು? ನಾನು ಆತ್ಮದಿಂದ ಪ್ರಾರ್ಥಿಸುತ್ತೇನೆ(ನನ್ನೊಳಗಿರುವ ಪವಿತ್ರಾತ್ಮದಿಂದ) ಆದರೆ ನಾನು (ಬುದ್ಧಿವಂತಿಕೆಯಿಂದ) ನನ್ನ ಮನಸ್ಸಿನೊಡನೆ ಮತ್ತು ತಿಳುವಳಿಕೆಯಿಂದ ಪ್ರಾರ್ಥಿಸುತ್ತೇನೆ. ನಾನು ನನ್ನ ಆತ್ಮದಿಂದ (ನನ್ನೊಳಗಿರುವ ಪವಿತ್ರಾತ್ಮದಿಂದ) ಹಾಡುತ್ತೇನೆ ಆದರೆ ನಾನು (ಬುದ್ಧಿವಂತಿಕೆಯಿಂದ) ನನ್ನ ಮನಸ್ಸು ಮತ್ತು ತಿಳುವಳಿಕೆಯೊಂದಿಗೆ ಹಾಡುತ್ತೇನೆ" . (1ಕೊರಿಂಥದವರಿಗೆ 14:15, ಎ.ಎಂ.ಪಿ.ಸಿ.ಬೈಬಲ್).

12. ಒಂದು ನಿರ್ಧಿಷ್ಟ ವ್ಯಕ್ತಿ ಅಥವಾ ವಿಚಾರದ ಕಡೆಗೆ ಆತ್ಮನೊಡನೆ ನಿಮ್ಮ ಪ್ರಾರ್ಥನೆಯನ್ನು ಮಾರ್ಗದರ್ಶಿಸಲು ಪವಿತ್ರಾತ್ಮನನ್ನು ಕೇಳಿರಿ. ಉದಾಹರಣೆಗೆ ಅಪೊಸ್ತಲನಾದ ಪೌಲನು ಆತ್ಮನೊಡನೆ ಒಂದು ಭೋಜನಕ್ಕಾಗಿ ಕೃತಜ್ಞತೆ ಕೊಡಿರಿ ಮತ್ತು ಪ್ರಾರ್ಥಿಸಿರಿ ಎಂಬುದಾಗಿ ಹೇಳುತ್ತಾನೆ "ನೀನು ಆತ್ಮದಿಂದ ಮಾತ್ರ ದೇವರ ಸ್ತೋತ್ರ ಮಾಡಿದರೆ ಆ ವರವನ್ನು ಹೊಂದದಿರುವ ಸಭೆಯವನಿಗೆ ನೀನು ಹೇಳಿದ್ದು ತಿಳಿಯದೆ ಇರುವುದರಿಂದ ನೀನು ಮಾಡುವ ಕೃತಜ್ಞತಾಸ್ತುತಿಗೆ ಅವನು ಆಮೆನ್ ಎಂದು ಹೇಗೆ ಹೇಳಾನು? ನೀನಂತೂ ಚೆನ್ನಾಗಿ ಕೃತಜ್ಞತಾ ಸ್ತುತಿ ಮಾಡುತ್ತೀ ಹೌದು ಆದರೆ ಬೇರೊಬ್ಬನು ಭಕ್ತಿವೃದ್ಧಿ ಹೊಂದುವದಿಲ್ಲ" .(1ಕೊರಿಂಥದವರಿಗೆ 14:16-17).

13. ಪ್ರವಾದಿಯಾದ ಯೆಶಾಯನು ಅನ್ಯಭಾಷೆಯಲ್ಲಿ ಮಾತಾನಾಡುವುದರ ಕುರಿತು ಪ್ರವಾದಿಸಿದ್ದಾನೆ ಮತ್ತು ಇದು ದೇವರ ಜನರಿಗೆ ವಿಶ್ರಾಂತಿ ಮತ್ತು ಉತ್ಸಾಹಭರಿತತೆ ತರುತ್ತದೆ ಎಂಬುದಾಗಿ ತೋರಿಸುತ್ತಾನೆ."ಹೌದು, ತೊದಲು ಮಾತಿನವರು, ಅನ್ಯಭಾಷಿಗಳು, ಇವರ ಮೂಲಕವಾಗಿಯೇ ಯೆಹೋವನು ಈ ಜನರ ಮಧ್ಯದಲ್ಲಿ ಮಾತಾಡುವನು ಆತನು ಮೊದಲು ಇಡೀ ನಿಮಗೆ ಅವಶ್ಯಕವಾದ ವಿಶ್ರಾಂತಿ ಬಳಲಿದವರನ್ನು "ವಿಶ್ರಮಗೊಳಿಸಿರಿ" . ನಿಮಗೆ ಅನುಕೂಲವಾದ ಉಪಶಮನವು ಇದೆ! ಎಂದು ಹೇಳಿದಾಗ ಇವರು ಕೇಳಲೊಲ್ಲದೆ ಹೋದರು" (ಯೆಶಾಯ 28:11-12; 1 ಕೊರಿಂಥದವರಿಗೆ 14:21)"ವಿಶ್ರಾಂತಿ" ಎಂಬ ಪದವು

ಇಬ್ರಿಯದಲ್ಲಿ “ನುವಾಜ್” ಎಂಬುದಾಗಿದೆ ಇದನ್ನು ವಿಶ್ರಮಿಸುವ ಸ್ಥಳ, ಶಾಂತತೆ ಸ್ಥಳ, ಶಾಂತಿ, ಸ್ಥಿರತೆ, ಸಂತೃಸುವಿಕೆಯ ಅರ್ಥಕ್ಕಾಗಿ ಉಪಯೋಗಿಸಿದೆ.

14. ಅನ್ಯಭಾಷೆಗಳು “ಅವಿಶ್ವಾಸಿಗಳನ್ನು ದೇವರ ಕಡೆಗೆ ತೋರಿಸುವ ಚಿಹ್ನೆಯಾಗಿವೆ (1ಕೊರಿಂಥದವರಿಗೆ 14:22)

15. ಆತ್ಮದೊಡಗಿನ ಪ್ರಾರ್ಥನೆಯು ಶಾರೀರಿಕ ಬಲಹೀನತೆಯಿಂದ ಹೊರಬರಲು ಸಹಾಯ ಮಾಡುತ್ತದೆ (ರೋಮಾಪುರದವರಿಗೆ 8:26)

16. ನೀವು ಆತ್ಮದೊಡನೆ ಪ್ರಾರ್ಥಿಸುವಾಗ ವಿಶ್ವಾಸಿಗಳಿಗಾಗಿ ದೇವರ ಜನರಿಗಾಗಿ ಮಧ್ವಸ್ಥಿಕೆ ಪ್ರಾರ್ಥನೆ ಮಾಡುತ್ತೀರಿ (ರೋಮಾಪುರದವರಿಗೆ 8:26-27)

17. ಆತ್ಮದೊಂದಿಗೆ ಪ್ರಾರ್ಥಿಸುವಾಗ ನೀವು ದೇವರ ಚಿತ್ತಕನುಸಾರವಾಗಿ ಪ್ರಾರ್ಥಿಸುತ್ತೀರಿ (ರೋಮಾಪುರದವರಿಗೆ 8:27)

18. ನೀವು ಆತ್ಮದೊಂದಿಗೆ ಪ್ರಾರ್ಥಿಸುವಾಗ, ನಿಮ್ಮನ್ನು ನೀವೇ ನಂಬಿಕೆಯ ಮೇಲೆ ಕಟ್ಟಿಕೊಳ್ಳುತ್ತೀರಿ (ಯೂದನು 1:20)

19. ಆತ್ಮದಲ್ಲಿ ಪ್ರಾರ್ಥಿಸುವುದು ನೀವು ದೇವರ ಪ್ರೀತಿಯಲ್ಲಿ ನೆಲೆಸಿರುವಂತೆ ಶಕ್ತಗೊಳಿಸುತ್ತದೆ (ಯೂದನು 1:20-21)

20. ಆತ್ಮದಲ್ಲಿ ಪ್ರಾರ್ಥಿಸುವುದು ನಿಮ್ಮ ಆತ್ಮಿಕ ಕವಚದ ಭಾಗವಾಗಿದೆ (ಎಫೆಸದವರಿಗೆ 6:18)

21. ಕೆಲವರಿಗೆ, ಅನ್ಯಭಾಷೆಯಲ್ಲಿ ಪ್ರಾರ್ಥಿಸುವುದು (ಉದಾಹರಣೆಗೆ ಮಧ್ಯಸ್ಥಿಕೆ ಪ್ರಾರ್ಥನೆ ಸೇವೆ, ಅನ್ಯಭಾಷೆಯಲ್ಲಿ ಮತ್ತು ಅರ್ಥವಿವರಣೆಯಲ್ಲಿ ಸಾರ್ವಜನಿಕ ಸೇವೆ)ಅವರ ಸದಸ್ಯತ್ವ ಕ್ರಿಯೆಯಾಗಿದೆ (1 ಕೊರಿಂಥದವರಿಗೆ 12:28) ಹೆಚ್ಚಿನ ಮಾಹಿತಿಗಾಗಿ,”ಅನ್ಯಭಾಷೆಯಲ್ಲಿ ಮಾತಾನಾಡುವುದರ ಅದ್ಬುತಕರ ಲಾಭಗಳು” ಎಂಬ ಉಚಿತವಾದ ಎ.ಪಿ.ಸಿ.ಯ ಪುಸ್ತಕವು ಉಚಿತ ಡೌನಲೋಡಗಾಗಿ apcwo.org/publications ನಲ್ಲಿ ದೊರೆಯುತ್ತದೆ ಅದನ್ನು ನೋಡಿರಿ:

ವೈಯಕ್ತಿಕ ಉಪಯೋಗಕ್ಕಾಗಿ ಅನ್ಯಭಾಷೆಯನ್ನು ಪಡೆದುಕೊಳ್ಳುವುದು

ಹೊಸ ಒಡಂಬಡಿಕೆಯಲ್ಲಿ ಪವಿತ್ರಾತ್ಮದೊಡನೆ ತುಂಬಿಸಲ್ಪಡುವುದಕ್ಕಾಗಿ ವಿಶ್ವಾಸಿಗಳಿಗಾಗಿ ಪ್ರಾರ್ಥಿಸುವ ಅಭ್ಯಾಸವು ಅಥವಾ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದುವುದು) ಸಾಮಾನ್ಯವಾಗಿತ್ತು. ಈ ಹಂತದಲ್ಲಿ ಅವರ ಇತರೆ ಅನ್ಯಭಾಷೆಗಳೊಡನೆ ಮಾತಾಡಲು ಮತ್ತು ಪವಿತ್ರಾತ್ಮನ ವರದಲ್ಲಿ ಹರಿಯಲು ಪ್ರಾರಂಭಿಸಿದರು ಅಲ್ಲಿಂದ, ವಿಶ್ವಾಸಿಯಾಗಿ ನೀವು ಯಾವಾಗಲಾದರೂ ಅಪೇಕ್ಷಿಸಿದರೆ ಮತ್ತು ಆಗಾಗ್ಗೆ ನೀವು ಅಪೇಕ್ಷಿಸುವಂತೆ ನಿಮ್ಮ ವೈಯಕ್ತಿಕ ಪ್ರಾರ್ಥನೆಯ ಭಾಗದಂತೆ ಅನ್ಯಭಾಷೆಯಲ್ಲಿ ಮಾತಾನಾಡಬಹುದು (ಅಥವಾ ಹಾಡಬಹುದು).

1.ಕೊರಿಂಥದವರಿಗೆ 14:14-15
ಯಾಕೆಂದರೆ ನಾನು ವಾಣಿಯನ್ನಾಡುತ್ತಾ ದೇವರನ್ನು ಪ್ರಾರ್ಥಿಸಿದರೆ ನನ್ನಾತ್ಮವು ಪ್ರಾರ್ಥಿಸುವದೇ ಹೊರತು ನನ್ನ ಬುದ್ಧಿ ನಿಷ್ಫಲವಾಗಿರುವದು ಹಾಗಾದರೇನು? ನಾನು ಆತ್ಮದಿಂದ ಪ್ರಾರ್ಥಿಸುವೆನು ಬುದ್ಧಿಯಿಂದಲೂ ಹಾಡುವೆನು.

ವೈಯಕ್ತಿಕ ಜೀವಿತದಲ್ಲಿ ಅನ್ಯಭಾಷೆಗಳ ವಿವಿಧ ಉಪಯೋಗಗಳು

- ನವೀಕರಿಸಬೇಕಾದಾಗ, ಮತ್ತೆ ತುಂಬಬೇಕಾಗುತ್ತದೆ ಮತ್ತು ಉತ್ಸಾಹಭರಿತಗೊಳಿಸಬೇಕು.
- ವೈಯಕ್ತಿಕವಾಗಿ ಭಕ್ತಿವೃದ್ಧಿಗೆ ಬಯಸಿದಾಗ
- ಕರ್ತನ ಮನಸ್ಸನ್ನು ತಿಳಿಯಲು ಹುಡುಕುವಾಗ(ಉದಾಹರಣೆಗೆ .ತೀರ್ಮಾನಗಳನ್ನು ಮಾಡುವಾಗ)
- ಇತರರಿಗಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವಾಗ
- ವರಗಳಲ್ಲಿ ಹರಿಯಲು ನಿಮ್ಮನ್ನು ನೀವೇ ಪ್ರೇರಿಸಿಕೊಳ್ಳುವಾಗ
- ಸುಮ್ಮನೇ ಕರ್ತನಿಗಾಗಿ ಕಾದುಕೊಂಡಿರುವಾಗ ಮತ್ತು ಆತನ
- ಪ್ರಸನ್ನತೆಯಲ್ಲಿ ಸಮಯ ಕಳೆಯುವಾಗ

ಯಾವಾಗಲೂ ಅರ್ಥವಿವರಣೆ ಮಾಡುವ ಅಗತ್ಯವಿಲ್ಲ

ನೀವು ವೈಯಕ್ತಿಕ ಪ್ರಾರ್ಥನೆ ಅಥವಾ ಖಾಸಗಿಯಲ್ಲಿ ಅನ್ಯಭಾಷೆಯನ್ನು ಉಪಯೋಗಿಸುವಾಗ ಯಾವಾಗಲೂ ಅರ್ಥ ವಿವರಣೆಯ ಅಗತ್ಯವಿಲ್ಲ. ನೀವು ಅಪೇಕ್ಷಿದಾಗಲೆಲ್ಲಾ ಅನ್ಯಭಾಷೆಯಲ್ಲಿ ಪ್ರಾರ್ಥಿಸಬಹುದು ಮತ್ತು ನೀವು ಪ್ರಾರ್ಥಿಸುವಾಗ ಅದರ ಅರ್ಥವಿವರಣೆ ಅಗತ್ಯವಿಲ್ಲ ಯಾಕೆಂದರೆ ಅಲ್ಲಿ ಪ್ರಾರ್ಥಿಸುತ್ತಿರುವುದನ್ನು ದೇವರು ಅರ್ಥಮಾಡಿಕೊಳ್ಳುತ್ತಾನೆ. ನಿಮ್ಮ ಪ್ರಾರ್ಥನೆ ಸಮಯದ ಒಂದೇ ಏಕ ಅವಧಿಯೊಳಗೆ ಅಥವಾ ಕಾಲಾಂತರದಲ್ಲಿ ಅನೇಕ ವಿಭಿನ್ನ ಭಾಷೆಗಳಲ್ಲಿ ನೀವು ಮಾತಾನಾಡಬಹುದು.

ರಹಸ್ಯಾರ್ಥಗಳನ್ನು ಅರ್ಥಮಾಡಿಕೊಳ್ಳುವುದು

1 ಕೊರಿಂಥದವರಿಗೆ 2:9-16
9 ಆದರೆ ಬರೆದಿರುವ ಪ್ರಕಾರ ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ದ ಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ. ಕಿವಿಕೇಳಲಿಲ್ಲ ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ
10 ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸದನು. ಆ ಆತ್ಮನು ಎಲ್ಲಾ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು ದೇವರ ಆಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ
11 ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರು ಗ್ರಹಿಸುವುದಿಲ್ಲ.
12 ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳಿಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು
13 ಇವುಗಳನ್ನು ಮಾನುಷ ಜ್ಞಾನವು ಕಲಿಸಿದ ಮಾತುಗಳಿಂದ ಹೇಳಿದೆ ದೇವರಾತ್ಮನೇ ಕಲಿಸಿಕೊಟ್ಟ ಹೇಳಿ ಆತ್ಮ ಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇವೆ.
14 ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ. ಅವು ಅವನಿಗೆ ಹುಚ್ಚು ಮಾತಾಗಿ ತೋರುತ್ತವೆ. ಅವು ಆತ್ಮ ವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು
15 ದೇವರಾತ್ಮದಿಂದ ನಡಿಸಿಕೊಳ್ಳುವವನೋ ಎಲ್ಲವನ್ನೂ ವಿಚಾರಿಸಿ ತಿಳುಕೊಳ್ಳುತ್ತಾನೆ. ಆದರೆ ಇವನನ್ನು ಯಾವನಾದರೂ ವಿಚಾರಿಸಿ ತಿಳುಕೊಳ್ಳುವದಿಲ್ಲ.
16 ಕರ್ತನ ಮನಸ್ಸನ್ನು ತಿಳುಕೊಂಡು ಆತನಿಗೆ ಉಪದೇಶಿಸುವವನಾರು ಎಂದು ಬರೆದದೆಯಲ್ಲಾ ನಮಗಾದರೋ ಕ್ರಿಸ್ತನ ಮನಸ್ಸು ದೊರಕಿತು.

ಆತ್ಮನ ಒಂದು ಕಾರ್ಯಾವೇನೆಂದರೆ ಆತನು ದೇವರ ರಹಸ್ಯಾರ್ಥಗಳನ್ನು ನಮಗೆ ಬಿಡುಗಡೆಗೊಳಿಸುತ್ತಾನೆ. ಧರ್ಮಶಾಸ್ತ್ರದಲ್ಲಿ ರಹಸ್ಯಾರ್ಥಗಳೆಂದರೆ ಮನುಷ್ಯನಿಂದ ಮರೆಯಾಗಿರುವಂತಹ ಮನುಷ್ಯನ ಮನಸ್ಸಿಗೆ ಗ್ರಹಿಸಲಾರದಂತಹ ಸತ್ಯವಾಗಿದೆ ಎಂದು ಉಲ್ಲೇಖಿಸುತ್ತದೆ. ಆದರೆ ಈಗ ಅವು ಗೋಚರವಾಗಿವೆ ಅಥವಾ ಪ್ರಕಟಿಸಲ್ಪಟ್ಟಿವೆ. ಮಾನವ ಜನಾಂಗದ ಮೇಲೆ ಉದ್ದೇಶಗಳೊಡನೆ, ಸಭೆಗಾಗಿ ಇನ್ನೂ ಮುಂತಾದವುಗಳೊಂದಿಗೆ ಸಂಬಂಧಿತ ರಹಸ್ಯಾರ್ಥಗಳಿದ್ದಾಗಲೂ ನಮಗೆ ವೈಯಕ್ತಿಕವಾಗಿ ದೇವರ ಉದ್ದೇಶಗಳೊಡನೆ ಸಂಬಂಧಿತವಾಗಿರುವ ರಹಸ್ಯಾರ್ಥಗಳಿವೆ.

ನಮ್ಮಲ್ಲಿ ಪ್ರತಿಯೊಬ್ಬರಿಗೂ ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕಬೇಕೆಂದು ದೇವರ ನಮ್ಮನ್ನು ಮೊದಲೇ ನೇಮಿಸಿದ್ದಾನೆ (ಎಫೆಸದವರಿಗೆ 2:10) ನಮಗೆ ವೈಯಕ್ತಿಕವಾಗಿ ದೇವರು ಹೊಂದಿರುವ ಉದ್ದೇಶಗಳು ಮತ್ತು ಯೋಜನೆಗಳನ್ನು ನಾವು ಕಂಡು ಹಿಡಿಯುವುದು ನಮ್ಮ ಜವಬ್ದಾರಿಯಾಗಿದೆ ಆಮೇಲೆ ದೇವರಿಂದ ಅಧಿಕಾರ ಹೊಂದಿದವರಾಗಿ ಅವುಗಳನ್ನು ನೆರವೇರಿಸುವುದರಲ್ಲಿ ಮುಂದುವರೆಯಬೇಕು ನಾವು ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ/ ಮಾತನಾಡುವಾಗ ಪವಿತ್ರಾತ್ಮನಿಂದ ಪ್ರೇರಣೆಗೊಂಡ ರಹಸ್ಯಾರ್ಥಗಳನ್ನು (1ಕೊರಿಂಥದವರಿಗೆ 14:2) ಮಾತಾಡುತ್ತಿದ್ದೇವೆಂಬುದು ಆಸಕ್ತಿಕರವಾದ

ಸತ್ಯವಾಗಿದೆ. ಆದ್ದರಿಂದ ನಮ್ಮ ಸ್ವಂತ ಜೀವಿತಗಳ ಕಾಳಜಿಯ ಕುರಿತಾದ ದೇವರ ರಹಸ್ಯಾರ್ಥಗಳು ವಿಷಯಗಳೊಡನೆ ನಾವು ತೊಡಗಿಸಿಕೊಂಡಿರುವ ಸ್ಥಾನಕ್ಕೆ ಅನ್ಯಭಾಷೆಯಲ್ಲಿ ಮಾತಾಡುವುದು ಇರಿಸುತ್ತದೆಂದು ಸುರಕ್ಷಿತವಾಗಿ ಊಹಿಸಿಕೊಳ್ಳಬಹುದು. ನಾವು ಆತ್ಮದಲ್ಲಿ ಪ್ರಾರ್ಥಿಸುವಾಗ ನಮ್ಮ ಆತ್ಮದ ಮನುಷ್ಯನು ಪವಿತ್ರಾತ್ಮನಿಂದ ದೇವರ ಉದ್ದೇಶಗಳ ತಿಳುವಳಿಕೆಯನ್ನು ಪಡೆಯಲು ಪ್ರಾರಂಭಿಸುತ್ತಾನೆ. ನಾವು ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ ನಮ್ಮ ಜೀವಿತಗಳಿಗಾಗಿ ದೇವರಿಂದ ಅಭಿಷೇಕಿಸಲ್ಪಟ್ಟವು ಮತ್ತು ಯೋಚಿಸಲ್ಪಟ್ಟವುಗಳನ್ನು ಆದವುಗಳಾದ ದೇವರಿಂದ ನಮಗೆ ಉಚಿತವಾಗಿ ಕೊಡಲ್ಪಟ್ಟ ವಿಷಯಗಳನ್ನು ಅರ್ಥಮಾಡಿಕೊಳ್ಳಲೂ ಪ್ರಾರಂಭಿಸುತ್ತೇವೆ. ಆದ್ದರಿಂದ ನಮ್ಮ ವೈಯಕ್ತಿಕ ಜೀವಿತದಲ್ಲಿ ಮತ್ತು ದೇವರೊಂದಿಗಿನ ನಡೆಯಲ್ಲಿ ಇದು ಬಲಯುತವಾದ ಅನ್ವಭಾಷೆಗಳ ಉಪಯೋಗವಾಗಿದೆ.

ಸಾರ್ವಜನಿಕ ಸೇವೆಯಲ್ಲಿ ಉಪಯೋಗಕ್ಕಾಗಿ ಅನ್ಯಭಾಷೆಯನ್ನು ಪಡೆಯುವುದು

ಸಭೆಯಾಗಿ ಸೇರಿಬರುವಿಕೆಯಲ್ಲಿ ಅಥವಾ ಅವಿಶ್ವಾಸಿಗಳಿಗೆ ಒಂದು ಚಿಹ್ನೆಯಾಗಿ ಅನ್ಯಭಾಷೆಯ ಉಪಯೋಗವನ್ನು ಪವಿತ್ರಾತ್ಮನು ಮಾರ್ಗದರ್ಶಿಸುವವನಾಗಿದ್ದಾನೆ.

ಸಭೆಯಾಗಿ ಸೇರಿಬರುವಿಕೆಯಲ್ಲಿ

ಸೇರಿಬರುವಿಕೆಯಲ್ಲಿ ಕ್ರಮವಾದ ಅನ್ಯಭಾಷೆಯ ಉಪಯೋಗದ ಮೇಲಿನ ಸತ್ಯವೇದದ ಸಲಹೆಗಳನ್ನು ಹಿಂಬಾಲಿಸಿ:

1 ಕೊರಿಂಥದವರಿಗೆ 14:5,12,13
5 ನೀವೆಲ್ಲರೂ ವಾಣಿಗಳನ್ನಾಡಬೇಕೆಂದು ನಾನು ಅಪೇಕ್ಷಿಸಿದರೂ ಅದಕ್ಕಿಂತಲೂ ನೀವು ಪ್ರವಾದಿಸಬೇಕೆಂಬದೇ ನನ್ನಿಷ್ಟ ವಾಣಿಗಳನ್ನಾಡುವವನು ಸಭೆಗೆ ಭಕ್ತಿವೃದ್ದಿಯಾಗುವುದಕ್ಕಾಗಿ ಆ ವಾಣಿಯ ಅರ್ಥವನ್ನು ಹೇಳದೆ ಹೋದರೆ ಅವನಿಗಿಂತ ಪ್ರವಾದಿಸುವವನು ಶ್ರೇಷ್ಟ.
12 ಹಾಗೆಯೇ ಆತ್ಮ ಪ್ರೇರಿತವಾದ ನುಡಿಗಳನ್ನಾಡುವದಕ್ಕೆ ಅಪೇಕ್ಷಿಸುವವರಾಗಿರುವದರಿಂದ ಸಭೆಗೆ ಭಕ್ತಿವೃದ್ದಿ ಉಂಟಾಗುವ ಹಾಗೆ ಅದಕ್ಕಿಂತಲೂ ಹೆಚ್ಚಾದದ್ದನ್ನು ಮಾಡುವದಕ್ಕೆ ಪ್ರಯತ್ನಿಸಿರಿ
13 ಆದದರಿಂದ ವಾಣಿಯನ್ನಾಡುವವನು ತನಗೆ ಅದರ ಅರ್ಥವನ್ನು ಹೇಳುವ ಶಕ್ತಿಯೂ ಉಂಟಾಗಬೇಕೆಂದು ದೇವರನ್ನು ಪ್ರಾರ್ಥಿಸಲಿ.

ಸಭೆಯ ಸಭಿಕರಲ್ಲಿ ಅನ್ಯಭಾಷೆಯಲ್ಲಿ ಮಾತಾನಾಡುವಂತಹವರು ಅರ್ಥವಿವರಣೆಗಾಗಿ ಪ್ರಾರ್ಥಿಸಬೇಕು. ಅನ್ಯಭಾಷೆಯಲ್ಲಿ ಸಂದೇಶವನ್ನು ಕೊಟ್ಟಂತಹ ಅದೇ ವ್ಯಕ್ತಿಯಿಂದ ಅಥವಾ ಬೇರೆ ಯಾರಾದರೊಬ್ಬರಿಂದ ಅರ್ಥವಿವರಣೆಯನ್ನು ತರಬಹುದು.

1 ಕೊರಿಂಥದವರಿಗೆ 14:18-19
18 ನಾನು ನಿಮ್ಮೆಲ್ಲರಿಗಿಂತಲೂ ಹೆಚ್ಚಾಗಿ ವಾಣಿಗಳನ್ನಾಡುತ್ತೇನೆಂದು ದೇವರನ್ನು ಕೊಂಡಾಡುತ್ತೇನೆ.
19 ಆದರೂ ಸಭೆಯಲ್ಲಿ ವಾಣಿಯಿಂದ ಹತ್ತು ಸಾವಿರ ಮಾತುಗಳನ್ನಾಡುವುದಕ್ಕಿಂತ ನನ್ನ ಬುದ್ಧಿಯಿಂದ ಐದೇ ಮಾತುಗಳನ್ನಾಡಿ ಇತರರಿಗೆ ಉಪದೇಶ ಮಾಡುವದು ನನಗೆ ಇಷ್ಟವಾಗಿದೆ.

ವೈಯಕ್ತಿಕ ಪ್ರಾರ್ಥನೆಯಲ್ಲಿ ಅತ್ಯಧಿಕವಾದ ಅನ್ಯಭಾಷೆಯಲ್ಲಿ ಪ್ರಾರ್ಥಿಸಿರಿ, ಆದರೆ ನೀವು ಸಭಿಕರಲ್ಲಿ ಮಾತಾನಾಡುವಾಗ ಎಲ್ಲರೂ ಅರ್ಥಮಾಡಿಕೊಳ್ಳುವಂತೆ ಮಾತನಾಡಿರಿ.

1 ಕೊರಿಂಥದವರಿಗೆ 14:23-28
23 ಹೀಗಿರುವಲ್ಲಿ ಸಭೆಯೆಲ್ಲಾ ಒಂದೇ ಸ್ಥಳದಲ್ಲಿ ಕೂಡಿಬಂದಾಗ ಎಲ್ಲರೂ ವಾಣಿಗಳನ್ನಾಡಿದರೆ ಈ ವರವನ್ನು ಹೊಂದದಿರುವ ಸಭೆಯವರು ಅಥವಾ ಕ್ರಿಸ್ತನಂಬಿಕೆಯಿಲ್ಲದವರು ಒಳಗೆ ಬಂದು ನೋಡಿ ನಿಮಗೆ ಹುಚ್ಚು ಹಿಡಿದದೆ ಎಂದು ಹೇಳುವುದಿಲ್ಲವೋ
24 ಆದರೆ ನೀವೆಲ್ಲರು ಪ್ರವಾದಿಸುತ್ತಿರಲು ಕ್ರಿಸ್ತನಂಬಿಕೆಯಿಲ್ಲದವನಾಗಲಿ ಈ ವರವಿಲ್ಲದವನಾಗಲಿ ಒಳಗೆ ಬಂದರೆ ಅವನು ಎಲ್ಲರ ಮಾತನ್ನು ಕೇಳಿ ತಾನು ಪಾಪಿಯೆಂಬ ಅರುಹನ್ನು ಹೊಂದುವನು ಎಲ್ಲರ ಮಾತಿನಿಂದ ಪರಿಶೋಧಿತನಾಗುವನು.
25 ಅವನ ಹೃದಯದ ರಹಸ್ಯಗಳು ಬೈಲಾಗುವವು ಮತ್ತು ಅಡ್ಡಬಿದ್ದು ದೇವರನ್ನು ಆರಾಧಿಸಿ-ದೇವರು ನಿಜವಾಗಿ ನಿಮ್ಮಲ್ಲಿದ್ದಾನೆಂಬುದನ್ನು ಪ್ರಚಾರಪಡಿಸುವನು
26 ಹಾಗದರೇನು, ಸಹೋದರರೇ ? ನೀವು ಕೂಡಿ ಬಂದಿರುವಾಗ ಒಬ್ಬನು ಹಾಡುವದೂ ಒಬ್ಬನು ಉಪದೇಶಮಾಡುವದೂ ಒಬ್ಬನು ತನಗೆ ಪ್ರಕಟವಾದದ್ದನ್ನು ತಿಳಿಸುವದೂ ಒಬ್ಬನು ವಾಣಿಯನ್ನಾಡುವದೂ ಒಬ್ಬನು ಅದರ ಅರ್ಥವನ್ನು ಹೇಳುವದೂ ಉಂಟಷ್ಟೆ ನೀವು ಏನೂ ನಡಿಸಿದರೂ ಭಕ್ತಿವೃದ್ಧಿಗಾಗಿಯೇ ನಡಿಸಿರಿ.
27 ವಾಣಿಯನ್ನಾಡುವದಾದರೆ ಇಬ್ಬರು ಅಥವಾ ಅವಶ್ಯಕವಿದ್ದರೆ ಮೂವರಗಿಂತ ಹೆಚ್ಚಿಲ್ಲದೆ ಒಬ್ಬೊಬ್ಬರಾಗಿ ಮಾತಾಡಬೇಕು ಮತ್ತು ಒಬ್ಬನೇ ಅರ್ಥವನ್ನು ಹೇಳಬೇಕು.
28 ಅರ್ಥವನ್ನು ಹೇಳುವವನಿಲ್ಲದಿದ್ದರೆ ವಾಣಿಯನ್ನಾಡುವವನು ಸಭೆಯಲ್ಲಿ ಸುಮ್ಮನಿರಲಿ ತನ್ನೊಂದಿಗೆಯೂ ದೇವರೊಂದಿಗೆಯೂ ಮಾತಾಡಿಕೊಳ್ಳಲಿ.

ಸಭೆಯು ಸಭಿಕರಂತೆ ಒಟ್ಟಾಗಿ ಕೂಡಿಬರುವಾಗ ಮತ್ತು ಅಲ್ಲಿ ಅವಿಶ್ವಾಸಿಗಳು / ಅರಿಯದ ಜನರುಗಳಿರುತ್ತಾರೆ, ಒಂದೇ ಸಮಯದಲ್ಲಿ ಎಲ್ಲರೂ ಗಟ್ಟಿಯಾಗಿ ಅನ್ಯಭಾಷೆಯಲ್ಲಿ ಮಾತಾನಾಡದಿರುವುದು ಉತ್ತಮವಾಗಿರುತ್ತದೆ. (ವಚನ 23) ಅಂತಹ ವ್ಯವಸ್ಥೆಯಲ್ಲಿ ಎರಡು ಅಥವಾ ಮೂರು ಸಾರ್ವಜನಿಕ ಸಂದೇಶಗಳು ಕೊಡಲ್ಪಡುತ್ತವೆ. ಮತ್ತು ಯಾರಾದರೊಬ್ಬರು ಅರ್ಥವಿವರಣೆ ಮಾಡುತ್ತಾರೆ.(ವಚನ 27) ಹೇಗಾದರೂ ಅಂತಹ ವ್ಯವಸ್ಥೆಯಲ್ಲಿ ವೈಯಕ್ತಿಕ ವಿಶ್ವಾಸಿಗಳು ಅನ್ಯಭಾಷೆಯಲ್ಲಿ ನಿಶ್ಯಬ್ಧವಾಗಿ ಪ್ರಾರ್ಥಿಸಬಹುದು (ವಚನ 28)

ಅವಿಶ್ವಾಸಿಗಳಿಗೆ ಒಂದು ಸೂಚನೆಯಾಗಿದೆ

1ಕೊರಿಂಥದವರಿಗೆ 14:22
ಆದದರಿಂದ ವಾಣಿಗಳನ್ನಾಡುವದು ನಂಬದವರಿಗೆ ಸೂಚನೆಗಾಗಿದೆ ಹೊರತು ನಂಬುವವರಿಗೆ ಸೂಚನೆಯಲ್ಲವೆಂದು ನಾವು ತಿಳುಕೊಳ್ಳಬೇಕು.

ಅನ್ಯಭಾಷೆಗಳ ಉಪಯೋಗವು ಅವಿಶ್ವಾಸಿಗಳಿಗೆ ಸೂಚನೆಗಾಗಿದೆ ಎಂಬುದಾಗಿ ಪವಿತ್ರಾತ್ಮನು ಉತ್ತೇಜಿಸಿದ್ದಾನೆ. ಪವಿತ್ರಾತ್ಮನಿಂದ ಪ್ರೇರಿತವಾದ ವ್ಯಕ್ತಿಯು ಅನ್ಯಭಾಷೆಯಲ್ಲಿ ಮಾತಾನಾಡುತ್ತಿದ್ದರೆ ಅದು ರಕ್ಷಿಸಲ್ಪಡದಂತಹ ವ್ಯಕ್ತಿಯು ಅರ್ಥಮಾಡಿಕೊಳ್ಳುವ ಭಾಷೆಯಲ್ಲಿ ಮಾತಾನಾಡುತ್ತಿರುವುದು ಮತ್ತು ಆ ವ್ಯಕ್ತಿಯನ್ನು ಯೇಸುಕ್ರಿಸ್ತನ ಕಡೆಗೆ ತೋರಿಸುವಂತಹ ಸಂದೇಶವನ್ನು ಕರ್ತನಿಂದ ಬಿಡುಗಡೆ ಮಾಡುತ್ತಿರುತ್ತಾರೆ. ಪಂಚಾಶತ್ತಮ ದಿನದಂದು ಜರುಗಿದ್ದಂತದ್ದು ಇದಕ್ಕೆ ಒಂದು ಉದಾಹರಣೆಯಾಗಿದೆ.

ಅನ್ಯಭಾಷೆಗಳ ವಿವಿಧತೆಯ ವರವು ಸರಳವಾಗಿದೆ ಆದಾಗ್ಯೂ ಆತ್ಮನ ಅತ್ಯದ್ಭುತಕರ ವರವಾಗಿದೆ ಮತ್ತು ಎಲ್ಲಾ ವಿಶ್ವಾಸಿಗಳು ಅವರ ಜೀವಿತದಲ್ಲಿ ಇದನ್ನು ಕಾರ್ಯಾಚರಣೆಯಲ್ಲಿ ಹೊಂದಿರಬೇಕೆಂದು ಪ್ರೋತ್ಸಾಹಿಸುತ್ತೇವೆ.

1 ಕೊರಿಂಥದವರಿಗೆ 14:39-40
39 ಆದಕಾರಣ ನನ್ನ ಸಹೋದರರೇ ಪ್ರವಾದಿಸುವುದಕ್ಕೆ ಆಸಕ್ತಿಯಿಂದ ಅಪೇಕ್ಷಿಸಿರಿ ಮತ್ತು ವಾಣಿಯನ್ನಾಡುವುದಕ್ಕೆ ಬೇಡವೆನ್ನಬಾರದು.
40 ಆದರೆ ಎಲ್ಲವೂ ಮರ್ಯಾದೆಯಿಂದಲೂ ಕ್ರಮದಿಂದಲೂ ನಡೆಯಲಿ.

8.ಅನ್ಯಭಾಷೆಯ ಅರ್ಥವಿವರಣೆ

ಅರ್ಥವಿವರಣೆ

ಅನ್ಯಭಾಷೆಯ ಅರ್ಥವಿವರಣೆಯ ವರವು ಅನ್ಯಭಾಷೆಯಲ್ಲಿ ಕೊಡಲ್ಪಟ್ಟ ಒಂದು ಸಂದೇಶವನ್ನು ಅರ್ಥವಿವರಣೆಯ (ಅದರ ಅರ್ಥವನ್ನು ಕೊಡುವುದು) ಅಪ್ರಾಕೃತ ಸಾಮರ್ಥ್ಯವಾಗಿದೆ. ಅನ್ಯಭಾಷೆಯ ಅರ್ಥವಿವರಣೆಯು ವೈಯಕ್ತಿಕ ಪ್ರಾರ್ಥನಾ ಜೀವಿತದಲ್ಲಿ ಉಪಯೋಗಿಸಿದ್ದಾಗಲೂ, ಇದು ಸಭಿಕರಿಗೆ ಅನ್ಯಭಾಷೆಯಲ್ಲಿ ಕೊಡಲ್ಪಟ್ಟ ಸಂದೇಶದ ಅರ್ಥವಿವರಣೆಗಾಗಿ ಉಪಯೋಗಿಸಲ್ಪಡುತ್ತದೆ. ಹೇಗಾದರೂ ಒಂದು ನಿರ್ಧಿಷ್ಟ ಕ್ಷಣದಲ್ಲಿ ಅವಳು/ಅವನು ಕಲಿಯದ ಮಾತನಾಡುವ ಭಾಷೆಯನ್ನು ಅರ್ಥಮಾಡಿಕೊಳ್ಳಲು ಒಬ್ಬ ವ್ಯಕ್ತಿಗೆ ಸಹಾಯ ಮಾಡಲು ಇದೇ ಅಪ್ರಾಕೃತ ವರವನ್ನು ಪವಿತ್ರಾತ್ಮನು ಬಳಸಿಕೊಳ್ಳುವ ಸಾಧ್ಯತೆಯಿದೆ.

ಆತ್ಮನ ಈ ವರವು ಅಪ್ರಾಕೃತ ಕೆಲಸವಾಗಿದೆ ಮತ್ತು ಆದ್ದರಿಂದ ಕಲಿತ ಭಾಷೆಗಳ ಸ್ವಾಧೀನಪಡಿಸಿಕೊಂಡ ಕೌಶಲ್ಯಕ್ಕೆ ಸಮನಾಗಿಲ್ಲ (ಉದಾಹರಣೆಗೆ ಭಾಷಾಪರಿಣಿತರಂತೆ) ಇದು ಅರ್ಥವಿವರಣೆ ಮತ್ತು ಭಾಷಾಂತರವಲ್ಲ ಎಂಬುವುದನ್ನು ದಯವಿಟ್ಟು ಮನಸ್ಸಿನಲ್ಲಿಟ್ಟುಕೋಳ್ಳಬೇಕು. ಅರ್ಥವಿವರಣೆಯಲ್ಲಿ ಪದದಿಂದ ಪದಕ್ಕೆ ಭಾಷಾಂತರವನ್ನು ನೀವು ಮಾಡುವುದಿಲ್ಲ, ಆದರೆ ಅವರ ಅರ್ಥದ ಸಾರಾಂಶವನ್ನು ಅಥವಾ ನುಡಿದಂತದ್ದದ ತಿರುಳನ್ನು ನೀವು ಕೋಡುತೀರಿ. ಆದ್ದರಿಂದ ಅನ್ಯಭಾಷೆಯಲ್ಲಿ ಕೊಡಲ್ಪಟ್ಟಂತ ಅಂದಿನ ಸಂದೇಶದ ಅವಧಿಯು ಮತ್ತು ಆ ಸಂದೇಶದ ಅರ್ಥವಿವರಣೆಯು ಹೋಂದಾಣಿಕೆ ಯಾಗದಿರುವಂತದ್ದು ಸಾಧನಾಕರವಾಗಿರುತ್ತದೆ. ಗಾಬರಿಯಾಗಬೇಡಿ ಅಥವಾ ಇದರ ಆದಾರದ ಮೇಲೆ ಅರ್ಥವಿವರಣೆಯನ್ನು ನಿರ್ಣಯಿಸಬೇಡಿರಿ.

ಸತ್ಯವೇದದ ಉದಾಹರಣೆಗಳು : ಹಳೇ ಒಡಂಬಡಿಕೆ

ಹಳೇ ಒಡಂಬಡಿಕೆಯಲ್ಲಿ ಅನ್ಯಭಾಷೆಗಳ ಅರ್ಥವಿವರಣೆಯ ವರದ ಅನೇಕ ಅಭಿವ್ಯಕ್ತತೆಗಳನ್ನು ನಾವು ಹೋಂದದಿದ್ದಾಗಲೂ ದಾನಿಯೇಲನು 5:1-29ರಲ್ಲಿ ಬೇಲ್ಯಚ್ಚರನ ಅರಮನೆಯಲ್ಲಿ ಜರುಗಿದ್ದರ ಕುರಿತು ಖಾತೆ ಹೋಂದಿದ್ದೇವೆ . ಅವನು ಗೋಡೆಯ ಮೇಲೆ ಕೈ ಬರಹವನ್ನು ಕಂಡನು. ಆವನ ಆಸ್ಥಾನದ ಜೋಯಿಸರು ಮತ್ತು ಮಂತ್ರವಾದಿಗಳು ಅದನ್ನು ಓದಲಾಗಲಿಲ್ಲ ಅಥವಾ ಬರವಣಿಗೆ ಅರ್ಥ ವಿವರಣೆ

ಹೇಳಲಿಲ್ಲ. ಆದರೆ ದಾನಿಯೇಲನು ಅದನ್ನು ಓದಿದನು ಮತ್ತು ಅದರ ಅರ್ಥವನ್ನು ವಿವರಣೆ ಮಾಡಿ ವ್ಯಾಖ್ಯಾನಿಸಿದನು.

ಸತ್ಯವೇದದ ಉದಾಹರಣೆಗಳು: ಹೊಸ ಒಡಂಬಡಿಕೆ

ಹೊಸ ಒಡಂಬಡಿಕೆಯಲ್ಲಿ 1 ಕೊರಿಂಥದವರಿಗೆ 12:7-11 ರಲ್ಲಿನ ಆತ್ಮನ ಒಂಭತ್ತು ವರಗಳ ಪಟ್ಟಿಯಲ್ಲಿ ಅನ್ಯ ಭಾಷೆಯ ಅರ್ಥ ವಿವರಣೆಯ ವರದಿ ಕುರಿತು ನಾವು ಓದುತ್ತೇವೆ. ಮತ್ತು ಪೌಲನು ಅವುಗಳನ್ನು ಸಭಿಕರ ವ್ಯವಸ್ಥೆಯಲ್ಲಿ ಉಪಯೋಗಿಸುವುದು ಹೇಗೆ ಎಂಬುದರ ಸಲಹೆಗಳು 1 ಕೊರಿಂಥದವರಿಗೆ 14 ರಲ್ಲಿ ನೀಡಿದ್ದಾನೆ.

ಕಾರ್ಯಾಚರಣೆಗಳು

ವೈಯಕ್ತಿಕ ಉಪಯೋಗಕ್ಕಾಗಿ ಅನ್ಯ ಭಾಷೆಗಳು ಮತ್ತು ಅರ್ಥ ವಿವರಣೆ

ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ನಿಮ್ಮ ವೈಯಕ್ತಿಕ ಪ್ರಾರ್ಥನೆಯ ಸಮಯದಲ್ಲಿ ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ ಎಲ್ಲವನ್ನು ಅರ್ಥವಿವರಣೆ ಮಾಡಬೇಕಾಗಿರುವ ಅಗತ್ಯವಿಲ್ಲ. ನೀವು ಅನ್ಯಭಾಷೆಯಲ್ಲಿ ಪ್ರಾರ್ಥಿಸಲು ಅನೇಕ ಗಂಟೆಗಳನ್ನು ಕಳೆಯಬಹುದು, ಅರ್ಥವಿವರಣೆ ಇಲ್ಲದೆ ಆತ್ಮೀಕವಾಗಿ ಭಕ್ತಿವೃದ್ಧಿ ಹೊಂದಿರಿ ಮತ್ತು ಕಟ್ಟಿಕೊಳ್ಳಿರಿ. ಅನ್ಯಭಾಷೆ ಮತ್ತು ಆರ್ಥವಿವರಣೆಯು ನೀವು ಮಾಡುತ್ತಿರುವಂತ ಪ್ರಾರ್ಥನೆಯ ಅರ್ಥವನ್ನು ತಿಳಿಯಲು,ನಿಮ್ಮ ವೈಯಕ್ತಿಕ ಜೀವಿತದಲ್ಲಿ ಲಾಭವಾಗಿರುತ್ತದೆ. ನೀವು ಪ್ರಾರ್ಥಿಸುತ್ತಿರುವುದರ ಅರ್ಥವಿವರಣೆಯನ್ನು ಮಾತಾಡುವುದರಿಂದ ಅಥವಾ ನಿಮ್ಮ ಹೃದಯದಲ್ಲಿ ಅದನ್ನು ಎತ್ತಿಕೊಳ್ಳುವುದರಿಂದ ನೀವು ಅರ್ಥವನ್ನು ಹೊಂದಬಹುದು ಆದ್ದರಿಂದ ದೇವರ ಆತ್ಮನು ಹೇಳುತ್ತಿರುವುದನ್ನು ನೀವು ತಿಳಿಯಬಹುದು.

ವೈಯಕ್ತಿಕ ಉಪಯೋಗದಲ್ಲಿರುವಾಗ ಅನ್ಯಭಾಷೆ ಮತ್ತು ಅರ್ಥವಿವರಣೆಯು ಪ್ರಯೋಜಕಾರಿಯಾಗಬಲ್ಲ ಹಲವಾರು ಕ್ಷೇತ್ರಗಳಿವೆ:

(ಅ)ವೈಯಕ್ತಿಕ ಮಾರ್ಗದರ್ಶನ ಮತ್ತು ನಿರ್ದೇಶನ, ನಿಮ್ಮ ವೈಯಕ್ತಿಕ ಜೀವಿತಕ್ಕಾಗಿ ದೇವರ ಉದ್ದೇಶಗಳು ಮತ್ತು ಯೋಚನೆಗಳನ್ನು ಅರ್ಥಮಾಡಿಕೊಳ್ಳುವುದು

(ಆ)ನೀವು ಜವಬ್ದಾರರಾಗಿರುವ ವಿಚಾರದಲ್ಲಿ ತೀರ್ಮಾನ ಮಾಡುವುದಕ್ಕಾಗಿ (ಉದಾಹರಣೆ ಕೆಲಸದಸ್ಥಳ, ವ್ಯಾಪಾರ ವ್ಯವಹಾರ ಸೇವೆ, ಮುಂತಾದವು.)

(ಇ)ದೇವರ ಸಂಗತಿಗಳ ಪ್ರಕಟನೆ ಮತ್ತು ಒಳದೃಷ್ಟಿ ಉದಾಹರಣೆಗೆ ದೇವರ ವಾಕ್ಯದ ಪರಿಜ್ಞಾನ, ಪ್ರಸಕ್ತವಾಗಿ ಭೂಮಿಯಲ್ಲಿನ ದೇವರ ಮಾರ್ಗಗಳಿಗೆ, ಮುಂತಾದವು

ಈ) ಸೃಜನ ಶೀಲ ವಿಚಾರಗಳು, ದೊರದೃಷ್ಟಿಯ ಪ್ರೇರಣೆಗಳು ಕಾರ್ಯತಂತ್ರಗಳ ಮುಂತಾದವುಗಳನ್ನು ದೇವರಿಂದ ಪಡೆಯಲು,

ಸಭೆಯ ಸಭಿಕರಿಗೆ ಸೇವೆ ಸಲ್ಲಿಸುವಾಗ ಅನ್ಯಭಾಷೆಗಳು ಮತ್ತು ಅರ್ಥವಿವರಣೆ

ಹಿಂದಿನ ಅದ್ಯಾಯದಲ್ಲಿ ಇದರ ಕುರಿತು ವಿವರಿಸಿದ್ದೇವೆ ಮತ್ತು ಇಲ್ಲಿ ಸಂಪೂರ್ಣತೆಗಾಗಿ ಪುನರಾವರ್ತಿಸಲಾಗಿದೆ.

ಸಭೆಯ ಸಭಿಕರ ಗುಂಪಿಗೆ ಅರ್ಥವಿವರಣೆಯೊಂದಿಗಿನ ಅನ್ಯಭಾಷೆಯು, ಕೂಡಿಬರುವಿಕೆಗೆ ಭಕ್ತಿ ವೃದ್ದಿ ತರಬಹುದು (1ಕೊರಿಂಥದವರಿಗೆ 14:5) ಮತ್ತು ಪ್ರವಾದನೆಯ ತರುವಂತಹ, ಭಕ್ತಿವೃದಿ, ಉಪದೇಶ ಮತ್ತು ಸಂತೈಸುವಿಕೆ (1ಕೊರಿಂಥದವರಿಗೆ 14:3) ಅದೇ ಲಾಭವನ್ನು ಹೊಂದಿದೆ.

ಸಭಿಕರ ಕೊಟಕ್ಕೆ ಅನ್ಯಭಾಷೆಯಲ್ಲಿ ಮಾತಾನಾಡುವವರು ಅರ್ಥವಿವರಣೆಗಾಗಿ ಪ್ರಾರ್ಥಿಸಬೇಕು (ಕೊರಿಂಥದವರಿಗೆ 14:5 12-13)

ವೈಯಕ್ತಿಕ ಪ್ರಾರ್ಥನೆಯಲ್ಲಿ ಅಧಿಕವಾಗಿ ಅನ್ಯಭಾಷೆಯಲ್ಲಿ ಮಾತನಾಡಿರಿ. ಆದರೆ ನೀವು ಸಭಿಕರ ಕೂಟದಲ್ಲಿ ಮಾತಾಡುವಾಗ ಎಲ್ಲರೂ ಅರ್ಥಮಾಡಿಕೊಳ್ಳುವಂತೆ ವಾಣಿಯನ್ನಾಡಿರಿ. (1 ಕೊರಿಂಥದವರಿಗೆ 14:18-19)

ಸಭೆಯು ಸಭಿಕರ ಕೂಟದಂತೆ ಒಟ್ಟಾಗಿ ಕೂಡಿ ಬರುವಾಗ ಮತ್ತು ಅವಿಶ್ವಾಸಿಗಳು / ಅರಿಯದ ಜನರು ಇರುತ್ತಾರೆ, ಒಂದೇ ಸಮಯದಲ್ಲಿ ಎಲ್ಲರೂ ಗಟ್ಟಿಯಾಗಿ ಅನ್ಯ ಭಾಷೆಯಲ್ಲಿ ಮಾತನಾಡದೆ ಇರುವುದು ಸೂಕ್ತವಾಗಿದೆ. (1 ಕೊರಿಂಥದವರಿಗೆ 14:23) ಅಂತಹ ವ್ಯವಸ್ಥೆಯಲ್ಲಿ ಇಬ್ಬರು ಅಥವಾ ಮೂರು ಸಾರ್ವಜನಿಕ ಸಂದೇಶಗಳು ಕೊಡಲ್ಪಡುವುದು ಮತ್ತು ಇನ್ನೊಬ್ಬರು ಅರ್ಥ ವಿವರಿಸುವುದು ಉತ್ತಮವಾಗಿರುತ್ತದೆ. (1 ಕೊರಿಂಥದವರಿಗೆ 14:29) ಹೇಗಾದರೂ ಅಂತಹ ವ್ಯವಸ್ಥೆಯಲ್ಲಿ ವೈಯಕ್ತಿಕವಾಗಿ ವಿಶ್ವಾಸಿಗಳು ಅನ್ಯಭಾಷೆಯಲ್ಲಿ ನಿಶ್ಯಬ್ದವಾಗಿ ಪ್ರಾರ್ಥಿಸಬಹುದು (1 ಕೊರಿಂಥದವರಿಗೆ 14:228).

ಅನ್ಯ ಭಾಷೆಗಳ ಅರ್ಥವಿವರಣೆಯನ್ನು ಹೇಗೆ ಪಡೆದುಕೊಳ್ಳುವುದು

ಅನ್ಯ ಭಾಷೆಗಳ ಅರ್ಥವಿವರಣೆ ಪಡೆದುಕೊಳ್ಳುವುದು. ಇತರೆ ಪ್ರಕಟನೆ ವರಗಳು ಅಥವಾ ಪ್ರವಾದನೆ ವರವು ಪಡೆದುಕೊಂಡಂತೆಯೇ ಬಹಳವಾಗಿ ಹೋಲುತ್ತದೆ. ಅನ್ಯಭಾಷೆಯಲ್ಲಿ ನುಡಿದ ಸಂದೇಶದ ಸಾರಾಂಶವನ್ನು ಸಂಪರ್ಕಿಸಲು ನಮ್ಮ ಆತ್ಮದ ಯಾವುದೇ

ಇಂದ್ರಿಯಗಳನ್ನು ಪವಿತ್ರಾತ್ಮನು ಉಪಯೋಗಿಸಬಹುದು. ವಿಶಿಷ್ಟವಾಗಿ ನೀವು ಮೊಟ್ಟ ಮೊದಲ ಮಾತು/ ಆಲೋಚನೆ/ ವಿಚಾರವನ್ನು ಪವಿತ್ರಾತ್ಮನು ಪ್ರೇರೇಪಿಸಿದ್ದನ್ನು ಮಾತನಾಡಲೂ ಆರಂಭಿಸಬೇಕು. ಆಮೇಲೆ ಉಳಿದವರು ಅದನ್ನು ಹಿಂಬಾಲಿಸುತ್ತಾರೆ. ಮುಂದಿನ ಅಧ್ಯಾಯದಲ್ಲಿ ಇದನ್ನು ಮುಂದೆ ವಿವರಿಸೋಣ.

9.ಪ್ರವಾದನೆ

ಅರ್ಥನಿರೂಪಣೆ

ಪ್ರವಾದನೆಯು ಮನುಷ್ಯನ ಮೂಲಕವಾಗಿ ಮನುಷ್ಯನಿಗೆ ದೇವರು ಮಾತನಾಡುವುದಾಗಿದೆ. ಒಬ್ಬ ವ್ಯಕ್ತಿಯು ದೇವರಿಂದ ಪಡೆದುಕೊಳ್ಳುವಂತಹ ಅತ್ಯದ್ಭುತಕರವಾಗಿ ಪ್ರೇರಿತಗೊಂಡ ಸಂದೇಶವಾಗಿರುತ್ತದೆ ಮತ್ತು ಇನ್ನೊಬ್ಬ ವ್ಯಕ್ತಿಗಾಗಿ ಅಥವಾ ಒಂದು ಗುಂಪಿನ ಜನರಿಗಾಗಿ ಸಂಪರ್ಕಿಸಲ್ಪಡುತ್ತದೆ.

ಉತ್ತಮ ಪ್ರಸಂಗದಂತೆ ಪ್ರವಾದನೆಯಿರುವುದಿಲ್ಲ. ಉತ್ತಮ ಪ್ರಸಂಗಗಳು ಅಧ್ಯಯನ, ಸಿದ್ದತೆ, ಕುಶಲತೆ ಮತ್ತು ಉತ್ತಮ ಪ್ರವಚನದಿಂದ ಮಾಡಲ್ಪಡುತ್ತದೆ.

ಪ್ರವಾದನೆಯು ಪವಿತ್ರಾತ್ಮನಿಂದ ಅಪ್ರಾಕೃತವಾಗಿ ಪ್ರೇರೇಪಿಸಲ್ಪಟ್ಟವುಗಳಾಗಿವೆ ಮತ್ತು ಸಿದ್ದತೆಯ ಮೇಲೆ ಅಥವಾ ಉತ್ತಮ ಪ್ರವಚನದ ಕೌಶಲ್ಯತೆಯ ಮೇಲೆ ಅವಲಂಬಿತವಾಗಿರುವುದಿಲ್ಲ.

1 ಕೊರಿಂಥದವರಿಗೆ 14:3
ಪ್ರವಾದಿಸುವವನಾದರೋ ಮನುಷ್ಯರ ಸಂಗಡ ಮಾತಾಡುವವನಾಗಿ ಅವರಿಗೆ ಭಕ್ತಿವೃದ್ಧಿಯನ್ನು ಪ್ರೋತ್ಸಾಹವನ್ನು ಸಂತೈಸುವಿಕೆಯನ್ನು ಉಂಟುಮಾಡುತ್ತಾನೆ.

ಪ್ರವಾದನೆಯ ಸರಳವಾದ ವರವು ಭಕ್ತಿವೃದ್ಧಿ (ಕಟ್ಟುವುದು) ಉಪದೇಶ (ಪ್ರೋತ್ಸಾಹ) ಮತ್ತು ಸಂತೈಸುವಿಕೆಗಾಗಿ ಕೊಡಲ್ಪಟ್ಟಿದೆ. ಮೇಲಿನವುಗಳ ಜೊತೆಗೆ ಪರಿಪಕ್ವತೆಯಲ್ಲಿನ ಒಬ್ಬ ವ್ಯಕ್ತಿಯು ಮತ್ತು ಸ್ಥಿರವಾದ ಪ್ರವಾದನೆ ಸೇವೆ ತಿದ್ದುಪಡಿ, ನಿರ್ದೇಶನ, ಪ್ರಕಟನೆ ಮತ್ತು ಭವಿಷ್ಯವಾಣಿ (ಮುಂದೆ ಆಗುವುದನ್ನು ಹೇಳುವುದು) ಇದರಲ್ಲಿ ಹರಿಯುತ್ತಾನೆ.

ಇಡೀ ಧರ್ಮಗ್ರಂಥದ ವಚನಗಳು, ಪ್ರೇರಣೆಯಿಂದ ಕೊಡಲ್ಪಟ್ಟವುಗಳಾಗಿರುವುದರಿಂದ ಪ್ರವಾದನೆಗಳಾಗಿವೆ. (ರೋಮಾಪುರದವರಿಗೆ 16:26; 2 ತಿಮೋಥೆಯನಿಗೆ 3:16 ; 2 ಪೇತ್ರನು 1:16-21) ಧರ್ಮ ಗ್ರಂಥದ ವಚನಗಳು ಇತರೆ ಎಲ್ಲಾ ಪ್ರವಾದನೆಗಳನ್ನು ನಾವು ಪರೀಕ್ಷಿಸುವುದರಿಂದ ನಮಗೆ ತಳಹದಿ ಒದಗಿಸುತ್ತದೆ.

2 ಪೇತ್ರನು 1:20-21
20 ಶಾಸ್ತ್ರದಲ್ಲಿರುವ ಯಾವ ಪ್ರವಾದನ ವಾಕ್ಯವೂ ಕೇವಲ ಮಾನುಷ ಬುದ್ಧಿಯಿಂದ ವಿವರಿಸತಕ್ಕಂತದಲ್ಲವೆಂಬುದನ್ನು ಮುಖ್ಯವಾಗಿ ತಿಳಿದುಕೊಳ್ಳಿರಿ.
21 ಯಾಕಂದರೆ ಯಾವ ಪ್ರವಾದನೆಯೂ ಎಂದೂ ಮನುಷ್ಯರ ಚಿತ್ತದಿಂದ ಉಂಟಾಗಲಿಲ್ಲ ಮನುಷ್ಯರು ಪವಿತ್ರಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು.

ಪ್ರವಾದನೆ ವರವನ್ನು ಅಭ್ಯಾಸಿಸುವುದರಲ್ಲಿ ಪವಿತ್ರಾತ್ಮದಿಂದ ಚಲಿಸಿದಂತೆ ನಾವು ಮಾತನಾಡುತ್ತೇವೆ. ಆದ್ದರಿಂದ ಎಲ್ಲಾ ಸತ್ಯ ಪ್ರವಾದನೆಯು ಧರ್ಮಶಾಸ್ತ್ರದ ವಚನಗಳಿಗೆ ವಿರುದ್ಧವಾಗಿರುವುದಿಲ್ಲ. ಧರ್ಮಶಾಸ್ತ್ರದ ಗ್ರಂಥಕರ್ತನು ಪವಿತ್ರಾತ್ಮನಾಗಿದ್ದಾನೆ (2 ತಿಮೊಥೆಯನಿಗೆ 3:16) ಮತ್ತು ಆತನ ಬರೆಯಲ್ಪಿಟ್ಟಿರುವುದನ್ನು ವಾಕ್ಯದಲ್ಲಿ ಆತನು ಈಗಾಗಲೇ ಸ್ಥಾಪಿಸಲ್ಪಟ್ಟಿರುವುದನ್ನು ಆತನು ಎಂದಿಗೂ ವಿರುದ್ಧಗೊಳಿಸುವುದಿಲ್ಲ. ಆತ್ಮನು ಮತ್ತು ವಾಕ್ಯವು ಒಪ್ಪುತ್ತವೆ.(1 ಯೋಹಾನ 5:7)

ಸತ್ಯವೇದದ ಉದಾಹರಣೆಗಳು : ಹಳೇ ಒಡಂಬಡಿಕೆ

ಹಳೇ ಒಡಂಬಡಿಕೆ ದೇವರು ಅನೇಕ ಪುರುಷ ಮತ್ತು ಸ್ತ್ರೀಯರನ್ನು ಪ್ರವಾದಿಸಲು ಉಪಯೋಗಿಸಿದನು ಮತ್ತು ಎಬ್ಬಿಸಿದನು. ಇದು ಹನೋಕ, ಅಬ್ರಹಾಮನು, ಮೋಶೆ ಮಿರ್ಯಾಮಳು, ಮೋಶೆಯ ಸಹಾಯಕರುಗಳು, ದೆಬೋರಳು ಮತ್ತು ಅನೇಕ ನ್ಯಾಯಸ್ಥಾಪಕರು, ಸಮುವೇಲ, ಎಲೀಯ, ಎಲೀಷನು, ಹೆಸರಿಲ್ಲದ ಅನೇಕ ಪ್ರವಾದಿಗಳು, ಯೆಶಾಯ, ಯೆರೆಮೀಯ, ಯೆಹೆಜ್ಕೇಲನು ಮತ್ತು ಅನೇಕ ಇತರರು.

ಹಳೇ ಒಡಂಬಡಿಕೆಯ ಅನೇಕ ಪ್ರವಾದಿಗಳನ್ನು ನಮಗೆ ಬರಲಿರುವ ಕೃಪೆಯ ಬಗ್ಗೆ ಪ್ರವಾದಿಸಿದ್ದಾರೆ (1 ಪೇತ್ರನು 1:10).

ಹಳೇ ಒಡಂಬಡಿಕೆಯಲ್ಲಿ ಕೆಲವು ನಿರ್ದಿಷ್ಟ ವ್ಯಕ್ತಿಗಳು ಮಾತ್ರವೇ ಪವಿತ್ರಾತ್ಮನು ಅವರ ಮೂಲಕವಾಗಿ ಕಾರ್ಯಮಾಡಿದ್ದನ್ನು ಹೊಂದಿದ್ದರು. ಆದ್ದರಿಂದ ನಿರ್ದಿಷ್ಟ ವ್ಯಕ್ತಿಗಳು ಮಾತ್ರವೇಪ್ರವಾದಿಸಿದ್ದರು. ಆದ್ದರಿಂದ ದೇವರಿಂದ ಕೇಳಲು ಅಗತ್ಯವಿದ್ದಂತ ಜನರು ಪ್ರವಾದಿಗಳ ಮೇಲೆ ಅವಲಂಬಿತರಾಗಿದ್ದರು. ಅರಸರು ಸಹ ಯಾಜಕರು ಅಥವಾ ಪ್ರವಾದಿಗಳ ಬಳಿಗೆ ದೇವರಿಂದ ಕೇಳಲು ಹೋಗಬೇಕಾಗಿತ್ತು. ಹೇಗಾದರೂ ಹೊಸ ಒಡಂಬಡಿಕೆಯಲ್ಲಿ ಸಂಗತಿಗಳು ವಿಭಿನ್ನವಾಗಿವೆ. ನೂತನವಾದ ಒಡಂಬಡಿಕೆಯಲ್ಲಿ ಪ್ರತಿಯೊಬ್ಬ ವಿಶ್ವಾಸಿಯು ದೇವರ ಆತ್ಮನು ಅವರಲ್ಲಿ ಮತ್ತು ಅವರ ಮೂಲಕವಾಗಿ ಕಾರ್ಯ ನಿರತನಾಗಿರುವುದನ್ನು ಹೊಂದಿದ್ದಾರೆ. ಆದ್ದರಿಂದ ಪ್ರತಿ ದೇವರ ಮಗುವು ದೇವರ ಆತ್ಮನಿಂದ ನಡೆಸಲ್ಪಡುತ್ತಾರೆ. ದೇವರಿಂದ ಕೇಳುತ್ತಾರೆ, ಆತ್ಮನಿಂದ ವೈಯಕ್ತಿಕವಾಗಿ ಅವರ ಹೃದಯಗಳಿಗೆ ತಂದಂತಹ ಪ್ರಕಟನೆ ಮತ್ತು ಸಲಹೆ ಪಡೆಯುತ್ತಾರೆ.

ಪವಿತ್ರಾತ್ಮನು ಸ್ವತಃ ಬದಲಾಗಿಲ್ಲ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಆದ್ದರಿಂದ ಪ್ರವಾದನಾ ಅನುಭವಗಳು ಪ್ರವಾದನಾ ಬಲದ ತೋರ್ಪಡಿಸುವಿಕೆಗಳು ಮತ್ತು ಹಳೇ ಒಡಂಬಡಿಕೆ ಅಡಿಯಲ್ಲಿ ಕಾಣಲ್ಪಟ್ಟ ಪ್ರವಾದನೆ ತೋರಿಬರುವಿಕೆಗಳು ಇಂದು ಸಹ ಅನುಭವಿಸಲ್ಪಡಬಹುದು. ಸತ್ಯಕರವಾಗಿ, ಆತ್ಮನ ಅಧಿಕ ಮಹಿಮಾತಿಶಯದ ಸೇವೆಯೊಡನೆ ಅಧಿಕವಾದ ಮಹಿಮೆಯುಳ್ಳ ಒಡಂಬಡಿಕೆಯಲ್ಲಿ ನಾವು ಇರುವುದರಿಂದ ಅಂತಹ ತೋರ್ಪಡಿಸುವಿಕೆಗಳನ್ನು ಮತ್ತು ಇನ್ನೂ ಅದಿಕವಾದುವುಗಳನ್ನು ನೀರಿಕ್ಷಿಸಬಹುದು. (2 ಕೊರಿಂಥದವರಿಗೆ 3:5-11)

ಸತ್ಯವೇದದ ಉದಾಹರಣೆಗಳು: ಹೊಸ ಒಡಂಬಡಿಕೆ

ಅಪೊಲಸ್ತರ ಕೃತ್ಯಗಳು 2 ರಲ್ಲಿನ ಸಭೆಯ ಉಗಮ ಮುಂಚೆ ಹೊಸ ಒಡಂಬಡಿಕೆಯಲ್ಲಿ ಪ್ರವಾದನೆ ಹೇಳಿದ ಪುರುಷ ಮತ್ತು ಸ್ತ್ರೀಯರ ಉದಾಹರಣೆ ಹೊಂದಿದ್ದೇವೆ.

1. ಎಲಿಜಬೇತಳು ಪವಿತ್ರಾತ್ಮದಿಂದ ತುಂಬಿದವಳಾಗಿ ಮರಿಯಳ ಕುರಿತು ಪ್ರವಾದಿಸಿದ್ದಳು. (ಲೂಕ 1:67-80)

2. ಜಕರೀಯನು ಪವಿತ್ರಾತ್ಮದೊಡನೆ ತುಂಬಿಸಲ್ಪಟ್ಟನು ಮತ್ತು ಅವನ ಮಗನಾದ ಸ್ನಾನಿಕನಾದ ಯೋಹಾನನ ಕುರಿತು ಪ್ರವಾದಿಸಿದನು. (ಲೂಕ 1:67-80)

3. ಸಿಮೆಯೋನನು ಮಗುವಾದ ಯೇಸುವಿನ ಮೇಲೆ ಮತ್ತು ಮರಿಯಳ ಮೇಲೆ ಪ್ರವಾದಿಸಿದನು. (ಲೂಕ 2:25-35)

4. ಅನ್ನಳೆಂಬ ಪ್ರವಾದಿಯು ಸಿಮೆಯೋನನಂತೆ ಪ್ರವಾದಿಸಿದ್ದಳು. ಮತ್ತು "ಯೆರೂಸಲೇಮಿನಲ್ಲಿ ವಿಮೋಚನೆಯನ್ನು ಎದುರು ನೋಡುತ್ತಿದ್ದವರಿಗೆ ಮಾತಾನಾಡಿದಳು" . (ಲೂಕ 2:36-38)

5. ಸ್ನಾನಿಕನಾದ ಯೋಹಾನನು ಎತ್ತರದ ಪ್ರವಾದಿ ಎಂಬುದಾಗಿ ಕರೆಯಲ್ಪಟ್ಟಿದ್ದಾನೆ. (ಲೂಕ 1:76). ಮತ್ತು ಯೇಸುವಿನಿಂದ ಹಳೆ ಒಡಂಬಡಿಕೆ ಪ್ರವಾದಿಗಳಲ್ಲಿ ಮಹೋನ್ನತನಾದವನು (ಲೂಕ 7:26-28) ಅವನು ಎಲೀಯ ಬಲ ಮತ್ತು ಆತ್ಮದಲ್ಲಿ ಬಂದನು, ಪಶ್ಚಾತ್ತಾಪದ ಒಂದು ಸಂದೇಶವನ್ನು ಸಾರಿದನು, ದೇವರ ರಾಜ್ಯವನ್ನು ಘೋಷಿಸಿದನು. ಮೆಸ್ಸೀಯನಿಗಾಗಿ ಮಾರ್ಗವನ್ನು ಸಿದ್ದ ಮಾಡಿದನು ಮತ್ತು ಯೇಸುವನ್ನು ಯಜ್ಞದ ಕುರಿಯಾಗಿ ತೋರಿಸಿಕೊಟ್ಟನು.

6. ಪ್ರವಾದಿಯಾದ ಮೋಶೆಯು ಮಾತನಾಡಿದ್ದಂತಹ ಪ್ರವಾದಿಯು ಸ್ವತಃ ಕರ್ತನಾದ ಯೇಸುವಾಗಿದ್ದಾನೆ. ಜನರು ಆತನನ್ನು ಹೀಗೆ ಗುರುತಿಸಿದ್ದಾರೆ "ನಜರೇತಿನವಾದ ಯೇಸುವಿನ ಸಂಗತಿಗಳೇ ಆತನು ದೇವರ ಮುಂದೆ ಮತ್ತು ಮನುಷ್ಯರ ಮುಂದೆ ಕೃತ್ಯದಲ್ಲಿಯು ಮಾತಿನಲ್ಲಿಯೂ ಸಮರ್ಥನಾದ ಪ್ರವಾದಿಯಾಗಿದ್ದನು" . (ಲೂಕ 24:19).

ಒಬ್ಬ ಪ್ರವಾದಿಯಂತೆ, ಕರ್ತನಾದ ಯೇಸು ತಂದೆಯು ಮಾತನಾಡಿದ್ದನು ಕೇಳಿದನು,ತಂದೆಯ ಕ್ರಿಯೆಗಳನ್ನು ನೋಡಿದನು ಮತ್ತು ತಂದೆಗನುಸಾರವಾಗಿ ಕಾರ್ಯ ಮಾಡಿದನು. ಆತನ ಜನರ ಆಲೋಚನೆಗಳನ್ನು ಗ್ರಹಿಸಿಕೊಂಡಿದ್ದನು. ಆತನು ವ್ಯಕ್ತಿಗಳಿಗೆ ದೇವರ ಉದ್ದೇಶಗಳನ್ನು ಪ್ರಕಟಿಸಿದನು. ಪವಿತ್ರಾತ್ಮನ ಬರುವಿಕೆಯನ್ನು ಮುಂಚೆಯೇ ಹೇಳಿದ್ದನು ಮತ್ತು ಕರ್ತನ ದಿನದ ಮುಂಚೆ ಕೊನೆ ಸಮಯದ ಘಟನೆಗಳ ಕುರಿತು ಹೇಳಿದ್ದನು. ಧರ್ಮಗ್ರಂಥವನ್ನು ತೆರೆದನು ಇನ್ನು ಅಧಿಕವಾದವುಗಳು ಆತನ ಸ್ವರ್ಗಾರೋಹಣದ ನಂತರ ಆತನ ಸಭೆಗೆ ಆತನ ವರಗಳನ್ನು, ಪ್ರವಾದನೆಯ ವರವನ್ನು ಸಹ ಒಳಗೊಂಡು ವಿತರಿಸಿದನು.

ಆಧಿಸಭೆ

ಅಪೊಸ್ತಲರ ಕೃತ್ಯಗಳು ಮತ್ತು ಪತ್ರಿಕೆಗಳ ಪುಸ್ತಕದ ಮೂಲಕವಾಗಿ ದಾಖಲಿಸಲ್ಪಟ್ಟಂತೆ ಪ್ರವಾದನೆ ಕಾರ್ಯ ಚಟುವಟಿಕೆಗಳನ್ನು ಆಧಿಸಭೆಯಲ್ಲಿ ನೋಡುತ್ತೇವೆ.

1. ಪಂಚಾಶತ್ತಮ ದಿನವು ದೇವರ ಕೆಲಸ ಮಾಡುವ ಹೊಸ ಯುಗವನ್ನು ಪ್ರಾರಂಭಿಸಿತು, ಅಲ್ಲಿ ಪ್ರವಾದನೆ ಹೇಳಲು ಇತರೆ ಸಂಗತಿಗಳ ಮಧ್ಯದಲ್ಲಿ ಅವರಿಗೆ ಅಧಿಕಾರ ನೀಡುವ ಆತ್ಮನು ಎಲ್ಲಾ ಜನರ ಮೇಲೆ ಸುರಿಸಲ್ಪಟ್ಟಿತು. “ಕಡೇ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು. ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರ ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು. ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು. ಇದಲ್ಲದೆ ಆ ದಿನಗಳಲ್ಲಿ ನನ್ನ ದಾಸದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು. ಅವರು ಪ್ರವಾದಿಸುವರು” (ಅಪೊಸ್ತಲರ ಕೃತ್ಯಗಳು 2:17-18)

2. 12 ಅಪೊಸ್ತಲರು, ಪ್ರವಾದನಾ ಮತ್ತು ಅಪೊಸ್ತಲತ್ವಗಳೆರಡರಲ್ಲೂ ಇದ್ದರು. ಅವರಲ್ಲಿ ಕೆಲವರು , ಅಪೊಸ್ತಲನಾದ ಪೌಲನೊಟ್ಟಿಗೆ ಪ್ರಕಟನೆ ತರುತ್ತಿದ್ದರು ಮತ್ತು ಸಭೆಯನ್ನು ಸ್ಥಾಪಿಸುವುದಕ್ಕಾಗಿ ಧರ್ಮಶಾಸ್ತ್ರದ ವಚನಗಳನ್ನು ಬರೆದರು. “ಅಪೊಸ್ತಲರೂ ಪ್ರವಾದಿಗಳೂ ಎಂಬ ಅಸ್ತಿವಾರದ ಮೇಲೆ ನೀವು ಮಂದಿರದೋ ಪಾದಿಯಲ್ಲಿ ಕಟ್ಟಲ್ಪಟ್ಟಿದ್ದೀರಿ” . (ಎಫೆಸದವರಿಗೆ 2:20).

ಆ ಮರ್ಮವು ಈ ಕಾಲದಲ್ಲಿ ದೇವರ ಪರಿಶುದ್ಧ ಅಪೊಸ್ತಲರಿಗೂ ಪ್ರವಾದಿಗಳಿಗೂ ಪವಿತ್ರಾತ್ಮನಿಂದ ತಿಳಿಸಲ್ಪಟ್ಟಂತೆ ಬೇರೆ ಕಾಲಗಳಲ್ಲಿದ್ದ ಜನರಿಗೆ ತಿಳಿಸಲ್ಪಡಲಿಲ್ಲ” . (ಎಫೆಸದವರಿಗೆ 3:5).

3. ಯೆರೂಸಲೇಮಿನಲ್ಲಿನ ಸಭೆಯು 12 ಅಪೊಸ್ತಲರು/ಪ್ರವಾದಿಗಳ ಜೊತೆಗೆ ಹೆಚ್ಚುವರಿಯಾಗಿ ಇತರೆ ಪ್ರವಾದಿಗಳು ಎಬ್ಬಿಸಲ್ಪಟ್ಟಿದ್ದು ಮತ್ತು ಪೋಷಿಸಲ್ಪಟ್ಟದ್ದನ್ನು ಕಂಡಿತ್ತು. ಅಗಬನು, ಯೂದನು, ಸೀಲನು ಯೆರೂಸಲೇಮಿನಲ್ಲಿನ ಪ್ರವಾದಿಗಳಲ್ಲಿದ್ದರು. ಇದರ ದಾಖಲೆಯನ್ನು ನಾವು ಹೊಂದಿದ್ದೇವೆ. “ಆ ಕಾಲದಲ್ಲಿ ಪ್ರವಾದಿಗಳಾಗಿದ್ದ ಕೆಲವರು ಯೆರೂಸಲೇಮಿನಿಂದ ಅಂತಿಯೋಕ್ಯಕ್ಕೆ ಬಂದರು. ಅವರಲ್ಲಿ ಅಗಬನೆಂಬವನೊಬ್ಬನು ಎದ್ದು ಲೋಕಕ್ಕೆಲ್ಲಾ ದೊಡ್ಡ ಕ್ಷಾಮ ಬರುವದು ಎಂದು ಪವಿತ್ರಾತ್ಮ ಪ್ರೇರಣೆಯಿಂದ ಸೂಚಿಸಿದನು. ಅದು ಕ್ಲೌದ ಚಕ್ರವರ್ತಿಯ ಕಾಲದಲ್ಲಿ ಉಂಟಾಯಿತು. (ಅಪೊಸ್ತಲರ ಕೃತ್ಯಗಳು 11:27-28 ಅಗಬನು ಆನಂತರ ಪೌಲನಿಗೂ ಪ್ರವಾದಿಸಿದ್ದನ್ನು ಅಪೊಸ್ತಲರ ಕೃತ್ಯಗಳು 21:10 ನೋಡಿರಿ). ಯೂದನು ಮತ್ತು ಸೀಲರು ಯೆರೂಸಲೇಮಿನಲ್ಲಿ ಸಭೆಯ ಭಾಗವಾಗಿದ್ದರು ಮತ್ತು ಅವರು ಪ್ರವಾದಿಗಳೆಂದು ಗುರ್ತಿಸಲ್ಪಟ್ಟರು “ಯೂದನೂ ಸೀಲನೂ ತಾವೇ ಪ್ರವಾದಿಗಳಾಗಿದ್ದದರಿಂದ ಸಹೋದರರನ್ನು ಅನೇಕ ಮಾತುಗಳಿಂದ ಪ್ರಬೋಧಿಸಿ ದೃಢಪಡಿಸಿದರು” (ಅಪೊಸ್ತಲರ ಕೃತ್ಯಗಳು 15:32).

4. ಅಂತಿಯೋಕ್ಯದಲ್ಲಿನ ಸಭೆಯಲ್ಲಿ ಅಲ್ಲಿನ ನಾಯಕತ್ವ ತಂಡದ ಭಾಗವಾಗಿ ಅವರ ಮಧ್ಯದಲ್ಲಿ ಪ್ರವಾದಿಗಳು ಎಬ್ಬಿಸಲ್ಪಟ್ಟಿದ್ದರು “ಅಂತಿಯೋಕ್ಯದಲ್ಲಿದ್ದ ಸಭೆಯೊಳಗೆ ಪ್ರವಾದಿಗಳೂ ಬೋಧಕರೂ ಇದ್ದರು. ಯಾರಾರಂದರೆ ಬಾರ್ನಬ, ನೀಗರನೆಂಬ ಸಿಮೆಯೋನ, ಕುರೇನ್ಯದ ಲೂಕ್ಯ, ಉಪರಾಜನಾದ ಹೆರೋದನ ಸಾಕುತಮ್ಮನಾದ ಮೆನಹೇನ, ಸೌಲ ಇವರೇ” .(ಅಪೊಸ್ತಲರ ಕೃತ್ಯಗಳು 13:1).

5. ಸ್ಥಳೀಯ ಸಭೆಗಳಲ್ಲಿನ ವಿಶ್ವಾಸಿಗಳು ಪ್ರವಾದಿಸಲು ಪ್ರೋತ್ಸಾಹಿಸಲ್ಪಟ್ಟಿದ್ದಾರೆ. ಇದು ಪೌಲನು ಕೊರಿಂಥದವರಿಗೆ ಬರೆದ ಪತ್ರಿಕೆಯಿಂದ ಅರ್ಥಮಾಡಿಕೊಳ್ಳಬಹುದು. (1 ಕೊರಿಂಥವರಿಗೆ 12:14). ಎಫೆಸದಲ್ಲಿನ ವಿಶ್ವಾಸಿಗಳು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಅವರು ಪ್ರವಾದಿಸಿದ್ದರು ಎಂಬುದಾಗಿ ದಾಖಾಲಿಸಲ್ಪಟ್ಟಿದೆ. “ಪೌಲನು ಅವರ ಮೇಲೆ ಕೈಗಳನ್ನಿಡಲು ಪವಿತ್ರಾತ್ಮ ವರವು ಅವರ ಮೇಲೆ ಬಂತು. ಅವರು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು” .(ಅಪೊಸ್ತಲರ ಕೃತ್ಯಗಳು 19:6). ನಮಗೆ ಅವಶ್ಯಕವಾಗಿ ದಾಖಲಿಸದಿದ್ದರೂ ಇದು ಹಲವಾರು ಇತರೆ ಸ್ಥಳಗಳಲ್ಲಿ ಸಂಭವಿಸಿರಬಹುದು ಎಂದು ಭಾವಿಸುವುದು ಸುರಕ್ಷಿತವಾಗಿದೆ.

6. ಪುರುಷರು ಮತ್ತು ಸ್ತ್ರೀಯರು ಇಬ್ಬರು ಪ್ರಾರ್ಥಿಸಿದರು ಮತ್ತು ಪ್ರವಾದಿಸಿದರು. ಕೊರಿಂಥ ಸಭೆಯಲ್ಲಿ ನಾವು ಇದನ್ನು ನೋಡುತ್ತೇವೆ. (1 ಕೊರಿಂಥವರಿಗೆ 11:4-5). ಸ್ತ್ರೀಯರು ಸ್ಥಳೀಯ ಸಭೆಯಲ್ಲಿ ಪ್ರವಾದಿಸುವುದು ತಪ್ಪಾಗಿದ್ದರೆ, ಪೌಲನು ಇದು ಆರಂಭವಾಗಲೂ ಅನುಮತಿ ನೀಡುತ್ತಿರಲಿಲ್ಲ. ಯೆರೂಸಲೇಮಿನ ಸಭೆಯಿಂದ ಸುವಾರ್ತಿಕನಾದ ಫಿಲಿಪ್ಪನು, ಕೈಸರೈಯದಲ್ಲಿ ನೆಲೆಸಿದ್ದನ್ನು ಮತ್ತು ಪ್ರವಾದಿಸುವ ನಾಲ್ಕು ಮಂದಿ ಹೆಣ್ಣು ಮಕ್ಕಳನ್ನು ಹೊಂದಿದ್ದನು. “ಅವನಿಗೆ ಮದುವೆಯಾಗದ ನಾಲ್ಕು ಮಂದಿ ಹೆಣ್ಣು ಮಕ್ಕಳಿದ್ದರು ಅವರು ಪ್ರವಾದಿಸುವವರಾಗಿದ್ದರು” (ಅಪೊಸ್ತಲರ ಕೃತ್ಯಗಳು 21:9)

7. ಆತನ ಸಭೆಗೆ ಕ್ರಿಸ್ತನ ವರಗಳು ಸಭೆಯನ್ನು ಕಟ್ಟುವುದಕ್ಕಾಗಿ ಪ್ರವಾದನೆ ವರವನ್ನು ಒಳಗೊಂಡು ಕೊಡಲ್ಪಟ್ಟಿವೆ. ಸಬೆಯಲ್ಲಿ ಈ ವರಗಳ ಕಾರ್ಯಚರನೆಯನ್ನು ಹಿಂತೆಗೆದುಕೊಳ್ಳಲಾಗುವುದಿಲ್ಲ. "ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು" (ಎಫೆಸದವರಿಗೆ 4:11 1 ಕೊರಿಂಥದವರಿಗೆ 12 :28 ಸಹ ನೋಡಿರಿ) ಪ್ರವಾದಿಗಳು ದೇವರ ಜನರು ಪ್ರವಾದಿಗಳಾಗಿರುವಂತೆ ಸಜ್ಜುಗೊಳಿಸುತಾರೆ.

8. ದೇವದೂತರ ದೇವರಿಂದ ಸಂದೇಶಗಳನ್ನು ತರಲು ಉಪಯೋಗಿಸಲ್ಪಟ್ಟಿದ್ದಾರೆ . ಇದನ್ನು ನಾವು ಎರಡು ಒಡಂಬಡಿಕೆಗಳಲ್ಲಿ ನೋಡುತ್ತೇವೆ.

9. ಪ್ರವಾದನೆ ಮತ್ತು ಪವಿತ್ರಾತ್ಮನ ಅತ್ಯದ್ಭುತಕರ ಕಾರ್ಯಗಳು ಮಹಾ ಸಂಕಟಕಾಲದ ಮೂಲಕವಾಗಿ ಇಬ್ಬರು ಸಾಕ್ಷಿಗಳು (ಹಳೇ ಒಡಂಬಡಿಕೆ ಪ್ರವಾದಿಗಳು, ಹೆಚ್ಚು ಸಾಧ್ಯತೆಯಲ್ಲಿ ಹನೋಕ ಮತ್ತು ಎಲೀಯನು) ಪ್ರವಾದಿಸುವರು ಮತ್ತು ಬಲವಾದ ಸೂಚಕಕಾರ್ಯಗಳು ಮತ್ತು ಅದ್ಭುತಕಾರ್ಯಗಳನ್ನು ಮಾಡುವರು (ಪ್ರಕಟನೆ 11:3-6)

ಇಂದಿನ ಸಭೆ

ಎಲ್ಲಾ ಮನುಷ್ಯರು, ಗಂಡಸರೂ ಮತ್ತು ಹೆಂಗಸರೂ, ಎಲ್ಲಾ ವಯಸ್ಸಿನವರು ದರ್ಶನಗಳನ್ನು, ಕನಸ್ಸುಗಳನ್ನು ಮತ್ತು ಪ್ರವಾದನೆಗಯನ್ನು ಹೇಳಲು ಆತನ ಆತ್ಮನನ್ನು ದೇವರು ಸುರಿಸುವಂಹ ಕಡೇ ದಿವಸಗಳಲ್ಲಿ ನಾವು ಜೀವಿಸುತ್ತಿದ್ದೇವೆ. (ಅಪೋಸ್ತಲರ ಕೃತ್ಯಗಳು 2 : 17-18) ಆತ್ಮನ ಪ್ರವಾದನೆಯ ಕಾರ್ಯವು ಸಭೆಯ ಮೂಲಕವಾಗಿ ನಿರಂತರವಾಗಿ ವ್ಯಕ್ತಪಡಿಸಲ್ಪಡುತ್ತೆವೆ : (ಅ) ಎಲ್ಲಾ ವಿಶ್ವಾಸಿಗಳು ಒಳೆ ಹರಿಯುವಂತಹ ಪ್ರವಾದನೆಯ ವರದ ಮೂಲಕವಾಗಿ (1 ಕೋರಿಂಥದವರಿಗೆ 12: 7-11) (ಆ) ಪ್ರವಾದಿಸುವಂತಹ ವಿಶ್ವಾಸಿಗಳು ಸದಸ್ಯತ್ವದ ಕಾರ್ಯವೈಬರಿಯಂತೆ (ರೋಮಾಪುರದವರಿಗೆ 12 : 6) ಮತ್ತು (ಇ) ಪ್ರವಾದನೆಯ ಸೇವಾ ವರ (ಎಫೆಸದವರಿಗೆ 4 :11) ನಾವು ವಚನಭಾಗದಲ್ಲಿ ನೋಡಿದಂತೆ ಇಂದಿನ ಸಭೆಯು ಪ್ರವಾದನೆಯ ಎಲ್ಲಾ ತೋರ್ಪಡಿಸುವಿಕೆಯಲ್ಲಿ ನಡೆಯಬಹುದು ಮತ್ತು ಇನ್ನೂ ದೊಡ್ಡದಾದ ಅಭಿವ್ಯಕ್ತತತೆಗಳಲ್ಲಿ ನಡೆಯುಬಹುದು ಆಲಯದ ಮುಂದಿನ ವೈಭವವು ಹಿಂದಿನದಕ್ಕಿಂತ ದೂಡ್ಡದಾಗಿರುತ್ತದೆ.

ಈ ಒಂದು ಅಧ್ಯಾಯದಲ್ಲಿ ಪ್ರವಾದನೆ ವರದ ತೋರ್ಪಡಿಸುವಿಕೆಯ ಮೇಲೆ ಮೂಲ ಮಾಹಿತಿಗಳನ್ನು ಒದಗಿಸುತ್ತೇವೆ. ಪ್ರವಾದನೆಯ ಎಲಾ ಮುಖ್ಯಾಂಶಗಳನ್ನು ನಾವು ನೋಡುತ್ತಿಲ್ಲ ಪ್ರವಾದನೆಯ ಕುರಿತು ಹೆಚ್ಚಿನ ಮಾಹಿತಿಗಾಗಿ "ಪ್ರವಾದನೆ ಅರ್ಥಮಾಡಿಕೋಳ್ಳುವುದು" ಎಂಬ ಏ. ಪಿ.ಸಿ.ಯು ಉಚಿತ ಪುಸ್ತಕ ನೋಡಿರಿ ಉಚಿತ ಡೌನಲೋಡನ್ನು apcwo.org/ publications ನಿಂದ ಪಡೆಯಿರಿ.

ಕಾರ್ಯಾಚರಣೆಗಳು

ಆತ್ಮನಿಂದ ತುಂಬಿಸಲ್ಪಟ್ಟ (ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದ) ಎಲ್ಲಾ ವಿಶ್ವಾಸಿಗಳು ಪ್ರವಾದಿಸಬಹುದು ಸತ್ಯಕರವಾಗಿ, ನಾವೆಲ್ಲರೂ ಆಸಕ್ತಿಯಿಂದ ಪ್ರವಾದಿಸುವುದನ್ನು ಅಪೇಕ್ಷಿಸಬೇಕು.

1 ಕೊರಿಂಥದವರಿಗೆ 14: 1, 3, 5, 31, 39
1 ಪ್ರೀತಿಯನ್ನು ಅಭ್ಯಾಸಮಾಡಿಕೊಳ್ಳಿರಿ ಆದರೂ ಪವಿತ್ರಾತ್ಮನಿಂದುಂಟಾಗುವ ವರಗಳನ್ನು ಅವುಗಳೊಳಗೆ ವಿಶೇಷವಾಗಿ ಪ್ರವಾದಿಸುವ ವರವನ್ನೇ ಆಸಕ್ತಿಯಿಂದ ಅಪೇಕ್ಷಿಸಿರಿ
3 ಪ್ರವಾದಿಸುವವರಾದರೋ ಮನುಷ್ಯರ ಸಂಗಡ ಮಾತಾಡುವವನಾಗಿ ಅವರಿಗೆ ಭಕ್ತಿವೃದ್ಧಿಯನ್ನೂ ಪ್ರೋತ್ಸಾಹವನ್ನೂ ಸಂತೈಸುವಿಕೆಯನ್ನೂ ಉಂಟುಮಾಡುತ್ತಾನೆ.
5 ನೀವೆಲ್ಲರೂ ವಾಣಿಗಳನ್ನಾಡಬೇಕೆಂದು ನಾನು ಅಪೇಕ್ಷಿಸಿದರೂ ಅದಕ್ಕಿಂತಲೂ ನೀವು ಪ್ರವಾದಿಸಬೇಕೆಂಬದೇ ನನ್ನಿಷ್ಟ. ವಾಣಿಗಳನ್ನಾಡುವವನು ಸಭೆಗೆ ಭಕ್ತಿವೃದ್ಧಿಯಾಗುವದಕ್ಕಾಗಿ ಆ ವಾಣಿಯ ಅರ್ಥವನ್ನು ಹೇಳದೆ ಹೋದರೆ ಅವನಿಗಿಂತ ಪ್ರವಾದಿಸುವವನು ಶ್ರೇಷ್ಠ.
31 ನೀವೆಲ್ಲರು ಒಬ್ಬೊಬ್ಬರಾಗಿ ಪ್ರವಾದಿಸುವುದಕ್ಕೆ ಅಡ್ಡಿಯಿಲ್ಲ ಹೀಗೆ ಮಾಡಿದರೆ ಎಲ್ಲರೂ ಕಲಿತುಕೊಳ್ಳುವರು.ಎಲ್ಲರೂ ಎಚ್ಚರಿಕೆ ಹೊಂದುವರು.
39 ಅದಕಾರಣ ನನ್ನ ಸಹೋದರರೇ ಪ್ರವಾದಿಸುವುದಕ್ಕೆ ಆಸಕ್ತಿಯಿಂದ ಅಪೇಕ್ಷಿಸಿರಿ ಮತ್ತು ವಾಣಿಯನ್ನಾಡುವುದಕ್ಕೆ ಬೇಡವೆನ್ನಬಾರದು.

1ಕೊರಿಂಥದವರಿಗೆ 14:1ರ ಪ್ರಕಾರವಾಗಿ ನಾವೆಲ್ಲರು ಪ್ರೀತಿಯನ್ನು ಅಭ್ಯಾಸ ಮಾಡಿಕೊಳ್ಳಬೇಕು. ಉಳಿದ ವಚನವೆಲ್ಲವೂ ಸಹ ನಮ್ಮೆಲ್ಲರಿಗೂ ಅನ್ವಯಿಸುತ್ತದೆ. ನಾವೆಲ್ಲರೂ ಆತ್ಮೀಕ ವರಗಳನ್ನು ಅಪೇಕ್ಷಿಸಬೇಕು ಮತ್ತು ವಿಶೇಷವಾಗಿ ಪ್ರವಾದಿಸುವ ವರವನ್ನೇ ಅಪೇಕ್ಷಿಸಬೇಕು. ಎಲ್ಲಾ ವಿಶ್ವಾಸಿಗಳು ಪ್ರವಾದಿಸಬಹುದು ಆದ್ದರಿಂದ ಎಲ್ಲರೂ ಕಲಿಯಬಹುದು ಮತ್ತು ಪ್ರೋತ್ಸಾಹ ಹೊಂದಬಹುದು (ವಚನ 31). ಅಪೂಸ್ತಲನಾದ ಪೌಲನು ಎಲ್ಲಾ ವಿಶ್ವಾಸಿಗಳು ಆಸಕ್ತಿಯಿಂದ ಪ್ರವಾದಿಸುವ ವರವನ್ನೇ ಅಪೇಕ್ಷಿಸಿರಿ (ಕಾತುರದಿಂದ ಹುಡುಕಿ) ಎಂಬುದಾಗಿ ಪ್ರೋತ್ಸಾಹಿಸುವುದರಿಂದ ಆತ್ಮನ ವರಗಳ ಮೇಲೆ ಸಲಹೆಯನ್ನು ನೀಡಿ ಮುಕ್ತಾಯ ಮಾಡಿದ್ದಾನೆ. (ವಚನ 39).

ಪ್ರವಾದನೆ ವರವು ಆಶೀರ್ವದಿಸಲು ಪ್ರೇರಿತ ವಾಕ್ಯತರುತ್ತದೆ ಮತ್ತು ಬಲ, ಪ್ರೋತ್ಸಾಹ ಮತ್ತು ಸಂತೈಸುವಿಕೆ ತರುವುದರಿಂದ ಜನರುಗಳ ಜೀವಿತವನ್ನು ಉತ್ಕೃಷ್ಟಗೊಳಿಸುತ್ತದೆ. ತುಂಬಾ ಆಗಾಗ್ಗೆ ಈ ವರಗಳು ಇತರೆ ವರಗಳೊಡನೆ “ವರ ಸಮೂಹ” (ಉದಾಹರಣೆಗೆ ಜ್ಞಾನದ ವಾಕ್ಯ, ವಿವೇಕದ ವಾಕ್ಯ ಮುಂತಾದವು) ಜೊತೆಯಾಗಿ ಹರಿಯುತ್ತದೆ. ನಾವು ಪ್ರವಾದನೆಗಳನ್ನು ತಿರಸ್ಕರಿಸಬಾರದು. ಎಲ್ಲಾ ವಿಷಯಗಳನ್ನು ಪರೀಕ್ಷಿಸಿರಿ ಮತ್ತು ಒಳ್ಳೆಯದನ್ನು ಹಿಡಿದುಕೊಂಡಿರುತ್ತೇವೆ. “ಪವಿತ್ರಾತ್ಮನನ್ನು ನಂದಿಸಬೇಡಿರಿ. ಪ್ರವಾದನೆಗಳನ್ನು ಹೀನೈಸಬೇಡಿರಿ. ಆದರೆ ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ” (1 ಥೆಸಲೋನಿಕದವರಿಗೆ 5:19-21).

ಪ್ರವಾದನೆಯು ಸಹ ಸದಸ್ಯತ್ವ ವರಗಳಲ್ಲಿ ಒಂದಾಗಿ ಪಟ್ಟಿ ಮಾಡಲಾಗಿದೆ. ಇದು ಅಂಗದಲ್ಲಿ ವಿಶ್ವಾಸಿಗಳ ಕಾರ್ಯದ ಜೊತೆಯಲ್ಲಿರುವ ಪ್ರವಾದನೆಯ ವರವಾಗಿದೆ ನಮ್ಮ ನಂಬಿಕೆಗೆ ಅನುಗುಣವಾಗಿ ನಾವು ಪ್ರವಾದಿಸುತ್ತೇವೆ ಎಂದು ನಾವು ಇಲ್ಲಿ ಕಲಿಯುತ್ತೇವೆ “ದೇವರು ನಮಗೆ ಕೃಪೆಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ. ಹೊಂದದಿರದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸ ವರಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ” (ರೋಮಾಪುರದವರಿಗೆ 12:6).

ಪ್ರವಾದನೆ ವರವು ಪೂರೈಸಬಹುದಾದ ಕೆಲವು ಉಪಯೋಗಗಳ ಕಿರುಪಟ್ಟಿ ಇಲ್ಲಿದೆ:

1. ಯೇಸುವು ಏನು ಹೇಳುತ್ತಿದ್ದಾನೆಂದು ಪ್ರಕಟಪಡಿಸಲು ಮತ್ತು ಆತನಿಗೆ ಸೂಚಿಸುವುದು ಅಂದರೆ ಆತನಿಗೆ ಮತ್ತು ಆತನನ್ನು ಪರೀಕ್ಷಿಸುವುದಾಗಿದೆ. ಯೇಸುವಿನ ಸಾಕ್ಷಿಯು – ಯೇಸುವು ಏನು ಹೇಳುತ್ತಾನೆ ಮತ್ತು ಮಾಡುತ್ತಾನೆ, ಯೇಸುವು ಪ್ರಕಟಿಸುವಂತಹ ಸತ್ಯ , ಮತ್ತು ಆತನನ್ನು ತೋರಿಸುವಂತಹ ಸತ್ಯ ಎಲ್ಲಾ ಪ್ರವಾದನೆಗಾಗಿ ಪ್ರೇರಣೆಯಾಗಿದೆ. “ಆಗ ನಾನು ಅವನಿಗೆ ನಮಸ್ಕಾರ ಮಾಡಬೇಕೆಂದು ಅವನ ಪಾದಗಳ ಮುಂದೆ ಬೀಳಲು ಅವನು ಮಾಡಬೇಡ ನೋಡು ನಾನು ನಿನಗೂ ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವ ನಿನ್ನ ಸಹೋದರರಿಗೂ ಜೊತೆಯ ದಾಸನಾಗಿದ್ದೇನೆ. ದೇವರಿಗೇ ನಮಸ್ಕಾರ ಮಾಡು ಅಂದನು ಯೇಸುವಿನ ವಿಷಯವಾದ ಸಾಕ್ಷಿಯು ಪ್ರವಾದನೆಯ ಆತ್ಮವೇ” (ಪ್ರಕಟನೆ 19:10) “ಸಾಕ್ಷಿ” ಎಂಬ ಪದವು ಗ್ರೀಕನಲ್ಲಿ “ಮಾರ್ಟೊರಿಯಾ” ಪುರಾವೆಗಳು ವರದಿ, ಬಬ್ಬ ಸಾಕ್ಷಿಯಿಂದ ಪ್ರಸ್ತುತಪಡಿಸಲಾದ ಸತ್ಯ ಎಂಬುದಾಗಿದೆ. ಪ್ರಕಟನೆ 1:2 ಮತ್ತು 9ರ ಪ್ರಕಾರವಾಗಿ “ಯೇಸುವಿನ ವಿಷಯವಾದ ಸಾಕ್ಷಿ “ಆತನಿಗೆ ನೇಡಿದ ಸಾಕ್ಷಿಯಾಗಿದೆ.

2. ಬಲ, ಪ್ರೋತ್ಸಾಹ ಮತ್ತು ಸಂತೈಸುವಿಕೆ ತರಲು “ಪ್ರವಾದಿಸುವವನಾದರೋ ಮನುಷ್ಯರ ಸಂಗಡ ಮಾತಾಡುವವನಾಗಿ ಅವರಿಗೆ ಭಕ್ತಿವೃದ್ಧಿಯನ್ನೂ ಪ್ರೋತ್ಸಾಹವನ್ನೂ

ಸಂತೈಸುವಿಕೆಯನ್ನೂ ಉಂಟು ಮಾಡುತ್ತಾನೆ" (1 ಕೊರಿಂಥದವರಿಗೆ 14:3) ನಾವು ವ್ಯಕ್ತಿಗತವಾಗಿ ಮತ್ತು ಸಭೆಗೆ ಪ್ರವಾದನೆ ಮೂಲಕವಾಗಿ ಭಕ್ತಿವೃದ್ಧಿ ಮಾಡುತ್ತೇವೆ (1 ಕೊರಿಂಥದವರಿಗೆ 14:4-6)

3. ನಿರ್ದಿಷ್ಟ ಕ್ಷೇತ್ರದಲ್ಲಿ ಯಾರನ್ನಾದರೂ ಕಾರ್ಯರೂಪಕ್ಕೆ ತರಲು ಪ್ರೇರೆಪಿಸಲು." ಇವರು ಕರ್ತನನ್ನು ಸೇವೆಸುತ್ತಾ ಉಪವಾಸ ಮಾಡುತ್ತಾ ಇದ್ದಾಗ ಪವಿತ್ರಾತ್ಮನು – ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ" (ಅಪೊಸ್ತಲರ ಕೃತ್ಯಗಳು 13:2).

4. ಒಬ್ಬ ವ್ಯಕ್ತಿಯಲ್ಲಿ ದೇವರು ಇಟ್ಟಿರುವ ಸಾಮರ್ಥ್ಯವನ್ನು ಪ್ರಕಟಿಸಲು. "ಅವನನ್ನು ಯೇಸುವಿನ ಬಳಿಗೆ ಕರಕೊಂಡು ಬಂದನು (ಮೆಸ್ಸೀಯನು ಅಮದರೆ ಕ್ರಿಸ್ತನು) ಯೇಸು ಅವನನ್ನು ನೋಡಿ ನೀನು ಯೋಹಾನನ ಮಗನಾದ ಸೀಮೋನನು ಇನ್ನು ಮೇಲೆ ಕೇಫನೆನಿಸಿಕೊಳ್ಳುವಿ ಅಂದನು (ಕೇಫನಂದರೆ ಪೇತ್ರ). (ಯೋಹಾನ 1:42).

5. ದೇವರು ಯಾರೊಂದಿಗಾದರೂ ಮಾತನಾಡುತ್ತಿದ್ದಾನೆ ಎಂಬುದರ ದೃಢೀಕರಣವನ್ನು ತರಲು.

6. ನಿದೀಷ್ಟ ವಿಷಯ ಅಥವಾ ವ್ಯಕ್ತಿಗಾಗಿ ಪ್ರಾರ್ಥನೆಯನ್ನು ಪ್ರೇರೇಪಿಸುವುದು.

7. ಕ್ರಿಯೆಯ ಹಾದಿಯಲ್ಲಿ ಮಾರ್ಗದರ್ಶನ ಮತ್ತು ನಿರ್ದೇಶನವನ್ನು ತರಲು. "ಪೇತ್ರನು ಆ ದರ್ಶನದ ವಿಷಯದಲ್ಲಿ ಆಲೋಚನೆ ಮಾಡುತ್ತಿರಲು ದೇವರಾತ್ಮನು ಅವನಿಗೆ ಅಗೋ ಇಬ್ಬರು ಮನುಷ್ಯರು ನಿನ್ನನ್ನು ವಿಚಾರಿಸುತ್ತಾರೆ. ನೀನೆದ್ದು ಕೆಳಗಿಳಿದು ಎನು ಸಂಶಯ ಪಡದೆ ಅವರ ಜೊತೆಯಲ್ಲಿ ಹೋಗು, ನಾನೇ ಅವರನ್ನು ಕಳುಹಿಸಿದ್ದೇನೆ ಎಂದು ಹೇಳಿದನು " (ಅಪೊಸ್ತಲರ ಕೃತ್ಯಗಳು 10:19-20).

8. ಒಬ್ಬ ವ್ಯಕ್ತಿಗೆ ಅಥವಾ ಸಮುದಾಯಕ್ಕೆ ತಿದ್ದುಪಡಿಯನ್ನು ತರಲು

9. ಧರ್ಮಗ್ರಂಥಗಳಲ್ಲಿ ನವೀನ ಒಳನೋಟವನ್ನು ತರಲು. " ಆತನು ಅವರಿಗೆ ಎಲಾ ಬುದ್ಧಿಯಿಲ್ಲದವರೇ ಪ್ರವಾದಿಗಳು ಹೇಳಿದ್ದೆಲ್ಲವನ್ನು ನಂಬುವುದರಿಂದ ಮಂದ ಹೃದಯರೇ ಕ್ರಿಸ್ತನು ಇಂಥ ಶ್ರಮಗಳನ್ನು ಅನುಭವಿಸಿ ತನ್ನ ಮಹಾ ಪದವಿಗೆ ಸೇರುವುದು. ಅಗತ್ಯವಾಗಿತ್ತಲ್ಲವೇ ಎಂದು ಹೇಳಿ ಮೋಶೆಯ ಮತ್ತು ಎಲ್ಲಾ ಪ್ರವಾದಿಗಳ ಗ್ರಂಥಗಳು ಮೊದಲುಗೊಂಡು ಸಮಸ್ತ ಗ್ರಂಥಗಳಲ್ಲಿ ತನ್ನ ವಿಷಯವಾಗಿರುವ ಸೂಚನೆಗಳನ್ನು ಅವರಿಗೆ ವಿವರಿಸಿದನು. ಆಗ ಅವರು ಒಬ್ಬರಿಗೊಬ್ಬರು ಆತನು ದಾರಿಯಲ್ಲಿ ನಮ್ಮ ಸಂಗಡ ಮಾತಾಡಿದಾಗಲೂ ಗ್ರಂಥಗಳ ಅರ್ಥವನ್ನು ನಮಗೆ ಬಿಚ್ಚಿ ಹೇಳಿದಾಗಲೂ ನಮ್ಮ ಹೃದಯವು ನಮ್ಮಲ್ಲಿ ಕುದಿಯಿತಲ್ಲವೇ? (ಲೂಕ 24:25-27,32)

"ತರುವಾಯ ಆತನು ನಾನು ಇನ್ನೂ ನಿಮ್ಮ ಸಂಗಡ ಇದ್ದಾಗ ಇದೆಲ್ಲಾ ನಿಮಗೆ ತಿಳಿಸಲಿಲ್ಲವೇ? ನನ್ನ ವಿಷಯವಾಗಿ ಮೋಶೆಯ ಧರ್ಮಶಾಸ್ತ್ರದಲ್ಲಿಯೂ ಪ್ರವದಿಗಳಲ್ಲಿಯೂ ಕೀರ್ತನೆಗಳಲ್ಲಿಯೂ ಬರೆದಿರುವುದೆಲ್ಲಾ ನೆರವೇರುವುದು

ಅಗತ್ಯವೆಂದು ನಿಮಗೆ ಹೇಳಲಿಲ್ಲವೇ ಅಂದನು. ಆ ಮೇಲೆ ಅವರು ಶಾಸ್ತ್ರ ವಚನಗಳನ್ನು ತಿಳುಕೊಳ್ಳುವಂತೆ ಆತನು ಅವರ ಬುದ್ದಿಯನ್ನು ತೆರೆದು" (ಲೂಕ 24:44-45).

10. ಮುಂಬರುವ ಘಟನೆಗಳಿಗೆ (ಅವಕಾಶಗಳು, ಅಪಾಯಗಳು ಮುಂತಾದವು). ವಿಶ್ವಾಸಿಗಳನ್ನು ಎಚ್ಚರಿಸುವುದು ಅದರಿಂದ ಅವರು ಕಾರ್ಯರೂಪಕ್ಕೆ ತರಲು ಸಿದ್ದವಾಗಿರಬಹುದು. "ಆ ಕಾಲದಲ್ಲಿ ಪ್ರವಾದಿಗಳಾಗಿದ್ದ ಕೆಲವರು ಯೆರೂಸಲೇಮಿನಿಂದ ಅಂತಿಯೋಕ್ಯಕ್ಕೆ ಬಂದರು. ಅವರಲ್ಲಿ ಅಗಬನೆಂಬವನೊಬ್ಬನು ಎದ್ದು ಲೋಕಕ್ಕೆಲ್ಲಾ ದೊಡ್ಡ ಕ್ಷಾಮ ಬರುವುದು ಎಂದು ಪವಿತ್ರಾತ್ಮ ಪ್ರೇರಣೆಯಿಂದ ಸೂಚಿಸಿದನು. ಅದು ಕ್ಲೌದ್ಯ ಚಕ್ರವರ್ತಿಯ ಕಾಲದಲ್ಲಿ ಉಂಟಾಯಿತು. ಆಗ ಆ ಶಿಷ್ಯರಲ್ಲಿ ಪ್ರತಿಯೊಬ್ಬರು ಯೂದಾಯ ಸೀಮೆಯಲ್ಲಿ ವಾಸವಾಗಿದ್ದ ಸಹೋದರರಿಗೆ ತಮ್ಮ ತಮ್ಮ ಶಕ್ತ್ಯನುಸಾರ ದ್ರವ್ಯ ಸಹಾಯ ಮಾಡಬೇಕೆಂದು ನಿಶ್ಚಯಿಸಿಕೊಂಡರು. ಹಾಗೆಯೇ ಮಾಡಿ ಅದನ್ನು ಬಾರ್ನಬ ಸೌಲರ ಕೈಯಿಂದ ಸಭೆಯ ಹಿರಿಯರಿಗೆ ಕಳಹಿಸಿದರು" (ಅಪೊಸ್ತಲರ ಕೃತ್ಯಗಳು 11:27-30).

11. ಮುಂದೆ ಬರುವ ಅಪಾಯಗಳ ಬಗ್ಗೆ ಎಚ್ಚರಿಸಲು. "ಇದೆಲ್ಲಾ ನಿಮಗೇ ತಿಳಿದಿದೆ.ಇಗೋ ನಾನು ಈಗ ಆತ್ಮ ನಿರ್ಬಂಧವುಳ್ಳವನಾಗಿ ಯೆರೂಸಲೇಮಿಗೆ ಹೋಗುತ್ತೇನೆ. ಅಲ್ಲಿ ನನಗೆ ಏನು ಸಂಭವಿಸುವದೋ ನಾನರಿಯೆ. ನಿನಗೆ ಬೇಡಿಗಳೂ ಸಂಕಟಗಳೂ ಕಾದುಕೊಂಡಿವೆ ಎಂದು ಪವಿತ್ರಾತ್ಮನು ಎಲ್ಲಾ ಪಟ್ಟಣಗಳಲ್ಲಿಯೂ ನನಗೆ ಖಂಡಿತವಾಗಿ ಹೇಳುತ್ತಾನೆ ."(ಅಪೊಸ್ತಲರ ಕೃತ್ಯಗಳು 20:22-23).

"ಅಲ್ಲಿ ಶಿಷ್ಯರನ್ನು ಹುಡುಕಿ ಕಂಡು ಏಳು ದಿವಸ ನಿಂತೆವು ಅವರು ಅತ್ಮನ ಪ್ರೇರಣೆಯಿಂದ ಪೌಲನಿಗೆ ನೀನು ಯೆರೂಸಲೇಮಿಗೆ ಕಾಲಿಡಬೇಡವೆಂದು ಹೇಳಿದರು" . (ಅಪೊಸ್ತಲರ ಕೃತ್ಯಗಳು 21:4).

"ನಾವು ಅಲ್ಲಿ ಅನೇಕ ದಿವಸಗಳು ಇದ್ದ ಮೇಲೆ ಅಗಬನೆಂಬ ಒಬ್ಬ ಪ್ರವಾದಿಯು ಯೂದಾಯದಿಂದ ನಮ್ಮ ಬಳಿಗೆ ಬಂದು ಪೌಲನ ನಡುಕಟ್ಟನ್ನು ತೆಗೆದು ತನ್ನ ಕೈಕಾಲುಗಳನ್ನು ಕಟ್ಟಿಕೊಂಡು ಈ ನಡುಕಟ್ಟು ಯಾವನದೋ ಆ ಮನುಷ್ಯನನ್ನು ಯೆಹೂದ್ಯರು ಇದೇ ರೀತಿಯಾಗಿ ಯೆರೂಸಲೇಮಿನಲ್ಲಿ ಕಟ್ಟಿ ಅನ್ಯಜನರ ಕೈಗೆ ಒಪ್ಪಿಸಿಕೊಡುವರು ಹೀಗೆ ಪವಿತ್ರಾತ್ಮನು ಹೇಳುತ್ತಾನೆಂಬದಾಗಿ ಹೇಳಿದನು" (ಅಪೊಸ್ತಲರ ಕೃತ್ಯಗಳು 21:10-11).

12. ಜನರು ದೇವರು ಕಡೆಗೆ ಆಕರ್ಷಿತರಾಗುವಂತೆ ರಹಸ್ಯಗಳನ್ನು ಪ್ರಕಟಿಸುವುದು. "ಆದರೆ ನೀವೆಲ್ಲರು ಪ್ರವಾದಿಸುತ್ತಿರಲು ಕ್ರಿಸ್ತ ನಂಬಿಕೆಯಿಲ್ಲದವನಾಗಲಿ ಈ ವರವಿಲ್ಲದವನಾಗಲಿ ಒಳಗೆ ಬಂದರೆ ಅವನು ಎಲ್ಲರ ಮಾತನ್ನು ಕೇಳಿ ತಾನು ಪಾಪಿಯೆಂಬ ಅರುಹನ್ನು ಹೊಂದುವನು ಎಲ್ಲರ ಮಾತಿನಿಂದ ಪರಿಶೋಧಿತನಾಗುವನು.ಅವನ ಹೃದಯದ ರಹಸ್ಯಗಳು ಬೈಲಾಗುವವು. ಮತ್ತು ಅಡ್ಡಬಿದ್ದು ದೇವರನ್ನು ಆರಾಧಿಸಿ ದೇವರನ್ನು ಆರಾಧಿಸಿ ದೇವರು ನಿಜವಾಗಿ ನಿಮ್ಮಲ್ಲಿದ್ದಾನೆಂಬದನ್ನು ಪ್ರಚುರಪಡಿಸುವನು" . (1ಕೊರಿಂಥದವರಿಗೆ 14:24-25)

13. ಒಂದು ಒಳ್ಳೆಯ ಹೋರಾಟದ ಸಂಬಳಕ್ಕಾಗಿ. "ಮಗನಾದ ತಿಮೊಥೆಯನೇ ನಿನ್ನ ವಿಷಯದಲ್ಲಿ ಮುಂಚೆ ಯಂಟಾದ ಪ್ರವಾದನೆಗಳನ್ನು ನಾನು ನೆನಸಿ ನೀನು ಅವುಗಳಿಂದ ಧೈರ್ಯಗೊಂಡು ಕ್ರೈಸ್ತರ ದಿವ್ಯ ಯುದ್ಧವನ್ನು ನಡಿಸಬೇಕೆಂದು ನಿನಗೆ ಆಜ್ಞಾಪನೆ ಮಾಡುತ್ತೇನೆ ". (1 ತಿಮೊಥೆಯನಿಗೆ 1:18).

14. ಜನರನ್ನು ಸೇವೆಗೆ/ಅವರ ಕಾರ್ಯಗಳಿಗೆ ನೇಮಿಸುವುದು ಮತ್ತು ಆತ್ಮನು ನಡೆಸುವಂತ ಆತ್ಮಿಕ ವರಗಳನ್ನು ಪಾಲುಕೊಡುವುದು. " ನಿನ್ನಲ್ಲಿರುವ ವರವನ್ನು ಅಲಕ್ಷ್ಯಮಾಡಬೇಡ ಸಭೆಯ ಹಿರಿಯರು ಪ್ರವಅದನೆಯ ಸಹಿತವಾಗಿ ನಿನ್ನ ಮೇಲೆ ಹಸ್ತಗಳನ್ನಿಟ್ಟಾಗ ಅದು ನಿನಗೆ ಕೊಡಲ್ಪಟ್ಟಿತಲ್ಲಾ" . (1 ತಿಮೊಥೆಯನಿಗೆ 4;14).

15. ದೇವರ ಉದ್ದೇಶಗಳನ್ನು ಘೋಷಿಸುವುದು. "ಆ ಮೇಲೆ ಇನ್ನೂನೀನು ಅನೇಕವಾಗಿರುವ ಪ್ರಜೆ ಜನ ಭಾಷೆ ರಾಕ ಇವರ ವಿಷಯದಲ್ಲಿ ಪ್ರವಾದನೆ ಹೇಳಬೇಕೆಂದು ನನಗೆ ತಿಳಿಸಲ್ಪಟ್ಟಿತು" .(ಪ್ರಕಟಣೆ 10:11).

ಪ್ರವಾದನೆಯು ಹೇಗೆ ಪಡೆದುಕೊಳ್ಳಲಾಗುತ್ತದೆ

ಪವಿತ್ರಾತ್ಮನು ನಮ್ಮ ಯಾವುದೇ ಆತ್ಮದ ಇಂದ್ರಿಯಗಳನ್ನು ಉಪಯೋಗಿಸಿ . ನಮಗೆ ಪ್ರವಾದನೆಯ ವಾಕ್ಯವನ್ನು ಸಂಪರ್ಕಿಸಬಹುದು. ಆದ್ದರಿಂದ ನಮ್ಮ ಆತ್ಮದ ಇಂದ್ರಿಯಗಳ ಮೂಲಕವಾಗಿ ದೇವರು ಆತ್ಮನು ಬಿಡುಗಡೆ ಮಾಡುತ್ತಿರುವವುಗಳಿಗೆ ನಾವು ಒಳಪಟ್ಟವರಾಗಿರಬೇಕು . ಪ್ರವಾದನೆಯಲ್ಲಿ ದೇವರು ಆಗ್ಗಾಗ್ಗೆ ಚಿತ್ರಣ-ದರ್ಶನಗಳು ಅಥವಾ ದೃಶ್ಯಗಳು ಮತ್ತು ಚಿಹ್ನೆಗಳನ್ನು ಸಂದೇಶವನ್ನು ಸಂವಹನ ಮಾಡಲು ಬಳಸುತ್ತಾನೆ. ಆದ್ದರಿಂದ ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು ಮತ್ತು ಆತನು ನಮಗೆ ತೋರಿಸುತ್ತಿರುವುದನ್ನು ಅರ್ಥವಿವರಣೆ ಮಾಡಬೇಕು.

ಹೋಶೇಯ 12:10
ನಾನು ಪ್ರವಾದಿಗಳಿಗೆ ನುಡಿದಿದ್ದೇನೆ ಬಹಳ ದಿವ್ಯ ದರ್ಶನಗಳನ್ನು ದಯಪಾಲಿಸಿದ್ದೇನೆ. ಪ್ರವಾದಿಗಳ ಮೂಲಕ ಸೊಚಕ ಕಾರ್ಯಗಳನ್ನು ನಡಿಸಿದ್ದೇನೆ.

ಪವಿತ್ರಾತ್ಮನಿಂದ ಪ್ರವಾದನೆ ಪಡಿದುಕೊಳ್ಳಲು ನಿಮಗೆ ಸಹಾಯ ಮಾಡಲೂ ಒಂದು ಸರಳವಾದ ಪ್ರಾರ್ಥನೆ-ಗ್ರಹಿಸು-ಪ್ರವಾದನೆಯ ವಿಧಾನವನ್ನು ಹಂಚಿಕೊಳ್ಳುತ್ತೇವೆ. ಪ್ರಾರಂಭಿಸಲು ಇದು ಸುಲಭವಾದ ಮಾರ್ಗವಾಗಿದೆ. ಆನಂತರ ನಿಮ್ಮನ್ನು ಪವಿತ್ರಾತ್ಮನು ಚಲಿಸುವಂತೆ ಮಾಡುವಾಗ ನೀವು ನೇರವಾಗಿ ಗ್ರಹಿಸಿ-ಪ್ರವಾದಿಸುವ ಸಮಯಗಳಿರುತ್ತವೆ.

ಪ್ರಾರ್ಥನೆ

ಪ್ರವಾದನೆ ಅಪೇಕ್ಷಿಸಿರಿ. ಪ್ರವಾದನೆಯ ವಾಕ್ಯವನ್ನು ಕೊಡಲು ಅಥವಾ ನಿಮ್ಮ ಮೂಲಕವಾಗಿ ಪ್ರವಾದನೆ ಹರಿವು ಬಿಡುಗಡೆಗೊಳ್ಳುವುದಕ್ಕಾಗಿ ಪವಿತ್ರಾತ್ಮನನ್ನು ಕೇಳಿರಿ ಆದ್ದರಿಂದ ಆತ್ಮನ ಚಿತ್ತದಂತೆ ನೀವು ಪ್ರವಾದನೆ ವಾಕ್ಯವನ್ನು ತರಬಹುದು . ಆ ಮೇಲೆ ನೀವು ಸೇವೆ ಸಲ್ಲಿಸಲು ಬಯಸುವ ಗುಂಪು ಅಥವಾ ವ್ಯಕ್ತಿಗಳಿಗಾಗಿ ಪ್ರಾರ್ಥಿಸಲು ಪ್ರಾರಂಭಿಸಿರಿ . ನೀವು ಒಂದು ಸಾಮಾನ್ಯ ಆಶೀರ್ವಾದದ ಪ್ರಾರ್ಥನೆಯೊಡನೆ ಆರಂಭಿಸಬಹುದು.

ಗ್ರಹಿಸುವುದು

ನೀವು ಪ್ರಾರ್ಥಿಸುವಾಗ, ದೇವರ ಆತ್ಮನು ಸಂಪರ್ಕಿಸಲು ಬಯಸುವುದನ್ನು ಮತ್ತು ಯಾರಿಗೆ ಸಂಪರ್ಕಿಸಲು ಅಪೇಕ್ಷಿಸುತ್ತಾನೆಂಬುದನ್ನು ಅರ್ಥಮಾಡಿಕೊಳ್ಳಿರಿ ಮತ್ತು ಕೇಳಿಸಿಕೊಳ್ಳಿರಿ. ನಾವು ಹಿಂದಿನ ಅಧ್ಯಾಯದಲ್ಲಿ ನೋಡಿದಂತೆ ನಿಮ್ಮ ಆತ್ಮದ ಶಾಖೆಗಳ ಮೂಲಕವಾಗಿ ಪವಿತ್ರಾತ್ಮನು ಸಂಪರ್ಕ ಮಾಡುತ್ತಾನೆ. ಆತನು ಒಂದು ಅಥವಾ ಅಧಿಕವಾದ ಮಾರ್ಗಗಳನ್ನು ನಿಮಗೆ ಆತನ ಸಂದೇಶ ಸಂಪರ್ಕಿಸಲು ಉಪಯೋಗಿಸಬಹುದು. ಇನ್ನೂ ಸಣ್ಣ ಆಂತರಿಕ ಅನಿಸಿಕೆ ಅಥವಾ ಸಾಕ್ಷಿ. ಮಾಹಿತಿಯು ನಿಮ್ಮ ಆತ್ಮದಲ್ಲಿ ಚಿಲುಮೆಯಂತೆ ಮೇಲಕ್ಕೆ ಬರಬಹುದು. ಒಳಭಾಗದಲ್ಲಿ ತಿಳಿದವರಾಗಿರಬೇಕು. ನಿಮ್ಮ ಆತ್ಮದಲ್ಲಿ ಚಿತ್ರಗಳು ಬರುತ್ತವೆ. ಒಂದು ಪದ, ಆಮೇಲೆ ಒಂದು ವಾಕ್ಯ ಆಮೇಲೆ ಒಂದು ವಾಕ್ಯವೃಂದ, ದೈಹಿಕ ಸಂವೇದನೆಗಳು, ಧರ್ಮಶಾಸ್ತ್ರಗಳ ಸುಪ್ರಕಾಶ, ಧರ್ಮಗ್ರಂಥದ ಭಾಗಗಳು, ಹೆಸರುಗಳನ್ನು ಸಂಖ್ಯೆಗಳನ್ನು ಪ್ರಕಟಿಸುವುದು.

ಪ್ರವಾದನೆ

ಪವಿತ್ರಾತ್ಮನು ಮಾತನಾಡುತ್ತಿದ್ದಾನಾ ಎಂಬುದಾಗಿ ಗ್ರಹಿಸಿರಿ. ಆತನು ಮಾತನಾಡುತ್ತಿದ್ದರೆ, ಸಂದೇಶವನ್ನು ಹಂಚಿರಿ. ನೀವು ಪಡೆದಂತಹ ಮೊದಲ ಪದದೊಡನೆ ಹೆಜ್ಜೆಯನ್ನಿಡಿರಿ. ಮತ್ತು ನೀವು ಇದನ್ನು ಬಿಡುಗಡೆ ಮಾಡುವಾಗಲೇ ಪವಿತ್ರಾತ್ಮದಿಂದ ಹೆಚ್ಚುವರಿ ಪದಗಳನ್ನು ಮತ್ತು ಹೆಚ್ಚಿನ ಮಾಹಿತಿಯನ್ನು ಪಡೆಯುವ ಸಾಧ್ಯತೆಯಿದೆ. ನೀವು ಪವಿತ್ರಾತ್ಮನಿಂದ ಯಾವುದೇ ನಿರ್ದಿಷ್ಟ ಸಂದೇಶ ಪಡೆದುಕೊಳ್ಳುತ್ತಿಲ್ಲವಾದರೆ ಪರವಾಗಿಲ್ಲ. ಬರೀ ಪ್ರಾರ್ಥಿಸಿರಿ ಮತ್ತು ವ್ಯಕ್ತಿಯನ್ನು ಆಶೀರ್ವದಿಸಿರಿ.

ನೀವು ಪಡೆಯುತ್ತಿರುವುದನ್ನು ಬಿಡುಗಡೆಗೊಳಿಸುವ ಮೊದಲು ಮೌಲ್ಯೀಕರಿಸಲು ತ್ವರಿತ ಪರಿಶೀಲನೆ

ನೀವು ಒಂದು ಸಂದೇಶವನ್ನು ಬಿಡುಗಡೆಗೊಳಿಸಲು (ಒಬ್ಬ ವ್ಯಕ್ತಿಗೆ ಅಥವಾ ಒಂದು ಕೂಟಕ್ಕೆ) ಪಡೆದುಕೊಂಡಾಗ ನೀವು ಪಡೆದದ್ದನ್ನು ಬಿಡುಗಡೆಗೊಳಿಸುವ ಮೊದಲು ಮೌಲ್ಯೀಕರಿಸಲು ತ್ವರಿತ ಪರಿಶೀಲನೆ ಮಾಡಬೇಕು. ನೀವು ಗ್ರಹಿಸುತ್ತಿರುವುದನ್ನು ಪರಿಶೀಲನೆ ಮಾಡಲು ಕೆಲವು ಮಾರ್ಗಗಳು ಇಲ್ಲಿವೆ.

ಇದು ಲಿಖಿತ ಗ್ರಂಥಗಳೊಂದಿಗೆ ತನ್ನನ್ನು ಹೊಂದಿಸಿಕೊಳ್ಳುತ್ತದೆಯೇ?

ಧರ್ಮಗ್ರಂಥಗಳ ಗ್ರಂಥಕರ್ತನು ಪವಿತ್ರಾತ್ಮನಾಗಿದ್ದಾನೆ. (2 ತಿಮೊಥೆಯನಿಗೆ 3:16) ಮತ್ತು ಆತನ ಲಿಖಿತ ವಚನದಲ್ಲಿ ಈಗಾಗಲೇ ಸ್ಥಾಪಿಸಲ್ಪಟ್ಟಿರುವುದಕ್ಕೆ ಆತನು ವಿರುದ್ಧವಾಗಿರುವುದಿಲ್ಲ. ಆತ್ಮವು ಮತ್ತು ವಾಕ್ಯವು ಒಪ್ಪುತ್ತದೆ. “ಇದಲ್ಲದೆ ಆತ್ಮನು ಸತ್ಯಸ್ವರೂಪನೇ! ಆತ್ಮ ನೀರು ರಕ್ತ ಎಂಬ ಮೂರು ಸಾಕ್ಷಿಗಳುಂಟು (1 ಯೋಹಾನ 5:7) ಉದಾಹರಣೆಗೆ ಒಂದು ಪ್ರವಾದನೆ ಮದುವೆಯಲ್ಲಿ ನಂಬಿಗಸ್ತನಾಗಿರುವ ಮದುವೆಯಾಗಿರುವ ಒಬ್ಬ ಅವಿಶ್ವಾಸಿಯು ಅವನ ಸಂಗಾತಿಯೊಡನೆ ವಿವಾಹ ವಿಚ್ಛೇದನೆಗೆ ಸಲಹೆ ನೀಡುವಂತಿದ್ದರೆ ಅದು ದೇವರ ವಾಕ್ಯಕ್ಕೆ ವಿರುದ್ಧವಾಗಿದೆ ಮತ್ತು ಆದ್ದರಿಂದ ಅದು ಬಿಡುಗಡೆಯಾಗಬಾರದು ಅಥವಾ ತಲುಪಿಸಬಾರದು.

ನಾನು ಇದನ್ನು ಪಡೆಯುವಾಗ, ದೇವರ ಪ್ರಸನ್ನತೆ, ಅಭಿಷೇಕ ಮತ್ತು ಪ್ರೇರಣೆಯನ್ನು ನಾನು ವಿವೇಚಿಸುತ್ತೇನಾ?

ನೀವು ವೈಯಕ್ತಿಕವಾಗಿ ದೇವರ ಪ್ರಸನ್ನತೆ, ಆತನ ಅಭಿಷೇಕ ಮತ್ತು ಪವಿತ್ರಾತ್ಮನ ಪ್ರೇರಣೆಯ ಅರಿವುಳ್ಳವರಾಗಿದ್ದೀರಾ? ನಿಮ್ಮ ಆತ್ಮದಲ್ಲಿ ಸಮಾಧಾನ ಮತ್ತು ಭರವಸೆ ಇದೆಯಾ? “ಹೌದು” ಎಂದಾದರೆ, ಆ ಮೇಲೆ ಪ್ರವಾದನೆಯನ್ನು ತಲುಪಿಸಲು ಮುಂದುವರೆಯಿರಿ. ಇನ್ನೊಂದು ಕಡೆಯಲ್ಲಿ ನೀವು ಪರಿಶೀಲನೆ ಮಾಡಬೇಕು ಎಂಬ ಪ್ರಜ್ಞೆ ಅಥವಾ ನಿಮ್ಮ ಆತ್ಮದಲ್ಲಿ ಎಚ್ಚರಿಕೆಯನ್ನು ಪವಿತ್ರಾತ್ಮನು ನಿಮ್ಮ ಗಮನಕ್ಕೆ ತರುತಿದ್ದಾನೆ ಎಂಬುದಾಗಿ ಅನಿಸಿದರೆ ಆ ಮೇಲೆ ನಿಲ್ಲಿಸಿ ಸ್ವಲ್ಪ ತಡಿಯಿರಿ. ಸಂದೇಶವನ್ನು ತಲುಪಿಸಬೇಡಿರಿ.

ಇದು ಬಲ, ಪ್ರೋತ್ಸಾಹ ಮತ್ತು ಸಂತೈಸುವಿಕೆ ತರುತ್ತದೆಯಾ?

1 ಕೊರಿಂಥದವರಿಗೆ 14:3 ರಲ್ಲಿ ನಾವು ನೋಡಿದಂತೆ, ಪ್ರವಾದನೆಯು ಬಲ, ಪ್ರೋತ್ಸಾಹ ಮತ್ತು ಸಂತೈಸುವಿಕೆಯನ್ನು ಇದು ತಲುಪವಂತಹ ಗುಂಪು ಅಥವಾ ವೈಯಕ್ತಿಕ ಅಥವಾ ವ್ಯಕ್ತಿಗಳಿಗೆ ತರುತ್ತದೆ. ಎಚ್ಚರಿಕೆ, ತಿದ್ದುಪಡಿ, ನಿರ್ದೇಶನ ಅಥವಾ ಭವಿಷ್ಯವಾಣಿ ಇದ್ದಾಗಲೂ ಸಹ ಇದು ಯಾವಾಗಲೂ ಪಡೆದುಕೊಳ್ಳಲೂ ನಿರೀಕ್ಷೆ, ನೀತಿವಂತಿಗೆ, ಶಾಂತಿ ಮತ್ತು ಆನಂದದ ಮಾರ್ಗವನ್ನು ತೋರಿಸುತ್ತದೆ. “ಯಾಕಂದರೆ ತಿನ್ನುವುದೂ ಕುಡಿಯುವುದು ದೇವರ ರಾಜ್ಯವಲ್ಲ ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಆಗಿದೆ” (ರೋಮಾಪುರದವರಿಗೆ 14 :17)

ನನ್ನ ಆತ್ಮವು ಒಲವು ಮತ್ತು ಪೂರ್ವಕಲ್ಪನೆಯಿಂದ ಸ್ವತಂತ್ರ ಶುದ್ಧವಾಗಿದೆಯಾ?

ಕೆಲವು ಬಾರಿ ಅಧಿಕವಾದ ಭಾವನೆಗಳು ಭಾಗಿಯಾಗಿರುತ್ತವೆ, ಒಲವು, ಪೂರ್ವಗ್ರಹಿಕೆ ಅಥವಾ ಇತರೆ ಅನುಭವಗಳು ಭಾಗಿಯಾಗಿರುತ್ತವೆ, ನೀವು ಗ್ರಹಿಸಿಕೊಳ್ಳುತ್ತಿರುವುದನ್ನು ಇಂತಹ ಭಾವನೆಗಳು ಹಾನಿಮಾಡದಂತೆ ಬಹಳ ಜಾಗರೂಕರಾಗಿರುವುದು ಅಗತ್ಯವಾಗಿದೆ. ವಿಲಕ್ಷಣವಾದ ಕೇಶವಿನ್ಯಾಸ, ಮೂಗು, ಕಿವಿಗಳ ಮೇಲೆ ಚುಚ್ಚುಕೊಂಡಿರುವಿಕೆ, ಹಚ್ಚೆಹಾಕಿಸಿಕೊಂಡಿರುವುದು ಇತ್ಯಾದಿ…. ಇಂತಹ ಜನರುಗಳ ವಿರುದ್ಧವಾಗಿ ನೀವು ಒಂದು ಒಲವು ಅಥವಾ ಪಕ್ಷಪಾತ ಹೊಂದಿದ್ದರೆ ನೀವು ಹೆದರಿಕೆ, ಪಶ್ಚಾತ್ತಾಪ ಮುಂತಾದ ಬಲವಾದ ಮಾತುಗಳನ್ನು ಮಾತನಾಡಲು ಬಯಸಬಹುದು. ಆದರೆ ಇದು ವ್ಯಕ್ತಿಗೆ ನೀವು ಮಾತನಾಡಲು ಪವಿತ್ರಾತ್ಮನು ಅಪೇಕ್ಷಿಸುವುದು ಇದಾಗಿರುವುದಿಲ್ಲ. ಆದ್ದರಿಂದ ನಿಮ್ಮ ಆತ್ಮವನ್ನು ನೀವು ಬಹಳ ಶುಭ್ರವಾಗಿಟ್ಟುಕೊಳ್ಳಬೇಕು ಮತ್ತು ನಿಮ್ಮ ಪ್ರಾಣಾತ್ಮದ ಪ್ರವೃತ್ತಿಗಳಿಂದ ಪ್ರಭಾವಿತರಾಗಿರುವುದರಿಂದ ಸ್ವತಂತ್ರರಾಗಿರಬೇಕು. ಆದ್ದರಿಂದ ಪವಿತ್ರಾತ್ಮನು ಹೇಳುತ್ತಿರುವುದನ್ನು ನೀವು ನಿಖರವಾಗಿ ಗ್ರಹಹಿಸಿಕೊಳ್ಳಬಹುದು. ನಿಮ್ಮ ಸ್ವಂತ ಒಲವು ಮತ್ತು ಪೂರ್ವಗ್ರಹಿಕೆಯಿಂದ ನೀವು ಮುಳುಗಿರುವಂತೆ ಅನ್ನಿಸುತ್ತಿದ್ದರೆ ಆಮೇಲೆ ಪ್ರಾರ್ಥಿಸಿರಿ ಇವೆಲ್ಲವನ್ನು ದೂರವಿಡಲು ಮತ್ತು ಆ ವ್ಯಕ್ತಿಗೆ ಆತನು ಬಯಸುವುದನ್ನು ನಿಖರವಾಗಿ ಗ್ರಹಿಸಲು ಪವಿತ್ರಾತ್ಮನನ್ನು ಕೇಳಿಕೊಳ್ಳಿರಿ.

ಪ್ರವಾದನೆಯನ್ನು ಹೇಗೆ ಬಿಡುಗಡೆಗೊಳಿಸುವುದು (ತಲುಪಿಸುವುದು)

ಪ್ರವಾದನೆಯನ್ನು ಬಿಡುಗಡೆ ಮಾಡುವಾಗ ಕೆಳಗಿನವುಗಳನ್ನು ನೆನಪಿನಲ್ಲಿಡಿ:

1. ಪ್ರವಾದನೆಯನ್ನು ವ್ಯಕ್ತಪಡಿಸಲು ಅನೇಕ ಮಾರ್ಗಗಳಿವೆ. ನೀವು ಅದನ್ನು ಮಾತನಾಡಬಹುದು, ಪ್ರಾರ್ಥಿಸಬಹುದು, ಹಾಡಬಹುದು, ಮಾಡಬಹುದು, ಬರೆಯಬಹುದು, ಸೆಳೆಯಬಹುದು, ಚಿತ್ರಿಸಬಹುದು, ನೇರವಾಗಿ ಹೇಳಬಹುದು. ಆತ್ಮನು ನಿಮ್ಮನ್ನು ಮುನ್ನೆಡೆಸುತ್ತಿರುವುದಾಗಿ ಅನ್ನಿಸುವ ಅಥವಾ ಆ ಸಂದರ್ಭಕ್ಕಾಗಿ ನೀವು ನೋಡುತ್ತಿರುವುದು ಉತ್ತಮವಾದದ್ದು ಎಂದು ಅನ್ನಿಸುವ ವಿಧಾನವನ್ನು ಆರಿಸಿಕೊಳ್ಳಿರಿ.

2. ಸಂದೇಶವನ್ನು ಸಂಪರ್ಕಿಸಲು ನೀವು ಆರಿಸಿಕೊಳ್ಳುವ ಪದಗಳು, ನಿಮ್ಮ ಧ್ವನಿಯ ಸ್ವರ ಮತ್ತು ಯಾವಾಗ ಸಂದೇಶ ಬಿಡುಗಡೆ ಮಾಡುತ್ತೀರಿ ಅನ್ನುವಂತದ್ದು ಎಲ್ಲವೂ ನಿಮ್ಮ ಹತೋಟಿಯಲ್ಲಿರುತ್ತದೆ. “ನೀವೆಲ್ಲರು ಒಬ್ಬೊಬ್ಬರಾಗಿ ಪ್ರವಾದಿಸುವುದಕ್ಕೆ ಅಡ್ಡಿಯಿಲ್ಲ ಹೀಗೆ ಮಾಡಿದರೆ ಎಲ್ಲರೂ ಕಲಿತುಕೊಳ್ಳುವರು. ಎಲ್ಲರೂ ಎಚ್ಚರಿಕೆ ಹೊಂದುವರು ಪ್ರವಾದಿಗಳ ಆತ್ಮಗಳು ಪ್ರವಾದಿಗಳ ಸ್ವಾಧೀನದಲ್ಲಿ ಅವೆ. (1 ಕೊರಿಂಥದವರಿಗೆ 14:31-32)

3. ಸಮಯವು, ಯಾವಾಗ ಸಂದೇಶವನ್ನು ಬಿಡುಗಡೆ ಮಾಡುತ್ತೀರಿ ಅನ್ನುವುದು ನಿಮ್ಮ ಹತೋಟಿಯಲ್ಲಿರುತ್ತದೆ. ಪ್ರಕಟನೆಯನ್ನು ಪ್ರಸ್ತುತ ಪಡಿಸುವುದು. ಸ್ವತಃ ಪ್ರಕಟನೆಯಷ್ಟೇ

ಪ್ರಾಮುಖ್ಯವಾಗಿದೆ. ಆತ್ಮನಿಗೆ ಸೂಕ್ಷ್ಮತೆಯುಳ್ಳವರಾಗಿ ಮತ್ತು ನೀವು ಹಾಗೆ ಮಾಡಲೂ ಆತನು ಬಿಡುಗಡೆ ಮಾಡಿದಾಗ ಕಾರ್ಯ ಮಾಡಿರಿ.

4. ನಿಮ್ಮನ್ನು ನಿರ್ಣಯಿಸಲು ಅನುಮತಿಸಿರಿ. ಎಲ್ಲಾ ಪ್ರವಾದನೆಗಳು ನ್ಯಾಯನಿರ್ಣಯ ಹೊಂದಬೇಕು (1ಕೊರಿಂಥದವರಿಗೆ 14:29-30; ಥೆಸಲೋಕದವರಿಗೆ 5:20-21) ಆದ್ದರಿಂದ ಯಾವಾಗಲೂ ಕೇಳುಗರಿಗೆ ನೀವು ಅವರಿಗೆ ಮಾತನಾಡಿದ್ದನ್ನು ಪರೀಕ್ಷಿಸಲು ಪ್ರೋತ್ಸಾಹಿಸಿರಿ. ವರವನ್ನು ಕೊಡುವವನು ಪರಿಪೂರ್ಣನು ಮತ್ತು ವರವು ಪರಿಪೂರ್ಣವಾದದ್ದು ಆದರೆ ವರವು ಬಿಡುಗಡೆಗೊಳ್ಳುವ ಪಾತ್ರೆಗಳು ಪರಿಪೂರ್ಣವಾದವಲ್ಲ. ಆದುದರಿಂದ ಕೆಲವು ವ್ಯಕ್ತಿಗಳ ಸ್ವಂತ ಆಲೋಚನೆ ಮತ್ತು ವಿಚಾರಗಳೊಡನೆ ಸಂದೇಶವು ಕಳಂಕಿತವಾಗಬಹುದು ಆದ್ದರಿಂದ ಎಲ್ಲಾ ಪ್ರವಾದನೆಗಳನ್ನು ಪರೀಕ್ಷಿಸಬೇಕು.

5. ನಿಮ್ಮ ಪ್ರವಾದನೆಯ ಪೂರ್ವಪ್ರತ್ಯಯವಾಗಿ "ಕರ್ತನು ಹೀಗೆ ಹೇಳುತ್ತಾನೆ" ಅಥವಾ "ಕರ್ತನು ಹೇಳುತ್ತಾನೆ" ಅನ್ನುವ ಪದ ಬಳಸಲು ಹೇಚ್ಚು ಆತುರಪಡಬೇಡಿರಿ ಬದಲಿಗೆ "ನನ್ನ ಆತ್ಮದಲ್ಲಿ ನಾನು ಗ್ರಹಿಸುತ್ತೇನೆ" ಅಥವಾ "ನಿಮಗಾಗಿ ನನ್ನ ಹೃದಯದಲ್ಲಿ ಇದನ್ನು ಕರ್ತನು ಇರಿಸಿರುದನ್ನು ನಾನು ಭಾವಿಸುತ್ತೇನೆ" ಎಂಬುದಾಗಿ ಹೇಳುವುದು ಬಹಳ ಉತ್ತಮಕರವಾಗಿದೆ ಯಾಕೆಂದರೆ ಸ್ವೀಕರಿಸುವವರಿಗೆ ನೀವು ಏನು ಹೇಳುತ್ತಿದ್ದೀರಿ ಎಂಬುದನ್ನು ನ್ಯಾಯವಾಗಿ ನಿರ್ಣಯಿಸಲು ಇದು ಅನುಮತಿಸುತ್ತದೆ. ದೇವರಿಂದ ಯಥಾರ್ಥವಾದ ಪದವು ಅದರ ಪರಿಣಾಮವನ್ನು ಹೊಂದಿರುತ್ತದೆ.

6. ನಾವು ಭಾಗಶಃ ತಿಳಿದಿದ್ದೇವೆ ಮತ್ತು ಭಾಗಶಃ ಪ್ರವಾದಿಸುತ್ತೇವೆ ಎಂಬುದನ್ನು ನೆನಪಿಡಿ, (12 ಕೊರಿಂಥದವರಿಗೆ 13:9)ಕೆಲವು ಸಮಯಗಳಲಲಿ ಇದು ಒಂದು ಚಿಕ್ಕ ಪದವಿರಬಹುದು ಮತ್ತು ಕೆಲವು ಬಾರಿ ಅತ್ಯಧಿಕವಾಗಿ ಪಡೆದುಕೊಳ್ಳಬಹುದು. ನೀವು ಪಡಿದುಕೊಂಡದ್ದನ್ನು ನಂಬಿಗಸ್ತರಾಗಿ ಹಂಚಿಕೊಳ್ಳಿರಿ.

7. ಪ್ರವಾದನೆಯು ಇತರೆ ವರಗಳೊಡನೆ ಸೇರಿ ಹರಿಯುತ್ತದೆ. ಆದ್ದರಿಂದ ದೇವರ ಆತ್ಮನು ಬಿಡುಗಡೆಗೊಳಿಸಲು ಅಪೇಕ್ಷಿಸುವ ಇತರೆ ವರಗಳೊಡನೆ, ಪ್ರವಾದನೆ ವಾಕ್ಯದೊಡನೆ ಒಟ್ಟಾಗಿ ಅದರೊಂದಿಗೆ ಹರಿಯಿರಿ

8. ಸ್ಪಷ್ಟವಾಗಿ ಸಃಪರ್ಕ ಮಾಡಿ ಮತ್ತು ಸರಳ ಭಾಷೆಯಲ್ಲಿ ಹೇಳಿರಿ ಆದ್ದರಿಂದ ವ್ಯಕ್ತಿಗೆ ಅಥವಾ ಜನರು ಹೇಳಿದ್ದನ್ನು ಅರ್ಥಮಾಡಿಕೊಳ್ಳುತ್ತಾರೆ "ಕೊಳಲು ವೀಣೆ ಮೊದಲಾದ ಅಚೇತನ ವಾದ್ಯಗಳು ಸ್ವರಗಳಲ್ಲಿ ಯಾವ ಭೇವನ್ನು ತೋರಿಸಿದ್ದರೆ ಊದಿದ್ದು ಅಥವಾ ಬಾರಿಸಿದ್ದು ಇಂಥವೇ ಎಂದು ಹೇಗೆ ತಿಳಿಯುವದು? ತುತೂರಿಯು ಗೊತ್ತಿಲ್ಲದ ಶಬ್ದವನ್ನು ಕೊಟ್ಟರೆ ಯಾರು ಯುದ್ಧಕ್ಕೆ ಸಿದ್ಧಮಾಡಿಕೊಳ್ಳುವರು? (1 ಕೊರಿಂಥದವರಿಗೆ 14:7-8)

9. ಪ್ರವಾದನೆಯು ಬಿಡುಗಡೆಗೊಳ್ಳುಬಹುದು:

- ವ್ಯಕ್ತಿಗಳಿಗೆ
- ಒಂದು ಚಿಕ್ಕ ಗುಂಪಿಗೆ

- ಒಂದು ದೊಡ್ಡ ಸಭೆಯ ಕೂಟಕ್ಕೆ
- ಪ್ರವಾದಿಯಾದ ಸಭಾಹಿರಿಯರಿಂದ – ಪ್ರವಾದಿಯ ಸೇವೆಗಳು ತಂಡವು ವ್ಯಕ್ತಿಗಳಿಗೆ ಪ್ರವಾದನೆಯ ಸೇವೆ ಸಲ್ಲಿಸುವುದು (1 ತಿಮೊಥೆಯನಿಗೆ 4:14).

ಚಿಕ್ಕ ಗುಂಪುಗಳಲ್ಲಿ ಪ್ರವಾದನೆಯ ವರವನ್ನು ಅಭ್ಯಾಸಿಸುವುದಕ್ಕಾಗಿ ಮಾರ್ಗಸೂಚಿಗಳು

1) ಭಕ್ತಿ ವೃದ್ಧಿಗಾಗಿ ವರಗಳನ್ನು ಉಪಯೋಗಿಸಿರಿ, ಜನರಿಗೆ ಮುಜುಗರ ಉಂಟುಮಾಡಲೂ, ಅಥವಾ ನಾಶಮಾಡಲು ಅಥವಾ ಖಂಡಿಸುವುದಕ್ಕಾಗಿ ಅಲ್ಲ. (1 ಕೊರಿಂಥದವರಿಗೆ 14 :3,5,12, 16,17).

2) ಪ್ರತಿಯೊಬ್ಬರು ಭಾಗವಹಿಸಲಿ “ನೀವೆಲ್ಲರೂ ಒಬ್ಬೋಬ್ಬರಾಗಿ ಪ್ರವಾದಿಸುವುದಕ್ಕೆ ಅಡ್ಡಿಯಿಲ್ಲ. ಹೀಗೆ ಮಾಡಿದರೆ ಎಲ್ಲರೂ ಕಲಿತುಕೋಳ್ಳುವರು ಎಲ್ಲರೂ ಎಚ್ಚರಿಕೆ ಹೋಂದುವರು.(1 ಕೊರಿಂಥದವರಿಗೆ 14:31).

3) ನಿಮ್ಮ ಚಿಕ್ಕ ಗುಂಪಿನ ನಾಯಕರಿಂದ ಸಲಹೆಗಳನ್ನು ಮತ್ತು ಸರಿಯಾದ ಕ್ರಮವನ್ನು ಹಿಂಬಾಲಿಸಿರಿ. ಒಂದೇ ಸಮಯದಲ್ಲಿ ಇಬ್ಬರು ಅಥವಾ ಮೂವರು ಸೇವಕರು ಮತ್ತು ಅವರು ಮುಗಿಸುವವರೆಗೂ ಇತರರು ಕಾಯಬೇಕು ಆಮೇಲೆ ಇತರೆ ಇಬ್ಬರು ಅಥವಾ ಮೂವರು ಸೇವೆ ಸಲ್ಲಿಸಬಹುದು

1 ಕೊರಿಂಥದವರಿಗೆ 14 : 29-33, 39-40
29 ಪ್ರವಾದಿಗಳು ಇಬ್ಬರಾಗಲಿ ಮಾತಾಡಲಿ ಮಿಕ್ಕಾದವರು ಕೇಳಿ ವಿವೇಚನೆ ಮಾಡಲಿ
30 ಕೂತಿರುವ ಮತ್ತೋಬ್ಬನಿಗೆ ಪ್ರಕಟನೆ ಉಂಟಾದರೆ ಮೊದಲಿನವನು ಸುಮ್ಮಗಾಗಲಿ.
31 ನೀವೆಲ್ಲರೂ ಒಬ್ಬೋಬ್ಬರಾಗಿ ಪ್ರವಾದಿಸುವುದಕ್ಕೆ ಅಡ್ಡಿಯಿಲ್ಲ: ಹೀಗೆ ಮಾಡಿದರೆ ಎಲ್ಲರೂ ಕಲಿತುಕೋಳ್ಳುವರು. ಎಲ್ಲರೂ ಎಚ್ಚರಿಕೆ ಹೊಂದುವರು
32 ಪ್ರವಾದಿಗಳ ಆತ್ಮಗಳು ಪ್ರವಾದಿಗಳ ಸ್ವಾಧೀನದಲ್ಲಿ ಅವೆ.
33 ದೇವರು ಸಮಾಧಾನಕ್ಕೆ ಕಾರಣನೇ ಹೊರತು ಗಲಿಬಿಲಿಗೆ ಕಾರಣನಲ್ಲ.
39 ಆದಕಾರಣ ನನ್ನ ಸಹೋದರರೇ ಪ್ರವಾದಿಸುವುದಕ್ಕೆ ಆಸಕ್ತಿಯಿಂದ ಅಪೇಕ್ಷಿಸಿರಿ, ಮತ್ತು ವಾಣಿಯನ್ನಾಡುವುದಕ್ಕೆ ಬೇಡವೆನ್ನಬಾರದು. ಆದರೆ ಎಲ್ಲವೂ ಮರ್ಯಾದೆಯಿಂದಲೂ ಕ್ರಮದಿಂದಲೂ ನಡೆಯಲಿ.

4) ನಿಮ್ಮನ್ನು ನ್ಯಾಯನಿರ್ಣಯಿಸಲು ಮತ್ತು ಸರಿಪಡಿಸಲು ಅನುಮತಿಸಿರಿ. ಅದೇ ರೀತಿಯಾಗಿ ಯಾರಾದರೂ ತಪ್ಪು ಮಾಡಿದರೆ ಪ್ರೀತಿಯಿಂದ ಸರಿಪಡಿಸಿರಿ(1 ಥೆಸಲೋನಿಕದವರಿಗೆ 5:19-21)

ರಕ್ಷಿಸಲ್ಪಡದವರಿಗೆ (ಅವಿಶ್ವಾಸಿಗಳಿಗೆ) ನೀವು ಪ್ರವಾದನೆ ಸೇವೆ ಸಲ್ಲಿಸಬಹುದು

1 ಕೊರಿಂಥದವರಿಗೆ 14:24-25
24 ಆದರೆ ನೀವೆಲ್ಲರು ಪ್ರವಾದಿಸುತ್ತಿರಲು ಕ್ರಿಸ್ತ ನಂಬಿಕೆಯಿಲ್ಲದವನಾಗಲಿ ಈ ವರವಿಲ್ಲದವನಾಗಲಿ ಒಳಗೆ ಬಂದರೆ ಅವನು ಎಲ್ಲರ ಮಾತನ್ನು ಕೇಳಿ ತಾನು ಪಾಪಿಯೆಂಬ ಅರುಹನ್ನು ಹೊಂದುವನು. ಎಲ್ಲರ ಮಾತಿನಿಂದ ಪರಿಶೋಧಿತನಾಗುವನು.
25 ಅವನ ಹೃದಯದ ರಹಸ್ಯಗಳು ಬೈಲಾಗುವವು ಮತ್ತು ಅಡ್ಡ ಬಿದ್ದು ದೇವರನ್ನು ಆರಾಧಿಸಿ ದೇವರು ನಿಜವಾಗಿ ನಿಮ್ಮಲ್ಲಿದ್ದಾನೆಂಬದನ್ನು ಪ್ರಚುರ ಪಡಿಸುವನು.

ನಾವು ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ, ಆತ್ಮನ ವರಗಳು ಯಾರಿಗಾದರೂ ಸೇವೆ ಸಲ್ಲಿಸಲು ರಕ್ಷಣೆ ಹೊಂದದಿರುವವರನ್ನು ಒಳಗೊಂಡು ಸೇವೆ ಸಲ್ಲಿಸಲು ರಕ್ಷಣೆ ಹೊಂದದಿರುವವರನ್ನು ಒಳಗೊಂಡು ಸೇವೆ ಸಲ್ಲಿಸಲು ಉಪಯೋಗಿಸಬಹುದು ಒಂದು ಸಭೆಯ ಕೂಟದಲ್ಲಿ ಮಾತ್ರವಲ್ಲದೇ ಎಲ್ಲಿಯಾದರೂ ಆತ್ಮನ ವರಗಳು ತೋರ್ಪಡಿಸಲ್ಪಡಬಹುದು ನೀವು ಅದನ್ನು ಬೀದಿಗಳಿಗೂ ತೆಗೆದುಕೊಂಡು ಹೋಗಬಹುದು! ನಾವು ಜನರನ್ನು ಸುವಾರ್ತೆಯೊಡನೆ ಸಂಧಿಸಬಹುದು ಮತ್ತು ಆತ್ಮನ ವರಗಳೊಡನೆ ಅವರಿಗೆ ಸೇವೆ ಸಲ್ಲಿಸಬಹುದು ಪ್ರವಾದನೆಗಳು ಜನರ ಹೃದಯಗಳನ್ನು ಮುಟ್ಟಬಹುದು, ದೇವರು ಅವರನ್ನು ತಿಳಿದಿದ್ದಾನೆ ಮತ್ತು ಅವರ ಕುರಿತು ಕಾಳಜಿವಹಿಸುತ್ತಾನೆಂದು ಅವರು ತಿಳಿದುಕೊಳ್ಳಲಿ ಮತ್ತು ಇದು ಅವರು ಕ್ರಿಸ್ತನಲ್ಲಿ ನಂಬಿಕೆಗೆ ಬರಲು ಕಾರಣವಾಗಬಹುದು (ಪ್ರವಾದನೆ ಸುವಾರ್ತೆ)

"ಜ್ಯೋತಿಷಿಗಳಾಗಿರಲು" ಪ್ರಯತ್ನಮಾಡಬೇಡಿರಿ

ಜನರು ಅವರು ಕೇಳಬೇಕು ಎಂಬುದಾಗಿ ಬಯಸುವುದರ ಕುರಿತು ಕೇಳಲು ಜ್ಯೋತಿಷಿಗಳ ಬಳಿಗೆ ಹೋಗುತ್ತಾರೆ. ನಿಮ್ಮನ್ನು ಒಬ್ಬ ಜ್ಯೋತಿಷಿಯಂತೆ ಇತರೆ ವಿಶ್ವಾಸಿಗಳು ನಿಮ್ಮನ್ನು ಉಪಯೋಗಿಸದಿರಲಿ (ಪ್ರವಾದನೆ ವರ ಅಥವಾ ನಿಮ್ಮ ಮೂಲಕವಾಗಿ ಹರಿಯುವ ಯಾವುದೇ ಪ್ರಕಟನೆ ವರಗಳಾಗಲಿ)

ಮಾಟಮಂತ್ರವನ್ನು ಅಭ್ಯಾಸಿಸಬೇಡಿರಿ

ಮಾಟಮಂತ್ರವು ಮೂಲಭೂತವಾಗಿ ಆತ್ಮಿಕ ಶಕ್ತಿ ಅಥವಾ ಆತ್ಮಿಕ ಅಧಿಕಾರವನ್ನು ಬಳಸಿಕೊಂಡು ಜನರನ್ನು ಅವರ ಆಲೋಚನೆಗಳು, ಮತ್ತು ಕಾರ್ಯಗಳನ್ನು ಕುಶಲತೆಯಿಂದ ಮತ್ತು ನಿಯಂತ್ರಿಸಲು ಪ್ರಯತ್ನಿಸುವುದಾಗಿದೆ ಇದಕ್ಕಾಗಿಯೇ ಎಲ್ಲಾ ಪ್ರವಾದನೆಗಳನ್ನು ಮತ್ತು ಇತರೆ ಬಹಿರಂಗ ಅಭಿವ್ಯಕ್ತತೆಗಳನ್ನು ಸ್ವೀಕರಿಸುವವರು ಪರೀಕ್ಷಿಸಲು, ನ್ಯಾಯತೀರ್ಪು ಮಾಡಲೂ ಮತ್ತು ಪಡೆದುಕೊಳ್ಳಲು ಅವರು ಅದನ್ನು

ಮಾಡಲು ಇಷ್ಟ ಪಟ್ಟರೆ ಸಮರ್ಪಿಸಬೇಕು ಪ್ರವಾದನೆ ವಾಕ್ಯಗಳ ಮೂಲಕವಾಗಿ ಜನರನ್ನು ನಿಯಂತ್ರಿಸಬೇಡಿರಿ ಮತ್ತು ಕೈಚಳಕ ತೋರಿಸಬೇಡಿರಿ.

10 ಜ್ಞಾನದ ವಾಕ್ಯ

ಅರ್ಥನಿರೂಪಣೆ

ಜ್ಞಾನದ ವಾಕ್ಯದ ವರವು ದೇವರ ದೈವಿಕ ಭಾಗವಾಗಿದೆ ಮತ್ತು ಅಪರಿಪೂರ್ಣ ಜ್ಞಾನವು ಅಪ್ರಾಕೃತವಾಗಿ ಒಬ್ಬ ವಿಶ್ವಾಸಿಗೆ ಮನಸ್ಸು ಪ್ರಕಟಿಸುವ, ದೇವರ ಚಿತ್ತ ಮತ್ತು ಉದ್ದೇಶ ಪ್ರಕಟಿಸುವುದರ ಪಾಲು ಕೊಡುವುದಾಗಿದೆ ಜ್ಞಾನದ ವಾಕ್ಯವು

- ತೊಂದರೆಯನ್ನು ಬಗೆಹರಿಸಲು
- ಯಾವ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಯಲು
- ಭವಿಷ್ಯತ್ತಿನಲ್ಲಿ ಬರುವುದನ್ನು ತಿಳಿಯುವುದು
- ಸೃಜನಶೀಲ, ಕಲಾತ್ಮಕ, ವೈಜ್ಞಾನಿಕ, ಒಂದು ಪರಿಕಲ್ಪನೆ ಅಥವಾ ವಿಚಾರದ ಬುದ್ಧಿವಂತಿಕೆಯ ವ್ಯಕ್ತಪಡಿಸುವಿಕೆಯನ್ನು ಬಿಡುಗಡೆಗೊಳಿಸುವುದು
- ಅಧಿಕವಾದವುಗಳು

ಒಂದು ಪದವು ಒಂದು ವಾಕ್ಯದ ಭಾಗವಾಗಿದೆ. ಇದು ಜ್ಞಾನದ ವಾಕ್ಯದ ವರ ಎಂಬುದಾಗಿ ಕರೆಯಲ್ಪಡುತ್ತದೆ ಆದ್ದರಿಂದ ಇದು ದೇವರ ಅಪರಿಪೂರ್ಣ ಜ್ಞಾನದ ಒಂದು ಚಿಕ್ಕ ತುಂಡು ಆಗಿದೆ ಕೈಯಲ್ಲಿರುವ ಪರಿಸ್ಥಿತಿಯನ್ನು ಪರಿಹರಿಸಲು ಆತನು ಅಪ್ರಾಕೃತವಾಗಿ ನಮಗೆ ಅದನ್ನು ನೀಡುತ್ತಾನೆ.

ಜ್ಞಾನ ವಾಕ್ಯದ ವರವು, ಕಲಿಕೆ ಮತ್ತು ಅನುಭವದ ಮೂಲಕವಾಗಿ ಸ್ವಾಧೀನಪಡಿಸಿಕೊಂಡಂತಹ ಜ್ಞಾನಕ್ಕಿಂತ ವ್ಯತ್ಯಾಸಕರವಾಗಿರುತ್ತದೆ. ಸ್ವಾಧೀನಪಡಿಸಿಕೊಂಡ ಜ್ಞಾನವು ಪ್ರಾಮುಖ್ಯವಾದದು ಮತ್ತು ದೈವಿಕ ಜನರ ಸಲಹೆಗಳನ್ನು ಪಡೆಯಲು ನಾವು ಪ್ರೋತ್ಸಾಯಿಸಲ್ಪಟ್ಟಿದ್ದೇವೆ (ಜ್ಞಾನೋಕ್ತಿಗಳು 11:14, 15:22, 19:20, 20:18) ಹೇಗಾದರೂ ಜ್ಞಾನ ವಾಕ್ಯದ ವರವು ಅತ್ಯದ್ಭುತಕರವಾಗಿ ಪವಿತ್ರಾತ್ಮನಿಂದ ಪಾಲುಕೊಡಲ್ಪಟ್ಟಿರುತ್ತದೆ ಮತ್ತು ಯಾವುದೇ ವಿಶ್ವಾಸಿಗಳ ಮೂಲಕವಾಗಿ ಅವರ ಅನುಭವ ಅಥವಾ ಕಲಿಕೆಯನ್ನು ಲೆಕ್ಕಿಸದೇ ಬಿಡುಗಡೆಗೊಳ್ಳಬಹುದು.

ಈ ಕೆಳಕಂಡವುಗಳು ಸತ್ಯವೇದದ ಕೆಲವು ಉದಾಹರಣೆಗಳು

ಸತ್ಯವೇದ ಉದಾಹರಣೆಗಳು : ಹಳೇ ಒಡಂಬಡಿಕೆ

ಯೋಸೇಫನು – ಕನಸ್ಸುಗಳ ಅರ್ಥವಿವರಿಸಿದನು ಮತ್ತು ಪರಿಹಾರಗಳನ್ನು ಒದಗಿಸುವುದು

ಪವಿತ್ರಾತ್ಮನಿಂದ ಅಧಿಕಾರ ಹೊಂದಿದವನಾಗಿ ಯೋಸೇಫನು ಫರೋಹನ ಕನಸ್ಸನ್ನು ಅರ್ಥವಿವರಿಸಲು ಶಕ್ತನಾದನು ಮತ್ತು ಏನು ಮಾಡಬೇಕೆಂಬುದಾಗಿ ಒಂದು ಪರಿಹಾರವನ್ನು ಸಹ ಒದಗಿಸಿದನು (ಆದಿಕಾಂಡ ಬೆಚಲೇಲನಂಬುವನು – ಸಕಲ ಶಿಲ್ಪಶಾಸ್ತ್ರ ಪ್ರೇರಿತವಾದವನು. (ಆದಿಕಾಂಡ 40:1-23, ಆದಿಕಾಂಡ 41:1-38)

ಬೆಚಲೇಲನು ಸೃಜನಶೀಲ -ವಿನ್ಯಾಸದಲ್ಲಿ ಪ್ರೇರಿತಗೊಂಡನು

ಪವಿತ್ರಾತ್ಮದಿಂದ ಬಲಹೊಂದಿದವನಾಗಿ ಬೆಚಲೇಲನು ಸೃಜನಶೀಲ ವಿನ್ಯಾಸ ಮತ್ತು ಆಭರಣಗಳನ್ನು ಕತ್ತರಿಸುವುದರಲ್ಲಿ ಕಲಾತ್ಮಕ ಕೆಲಸಗಳು, ಮರವನ್ನು ಕೆತ್ತುವುದು ಮತ್ತು ಗುಡಾರದ ನಿರ್ಮಾಣಕ್ಕೆ ಮಾಡಬೇಕಾದ ಇತರೆ ಎಲ್ಲಾ ಬಗೆಯ ಕೆಲಸಗಳನ್ನು ಮಾಡಿದ್ದನು (ವಿಮೋಚನಾಕಾಂಡ 31:1-5)

ದಾವೀದನು – ವಾಸ್ತುಶಿಲ್ಪಿಯ ವಿನ್ಯಾಸದಲ್ಲಿ ಪ್ರೇರಿತಗೊಂಡನು

ದಾವೀದನು ಒಬ್ಬ ಕುರುಬನಾಗಿದ್ದನು, ಒಬ್ಬ ಸಂಗೀತಗಾರನು ಒಬ್ಬ ಯುದ್ಧವೀರನಾಗಿದ್ದನು ಅವನು ವಾಸ್ತುಶಿಲ್ಪದ ವಿನ್ಯಾಸದ ಅನುಭವ ಹೊಂದಿರಲಿಲ್ಲ ಆದರೆ ಆತ್ಮನಿಂದ ಪ್ರೇರಿತಗೊಂಡನು, ಸೊಲೋಮೋನನು ಕಟ್ಟಿದ ದೇವಾಲಯದ ವಿನ್ಯಾಸವನ್ನು ದಾವೀದನು ರಚನೆ ಮಾಡಿದ್ದನು (1ಪೂರ್ವಕಾಲವೃತ್ತಾಂತ 28:11-12, 19)

ಯೆಹೆಜ್ಕೇಲನು- ಭವಿಷ್ಯದಲ್ಲಿನ ದರ್ಶನಗಳಲ್ಲಿ ಸಾಗಿಲ್ಪಟ್ಟವನಾದನು

"ಆಮೇಲೆ ಆತನು ನನ್ನನ್ನು ಮೂಡಣ ಬಾಗಿಲಿಗೆ ಬರಮಾಡಿದಾಗ ಇಗೋ ದೇವರ ತೇಜಸ್ಸು ಮೂಡಣ ಮಾರ್ಗವಾಗಿ ಬಂತು ಆತನ ಧ್ವನಿಯು ಜಲಪ್ರವಾಹದ ಘೋಷದಂತಿತ್ತು ಆತನ ತೇಜಸ್ಸಿನಿಂದ ಭೂಮಿಯು ಬೆಳಗಿತು ಮೊದಲು ನನಗೆ ಕಂಡುಬಂದ ತೇಜಸ್ಸಿನಂತೆ ಅದು ಕಾಣಿಸಿತು ಪಟ್ಟಣವನ್ನು ಹಾಳು ಮಾಡಲು ನಾನು ಬಂದಾಗ ಎಂಥದನ್ನು ಕಂಡೆನೋ ಅಂಥದನ್ನು ಕಂಡೆನು ಕೆಬಾರ್ ನದಿಯ ಹತ್ತಿರ ನನಗಾದ ಅಧ್ಭುತ ದರ್ಶನದರಿಥಾ ದರ್ಶನವು ಈಗಲೂ ನನಗಾಯಿತು ಅದನ್ನು ನೋಡಿ ಅಡ್ಡಬಿದ್ದೆನು ಆಗ ಯೆಹೋವನ ತೇಜಸ್ಸು ಮೂಡಣ ಬಾಗಿಲು ಮಾರ್ಗವಾಗಿ ದೇವಸ್ಥಾನವನ್ನು ಪ್ರವೇಶಿಸಿತು ದೇವರಾತ್ಮನು ನನ್ನನ್ನು ಎತ್ತಿ ಒಳಗಣ ಪ್ರಾಕಾರಕ್ಕೆ ತರಲು ಆಹಾ, ಯೆಹೋವನ ತೇಜಸ್ಸು ದೇವಸ್ಥಾನವನ್ನು ತುಂಬಿಕೊಂಡಿತ್ತು ಆಗ

ದೇವಸ್ಥಾನದೊಳಗಿನಿಂದ ನನ್ನನ್ನು ಸಂಬೋಧಿಸಿ ನುಡಿಯುವವನ ಶಬ್ದವು ನನ್ನ ಕಿವಿಗೆ ಬಿತ್ತು ಆ ಪುರುಷನು ನನ್ನ ಪಕ್ಕದಲ್ಲಿ ನಿಂತದ್ದನು.(ಯೆಹೆಜ್ಕೇಲನು 43:1-6)

ದಾನಿಯೇಲನು – ಕನಸ್ಸುಗಳ ಅರ್ಥವಿವರಣೆ ಮತ್ತು ಪ್ರಕಟಪಡಿಸುವುದು ಮತ್ತು ಮಂಬರುವ ಘಟನೆಗಳನ್ನು ಮುನ್ಸೂಚಿಸುವುದು

ನೆಬೂಕದ್ನಚ್ಚರನು ಕಂಡ ಕನಸ್ಸನ್ನು ದಾನಿಯೇಲನು ಪ್ರಕಟಪಡಿಸಲು ಶಕ್ತನಾಗಿದ್ದನು (ಜ್ಞಾನ ವಾಕ್ಯದ ಉದಾಹರಣೆ) ಮತ್ತು ಕನಸ್ಸಿನ ಅರ್ಥವಿವರಿಸಿದನು ಮತ್ತು ಮುಂಬರುವ ಘಟನೆಗಳ ಮುನ್ಸೂಚನೆ ಕೊಟ್ಟನು ಇನ್ನೊಂದು ಸಂದರ್ಭದಲ್ಲಿಯೂ ಸಹ ಅವನು ಇದನ್ನು ಮಾಡಿದನು ದಾನಿಯೇಲನಿಗೆ ದೇವದೂತನು ತಿಳುವಳಿಕೆಯನ್ನು ಮತ್ತು ಏನು ಜರುಗುತ್ತದೆಂಬುದನ್ನು ಹೇಳುವುದನ್ನು ಹೊಂದಿದ್ದನು.(ದಾನಿಯೇಲನು 2:17-49; ದಾನಿಯೇಲನು 4:4-27 ದಾನಿಯೇಲನು 5; ದಾನಿಯೇಲನು 9;20-27; ದಾನಿಯೇಲನು 10-12).

ಸತ್ಯವೇದದ ಉದಾಹರಣೆಗಳು : ಹೊಸ ಒಡಂಬಡಿಕೆ

ಮೂಡಣ ದೇಶದ ಜೋಯಿಸರು – ಹೆರೋದನ ಬಳಿಗೆ ಹಿಂತಿರುಗಿ ಹೋಗಬಾರದೆಂದು ಕನಸ್ಸಿನಲ್ಲಿ ಎಚ್ಚರಿಕೆ ಹೊಂದಿದ್ದು

"ಆ ಮೇಲೆ ದೇವರು ಕನಸ್ಸಿನಲ್ಲಿ ಅವರಿಗೆ ನೀವು ಹೆರೋದನ ಬಳಿಗೆ ತಿರಿಗಿ ಹೋಗಬಾರದೆಂದು ಅಪ್ಪಣೆಕೊಟ್ಟದ್ದರಿಂದ ಅವರು ಮತ್ತೊಂದು ದಾರಿಯಿಂದ ತಮ್ಮ ದೇಶಕ್ಕೆ ಹೊರಟು ಹೋದರು " (ಮತ್ತಾಯ 2;12)

ಯೋಸೇಫನು – ಐಗುಪ್ತಕ್ಕೆ ಹೋಗಲು ಕನಸ್ಸಿನಲ್ಲಿ ದೇವದೂತನಿಂದ ಎಚ್ಚರಿಸಲ್ಪಟ್ಟಿದ್ದು

"ಅವರು ಹೋದ ಮೇಲೆ ಕರ್ತನ ಮಾತನ್ನು ಯೋಸೇಫನಿಗೆ ಕನಸಿನಲ್ಲಿ ಕಾಣಿಸಿಕೊಂಡು – ನೀನು ಎದ್ದು ಈ ಕೂಸನ್ನು ಇವರ ತಾಯಿಯನ್ನು ಕರಕೊಂಡು ಐಗುಪ್ತದೇಶಕ್ಕೆ ಓಡಿಹೋಗಿ ನಾನು ನಿನಗೆ ಹೇಳುವ ತನಕ ಅಲ್ಲೇ ಇರು ಹೆರೋದನು ಈ ಕೂಸನ್ನು ಕೊಲ್ಲಬೇಕೆಂದು ಅದನ್ನುಹುಡುಕುತ್ತಿರುವನು ಅಂದನು "(ಮತ್ತಾಯ 2;13).

ಯೇಸು-ತೆರಿಗೆ ಪಾವತಿಸುವುದರ ಕುರಿತು ಪ್ರಶ್ನಿಸಿದಾಗ

ಫರಿಸಾಯರು ಕೈಸರನಿಗೆ ತೆರಿಗೆ ಕೊಡುವುದು ಸರಿಯೇ ಸರಿಯಲ್ಲವೋ ಎಂಬುದಾಗಿ ಯೇಸುವಿಗೆ ಕೇಳುವ ಮೂಲಕ ಆತನನ್ನು ಮಾತಿನಲ್ಲಿ ಸಿಕ್ಕಿಸುವುದಕ್ಕಾಗಿ ಪ್ರಯತ್ನಿಸಿದರು . ಯೇಸು "ಹೌದು" ಎಂಬುದಾಗಿ ಹೇಳಿದ್ದರೆ ಆಮೇಲೆ ಫರಿಸಾಯರು ಯೇಸು ರೋಮನ್ನರನ್ನು ಬೆಂಬಲಿಸುತ್ತಾನೆ ಮತ್ತು ಯೆಹೂದ್ಯರಿಗೆ ವಿರುದ್ಧವಾಗಿದ್ದಾನೆ ಎಂಬುದಾಗಿ ಹೇಳುತ್ತಿದ್ದರು ಮತ್ತು ಆತನಿಗೆ ವಿರುದ್ಧವಾಗಿ ಯೆಹೊದ್ಯರನ್ನು ತಿರುಗಿಸುತ್ತಿದ್ದರು ಯೇಸುವು "ಇಲ್ಲಾ" ಎಂಬುದಾಗಿ ಹೇಳಿದ್ದರೆ ಅವರು ರೊಮನ್ನರ ಸರ್ಕಾರಕ್ಕೆ ವಿರುದ್ಧವಾಗಿ ದಂಗೆಗೆ ಕಾರಣವಾಗುತ್ತಿದ್ದಾನೆ ಎಂದು ಯೇಸುವನ್ನು ರೋಮನ್ನರಿಗೆ ಒಪ್ಪಿಸುತ್ತಿದ್ದರು "ಆತನು ಈ ತಲೆಯ ಮುದ್ರೆಯೂ ಯಾರದು ಎಂದು ಕೇಳಿದ್ದಕ್ಕೆ ಅವರು ಕೈಸರನದು ಅಂದರು ಆಗ ಆತನು ಅವರಿಗೆ ಹಾಗಾದರೆ ಕೈಸರನದನ್ನು ಕೈಸರನಿಗೆ ಕೊಡಿರಿ ದೇವರದನ್ನು ದೇವರಿಗೆ ಕೊಡಿರಿ ಎಂದು ಹೇಳಿದನು ಅವರು ಈ ಮಾತನ್ನು ಕೇಳಿ ಆಶ್ಚರ್ಯಪಟ್ಟು ಆತನನ್ನು ಬಿಟ್ಟು ಹೋದರು" (ಮತ್ತಾಯ 22:15-22 ಹಾಗೆಯೇ ಮತ್ತಾಯ 22;41-46 ನೋಡಿರಿ).

ಪೌಲನು – ಮೆಕೆದೋನ್ಯಕ್ಕೆ ಹೋಗಲು ಮಾರ್ಗದರ್ಶನ ಪಡೆದಿದ್ದು

" ಅಲ್ಲಿ ರಾತ್ರಿ ಕಾಲದಲ್ಲಿ ಪೌಲನಿಗೆ ಒಂದು ದರ್ಶನವಾಯಿತು ಏನಂದರೆ ಮೆಕೆದೋನ್ಯ ದೇಶದವನಾದ ಒಬ್ಬ ಮನುಷ್ಯನು ನಿಂತುಕೊಂಡು ನೀನು ಸಮುದ್ರವನ್ನು ದಾಟಿ ಮೆಕೆದೋನ್ಯಕ್ಕೆ ಬಂದು ನಮಗೆ ನೆರವಾಗಬೇಕೆಂದು ಅವನನ್ನು ಬೇಡಿಕೊಳ್ಳುತ್ತಿದ್ದನು ಅವನಿಗೆ ಆ ದರ್ಶನವಾದ ಮೇಲೆ ಆ ಸೀಮೆಯವರಿಗೆ ಸುವಾರ್ತೆಯನ್ನು ಸಾರುವುದಕ್ಕೆ ದೇವರು ನಮ್ಮನ್ನು ಕರೆದಿದ್ದಾನೆಂದು ನಾವು ನಿಶ್ಚಯಿಸಿಕೊಂಡು ಕೂಡಲೆ ಮೆಕೆದೋನ್ಯಕ್ಕೆ ಹೊರಟು ಹೋಗುವ ಪ್ರಯತ್ನ ಮಾಡಿದೆವು " (ಅಪೊಸ್ತಲರ ಕೃತ್ಯಗಳು 16:9-10)

ಪೌಲನು – ಹಡಗು ಬಿರುಗಾಳಿಯಲ್ಲಿ ಸಿಲುಕಿದಾಗ ಫಲಿತಾಂಶವನ್ನು ಘೋಷಿಸಿದ್ದು

"ಅನೇಕ ದಿವಸಗಳ ತನಕ ಸೂರ್ಯನಾಗಲಿ ನಕ್ಷತ್ರಗಳಾಗಲಿ ನಮಗೆ ಕಾಣಿಸದೆ ದೊಡ್ಡ ಬಿರುಗಾಳಿ ನಮ್ಮ ಮೇಲೆ ಹೊಡದದ್ದರಿಂದ ತಪ್ಪಿಸಿ ಕೊಂಡೇವೆಂಬ ಎಲ್ಲಾ ನಿರೀಕ್ಷೆಯು ಅಂದಿನಿಂದ ಕಳೆದು ಹೋಯಿತು ಅವರು ಬಹುಕಾಲ ಊಟವಿಲ್ಲದೆ ಇದ್ದ ಮೇಲೆ ಪೌಲನು ಅವರ ಮಧ್ಯದಲ್ಲಿ ನಿಂತುಕೊಂಡು ಎಲೈ ಜನರೇ ನೀವು ಕ್ರೇತ್ರದಿಂದ ಹೊರಟು ಈ ಕಷ್ಟ ನಷ್ಟಗಳಿಗೆ ಗುರಿಯಾಗದಂತೆ ನನ್ನ ಮಾತನ್ನು ಕೇಳಬೇಕಾಗಿತ್ತು ಈಗಲಾದರೂ ನೀವು ಧೈರ್ಯದಿಂದಿರಬೇಕೆಂದು ನಿಮಗೆ ಬುದ್ದಿ ಹೇಳುತ್ತೇನೆ. ಹಡಗು ನಷ್ಟವಾಗುವುದೇ ಹೊರತು ನಿಮ್ಮಲ್ಲಿ ಒಬ್ಬರಿಗೂ ಪ್ರಾಣ ನಷ್ಟವಾಗುವುದಿಲ್ಲ. ನಾನು ಯಾರವನಾಗಿದ್ದೇನೋ ಯಾರನ್ನೂ ಸೇವಿಸುತ್ತೇನೋ ಆ ದೇವರಿಂದ ಬಂದ ಒಬ್ಬ ದೂತನು ಕಳೆದ ರಾತ್ರಿಯಲ್ಲಿ ನನ್ನ ಹತ್ತಿರ ನಿಂತು ಪೌಲನೇ ಭಯಪಡಬೇಡ ನೀನು ಚಕ್ರವರ್ತಿಯ ಮುಂದೆ ನಿಲ್ಲಬೇಕು. ಇದಲ್ಲದೆ ನಿನ್ನ ಸಂಗಡ ಈ ಹಡಗಿನಲ್ಲಿ ಪ್ರಯಾಣ ಮಾಡುವವರೆಲ್ಲರ ಪ್ರಾಣ ದೇವರು

ನಿನ್ನ ಮೇಲಣ ದಯೆಯಿಂದ ಉಳಿಸಿಕೊಟ್ಟಿದ್ದಾನೆಂದು ನನ್ನ ಸಂಗಡ ಹೇಳಿದನು. ಆದದರಿಂದ ಜನರೇ ಧೈರ್ಯವಾಗಿರ್ರಿ. ನನಗೆ ಹೇಳಲ್ಪಟ್ಟ ಪ್ರಕಾರವೇ ಆಗುವದೆಂದು ದೇವರನ್ನು ನಂಬುತ್ತೇನೆ. ಆದರೆ ನಾವು ಯಾವುದೋ ಒಂದು ದ್ವೀಪದ ದಡವನ್ನು ತಾಕಬೇಕಾಗಿದೆ ಎಂದು ಹೇಳಿದನು" . (ಆಪೋಸ್ತಲರ ಕೃತ್ಯಗಳು 27:20-26)

ಧರ್ಮ ಗ್ರಂಥಗಳ ಬರವಣಿಗೆಗಾಗಿ

"ಹೀಗಿರುವದರಿಂದ ಅನ್ಯಜನರಾಗಿರುವ ನಿಮ್ಮ ನಿಮಿತ್ತ ಕ್ರಿಸ್ತ ಯೇಸುವಿನ ಸೆರೆಯವನಾದ ಪೌಲನೆಂಬ ನಾನು ನಿಮಗೋಸ್ಕರ ಪ್ರಾರ್ಥಿಸುತ್ತೇನೆ. ನಿಮಗೋಸ್ಕರ ನಿರ್ವಹಿಸುವದಕ್ಕಾಗಿ ದೇವರು ನನಗೆ ಕೃಪೆಯಾಗಿ ಕೊಟ್ಟ ಕೆಲಸವನ್ನೂ ಇದುವರೆಗೆ ಗುಪ್ತವಾಗಿದ್ದ ಒಂದು ಸಂಗತಿ ದೈವಪ್ರಕಟನೆಯಿಂದ ನನಗೆ ತಿಳಿಸಲ್ಪಟ್ಟಿತೆಂಬದನ್ನೂ ನೀವು ಕೇಳಿದ್ದೀರಲ್ಲಾ. ಅದನ್ನು ಕುರಿತು ನಾನು ಹಿಂದೆ ಸಂಕ್ಷೇಪವಾಗಿ ಬರೆದಿದ್ದೇನೆ; ಬರೆದದ್ದನ್ನು ನೀವು ಓದಿ ನೋಡಿದರೆ ಕ್ರಿಸ್ತನ ವಿಷಯವಾದ ಮರ್ಮವನ್ನು ಕುರಿತು ನನಗಿರುವ ಗ್ರಹಿಕೆಯನ್ನು ನೀವು ತಿಳುಕೊಳ್ಳಬಹುದು. ಆ ಮರ್ಮವು ಈ ಕಾಲದಲ್ಲಿ ದೇವರ ಪರಿಶುದ್ಧ ಅಪೊಸ್ತಲರಿಗೂ ಪ್ರವಾದಿಗಳಿಗೂ ಪವಿತ್ರಾತ್ಮನಿಂದ ತಿಳಿಸಲ್ಪಟ್ಟಂತೆ ಬೇರೆ ಕಾಲಗಳಲ್ಲಿದ್ದ ಜನರಿಗೆ ತಿಳಿಸಲ್ಪಡಲಿಲ್ಲ. ಅದು ಯಾವದಂದರೆ, ಅನ್ಯಜನರು ಸುವಾರ್ತೆಯ ಮೂಲಕ ಕ್ರಿಸ್ತ ಯೇಸುವಿನಲ್ಲಿರುವವರಾಗಿ ಯೆಹೂದ್ಯರೊಂದಿಗೆ ಬಾಧ್ಯರೂ ಒಂದೇ ದೇಹದೊಳಗಣ ಅಂಗಗಳೂ ಅಬ್ರಹಾಮನಿಗುಂಟಾದ ವಾಗ್ದಾನದಲ್ಲಿ ಪಾಲುಗಾರರೂ ಆಗಿದ್ದಾರೆಂಬದೇ. ದೇವರು ತನ್ನ ಶಕ್ತಿಯ ಪ್ರಯೋಗದಲ್ಲಿ ನನಗೆ ಉಚಿತಾರ್ಥವಾಗಿ ಅನುಗ್ರಹಿಸಿದ ಕೆಲಸವನ್ನನುಸರಿಸಿ ನಾನು ಈ ಸುವಾರ್ತೆಗೆ ಸೇವಕನಾದೆನು"(ಎಫೆಸದವರಿಗೆ 3:1-7)

ಕಾರ್ಯಾಚರಣೆಗಳು

ಜ್ಞಾನ ವಾಕ್ಯದ ವರವು ಉಪಯುಕ್ತವಾಗಿರುವ ಕೆಲವು ಕ್ಷೇತ್ರಗಳ ಅನ್ವಯಿಸುವಿಕೆಯು ಇಲ್ಲಿದೆ. ಇದು ಸಂಪೂರ್ಣ ಪಟ್ಟಿ ಅಲ್ಲ.

1) ಜನರಿಗೆ ಸಲಹೆ ನೀಡುವುದು ಮತ್ತು ಮೂಲ ಕಾರಣಗಳನ್ನು ಗುರ್ತಿಸುವುದು ಮತ್ತು ದೇವರ ಪರಿಹಾರವನ್ನು ಪಡೆಯುವುದು.

2) ವಾಕ್ಯದ ಸೇವೆ ವಾಕ್ಯವು ಏನನ್ನು ತರುತ್ತದೆಂದು ತಿಳಿಯುವುದು ಯಾವಾಗ ಮತ್ತು ಹೇಗೆ ಇದನ್ನು ಸಂಪರ್ಕ ಮಾಡಬೇಕು.

3) ಕನಸ್ಸುಗಳನ್ನು ಅರ್ಥವಿವರಣೆ ಮಾಡುವುದು.

4) ವ್ಯಾಪಾರ ವ್ಯವಹಾರ / ಕೆಲಸದ ಸ್ಥಳದ ತೊಂದರೆಗಳನ್ನು ಬಗೆಹರಿಸುವುದು.

5) ಕಠಿಣ ಜೀವನದ ಪರಿಸ್ಥಿತಿಗಳಿಗೆ ಪರಿಹಾರ ಗುರ್ತಿಸುವುದು. (ಉದಾಹರಣೆಗೆ ಕಾನೂನು, ರಿಯಲ್ ಎಸ್ಟೇಟ್ ಕಲಹಗಳು , ಕೌಟುಂಬಿಕ ವಿಚಾರಗಳು ಮುಂತಾದವು).

6) ಭವಿಷ್ಯತ್ತಿನ ಕುರಿತು ತೀರ್ಮಾನಿಸುವುದು. ಯಾವ ಕ್ರಿಯೆಯ (ಕಾರ್ಯತಂತ್ರ) ಚಲನೆ ತೆಗೆದುಕೊಳ್ಳಬೇಕು ಮತ್ತು ಇದಕ್ಕಾಗಿ ಹೇಗೆ ಸಿದ್ಧವಾಗಿರಬೇಕು.

7) ಯಾವುದೇ ಕ್ಷೇತ್ರದಲ್ಲಿ ಒಂದು ವಿನ್ಯಾಸದೊಡನೆ ಬರುವುದು.

8) ಯಾವುದೇ ಕ್ಷೇತ್ರದಲ್ಲಿ ಒಂದು ಪರಿಹಾರ ಸೃಷ್ಟಿಸುವುದು.

9) ಹಣಕಾಸಿನ ಮತ್ತು ಇತರ ಮಾರುಕಟ್ಟೆ ವ್ಯವಹಾರಗಳು ಹೇಗೆ ಬದಲಾಗುತ್ತವೆಂಬುದನ್ನು ತಿಳಿಯುವುದು ಮತ್ತು ಮುನ್ಸೂಚನೆ ಹೊಂದುವುದು ಮತ್ತು ಅಂತಹ ಬದಲಾವಣೆಗಳಿಗೆ ಸಿದ್ಧವಾಗಿರುವುದು ಹೇಗೆ.

ಜ್ಞಾನ ವಾಕ್ಯವು ಹೇಗೆ ಪಡೆದುಕೊಳ್ಳಲಾಗುತ್ತದೆ

ಪವಿತ್ರಾತ್ಮನು ನಮ್ಮಲ್ಲಿ ಆತ್ಮದ ಇಂದ್ರಿಯಗಳಲ್ಲಿ ಯಾವುದಾದರೊಂದನ್ನು ಜ್ಞಾನವಾಕ್ಯದ ಮೂಲಕವಾಗಿ ನಮಗೆ ಸಂಪರ್ಕಿಸಲು ಉಪಯೋಗಿಸಬಹುದು ಒಂದು ಚಿಕ್ಕದಾದ ಪಟ್ಟಿಯು ಇಲ್ಲಿದೆ.

ಇವುಗಳಲ್ಲಿ ಅನೇಕವಾದವು (ಮತ್ತು ಇತರೆ ಮಾರ್ಗಗಳು) ಸಂಯೋಜನೆಯಲ್ಲಿ ಕಾರ್ಯ ಮಾಡುತ್ತವೆ ಎಂಬುದನ್ನು ನೆನಪಿನಲ್ಲಿಟ್ಟುಕೋಳ್ಳಬೇಕು ಮತ್ತು ನೀವು ಇವುಗಳನ್ನು ಒಟ್ಟಿಗೆ ಸೇರಿಸಬೇಕಾಗಿದೆ ಮತ್ತು ನೀವು ಪಡೆದುಕೋಳ್ಳುತ್ತಿರುವುದನ್ನು ಸ್ಪಷ್ಟವಾಗಿ ಸಂಪರ್ಕ ಮಾಡಿರಿ.

ಧರ್ಮ ಗ್ರಂಥವನ್ನು ತ್ವರಿತಗೊಳಿಸುವುದು

ಪವಿತ್ರಾತ್ಮನು ಒಂದು ವಚನ ಅಥವಾ ಧರ್ಮಗ್ರಂಥದ ಭಾಗವನ್ನು ತ್ವರಿತಗೊಳಿಸಬಹುದು ಮತ್ತು ನೀವು ಮೋದಲು ನೋಡಿರದಂತಹ ಒಳನೋಟಗಳನ್ನು ತೋರಿಸಬಹುದು ಮತ್ತು ಪ್ರತಿನಿಧಿಸಬೇಕಾದ ಅಗತ್ಯವಿರುವ ಪರಿಸ್ಥಿತಿಗೆ ಅದನ್ನು ಅನ್ವಯಿಸುವಂತೆ ಮಾಡಬಹುದು.

ಒಳಗಿನಿಂದ ತಿಳಿದಿರುವುದು

ನಿಮ್ಮ ಕೇಳುವ ನಮ್ಮಿ ಆತ್ಮದ ಇಂದ್ರಿಯದ ಮೂಲಕವಾಗಿ, ಪವಿತ್ರಾತ್ಮನು ನೀಮ್ಮ ಆತ್ಮಕ್ಕೆ ಒಂದು ಪದ, ಒಂದು ವಾಕ್ಯಾ ಅಥವಾ ಒಂದು ದೋಡ್ಡದಾದ ಮೋತ್ತದ ಮಾಹಿತಿಯನ್ನು "ಡೌನ್‌ಲೋಡ್" (ಇಳಿಸುವಿಕೆ) ಇದರ ಪಾಲುಕೊಡಬಹುದು ನೀವು ಅರಿಯಿರಿ ಮತ್ತು ಮಾತನಾಡಲು ಪ್ರಾರಂಭಿಸಿರಿ.

ನೀವು ಒಂದು ಪದ , ಪದಗಳು ಅಥವಾ ವಾಕ್ಯಗಳನ್ನು ನೋಡುತ್ತೀರಿ

ಪವಿತ್ರಾತ್ಮನು ಒಂದು ಪದ ಅಥವಾ ಪದಗಳು ಅಥವಾ ವಾಕ್ಯಗಳ ಒಂದು ಸರಣಿಯನ್ನು ಕೊಡುವ ಸಮಯಗಳಿವೆ. ನಿಮ್ಮ ಆತ್ಮದ ಕಣ್ಣುಗಳ ಮೂಲಕವಾಗಿ ಈ ವಾಕ್ಯಗಳನ್ನು ನೀವು "ನೋಡುತ್ತೀರಿ" . ಉದಾಹರಣೆಗೆ, ಒಬ್ಬ ವ್ಯಕ್ತಿಯ ಮೇಲೆ ನೀವು ಪ್ರಾರ್ಥಿಸುವಾಗ ಅವರ ಭವಿಷ್ಯತ್ತಿನ ಕುರಿತು ಅಥವಾ ಸಿದ್ಧಗೊಳ್ಳುತ್ತಿರುವ ಅಧ್ಯಯನ ಕ್ಷೇತ್ರದ ಬಗ್ಗೆ "ಶುಶ್ರೂಷೆ" (ದಾದಿ) ಎಂಬ ಪದಗಳನ್ನು ನೀವು ನೋಡಬಹುದು.

ಪ್ರೇರಿತಗೊಂಡ, ಪೂರ್ವ ಸಿದ್ಧತೆಯಿಲ್ಲದೆ ಮಾತನಾಡುವುದು

ನೀವು ಮಾತನಾಡಲು ಪ್ರಾರಂಭಿಸುವ ಮತ್ತು ಒಂದು ಪ್ರೇರಣೆಯನ್ನು ನೀವು ಗ್ರಹಿಸುವ ಮತ್ತು ನೀವು ಮಾತನಾಡಲು ಆರಂಭಿಸುವ ಮತ್ತು ನೀವು ಇದಕ್ಕೂ ಮುಂಚೆ ಆಲೋಚಿಸದೇ ಇರುವ ಸಂಗತಿಗಳನ್ನು ಹೇಳುವ ಸಮಯಗಳಿವೆ. ನೀವು ಮಾತನಾಡುತ್ತಿರುವಂತೆ ಆಲೋಚನೆಗಳು ಮತ್ತು ವಿಚಾರಗಳು ಬರುತ್ತಿರುತ್ತವೆ ಮತ್ತು ಇವೆಲ್ಲವು ಆದ ಬಳಿಕ ಪರಿಸ್ಥಿತಿಗಾಗಿ ದೇವರ ಮನಸ್ಸನ್ನು ನೀವು ಪ್ರಕಟಿಸುತ್ತೀರಿ ಅಥವಾ ಕನಸ್ಸಿನ ಅರ್ಥವನ್ನು ಪ್ರಕಟಪಡಿಸುತ್ತೀರಿ.

ಕನಸ್ಸುಗಳು ಅಥವಾ ದರ್ಶನಗಳು

ಜ್ಞಾನದ ವಾಕ್ಯಗಳು ದರ್ಶನಗಳು ಅಥವಾ ಕನಸ್ಸುಗಳ ಮೂಲಕವಾಗಿ ಪ್ರಕಟಿಸಲ್ಪಡುತ್ತವೆ. ನೀವು ನಿದ್ರೆಯಿಂದ ಎಚ್ಚರಗೊಳ್ಳುತ್ತೀರಿ ಮತ್ತು ಒಂದು ಸಮಸ್ಯೆಗೆ ಪರಿಹಾರವನ್ನು ಅಥವಾ ನೀವು ಏನು ಮಾಡಬೇಕೆಂದು ದೇವರು ಅಪೇಕ್ಷಿಸುತ್ತಾನೆ ಎಂಬುದರ ಸ್ಪಷ್ಟವಾದ ಸಲಹೆಗಳನ್ನು ಪಡೆಯುವಂತಹ ಕನಸ್ಸನ್ನು ಕಂಡಿರಿ ಎಂಬುದಾಗಿ ತಿಳಿಯುತ್ತೀರಿ. ದರ್ಶನಗಳು ಯಾವುದೇ ಸಮಯದಲ್ಲಿಯಾದರೂ ನೀವು ಎಚ್ಚರವಾಗಿರುವಾಗ ಅಥವಾ ನಿದ್ದೆ ಮಾಡುವಾಗ ಬರಬಹುದು. ದರ್ಶನದಲ್ಲಿ ನೀವು ಏನು ಮಾಡಬೇಕೆಂದು ದೇವರು ಬಯಸುವ ಅಥವಾ ಏನು ಸಂಭವಿಸುತ್ತದೆಂಬುದನ್ನು ನೀವು ನೋಡಬಹುದು ಆದ್ದರಿಂದ ನೀವು ಕ್ರಿಯಾರೂಪದ ಸರಿಯಾದ ಹಾದಿಗಾಗಿ ಸಿದ್ಧವಾಗಬಹುದು. ದೇವದೂತರು ಸಹ ಸಂದೇಶಗಳನ್ನು ತರಲು ದರ್ಶನಗಳಲ್ಲಿ ಮತ್ತು ಕನಸ್ಸುಗಳಲ್ಲಿ ಕಾಣಿಸಿಕೊಳ್ಳಬಹುದು.

ದೇವದೂತ ಸಂದೇಶಗಾರರು

ದೇವದೂತರು ದಾನಿಯೇಲ,ಯೋಸೇಫ ಮತ್ತು ಪೌಲನು ಮತ್ತು ಇತರೆ ಅನೇಕರಿಗೆ ಕಾಣಿಸಿಕೊಂಡಿದ್ದನ್ನು, ಏನು ಮಾಡಬೇಕು ಅಥವಾ ತೊಂದರೆಯಿಂದ ಹೇಗೆ ಹೊರ

ಬರಬೇಕು ಅಥವಾ ತಪ್ಪಿಸಿಕೊಳ್ಳಬೇಕೆಂಬುದರ ಸಂದೇಶಗಳನ್ನು ತರುತ್ತಿದ್ದನ್ನು ನಾವು ನೋಡುತ್ತೇವೆ.

ಜ್ಞಾನ ವಾಕ್ಯವನ್ನು ಹಂಚುವುದು ಹೇಗೆ

ಒತ್ತಾಯಿಸಬೇಡಿರಿ ಬಲವಂತ ಮಾಡಬೇಡಿರಿ ಮತ್ತು ಕ್ರಿಯೆಯ ಬೇಡಿಕೆಯಿಡಬೇಡಿರಿ

ಜ್ಞಾನದ ವಾಕ್ಯವನ್ನು ಬೇರೊಬ್ಬರಿಗೆ ಹಂಚಿಕೊಳ್ಳುವಾಗ ಅದು ಅಗತ್ಯವಾದ ಕ್ರಿಯೆಯನ್ನು ತೆಗೆದುಕೊಳ್ಳುವುದಕ್ಕೆ ಅವಶ್ಯವಿದ್ದಲ್ಲಿ(ಅವರ ಭವಿಷ್ಯತ್ತಿನ ಕುರಿತು, ಅವರ ವಿದ್ಯಾಭ್ಯಾಸದ ಕುರಿತು, ವೃತ್ತಿ ಮುಂತಾದವು) ಇದನ್ನು ಅವರೊಂದಿಗೆ ತಗ್ಗಿಸುವಿಕೆ ಮತ್ತು ಸಮರ್ಪಣೆಯೊಡನೆ ಸಂಪರ್ಕಿಸಿರಿ. ಆ ಮೇಲೆ ದೇವರನ್ನು ವೈಯಕ್ತಿಕವಾಗಿ ಹುಡುಕಲು ಮತ್ತು ಅವರು ಏನು ಮಾಡಬೇಕೆಂದು ದೇವರು ಮಾರ್ಗದರ್ಶಿಸುವುದನ್ನು ಮಾಡುವಂತೆ ಪ್ರೋತ್ಸಾಹಿಸಬೇಕು. ಅವರೊಡನೆ ಹಂಚಿಕೊಂಡಿದ್ದನ್ನು ಮಾಡಬೇಕೆಂಬುದಾಗಿ ಬೇಡಿಕೆ ಅಥವಾ ಬಲವಂತ ಅಥವಾ ಒತ್ತಾಯ ಮಾಡಬೇಡಿರಿ.

ಅಗತ್ಯವಿರುವ ಪರಿಶ್ರಮ ಮತ್ತು ಶ್ರದ್ಧೆಯನ್ನು ಸ್ಪಷ್ಟಪಡಿಸಿ ಮತ್ತು ಪ್ರೋತ್ಸಾಹಿಸಿರಿ

ಪ್ರತಿ ದೇವರ-ಕಲ್ಪನೆಯು ಕೌಶಲ್ಯ ಪೂರ್ಣ ಕಾರ್ಯಗತದ ಅಗತ್ಯವಿದೆ. ಜ್ಞಾನದ ವಾಕ್ಯವು ಪರಿಶ್ರಮ ಮತ್ತು ಕಷ್ಟಕರ ಕೆಲಸ , ಜ್ಞಾನದದೊಡನೆ ಕಾರ್ಯಗತಗೊಳಿಸಬೇಕು ಆದ್ದರಿಂದ ನೀವು ಜ್ಞಾನದ ವಾಕ್ಯವನ್ನು ಸಮರ್ಪಿಸಿದಾಗ, ಅದು ತೊಂದರೆ ಬಗೆಹರಿಸುತ್ತದೆ, ಜನರು ಅದರ ಮೂಲಕವಾಗಿ ಹಾದು ಹೋಗುವಂತೆ ಪ್ರೋತ್ಸಾಹಿಸುತ್ತದೆ, ಸತತವಾಗಿ ಪ್ರಯತ್ನಿಸಬೇಕು ಮತ್ತು ಅದರಲ್ಲಿ ಕೆಲಸ ಮಾಡಿ. ಅವರ ತೊಂದರೆಗಳನ್ನು ಬಗೆಹರಿಸಲು ದೇವರಿಂದ ಜ್ಞಾನದ ವಾಕ್ಯವನ್ನು ನೀವು ಬಿಡುಗಡೆ ಮಾಡಿದ್ದರಿಂದ ಅವರು ಅಜಾಗರೂಕರಾಗಿ ,ಸೋಮಾರಿಯಾಗಿ ಮತ್ತು ಅವರು ಯಾವುದೇ ವಿಷಯಗಳ ಮೇಲೆ ಕೆಲಸಮಾಡದೆ ಎಲ್ಲವೂ ಸರಿಯಾದ ಸ್ಥಳದಲ್ಲಿರುತ್ತವೆಂಬುದಾಗಿ ಅದು ಸೂಚಿಸುವುದಿಲ್ಲ.

ಒಪ್ಪಿಕೊಳ್ಳಲು ಇತರರಿಗೆ ಮನವರಿಕೆ ಮಾಡಲು ಯಾವುದೇ ಒತ್ತಡವಿಲ್ಲ

ಕೆಲವೊಮ್ಮೆ ಜ್ಞಾನದ ವಾಕ್ಯವು ಸಾಮೂಹಿಕ ಅನುಮೋದನೆ ಅಥವಾ ಒಂದು ತಂಡದ ಇತರೆ ಅನೇಕರಿಂದ ಒಪ್ಪಂದ ಅಥವಾ ನಿಮ್ಮ ಮೇಲೆ ಅಧಿಕಾರದಲ್ಲಿರುವದರಿಂದ ಅನುಮೋದನೆಯ ಅಗತ್ಯವಿರುತ್ತದೆ. ಈ ವಿಷಯದಲ್ಲಿ ಇತರರ ಪಾಲ್ಗೊಳ್ಳುವಿಕೆಯನ್ನು ಗೌರವಿಸಿ. ನೀವು ಹಂಚಿಕೊಂಡದ್ದು ಉತ್ತಮ ಪರಿಹಾರ ಅಥವಾ ಸರಿಯಾದ ಕ್ರಿಯೆಯ ಹಾದಿ ಎಂದು ಗುರುತಿಸಲು ದೇವರು ಅವರ ಹೃದಯದಲ್ಲಿ ಚಲಿಸಲಿ ನೀವು

ಪಡೆದುಕೊಂಡಿದ್ದನ್ನು ಬಿಡುಗಡೆ ಮಾಡುವಲ್ಲಿ ನಿಮ್ಮ ಭಾಗದ ಪಾತ್ರವನ್ನು ನೀವು ಮಾಡಿದ್ದೀರಿ. ಇತರರಿಗೆ ಮನವರಿಕೆ ಮಾಡುವ ಒತ್ತಡ ಅಥವಾ ಜವಬ್ದಾರಿಯನ್ನು ಅನುಭವಿಸಬೇಡಿರಿ. ನೀವು ಸಂಪರ್ಕ ಮಾಡಿದ್ದನ್ನು ಅವರು ತೆಗೆದುಕೊಳ್ಳದಿದ್ದರೆ ಇತರರ ಬಗ್ಗೆ ಕೆಟ್ಟದ್ದಾಗಿ ಮಾತನಾಡಬೇಡಿ ಅಥವಾ ಕೆಟ್ಟ- ಬಾಯಿ ಹಾಕಬೇಡಿ ಅಥವಾ ನ್ಯಾಯತೀರ್ಪು ಮಾಡಬೇಡಿರಿ.

ಕೆಲವು ಇತರೆ ಆಲೋಚನೆಗಳು

ನಾವು ಜ್ಞಾನ ವಾಕ್ಯವನ್ನು ಬಿಡುಗಡೆಗೊಳಿಸುವುದರ ನಿಮಿತ್ತದಿಂದ ನಾವು ಕಲಿಯಬಾರದು. ನಮ್ಮನ್ನು ನಾವು ಶಿಕ್ಷಣ, ತರಬೇತಿ ಮತ್ತು ಸಜ್ಜುಗೊಂಡಿರಬಾರದು ಎಂಬುದಾಗಿ ಅರ್ಥವಲ್ಲ.

ನಿಮಗೆ ಎಲ್ಲಾ ಜ್ಞಾನವಿದೆ ಎಂಬುದಾಗಿ ನಟಿಸಬೇಡಿರಿ ಮತ್ತು ಇತರರಿಂದ ಸಲಹೆ, ಸೂಚನೆ, ಬೋಧನೆ ಮತ್ತು ಇತರರಿಂದ ತಿದ್ದುಪಡಿಯನ್ನು ಪಡೆಯುವ ಅಗತ್ಯವಿಲ್ಲ ಅಂದುಕೊಳ್ಳಬೇಡಿರಿ.

11.ವಿವೇಕದ ವಾಕ್ಯ

ಅರ್ಥ ನಿರೂಪಣೆ

ವಿವೇಕ ವಾಕ್ಯದ ವರವು ದೈವಿಕ ಜ್ಞಾನದ ಅಪ್ರಾಕೃತ ಪಾಲುಕೊಡುವಿಕೆಯಾಗಿದ್ದು ಅದು ಹಿಂದಿನ ಮತ್ತು ಪ್ರಸ್ತುತ ವಸ್ತುಗಳ ಸಂಗತಿಗಳನ್ನು ಪ್ರಕಟಿಸುತ್ತದೆ.

ವಿವೇಕದ ಒಂದು ವಾಕ್ಯ

• ವ್ಯಕ್ತಿಯು (ಅಥವಾ ವ್ಯಕ್ತಿಗಳು) ದೇವರು ಅವರನ್ನು ವೈಯಕ್ತಿಕವಾಗಿ ತಿಳಿದಿದ್ದಾನೆ ಮತ್ತು ಅವರನ್ನು ಆಳವಾಗಿ ಪ್ರೀತಿಸುತ್ತಾನೆ ಎಂಬುದನ್ನು ತಿಳಿಯಲು ಅವಕಾಶ ನೀಡುವುದಾಗಿದೆ.

• ದೇವರು ಏನು ಮಾಡುತ್ತಿದ್ದಾನೆ ಎಂಬುದನ್ನು ನಮಗೆ ತಿಳಿಸುತ್ತದೆ. ಉದಾಹರಣೆಗೆ ಸ್ವಸ್ಥತೆಯ ಕುರಿತು ವಿವೇಕದ ವಾಕ್ಯವು ದೇವರು ಆ ಕ್ಷಣದಲ್ಲಿ ಸ್ವಸ್ಥ ಪಡಿಸುತ್ತಿರುವ ಪರಿಸ್ಥಿತಿ (ಅಥವಾ ಪರಿಸ್ಥಿತಿಗಳನ್ನು ಪ್ರಕಟಿಸುತ್ತದೆ.)

• ದೇವರು ಬಗೆಹರಿಸಲು, ಸ್ವಸ್ಥಮಾಡಲೂ ಸಂಕಲ್ಪಿಸುತ್ತಿರುವ ಹಿಂದಿನ ಪರಿಸ್ಥಿತಿಗಳು ಅಥವಾ ತೊಂದರೆಗಳನ್ನು ಪ್ರಕಟಿಸುತ್ತದೆ.

• ಘಟನೆಗಳನ್ನು ಪ್ರಸಕ್ತವಾಗಿ ಜರುಗುತ್ತಿರುವ ಜನರ ಕಾರ್ಯಗಳನ್ನು ಪ್ರಕಟಿಸುತ್ತದೆ. ಆದ್ದರಿಂದ ನಾವು ಸೂಕ್ತ ಪ್ರತಿಕ್ರಿಯೆ ಮಾಡಬಹುದು.

• ಇನ್ನೂ ಅತ್ಯಧಿಕವಾದವುಗಳು.

ಒಂದು ಪದವು ಒಂದು ವಾಕ್ಯದ ಭಾಗವಾಗಿದೆ. ಆದ್ದರಿಂದ ಇದು ವಿವೇಕದ ವಾಕ್ಯದ ವರ ಎಂಬುದಾಗಿ ಕರೆಯಲ್ಪಟ್ಟದೆ. ನಿರ್ದಿಷ್ಟ ಉದ್ದೇಶಗಳನ್ನು ಸಾಧಿಸುವ ಕ್ರಮದಲ್ಲಿ ಆತನು ಅಪ್ರಾಕೃತವಾಗಿ ಪಾಲು ಕೊಡುವ ದೇವರ ಅಪರಿಮಿತ ಜ್ಞಾನದ ಒಂದು ಚಿಕ್ಕ ತುಂಡು ಇದಾಗಿದೆ.

ವಿವೇಕ ಪದದ ವರವು ನಿಮಗೆ ಈಗಾಗಲೇ ತಿಳಿದಿರುವ ಮಾಹಿತಿಯ ಮೇಲೆ ಅವಲಂಬಿತವಾಗಿಲ್ಲ. ಇದು ಸ್ವಾಧೀನಪಡಿಸಿಕೊಂಡ ಮಾಹಿತಿ ಅಥವಾ ಜ್ಞಾನ ವಲ್ಲ.

ಈ ಕೆಳಕಂಡವುಗಳು ಕೆಲವು ಸತ್ಯವೇದ ಉದಾಹರಣೆಗಳು .

ಸತ್ಯವೇದದ ಉದಾಹರಣೆಗಳು : ಹಳೇ ಒಡಂಬಡಿಕೆ

ಸಮುವೇಲನು ಮತ್ತು ಸೌಲನ ಕತ್ತೆಗಳು

ಸೌಲನು ಅವನ ತಂದೆಯ ಕಳೆದುಹೋದ ಕತ್ತೆಗಳನ್ನು ಹುಡುಕುವುದರಲ್ಲಿ ಅನೇಕ ದಿವಸಗಳನ್ನು ಕಳೆದನು. ಅವನು ಅಂತಿಮವಾಗಿ ಒಬ್ಬ ಕಾಲಜ್ಞಾನಿಯ ಬಳಿಗೆ ಹೋಗು ತೀರ್ಮಾನಿಸಿದನು ಮತ್ತು ಸಮುವೇಲನ ಬಳಿಗೆ ಬಂದನು. ಸಮುವೇಲನು ಸೌಲನಿಗೆ ಹೀಗೆ ತಿಳಿಸಿದನು "ಮೂರು ದಿವಸಗಳ ಹಿಂದೆ ತಪ್ಪಿಸಿಕೊಂಡ ನಿನ್ನ ಕತ್ತೆಗಳಿಗೋಸ್ಕರ ಚಿಂತೆಮಾಡಬೇಡ ಅವು ಸಿಕ್ಕವೆ" (1 ಸಮುವೇಲನು 9:20).

ಎಲೀಷ ಮತ್ತು ಗೇಹಜಿ

ಗೇಹಜಿಯು, ಎಲೀಷನ ಸೇವಕನಾದವನಾಗಿದ್ದು ನಾಮಾನನಿಗೆ ಸುಳ್ಳು ಹೇಳಿದನು ಮತ್ತು ಅನೇಕ ವಸ್ತುಗಳನ್ನು ನಾಮಾನನಿಂದ ತನಗಾಗಿ ಪಡೆದನು ಮತ್ತು ಅವನ ಮನೆಯಲ್ಲಿ ಬಚ್ಚಿಟ್ಟಿದ್ದನು "ಅವರು ಹೋದನಂತರ ಇವನು ತನ್ನ ಯಜಮಾನನ ಬಳಿಗೆ ಬಂದನು ಎಲೀಷನು ಅವನನ್ನು ಗೇಹಜಿಯೇ ಎಲ್ಲಿಗೆ ಹೋಗಿ ಬಂದಿ ಎಂದು ಕೇಳಿದನು ಅದಕ್ಕೆ ಅವನು ನಿನ್ನ ಸೇವಕನಾದ ನಾನು ಎಲ್ಲಿಯೂ ಹೋಗಲಿಲ್ಲ ಎಂದು ಉತ್ತರಕೊಟ್ಟನು ಆಗ ಎಲೀಷನು ಅವನಿಗೆ ಒಬ್ಬನು ರಥದಿಂದಿಳಿದು ಬಂದು ನಿನ್ನನ್ನು ಎದುರುಗೊಂಡಿದ ನನ್ನ ಜ್ಞಾನ ದೃಷ್ಟಿಗೆ ಕಾಣಿಸಲಿಲ್ಲವೆಂದು ನೆನಸುತ್ತೀಯೋ ? ದ್ರವ್ಯ, ಬಟ್ಟೆಗಳು, ಎಣ್ಣೇಮರದ ತೋಪುಗಳು, ದ್ರಾಕ್ಷೇತೋಟಗಳು, ಕುಂದನಗಳು ದಾಸದಾಸೀ ಜನವು ಇವುಗಳನ್ನು ಸಂಪಾದಿಸುವದಕ್ಕೆ ಇದು ಸಮಯವೋ ? ನಾಮಾನನ ಕುಷ್ಟವು ನಿನ್ನನ್ನೂ ನಿನ್ನ ಸಂತಾನದವರನ್ನೂ ಸದಾಕಾಲ ಹಿಡಿದಿರುವದು ಅಂದನು ಕೂಡಲೆ ಅವನಿಗೆ ಕುಷ್ಟ ಹತ್ತಿತು. ಅವನು ಹಿಮದಂತೆ ಬಿಳುಪಾಗಿ ಅವನ ಸನ್ನಿಧಿಯಿಂದ ಹೊರಟು ಹೋದನು (2 ಅರಸುಗಳು 5:25-27).

ಸಿರಿಯಾದ ಅರಸನ ಯುದ್ದದ ಯೋಜನೆಗಳನ್ನು ಎಲೀಷನು ಪ್ರಕಟಿಸಿದನು

"ಆರಾಮ್ಯರ ಅರಸನು ಇಸ್ರಾಯೇಲ್ಯರಿಗೆ ವಿರೋಧವಾಗಿ ಯುದ್ಧಕ್ಕೆ ಬಂದನು ಅವನು ಯುದ್ದದಲ್ಲಿ ಹೊಂಚುಹಾಕತಕ್ಕ ಸ್ಥಳವನ್ನು ತಮ್ಮ ಸೇನಾಪತಿಗಳೊಡನೆ ಗೊತ್ತು ಮಾಡುವಷ್ಟು ಸಾರಿ ದೇವರ ಮನುಷ್ಯನು ಸೂಚಿಸುವ ಎಲ್ಲಾ ಸ್ಥಳಗಳಿಗೂ ಇಸ್ರಾಯೇಲ್ಯರ ಅರಸನು ಹೇಳಿ ಕಳುಹಿಸುತ್ತಿದ್ದನು. ಹೀಗೆ ಅವನು ಹಲವು ಸಾರಿ ಆರಾಮ್ಯರ ಅರಸನ ಕೈಗೆ ಸಿಕ್ಕದಂತೆ ತಪ್ಪಿಸಿಕೊಂಡನು ಇದರ ದಸೆಯಿಂದ ಅರಾಮ್ಯರ ಅರಸನು ಕಳವಳಗೊಂಡು ತನ್ನ ಇಸ್ರಾಯೇಲ್ಯರ ಅರಸನ ಪಕ್ಷದವರು ಯಾರು? ನನಗೆ ತಿಳಿಸುವದಿಲ್ಲವೋ ಎಂದು ಕೇಳಿದನು. ಆಗ ಅವರಲ್ಲೊಬ್ಬನು ಅವನಿಗೆ ನನ್ನ ಒಡೆಯನಾದ ಅರಸೇ ಹಾಗಲ್ಲ ಇಸ್ರಾಯೇಲ್ಯರಲ್ಲಿ ಎಲೀಷನೆಂಬೊಬ್ಬ ಪ್ರವಾದಿಯಿರುತ್ತಾನೆ. ನೀನು ನಿನ್ನ ಮಲಗುವ

ಕೋಣೆಯಲ್ಲಿ ಆಡುವ ಮಾತುಗಳನ್ನು ಸಹ ಅವನು ಅರಿತುಕೊಂಡು ಎಲ್ಲವನ್ನೂ ಇಸ್ರಾಯೇಲ್ಯರ ಅರಸನಿಗೆ ತಿಳಿಸುತ್ತಾನೆ ಅಂದನು" (2 ಅರಸುಗಳು 6:8-12).

ದಾನಿಯೇಲನು ಅರಸನ ಕನಸ್ಸುಗಳನ್ನು ಪ್ರಕಟಿಸಿದನು

"ಅದಕ್ಕೆ ದಾನಿಯೇಲನು ಸನ್ನಿಧಿಯಲ್ಲಿ ರಾಜನು ಕೇಳುವ ರಹಸ್ಯವನ್ನು ವಿದ್ವಾಂಸರಾಗಲಿ ಮಾಟಗಾರರಾಗಲಿ ಜೋಯಿಸರಾಗಲಿ, ಶಕುನದವರಾಗಲಿ ಯಾರು ರಾಜನಿಗೆ ತಿಳಿಸಲಾರರು ಆದರೆ ರಹಸ್ಯಗಳನ್ನು ವ್ಯಕ್ತಗೊಳಿಸುವ ಒಬ್ಬನಿದ್ದಾನೆ ಆತನು ದೇವರು ಪರಲೋಕದಲ್ಲಿದ್ದಾನೆ. ಉತ್ತರಕಾಲದಲ್ಲಿ ನಡೆಯತಕ್ಕದನ್ನು ಆತನೇ ರಾಜನಾದ ನೆಬೂಕದ್ನೆಚ್ಚರನಿಗೆ ತಿಳಿಯಪಡಿಸಿದ್ದಾನೆ. ನಿನ್ನ ಕನಸು, ಹಾಸಿಗೆಯ ಮೇಲೆ ನಿನ್ನ ಮನಸ್ಸಿನಲ್ಲಿ ಬಿದ್ದ ಸ್ವಪ್ನಗಳು ಇವೇ – ರಾಜನೇ ನೀನು ಹಾಸಿಗೆಯ ಮೇಲೆ ಮಲಗಿರುವಾಗ ಮುಂದೆ ಏನಾಗುವದೋ ಎಂಬ ಯೋಚನೆಯು ನಿನ್ನಲ್ಲಿ ಹುಟ್ಟಿತಲ್ಲಾ ರಹಸ್ಯಗಳನ್ನು ವ್ಯಕ್ತಗೊಳಿಸುವಾತನು ಮುಂದಾಗುವದನ್ನು ನಿನಗೆ ಗೋಚರ ಮಾಡಿದ್ದಾನೆ" (ದಾನಿಯೇಲನು 2:27-30).

ನಡೆಯುತ್ತಿರುವ ಸಂಗತಿಗಳನ್ನು ಆತ್ಮದಲ್ಲಿ ನೋಡಲು ಮತ್ತು ದರ್ಶನಗಳಲ್ಲಿ ಯೆಹೆಜ್ಕೇಲನು ಸಾಗಿಸಲ್ಪಟ್ಟನು

"ಆಗ ಆ ತೇಜೋರೂಪಿಯು ಮನುಷ್ಯ ಹಸ್ತದಂಥ ಹಸ್ತವನ್ನು ಚಾಚಿ ನನ್ನ ಚಂಡಿಕೆಯನ್ನು ಹಿಡಿಯಲು ದೇವರಾತ್ಮನು ನನ್ನನ್ನು ಎತ್ತಿಕೊಂಡು ಭೂಮ್ಯಾಕಾಶಗಳ ನಡುವೆ ಯೆರೂಸಲೇಮಿನವರೆಗೆ ಒಯ್ದು ಒಳಗಣ ಪ್ರಾಕಾರದ ಬಡಗಣ ಯೆರೂಸಲೇಮಿನವರೆಗೆ ಒಯ್ದು ಒಳಗಣ ಪ್ರಾಕಾರದ ಬಡಗಣ ಬಾಗಿಲ ಮುಂದೆ ದೇವರನ್ನು ರೋಷಗೊಳಿಸುವ ವಿಗ್ರಹವು ಮೊದಲಿದ್ದ ಸ್ಥಳದಲ್ಲಿ ನಿಲ್ಲಿಸಿದ ಹಾಗೆ ದೇವರ ದರ್ಶನದಲ್ಲಿ ಕಂಡು ಬಂತು ಆಹಾ ಇಸ್ರಾಯೇಲಿನ ದೇವರ ಮಹಿಮಾದ್ಭುತ ದರ್ಶನವು ಬೈಲು ಸೀಮೆಯಲ್ಲಿ ಆದಂತೆ ಇಲ್ಲಿಯೂ ನನಗಾಯಿತು ಆಗ ಆತನು ನನಗೆ ನರಪುತ್ರನೇ ಬಡಗಲಿಗೆ ಕಣ್ಣೆತ್ತಿ ನೋಡು ಎಂದು ಹೇಳಿದನು. ಹಾಗೆ ನಾನು ಬಡಗಲಿಗೆ ಕಣ್ಣೆತ್ತಿ ನೋಡಲು ಇಗೋ ದೇವರನ್ನು ರೋಷಗೊಳಿಸುವ ಆ ವಿಗ್ರಹವೇ ಯಜ್ಞವೇದಿಯ ಬಾಗಿಲ ಬಡಗಲಲ್ಲಿ ಬಾಗಿಲ ಮುಂದೆ ನಿಂತಿತ್ತು. ಆಗ ಆತನು ನನಗೆ ನರಪುತ್ರನೇ ಇವರು ಮಾಡುವದನ್ನು ನೋಡಿದಿಯಾ? ಇಸ್ರಾಯೇಲ್ ವಂಶದವರು ಇಲ್ಲಿ ನಡಿಸುವ ಅಧಿಕ ದುರಾಚಾರಗಳನ್ನು ಕಂಡಿಯಾ? ಇದರಿಂದ ನಾನು ನನ್ನ ಪವಿತ್ರಾಲಯವನ್ನು ಬಿಟ್ಟು ದೂರ ಹೇಗಬೇಕಾಯಿತು, ಬಾ ಇವುಗಳಿಗಿಂತ ಇನ್ನೂ ಹೆಚ್ಚಾದ ದುರಾಚಾರಗಳನ್ನು ನೋಡುವಿ ಎಂದು ಹೇಳೀದನು ". (ಯೆಹೆಜ್ಕೇಲನು 8:3-6 ಹಾಗೆಯೇ ಯೆಹೆಜ್ಕೇಲನು 8:7-17, ಯೆಹೆಜ್ಕೇಲನು 11:1-4, ಯೆಹೆಜ್ಕೇಲನು 11:24-25, ಯೆಹೆಜ್ಕೇಲನು 37:1-4)

ಸತ್ಯವೇದದ ಉದಾಹರಣೆಗಳು : ಹೊಸ ಒಡಂಬಡಿಕೆ

ಯೇಸುವು ನತಾನಯೇಲನನ್ನು ಭೇಟಿಮಾಡಿದ್ದು

"ಆಗ ಯೇಸು ತನ್ನ ಕಡೆಗೆ ಬರುವ ನತಾನಯೇಲನನ್ನು ಕಂಡು ಅವನ ವಿಷಯವಾಗಿ ಇಗೋ ಇವನು ನಿಜವಾದ ಇಸ್ರಾಯೇಲನು ಇವನಲ್ಲ ಕಪಟವಿಲ್ಲ ಅಂದನು ನತಾನಯೇಲನು – ನನ್ನನ್ನು ನೀನು ಹೇಗೆ ಬಲ್ಲೆ ಎಂದು ಯೇಸುವನ್ನು ಕೇಳಿದ್ದಕ್ಕೆ ಆತನು ಫಿಲಿಪ್ಪನು ನಿನ್ನನ್ನು ಕರೆಯುವದಕ್ಕಿಂತ ಮುಂಚೆ ನೀನು ಆ ಅಂಜೂರದ ಮರದ ಕೆಳಗೆ ಇದ್ದಾಗ ನಿನ್ನನ್ನು ನೋಡಿದೆನು ಅಂದನು ಅದಕ್ಕೆ ನತಾನಯೇಲನು ಗುರುವೇ ನೀನು ದೇವ ಕುಮಾರನು ಸರಿ ನೀನೇ ಇಸ್ರಾಯೇಲಿನ ಅರಸನು ಅಂದನು" (ಯೋಹಾನ 1:47-49).

ಯೇಸುವು ಸಮಾರ್ಯದ ಸ್ತ್ರೀಯ ಹಿಂದಿನದ್ದರ ಸ್ವಲ್ಪವನ್ನು ಪ್ರಕಟಪಡಿಸಿದನು

"ಯೇಸು ಅವಳಿಗೆ – ಹೋಗಿ ನಿನ್ನ ಗಂಡನನ್ನು ಇಲ್ಲಿಗೆ ಕರಕೊಂಡು ಬಾ ಎಂದು ಹೇಳಿದನು ಅದಕ್ಕೆ ಆ ಹೆಂಗಸು ನನಗೆ ಗಂಡನಿಲ್ಲ ಅಂದಳು ಯೇಸು ಆಕೆಗೆ – ನನಗೆ ಗಂಡನಿಲ್ಲವೆಂದು ನೀನು ಹೇಳಿದ್ದು ಸರಿಯಾದ ಮಾತು ನಿನಗೆ ಐದು ಮಂದಿ ಗಂಡಂದಿರಿದ್ದರು, ಈಗ ಇರುವವನು ನಿನಗೆ ಗಂಡನಲ್ಲ; ನೀನು ಹೇಳಿದ್ದು ನಿಜವಾದ ಸಂಗತಿ ಅಂದನು. ಆ ಹೆಂಗಸು ಆತನಿಗೆ ಅಯ್ಯಾ ನೀನು ಪ್ರವಾದಿಯೆಂದ ನನಗೆ ಕಾಣುತ್ತದೆ. ಆಗ ಆ ಹೆಂಗಸು ತನ್ನ ಕೊಡವನ್ನು ಅಲ್ಲೇ ಬಿಟ್ಟು ಊರೊಳಕ್ಕೆ ಹೋಗಿ ಜನರಿಗೆ ಅಲ್ಲಿ ಒಬ್ಬನಿದ್ದಾನೆ ನಾನು ಇದುವರೆಗೆ ಮಾಡಿದ್ದನ್ನೆಲ್ಲಾ ನನಗೆ ಹೇಳಿದನು ಬಂದು ಅವನನ್ನು ನೋಡಿರಿ ಬರತಕ್ಕ ಕ್ರಿಸ್ತನು ಅವನೇ ಏನೋ ? " ...... (ಯೋಹಾನ 4:16-19,28-29).

ಕತ್ತೆಯನ್ನು ತರಲು ಯೇಸುವು ಆತನ ಶಿಷ್ಯರನ್ನು ಕಳುಹಿಸಿದ್ದು

"ಆತನು ಈ ಮಾತುಗಳನ್ನು ಹೇಳಿದ ಮೇಲೆ ಗಟ್ಟಾ ಹತ್ತಿ ಯೆರೂಸಲೇಮಿಗೆ ಮುಂದೆ ಮುಂದೆ ಹೋದನು ಆ ಮೇಲೆ ಆತನು ಎಣ್ಣೆಮರಗಳ ಗುಡ್ಡ ಎನಿಸಿಕೊಳ್ಳುವ ಗುಡ್ಡದ ಬಳಿಯಲ್ಲಿರುವ ಬೇತ್ಪಗೆಗೂ ಬೇಥಾನ್ಯಕ್ಕೂ ಸಮಿಪಿಸಿದಾಗ ಶಿಷ್ಯರಲ್ಲಿ ಇಬ್ಬರನ್ನು ಕರೆದು ನಿಮ್ಮೆದುರಿಗಿರುವ ಹಳ್ಳಿಗೆ ಹೋಗಿರಿ ಅದರೊಳಗೆ ಸೇರುತ್ತಿರುವಾಗಲೇ ಅಲ್ಲಿ ಕಟ್ಟಿರುವ ಒಂದು ಕತ್ತೆ ಮರಿಯನ್ನು ಕಾಣುವಿರಿ ಇದುವರೆಗೆ ಅದರ ಮೇಲೆ ಯಾರೂ ಹತ್ತಿಲ್ಲ ಅದನ್ನು ಬಿಚ್ಚಿ ಹಿಡುಕೊಂಡು ಬನ್ನಿರಿ. ಯಾವನಾದರೂ ನಿಮ್ಮನ್ನು ಯಾಕೆ ಬಿಚ್ಚುತ್ತೀರಿ ಎಂದು ಕೇಳಿದರೆ ಇದು ಸ್ವಾಮಿಯವರಿಗೆ ಬೇಕಾಗಿದೆ ಅನ್ನಿರಿ ಎಂದು ಹೇಳಿಕಳುಹಿಸಿದನು. ಕಳುಹಿಸಲ್ಪಟ್ಟವರು ಹೋಗಿ ಆತನು ತಮಗೆ ಹೇಳಿದಂತೆಯೇ ಕಂಡರು" (ಲೂಕ 19:28-32).

ಪೇತ್ರನು, ಅನನೀಯ ಮತ್ತು ಸಪ್ಫೈರಳು

ಅವರು ಭೂಮಿಯನ್ನು ಮಾರಿದ್ದಂತಹ ಮೊತ್ತವು ಮತ್ತು ಅವರು ಹಣದ ಸ್ವಲ್ಪಭಾಗವನ್ನು ಇಟ್ಟುಕೊಂಡಿದ್ದು ಪೇತ್ರನಿಗೆ ಗೊತ್ತಿತ್ತು (ಅಪೊಸ್ತಲರ ಕೃತ್ಯಗಳು 5:1-11) .

ಸೌಲನಿಗೆ ಸೇವೆ ಸಲ್ಲಿಸಲು ಅನನೀಯನು ಕಳುಹಿಸಲ್ಪಟ್ಟದ್ದು

ಕರ್ತನು ಅನನೀಯನಿಗೆ ಸೌಲನ ವಿಳಾಸವನ್ನು ಮತ್ತು ಸೌಲನು ಕಂಡಂತಹ ದರ್ಶನವನ್ನು ಪ್ರಕಟಿಸಿದನು. "ದಮಸ್ಕದಲ್ಲಿ ಅನನೀಯನೆಂಬ ಒಬ್ಬ ಶಿಷ್ಯನಿದ್ದನು. ಕರ್ತನು ದರ್ಶನದಲ್ಲಿ – ಅನನೀಯನೇ ಎಂದು ಅವನನ್ನು ಕರೆಯಲು ಅವನು ಕರ್ತನೇ ಇಗೋ ಇದ್ದೇನೆ ಅಂದನು. ಕರ್ತನು ಅವನಿಗೆ ನೀನೆದ್ದು ನೆಟ್ಟನೇ ಬೀದಿ ಎಂಬ ಬೀದಿಗೆ ಹೋಗಿ ಯೂದನ ಮನೆಯಲ್ಲಿ ತಾರ್ಸದ ಸೌಲನೆಂಬವನನ್ನು ವಿಚಾರಿಸು ಅವನು ಪಾರ್ಥನೆ ಮಾಡುತ್ತಾನೆ ಮತ್ತು ಅನನೀಯನೆಂಬ ಒಬ್ಬ ಮನುಷ್ಯನು ಒಳಗೆ ಬಂದು ತನಗೆ ತಿರಿಗಿ ಕಣ್ಣು ಕಾಣುವಂತೆ ತನ್ನ ಮೇಲೆ ಕೈಯಿಡುವದನ್ನು ನೋಡಿದ್ದಾನೆ ಎಂದು ಹೇಳಿದನು" (ಅಪೊಸ್ತಲರ ಕೃತ್ಯಗಳು 9:10-12).

ಕೊರ್ನೇಲ್ಯನಿಗೆ ದೇವದೂತನು ದರ್ಶನದಲ್ಲಿ ಕಾಣಿಸಿಕೊಂಡು ಹೆಸರು, ನಗರ, ವಿಳಾಸ ಕೊಟ್ಟಿದ್ದು

ಕೈಸರೈಯದಲ್ಲಿ ಇತಾಲ್ಯದ ಪಟಾಲಮೆನಿಸಿಕೊಳ್ಳುವ ಒಂದು ಪಟಾಲಮಿನ ಶತಾಧಿಪತಿಯಾದ ಕೊರ್ನೇಲ್ಯನೆಂಬ ಒಬ್ಬ ಮನುಷ್ಯನಿದ್ದನು ಅವನು ಭಕ್ತನೂ ತನ್ನ ಮನೆಯವರೆಲ್ಲರ ಸಹಿತವಾಗಿ ದೇವರಿಗೆ ಭಯಪಡುವವನೂ ಆಗಿದ್ದು ಜನರಿಗೆ ಬಹಳವಾಗಿ ದಾನ ಧರ್ಮ ಮಾಡುತ್ತಾ ದೇವರಿಗೆ ನಿತ್ಯವೂ ಪ್ರಾರ್ಥನೆ ಮಾಡುತ್ತಾ ಇದ್ದನು. ಮಧ್ಯಾಹ್ನದ ಮೇಲೆ ಸುಮಾರು ಮೂರು ಗಂಟೆಗೆ ಅವನಿಗೆ ಒಂದು ದರ್ಶನ ಉಂಟಾಗಿ ಒಬ್ಬ ದೇವದೂತನು ತನ್ನ ಬಳಿಗೆ ಬಂದು ಕೊರ್ನೇಲ್ಯನೇ ಎಂದು ಕರೆಯುವದನ್ನು ಅವನು ಪ್ರತ್ಯಕ್ಷವಾಗಿ ಕಂಡನು. ಅವನು ಆ ದೂತನನ್ನು ದೃಷ್ಟಿಸಿನೋಡಿ ಭಯಹಿಡಿದವನಾಗಿ ಏನೂ ಸ್ವಾಮಿ ಎಂದು ಕೇಳಲು ದೂತನು ಅವನಿಗೆ ನಿನ್ನ ಪ್ರಾರ್ಥನೆಗಳೂ ನಿನ್ನ ದಾನ ಧರ್ಮಗಳು ದೇವರ ಮುಂದೆ ಜ್ಞಾಪಕಾರ್ಥವಾಗಿ ಏರಿ ಬಂದವು. ಈಗ ನೀನು ಯೊಪ್ಪಕ್ಕೆ ಜನರನ್ನು ಕಳುಹಿಸಿ ಪೇತ್ರನೆನಿಸಿಕೊಳ್ಳುವ ಸೀಮೋನನನ್ನು ಕರೆಯಿಸಬೇಕು. ಅವನು ಚರ್ಮಕಾರನಾದ ಸೀಮೋನನ ಬಳಿಯಲ್ಲಿ ಇಳುಕೊಂಡಿದ್ದಾನೆ ಈ ಸೀಮೋನನ ಮನೆಯು ಸಮುದ್ರದ ಬಳಿಯಲ್ಲಿ ಅದೆ ಎಂದು ಹೇಳಿದನು. "(ಅಪೊಸ್ತಲರ ಕೃತ್ಯಗಳು 10:1-6).

ಕರ್ತನ ಭೋಜನದ ಪೌಲನ ಪ್ರಕಟನೆ

"ನಾನು ನಿಮಗೆ ತಿಳಿಸಿಕೊಟ್ಟ ಉಪದೇಶವನ್ನು ಕರ್ತನಿಂದ ಹೊಂದಿದೆನು ಅದೇನಂದರೆ ಕರ್ತನಾದ ಯೇಸು ತಾನು ಹಿಡಿದು ಕೊಡಲ್ಪಟ್ಟರಾತ್ರಿಯಲ್ಲಿ ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರ ಮಾಡಿ ಮುರಿದು ಇದು ನಿಮಗೋಸ್ಕರ ಹೀಗೆ ಮಾಡಿರಿ ಅಂದನು. ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು ಈ ಪಾತ್ರೆಯು ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ. ನೀವು ಇದರಲ್ಲಿ ಪಾನಮಾಡುವಾಗೆಲ್ಲಾ ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಪಾನ ಮಾಡಿರಿ ಅಂದನು (1 ಕೊರಿಂಥದವರಿಗೆ 11:23-25).

ಕಾರ್ಯಾಚರಣೆಗಳು

ವಿವೇಕದ ವಾಕ್ಯದ ವರವು ಉಪಯುಕ್ತವಾಗುವ ಕೆಲವು ಕ್ಷೇತ್ರಗಳ ಅನ್ವಯವು ಇಲ್ಲಿವೆ ಇದು ಸಂಪೂರ್ಣ ಪಟ್ಟಿ ಅಲ್ಲ.

1) ಜನರು ದೇವರಿಂದ ಪ್ರೀತಿಸಲ್ಪಟ್ಟಿದ್ದಾರೆ ಮತ್ತು ತಿಳಿದಿದ್ದಾರೆ ಎಂಬುದಾಗಿ ತಿಳಿಯಲು ಅವಕಾಶ ಮಾಡಿಕೊಡುತ್ತದೆ.
2) ತೊಂದರೆಗಳನ್ನು ಬಗೆಹರಿಸಲು ಸಹಾಯ ಮಾಡುತ್ತದೆ (ಕಳೆದು ಹೋದದ್ದನ್ನು ಗುರ್ತಿಸುವುದು, ನಷ್ಟದ ಕಾರಣ ಏನು ಎಂದು ಪ್ರಕಟಿಸುವುದು, ಹಣದ ದುರುಪಯೋಗ ಮಾಡುವಂತಹ ಜನರ ಉದಾಹರಣೆ)
3) ಪಾಪ ಮತ್ತು ರಾಜಿಮಾಡಿಕೊಳ್ಳುವ ಕ್ಷೇತ್ರಗಳನ್ನು ಪ್ರೀತಿಯಿಂದ ಉದ್ದೇಶಿಸುವುದರಿಂದ ಪಶ್ಚಾತ್ತಾಪ ಮತ್ತು ಮನೋನಿಶ್ಚಯ ತರುತ್ತದೆ.
4) ಹಿಂದೆ ಜರುಗಿದ ಯಾವುದಾದರೂ ಪ್ರಸಕ್ತವಾಗಿ ಅವರ ಮೇಲೆ ಹಾನಿಮಾಡುತ್ತಿರುವುದನ್ನು ಪ್ರಕಟಪಡಿಸುತ್ತದೆ ಆದ್ದರಿಂದ ಸಮಸ್ಯೆಯನ್ನು ಹೇಗೆ ಬಹೆಗರಿಸಬೇಕೆಂದು ನಮಗೆ ತಿಳಿದಿದೆ.
5) ಇತರೆ ವರಗಳೊಡನೆ ಉದಾಹರಣೆಗೆ ಸ್ವಸ್ಥತೆಯ ವರ ಮಹತ್ತುಗಳನ್ನು ಮಾಡುವ ವರಗಳೊಡನೆ ಸೇವೆ ಸಲ್ಲಿಸುವಾಗ ದೇವರು ಏನು ಮಾಡುತ್ತಿದ್ದಾನೆಂಬುದನ್ನು ಪ್ರಕಟಿಸುತ್ತದೆ.

ಹೇಗೆ ವಿವೇಕದ ವಾಕ್ಯವು ಪಡೆಯಲಾಗಿದೆ

ನಮಗೆ ವಿವೇಕದ ವಾಕ್ಯವನ್ನು ಸಂಪರ್ಕಿಸಲು ನಮ್ಮ ಆತ್ಮದ ಯಾವುದೇ ಇಂದ್ರಿಯಗಳನ್ನು ಪವಿತ್ರಾತ್ಮನು ಉಪಯೋಗಿಸಬಹುದು. ವಿಶ್ವಾಸಿಗಳು ವಿವೇಕದ ವಾಕ್ಯಗಳನ್ನು ಪಡೆಯುವುದರ ಅನುಭವವನ್ನು ಪಡೆಯುವ ಸಾಮಾನ್ಯ ಮಾರ್ಗಗಳು ಇಲ್ಲಿವೆ ದೇವರು ಹೊಸದಾದ ಮತ್ತು ಸೃಜನಶೀಲ ಮಾರ್ಗಗಳನ್ನು ನಿಮ್ಮೊಂದಿಗೆ ಮಾತನಾಡಲು ಉಪಯೋಗಿಸಬಹುದು. ನಮಗೆ ವಿವೇಕದ ವಾಕ್ಯವನ್ನು ಮಾತನಾಡಲೂ

ಪವಿತ್ರಾತ್ಮನು ಬಾಹ್ಯ ವಿಷಯಗಳನ್ನು ಉಪಯೋಗಿಸಬಹುದು. ಇವುಗಳಲ್ಲಿ ಅನೇಕವಾದವುಗಳು (ಮತ್ತು ಇತರೆ ಮಾರ್ಗಗಳು) ಸಂಯೋಜನೆಯಲ್ಲಿ ಕೆಲಸಮಾಡುತ್ತವೆ ಎಂಬುದನ್ನು ನೆನಪಿಸಲ್ಲಿಟ್ಟುಕೊಳ್ಳಬೇಕು ಮತ್ತು ಇವೆಲ್ಲವನ್ನು ಒಟ್ಟಾಗಿ ಸೇರಿಸುವುದು ಅಗತ್ಯವಾಗಿದೆ ಮತ್ತು ನೀವು ಪಡೆಯುವುದನ್ನು ಸ್ಪಷ್ಟವಾಗಿ ಸಂಪರ್ಕ ಮಾಡಿರಿ.

ವಾಕ್ಯಗಳು, ಪದಗಳು ಅಥವಾ ಮಾಹಿತಿ ಕೇಳಿಕೊಳ್ಳುವುದು ಮತ್ತು ನೋಡುವುದು

ನೀವು ಒಂದು ಪದ, ಪದಗಳು ಅಥವಾ ವಾಕ್ಯಗಳು ನಿಮ್ಮ ಆತ್ಮದಿಂದ ನಿಮ್ಮ ಮನಸ್ಸಿನೊಳಗೆ ಬರುವುದನ್ನು ನೋಡಬಹುದು. ಕೆಲವೊಮ್ಮೆ ಇವುಗಳು ಬಾಹ್ಯ ವಾಕ್ಯಗಳಂತೆ ಕಾಣಿಸಬಹುದು, ನೀವು ಒಬ್ಬ ವ್ಯಕ್ತಿಯ “ಮೇಲೆ” ಅಥವಾ ಅವರ ಮುಖದ ಮೇಲೆ ಅಥವಾ ಅವರ ಹಿಂದೆ “ಬರೆದಿರುವಂತೆ” ನೀವು ನೋಡುತ್ತೀರಿ. ನಿಮ್ಮ ಆತ್ಮದಿಂದ ಹೊರಬರುತ್ತಿರುವ ಮಾಹಿತಿ ಪಡೆಯಲು ಅಥವಾ ವಾಕ್ಯ ಅಥವಾ ಪದವನ್ನು “ಕೇಳಿಸಿ” ಕೊಳ್ಳಬಹುದು.

ಆಂತರಿಕ ಅನಿಸಿಕೆ

ಒಂದು ನಿರ್ದಿಷ್ಟ ದೈಹಿಕ ಪರಿಸ್ಥಿತಿ ಅಥವಾ ಜೀವಿತದಲ್ಲಿನ ಪರಿಸ್ಥಿತಿಯ ಕುರಿತು (ಉದಾಹರಣೆಗೆ ಹಣಕಾಸಿನ ತೊಂದರೆ ವಿವಾಹ ವಿಚ್ಛೇದನೆ, ಆತ್ಮಹತ್ಯೆ ಮುಂತಾದವು) ನಿಮ್ಮ ಆತ್ಮದ ಪ್ರಜ್ಞೆಯ ಅನುಭವ ಪಡೆಯುವ ಮೂಲಕವಾಗಿ ನೀವು ಪಡೆಯಬಹುದು.

ಚಿತ್ರಗಳು ಮತ್ತು ಆಕೃತಿಗಳು

ನೀವು ಒಂದು ಚಿತ್ರ ಅಥವಾ ಚಿತ್ರಗಳ ಅನುಕ್ರಮ ಅಥವಾ ಹೊನಲು ದೃಶ್ಯ (ಚಲನಚಿತ್ರದಂತೆ) ದೇವರು ಪ್ರತಿನಿಧಿಸಲು ಅಪೇಕ್ಷಿಸುವ ಪರಿಸ್ಥಿತಿಗಳು ಅಥವಾ ದೇವರು ಗುಣಪಡಿಸಲು ಅಪೇಕ್ಷಿಸುವ ವಿವಿಧ ದೈಹಿಕ ಪರಿಸ್ಥಿತಿಗಳನ್ನು ಬಗೆಹರಿಸಲು ಪಡೆಯಬಹುದು ಉದಾಹರಣೆಗೆ ನೀವು ಒಂದು ದೇಹದ ಅಂಗವನ್ನು ನೋಡಬಹುದು (ಉದಾಹರಣೆಗೆ ಹೃದಯ, ಮೊಣಕೈ, ಮಣಿಕಟ್ಟು, ಕುತ್ತಿಗೆ) ಅಥವಾ ದೇಹದ ಬಾಹ್ಯರೇಖೆಯನ್ನು ಎತ್ತಿತೋರಿಸುವ ಅಂಗವನ್ನು ನೀವು ನೋಡಬಹುದು. ನೀವು ಯಾವುದೇ ಇತರೆ ಭೌತಿಕ ವಸ್ತು, ಸ್ಥಳ ಅಥವಾ ಜೀವನದ ಪರಿಸ್ಥಿತಿಗಳನ್ನು ನೋಡಬಹುದು (ಉದಾಹರಣೆಗೆ ಕಛೇರಿಯ ಕೆಲಸದ ಸ್ಥಳವನ್ನು ಪ್ರತಿನಿಧಿಸುವುದು, ಜಾಗ, ಕಾರು ಅಪಘಾತ ಇತ್ಯಾದಿ) ಜನರ ಹೆಸರುಗಳನ್ನು ಕೊಡುವ ಅಕ್ಷರಗಳು ಒಟ್ಟಾಗಿ ಸೇರಿರುವುದನ್ನು ವಿಳಾಸಗಳನ್ನು ಕೊಡಲು ಸಂಖ್ಯೆಗಳು ಒಟ್ಟಾಗಿ ಸೇರಿ ಬರಬಹುದನ್ನು, ಜನನದ ದಿನಾಂಕ ಮುಂತಾದವುಗಳನ್ನು ನೋಡಬಹುದು.

ಪ್ರಸ್ತುತ ಪರಿಸ್ಥಿತಿಯನ್ನು ವಿವರಿಸಲು ಧರ್ಮಗ್ರಂಥದಿಂದ ಒಂದು ಸನ್ನಿವೇಶವನ್ನು ಎತ್ತಿತೋರಿಸುವುದು

ಧರ್ಮಗ್ರಂಥದ ವಚನಗಳಿಂದ ದೇವರ ಆತ್ಮನು ಒಂದು ಘಟನೆಯನ್ನು ಎತ್ತಿತೋರಿಸಬಹುದು ಮತ್ತು ವ್ಯಕ್ತಿ ಅಥವಾ ಗುಂಪಿಗೆ ಸೇವೆಸಲ್ಲಿಸುವಾಗ ಅದು ಅನ್ವಯಿಸುವಂತೆ ತೋರಿಸಬಹುದು. ಉದಾಹರಣೆಗೆ ಯೋಸೇಫನು ಸುಳ್ಳು ಆರೋಪವನ್ನು ಹೊಂದಿದವನಾಗಿರುವಂತಹ ರೀತಿಗೆ ಸಮಾನಾಂತರವಾಗಿ ಯಾರಾದರೊಬ್ಬರು ಈಗ ಅವರ ಜೀವಿತದಲ್ಲಿ ಅದೇ ರೀತಿಯಾಗಿ ದಾಟಿ ಹೋಗುತ್ತಿರಬಹುದು.

ದೈಹಿಕ ಸಂವೇದನಗಳು ಅಥವಾ ಅನುಭವಗಳು

ನಿಮ್ಮ ದೇಹದ ಕೆಲವು ಭಾಗಗಳಲ್ಲಿ ನಿಮಗೆ ತೀಕ್ಷ್ಣವಾದ ನೋವು ಅಥವಾ ಸಂವೇದನೆ ಇರಬಹುದು (ಜುಮ್ಮನಿಸುವಿಕೆ ಸುಡುವಿಕೆ, ಚಡಪಡಿಸುವಿಕೆ ಇತ್ಯಾದಿ) ಇದು ದೇಹದ ಆ ಭಾಗದಲ್ಲಿನ ಸಮಸ್ಯೆಗಳನ್ನು ಗುಣಪಡಿಸುತ್ತಿದೆ ಎಂದು ದೇವರು ನಿಮಗೆ ಎಚ್ಚರಿಸುತ್ತಾನೆ. ನಿಮ್ಮ ಸ್ವಂತ ದೇಹದಲ್ಲಿನ ಸ್ಥಿತಿಯಿಂದ ನಿಮ್ಮ ಭಾವನೆ ಉಂಟಾಗದಂತೆ ಎಚ್ಚರಿಕೆ ವಹಿಸಿ. ಉದಾಹರಣೆಗೆ ನಿಮಗೆ ಆಗ್ಗಾಗ್ಗೆ ನಿಮ್ಮ ಎಡಕಿವಿಯಲ್ಲಿ ನೋವಿರಬಹುದು, ಕೂಟದ ಸಮಯದ ಅವಧಿಯಲ್ಲಿ ನಿಮಗೆ ನೋವು ಬಂದರೆ ಅದನ್ನು ವಿವೇಕದ ವಾಕ್ಯದಂತೆ ನೀಡಬೇಡಿರಿ.

ಕೆಲವು ಸೇವಕರುಗಳು ತಮ್ಮ ದೈಹಿಕ ದೇಹವು ಇನ್ನೊಬ್ಬ ವ್ಯಕ್ತಿಯು ಹೊಂದಿರುವ ಅದೇ ದೈಹಿಕ ಕಾಯಿಲೆಯನ್ನು ಕ್ಷಣಾರ್ಧದಲ್ಲಿ ಹೀಗೆ ಅನುಭವಿಸುತ್ತದೆ ಎಂಬುದನ್ನು ಹಂಚಿಕೊಳ್ಳುತ್ತಾರೆ. ಉದಾಹರಣೆಗೆ ಒಂದು ಬೆಳವಣಿಗೆಯು ಅವರ ದೇಹದ ಒಂದು ಭಾಗದಲ್ಲಿ ಕ್ಷಣಾರ್ಧದಲ್ಲಿ ಕಾಣಿಸಿಕೊಳ್ಳಬಹುದು ಆಮೇಲೆ ಅದು ಕಣ್ಮರೆಯಾಗುತ್ತದೆ ಅಥವಾ ಅವರ ದರ್ಶನವು ತಾತ್ಕಾಲಿಕವಾಗಿ ಮಸುಕುತ್ತದೆ ಅಥವಾ ಅವರ ಕಿವಿ ತಾತ್ಕಾಲಿಕವಾಗಿ ಮುಚ್ಚುತ್ತದೆ. ಆಮೇಲೆ ಅವರು ಸೇವ ಸಲ್ಲಿಸುವ ಜನರಲ್ಲಿ ಇಂತಹ ಪರಿಸ್ಥಿತಿಗಳನ್ನು ಕರೆಯುತ್ತಾರೆ.

ಪ್ರೇರಿತ ಉಚ್ಚಾರಣೆ

ಮಾತನಾಡುವಾಗ ಅಥವಾ ಪ್ರಾರ್ಥಿಸುವಾಗ ಅಥವಾ ಇನ್ನೊಬ್ಬರೊಂದಿಗೆ ನಿಂತುಕೊಂಡಿರುವಾಗ, ಜೀವನದ ಪರಿಸ್ಥಿತಿ, ಸಮಸ್ಯೆ ಅಥವಾ ಆರೋಗ್ಯ ಪರಿಸ್ಥಿತಿಗಳಿಗೆ ಸಂಬಂಧಿಸಿದ ಪೂರ್ವಭಾವಿ ಪದಗಳು ನಿಮ್ಮ ಬಾಯಿಂದ ಉದುರಿಹೋಗಬಹುದು.

ದರ್ಶನಗಳು ಮತ್ತು ಕನಸ್ಸುಗಳು

ದೇವರು ನಿರ್ದಿಷ್ಟ ಬಗೆಯ ಜನರುಗಳಿಗೆ ಸೇವೆಸಲ್ಲಿಸುತ್ತಿರುವುದನ್ನು ನೀವು ನೋಡುತ್ತೀರಿ ಅಥವಾ ನೀವೇ ಹೇಳುವುದನ್ನು ಅಥವಾ ನೀವೇ ಹೇಳುವುದನ್ನು ಅಥವಾ ನೀವೇ ಸಂಗತಿಗಳನ್ನು ಮಾಡುತ್ತಿರುವಂತೆ ಕನಸ್ಸು ಅಥವಾ ದರ್ಶನ ನೀವು ಕಾಣಬಹುದು, ಇದು ನಿಮ್ಮ ಕನಸ್ಸು ಅಥವಾ ರಾತ್ರಿಯ ದರ್ಶನದಲ್ಲಿ ನೀವು ನೋಡಿದ್ದನ್ನು ಸಾಮಾನ್ಯವಾಗಿ ದೇವರು ನಿಮ್ಮನ್ನು ಹೊಂದಿಸುವಂತಹ ಇನ್ನೊಂದು ಮಾರ್ಗವಾಗಿದೆ. ನೀವು ಹಿಂದಿನ ಸಂಗತಿಗಳನ್ನು ದರ್ಶನದಲ್ಲಿ ಕಾಣಬಹುದು ಮತ್ತು ಜರುಗಿದ್ದನ್ನು ನೀವು ನಿರೂಪಿಸಬಹುದು ನೀವು ಆತ್ಮದಲ್ಲಿ ಜನರನ್ನು ಮತ್ತು ಸ್ಥಳಗಳನ್ನು ನೋಡುವ ಹಾಗೇ ಪ್ರಯಾಣಿಸುವ (ಭೌಗೋಳಿಕವಾಗಿ, ಪ್ರಸ್ತುತ ಸಮಯದಲ್ಲಿ ಅಥವಾ ಹಿಂದಿನ ಸಮಯದಲ್ಲಿ) ಘಟನೆಗಳು ಜರುಗುತ್ತಿರುವಂತೆ (ಜರುಗಿದಂತೆ) ದರ್ಶನವನ್ನು ನೀವು ಹೊಂದಬಹುದು ಮತ್ತು ನೀವು ನೋಡಿದ್ದನ್ನು ನಿರೂಪಿಸಿರಿ.

ದೇವದೂತ ಸಂದೇಶಗಾರರು

ದೇವದೂತರು ಸಹ ದೇವರಿಂದ ನಿರ್ದಿಷ್ಟ ಮಾಹಿತಿಗಳನ್ನು ನಮಗೆ ತರಬಹುದು.

"ಆದರೆ ಕರ್ತನ ದೂತನು ರಾತ್ರಿಯಲ್ಲಿ ಸೆರೆಮನೆಯ ಬಾಗಿಲುಗಳನ್ನು ತೆರೆದು ಅವರನ್ನು ಹೊರಕ್ಕೆ ಕರೆದುಕೊಂಡು ಬಂದು – ನೀವು ಹೋಗಿ ದೇವಾಲಯದಲ್ಲಿ ನಿಂತುಕೊಂಡು ಈ ಸಜ್ಜೀವ ವಿಷಯವಾದ ಮಾತುಗಳನ್ನೆಲ್ಲಾ ಜನರಿಗೆ ಹೇಳಿರಿ ಅಂದನು" (ಅಪೊಸ್ತಲರ ಕೃತ್ಯಗಳು 5:19-20).

"ಅಷ್ಟರಲ್ಲಿ ಕರ್ತನ ದೂತನು ಫಿಲಿಪ್ಪನಿಗೆ – ನೀನು ಎದ್ದು ದಕ್ಷಿಣ ಕಡೆಗೆ ಯೆರೂಸಲೇಮಿನಿಂದ ಗಾಜಕ್ಕೆ ಹೋಗುವ ದಾರಿಯಲ್ಲಿ ಹೋಗು ಅದು ಅಡವಿ ಎಂದು ಹೇಳಿದನು" (ಅಪೊಸ್ತಲರ ಕೃತ್ಯಗಳು 8:26).

ವೈಯಕ್ತಿಕ ಅನುಭವ ಅಥವಾ ಪರಿಸ್ಥಿತಿ

ಕೆಲವು ಸಮಯಗಳಿಲ್ಲ ದೇವರು ನಿಮ್ಮ ವೈಯಕ್ತಿಕ ಅನುಭವಗಳು ಅಥವಾ ನಿಮಗೆ ಗೊತ್ತಿರುವ ಇನ್ನೊಬ್ಬ ವ್ಯಕ್ತಿಯ ಕುರಿತು ದೇವರು ನೆನಪಿಸಬಹುದು ಮತ್ತು ನೀವು ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯ ಕುರಿತು ಮಾಹಿತಿ ಕೊಡಲು ಅದನ್ನು ಉಪಯೋಗಿಸಬಹುದು.

ಪ್ರೇರಿತ ಬರವಣಿಗೆಗಳು

ನೀವು ಬರೆಯಲು ಅಥವಾ ಪತ್ರಿಕೆ ಬರೆಯಲು ಪ್ರೇರಿತರಾಗಬಹುದು. ಮತ್ತು ಆನಂತರದಲ್ಲಿ ನಿರ್ದಿಷ್ಟ ವಾಕ್ಯಗಳು ಜನರಿಗೆ ಸೇವೆ ಸಲ್ಲಿಸಲು ಉಪಯೋಗಿಸಬಹುದು

ದೈವಿಕ ವ್ಯವಸ್ಥೆಗಳು

ದೇವರು ಅಸಾಮಾನ್ಯ ಪರಿಸ್ಥಿತಿ, ಒಂದು ಸೂಚನಾ ಫಲಕ ಅಥವಾ ನೀವು ನೋಡುವಂತಹ ಜಾಹೀರಾತು ಫಲಕಗಳು, ಒಂದು ಸಂದೇಶ ಹೊಂದಿರುವ ಕಾರಿನ ಸ್ಟಿಕ್ಕರ್‌ಗಳು ಮುಂತಾದವುಗಳನ್ನು ಆತನು ನಿಮಗೆ ಏನನ್ನಾದರೂ ಹೇಳಲು ನಿಮಗೆ ಎಚ್ಚರಿಸಲು ಉಪಯೋಗಿಸಬಹುದು. ದೇವರು ಸಾಧಾರಣವಾದ ಜೀವನದ ಪ್ರಾಪಂಚಿಕ ವಿಷಯಗಳನ್ನು ನಿಮ್ಮ ಗಮನ ಸೆಳೆಯಲು ಮತ್ತು ಸಂದೇಶ ನೀಡಲು ಉಪಯೋಗಿಸಬಹುದು. ಆದಾಗ್ಯೂ ನಡೆಯುವ ಎಲ್ಲದರಲ್ಲೂ ಏನಾನ್ನಾದರೂ ಓದಬೇಡಿರಿ ಪವಿತ್ರಾತ್ಮನಿಗೆ ಸೂಕ್ಷ್ಮತೆಯುಳಳವರಾಗಿರಿ ಮತ್ತು ಆತನು ಮಾತನಾಡುವಾಗ ಕೇಳಿಸಿಕೊಳ್ಳಿರಿ ಆದರೆ ಸುಮ್ಮನೇ ಕಲ್ಪನೆ ಮಾಡಿಕೊಳ್ಳಬೇಡಿ ಅಥವಾ ಇಲ್ಲದ್ದನ್ನು ಹುಟ್ಟಿಸಿಕೊಳ್ಳಬೇಡಿರಿ ಯಾಕೆಂದರೆ ಅದು “ವಿಲಕ್ಷಣ” ಮತ್ತು “ದಿಗಿಲು” ಉಳ್ಳವರಂತೆ ಮಾಡುತ್ತದೆ.

ಹೊಸದು, ವೈಯುಕ್ತಿಕ ಮತ್ತು ಸೃಜನಶೀಲ ಮಾರ್ಗಗಳು

ಆತನು ಮಾತನಾಡುವ ಕೆಲವು ಮಾರ್ಗಗಳನ್ನು ಮಾತ್ರವೇ ಪೆಟ್ಟಿಗೆಯಲ್ಲಿ ಇಡುವುದು ಅಸಾಧ್ಯವಾಗಿದೆ. ಆತನು ನಿಮ್ಮೊಂದಿಗೆ ಮಾತನಾಡುತ್ತಿರುವ ಹೊಸ ಮಾರ್ಗಗಳಿಗೆ ಯಾವಾಗಲೂ ತೆರೆದವರಾಗಿರಿ.

ವಿವೇಕದ ವಾಕ್ಯವನ್ನು ಹೇಗೆ ಹಂಚುವುದು

ನಾವು ಹೇಗೆ ಹೇಳುತ್ತೇವೆ ಏನು ಹೇಳುತ್ತೇವೆ ಎಂಬುದು ಪ್ರಾಮುಖ್ಯವಾಗಿದೆ ವಿವೇಕದ ವಾಕ್ಯವನ್ನು ಹಂಚಿಕೊಳ್ಳುವುದರಲ್ಲಿ ಕೆಲವು ಪ್ರಾಯೋಗಿಕ ಮಾರ್ಗ ಸೂಚಿಗಳು ಇಲ್ಲವೆ.

ನೀವು ಹಂಚಿಕೊಳ್ಳುವ ವಿಷಯದಲ್ಲಿ ಪ್ರೀತಿಯಿಂದ ಮತ್ತು ಸೌಮ್ಯವಾಗಿರಿ

ನೀವು ವಿವೇಕಜ್ಞಾನದ ವಾಕ್ಯದೊಡನೆ ಜನರನ್ನು ಸಮೀಪಿಸುವಾಗ, ಅವರನ್ನು ಭಯಭೀತರಾಗಿಸುವ, ಬೆದರಿಸುವ ಅಥವಾ ಮುಂದೂಡುವುದಕ್ಕಿಂತ ಹೆಚ್ಚಾಗಿರುವ ಬದಲಿಗೆ ಯೇಸುವನ್ನು ಸಂಧಿಸಲು ಸೆಳೆದವರಾಗಿರುವಂತೆ ಮತ್ತು ಪ್ರೀತಿಸಲ್ಪಟ್ಟವರು ಎಂಬುದಾಗಿ ಭಾವಿಸುವಂತೆ ಮತ್ತು ಹಿತಕರವಾಗಿರುವಂತೆ ಇರಬೇಕು. ಆದ್ದರಿಂದ “ದೇವರು ಪರಲೋಕದಿಂದ ನನ್ನೊಂದಿಗೆ ಮಾತನಾಡಿದ ಮತ್ತು ನಿಮ್ಮ ಕೆಳಬೆನ್ನಿನಲ್ಲಿ ತೊಂದರೆಯಿರುವುದನ್ನು ನನಗೆ ತೋರಿಸಿದ” ಎಂದು ಹೇಳುವ ಬದಲಿಗೆ ಅವರನ್ನು ಪ್ರೀತಿಯಿಂದ “ನಿಮ್ಮ ಕೆಳಬೆನ್ನು ನೋವುತ್ತಿದೆಯಾ” ? ಎಂಬುದಾಗಿ ಕೇಳಬಹುದು. ಅವರು “ಹೌದು” ಎಂದು ಹೇಳಿದಾಗ ಅವರಿಗಾಗಿ ನೀವು ಪ್ರಾರ್ಥನೆಯನ್ನು ಅರ್ಪಿಸಬಹುದು. ಅವರು ಒಮ್ಮೆ ಸ್ವಸ್ಥತೆ ಹೊಂದಿದಾಗ, ಅದು ನಿಮಗೆ ಹೇಗೆ ತಿಳಿಯಿತು

ಎಂಬುದಾಗ, ಅದು ನಿಮಗೆ ಹೇಗೆ ತಿಳಿಯಿತು ಎಂಬುದಾಗಿ ಕೇಳಲೂ ತುಂಬಾ ಇಷ್ಟಪಡಬಹುದು, ಅದು ಅವರೊಂದಿಗೆ ಯೇಸುವಿನ ಕುರಿತು ಮಾತನಾಡಲು ಶ್ರೇಷ್ಟ ಸಮಯವಾಗಿರುತ್ತದೆ.

ನಿಮಗೆ ಪ್ರಕಟಪಡಿಸಲ್ಪಟ್ಟಿರುವದಕ್ಕೆ ನಿರ್ದಿಷ್ಟವಾಗಿ ಮತ್ತು ಸ್ಪಷ್ಟವಾಗಿರಿ

ವಾಕ್ಯವು ಹೆಚ್ಚು ನಿರ್ದಿಷ್ಟವಾಗಿದ್ದರೆ, ಅತೀ ಹೆಚ್ಚು ನಂಬಿಕೆಯನ್ನು ನಿಮ್ಮಲ್ಲಿ ಮತ್ತು ಇತರ ವ್ಯಕ್ತಿಗಳಲ್ಲಿ ಕಟ್ಟುತ್ತದೆ. ನೀವು ಮಾತನಾಡುವಾಗ, ಪ್ರಾರ್ಥನೆ ಮಾಡುತ್ತೀರಿ, ಹೆಚ್ಚಿನ ವಿವರಗಳಿಗಾಗಿ ದೇವರನ್ನು ಕೇಳುತ್ತೀರಿ ಮತ್ತು ಗಮನಿಸುತ್ತಲೇ ಇರಿ.

ಸಾಧ್ಯವಾದಗಲೆಲ್ಲಾ ಮೌಲ್ಯೀಕರಿಸಿ

ನೀವು ಹಂಚಿದ್ದು ಸರಿಯಾದುದು ಎಂಬುದಾಗಿ ವ್ಯಕ್ತಿಯನ್ನು ಕೇಳಿರಿ. ಒಂದು ಕೂಟವಾಗಿ ಸೇರಿಬರುವಿಕೆಯಲ್ಲಿ ನೀವು ಹಂಚಿದ್ದನ್ನು ಸಂಬಂಧಿಸಿದ ಒಂದು ಅಥವಾ ಅಧಿಕವಾದ ಜನರು ಇದ್ದರೆ ಸೂಚನೆಯಾಗಿ ಅವರ ಕೈಗಳನ್ನು ತೋರಿಸುವಂತೆ ಕೇಳಿರಿ. ಕೆಲವು ಸಮಯಗಳಲ್ಲಿ ಜನರು ಸಂಕೋಚಪಡಬಹುದು ಅಥವಾ ಭಯಗೊಳ್ಳಬಹುದು ಮತ್ತು ಪ್ರತಿಕ್ರಿಯೆ ತೋರಿಸುವುದಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ಯಾರೊಬ್ಬರಾಗಲಿ ಪ್ರತಿಕ್ರಿಯೆ ತೋರಿಸದಿದ್ದರೇ ನಿರುತ್ಸಾಹಗೊಳ್ಳಬೇಡಿರಿ. ಹೆಜ್ಜೆಹಾಕುವಲ್ಲಿ ನಂಬಿಗಸ್ತರಾಗಿರಿ.

ಜನರ ಮೇಲಿನ ಪ್ರೀತಿಯಿಂದ ಗಂಡಾಂತರಗಳನ್ನು ತೆಗೆದುಕೊಳ್ಳಿರಿ

ವಿವೇಕಜ್ಞಾನದ ವಾಕ್ಯಗಳನ್ನು ಕೊಡುವುದು ಹಾನಿ ಸಂಭವ ತೆಗೆದುಕೊಳ್ಳುವಂತಿರುತ್ತದೆ. ಆದರೆ ಹೇಗಾದರೂ ಮಾಡಿರಿ. ಜನರ ಭಯ, ಬೆದರಿಕೆ ಅಥವಾ ಸೋಲಿನ ಭಯವು ನಿಮ್ಮನ್ನು ಹಿಂದಿಟ್ಟುಕೊಳ್ಳದಿರಲಿ. ಪ್ರೀತಿಯಿಂದ ಎಲ್ಲವನ್ನೂ ಮಾಡಿರಿ.

ತಪ್ಪುಗಳನ್ನು ಮಾಡುವುದು ಸರಿಯಾದುದು. ಕಲಿಯಿರಿ ಮತ್ತು ಒತ್ತಿಕೊಂಡೇ ಇರಿ।

ನಾವೆಲ್ಲರೂ ಪವಿತ್ರಾತ್ಮನಿಂದ ಕೇಳಿಕೊಳ್ಳುವುದನ್ನು ಕಲಿಯುತ್ತಿದ್ದೇವೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ ಕಲಿಯುತ್ತಲೇ ಇರಿ।. ತೊಂದರೆಯು ದೇವರು ಅಥವಾ ಆತನ ವರದೊಡನೆ ಇಲ್ಲ. ಆದರೆ ನಾವು ಆತನಿಂದ ಹೇಗೆ ಸ್ವೀಕರಿಸಬೇಕೆಂದು ಕಲಿಯಲು ಪ್ರಯತ್ನಿಸುತ್ತಿರುವಾಗ ನಮ್ಮೊಂದಿಗೆ ಇರುವುದಾಗಿದೆ.

12.ಆತ್ಮಗಳನ್ನು ಗ್ರಹಿಸುವುದು

ಅರ್ಥ ನಿರೂಪಣೆ

ಆತ್ಮಗಳನ್ನು ವಿವೇಚಿಸುವ ವರವು, ಆತ್ಮವು ಕ್ಷೇತ್ರದೊಳಗೆ ಅಥವಾ ಜನರ ಆತ್ಮಗಳೊಳಗೆ ಅಪ್ರಾಕೃತವಾಗಿ ನೋಡುವ (ಗ್ರಹಿಸಿ, ತಿಳಿಯಿರಿ, ಪ್ರಜ್ಞೆ) ಸಾಮಾರ್ಥ್ಯವಾಗಿದೆ. ಈ ಕೆಳಕಂಡದ್ದು ಸೇರಿದಂತೆ ಹಲವಾರು ರೀತಿಯಲ್ಲಿ ನಮಗೆ ಸಹಾಯ ಮಾಡುತ್ತದೆ.

- ದೇವರದು ಮತ್ತು ದೇವರದಲ್ಲವುಗಳನ್ನು ನಿಶ್ಚಯಪಡಿಸಲು
- ಜನರು ಆತ್ಮಗಳು, ಅವರ ಪ್ರೇರಣೆಗಳು ಮತ್ತು ಉದ್ದೇಶಗಳನ್ನು ಗ್ರಹಿಸುವುದು.
- ಕರ್ತನು ಮಾಡುತ್ತಿರುವದನ್ನು ದೇವದೂತರ ಕಾರ್ಯ ಚಟುವಟಿಕೆಯನ್ನು ನೋಡಲು
- ಸೈತಾನನ ತಂತ್ರಗಳು ಮತ್ತು ಮಾಡುತ್ತಿರುವುದೇನು ಒಬ್ಬ ವ್ಯಕ್ತಿಗೆ ತೊಂದರೆಪಡಿಸುತ್ತಿರುವುದು ಯಾವ ಬಗೆಯ ಆತ್ಮಗಳು ಇತ್ಯಾದಿಯಾದವನ್ನು ನೋಡಲು
- ಇನ್ನೂ ಅಧಿವಾದವುಗಳು

ಆತ್ಮಗಳ ಗ್ರಹಿಕೆಯ ವರವು **ಆತ್ಮಿಕ ವಿವೇಚನೆಯಿಂದ** ವಿಭಿನ್ನವಾಗಿವೆ. ಆತ್ಮಿಕ ವಿವೇಚನೆಯು, ಜ್ಞಾನದಂತೆ, ಆತ್ಮಿಕ ಪರಿಪಕ್ವತೆ ಮತ್ತು ದೇವರೊಂದಿಗಿನ ಒಬ್ಬನ ಅನುಭವದ ಮೂಲಕವಾಗಿ ಬರುತ್ತದೆ. ಹೇಗಾದರೂ ಆತ್ಮಗಳ ವಿವೇಚಿಸುವ ವರವು ಆತ್ಮಿಕ ಕ್ಷೇತ್ರಕ್ಕೆ ಗ್ರಹಿಸಲು ಒಂದು ನಿರ್ದಿಷ್ಟ ಸಮಯದಲ್ಲಿ ನೀಡಲಾಗುತ್ತದೆ. ಆತ್ಮಗಳ ವಿವೇಚನೆಯ ವರವು ಎಲ್ಲಾ ವಿಶ್ವಾಸಿಗಳಿಗು ಅವರ ಆತ್ಮಿಕ ಪರಿಪಕ್ವತೆ ಲೆಕ್ಕಿಸದೇ ದೊರೆಯುವಂತದ್ದಾಗಿದೆ.

ಆತ್ಮಗಳ ವಿವೇಚನೆಯ ವರವು, ಅನುಮಾನಾಸ್ಪದ ವಿಮರ್ಶಾತ್ಮಕ ಮತ್ತು ತೀರ್ಪು ಮಾಡುವವರಾಗಿರುವುದಕ್ಕಿಂತ ವಿಭಿನ್ನವಾಗಿರುತ್ತದೆ ಕೆಲವು ಜನರು ಅನುಮಾನಾಸ್ಪಾದಕ, ವಿಮರ್ಶಾತ್ಮಕ ಅಥವಾ ತೀರ್ಪುಮಾಡಲು ವಕ್ರವಾದಂತಹವನ್ನು ಹೊಂದಿರುತ್ತಾರೆ. ಅವರು ಎಲ್ಲಾ ಜೀವನವನ್ನು ಮತ್ತು ಅವರ ಸುತ್ತಲಿನ ಪ್ರತಿಯೊಬ್ಬರನ್ನು ಈ ಭೂತಗನ್ನಡಿ ಮೂಲಕ ವೀಕ್ಷಿಸುತ್ತಾರೆ. ಇದು ಆತ್ಮಗಳ ವಿವೇಚನೆಯ ವರವಲ್ಲ.

ಸತ್ಯವೇದದ ಕೆಲವು ಉದಾಹರಣೆಗಳು ಇಲ್ಲಿವೆ.

ಸತ್ಯವೇದದ ಉದಾಹರಣೆಗಳು : ಹಳೇ ಒಡಬಂಡಿಕೆ

ಎಲೀಷನ ಸೇವಕನ ಕಣ್ಣುಗಳು ಕಾಣಲು ತೆರೆದವು

"ದೇವರ ಮನುಷ್ಯನ ಸೇವಕನು ಬೆಳಿಗ್ಗೆ ಎದ್ದು ಹೊರಗೆ ಹೋದಾಗ ರಥರಥಾಶ್ವಸಹಿತವಾದ ಮಹಾಸೈನ್ಯವು ಬಂದು ಪಟ್ಟಣದ ಸುತ್ತಲೂ ನಿಂತಿರುವದನ್ನು ಕಂಡು ತನ್ನ ಯಜಮಾನನಿಗೆ ಅಯ್ಯೋ ಸ್ವಾಮಿ ಏನೂ ಮಾಡೋಣ ಎಂದು ಆಗ ಎಲೀಷನು ಅವನಿಗೆ ಹದರಬೇಡ ಅವರ ಕಡೆಯಲ್ಲಿರುವವರಿಗಿಂತಲೂ ನಮ್ಮ ಕಡೆಯಲ್ಲಿರುವವರು ಹೆಚ್ಚಾಗಿದ್ದಾರೆ ಎಂದು ಹೇಳಿ ಯೆಹೋವನೇ, ಇವನು ನೋಡುವಂತೆ ಇವನ ಕಣ್ಣುಗಳನ್ನು ತೆರೆ ಎಂದು ಪ್ರಾರ್ಥಿಸಲು ಯೆಹೋವನು ಅವನ ಕಣ್ಣುಗಳನ್ನು ತೆರೆದನು ಆಗ ಎಲೀಷನ ರಕ್ಷಣೆಗಾಗಿ ಸುತ್ತಣ ಗುಡ್ಡಗಳಲ್ಲಿ ಬಂದು ನಿಂತಿದ್ದ ಅಗ್ನಿಮಯವಾದ ರಥರಥಾಶ್ವಗಳು ಆ ಸೇವಕನಿಗೆ ಕಂಡವು" (2 ಅರಸುಗಳು 6:15-17)

ಸತ್ಯವೇದದ ಉದಾಹರಣೆಗಳು : ಹೊಸ ಒಡಂಬಡಿಕೆ

ನತಾನಯೇಲನು ಯಾವ ರೀತಿಯ ಮನುಷ್ಯನಾಗಿದ್ದನು ಎಂಬುದನ್ನು ಯೇಸುವು ಪ್ರಕಟಿಸುವುದು

"ಯೇಸು ತನ್ನ ಕಡೆಗೆ ಬರುವ ನತಾನಯೇಲನನ್ನು ಕಂಡು ಅವನ ವಿಷಯವಾಗಿ – ಇಗೋ ಇವನು ನಿಜವಾದ ಇಸ್ರಾಯೇಲನು ಇವನಲ್ಲಿ ಕಪಟವಿಲ್ಲ ಅಂದನು ನತಾನಯೇಲನು – ನನ್ನನ್ನು ನೀನು ಹೇಗೆ ಬಲ್ಲೆ? ಎಂದು ಯೇಸುವನ್ನು ಕೇಳಿದ್ದಕ್ಕೆ ಆತನು ಫಿಲಿಪ್ಪನು ನಿನ್ನನ್ನು ಕರೆಯುವದಕ್ಕಿಂತ ಮುಂಚೆ ನೀನು ಆ ಅಂಜೂರದ ಮರದ ಕೆಳಗೆ ಇದ್ದಾಗ ನಿನ್ನನ್ನು ನೋಡಿದೆನು ಅಂದನು. ಅದಕ್ಕೆ ನತಾನಯೇಲನು ಗುರುವೇ ನೀನು ದೇವಕುಮಾರನು ಸರಿ ನೀನೇ ಇಸ್ರಾಯೇಲಿನ ಅರಸನು ಅಂದನು" (ಯೋಹಾನ 1:47-49).

ಯೇಸುವು ಅವರ ಆಲೋಚನೆಗಳನ್ನು ತಿಳಿದಿರುವುದು

ಯೇಸುವು ಪಾರ್ಶ್ವವಾಯು ರೋಗಿಯನ್ನು ಗುಣಮಾಡಿದಾಗ (ಮತ್ತಾಯ 9:1-7) ಧರ್ಮಗ್ರಂಥವು ಹೀಗೆ ವ್ಯಾಖ್ಯಾನಿಸುತ್ತದೆ "ಯೇಸು ಅವರ ಆಲೋಚನೆಗಳನ್ನು ತಿಳಿದು ನೀವು ಯಾಕೆ ನಿಮ್ಮ ಮನಸ್ಸಿನಲ್ಲಿ ಕೆಟ್ಟ ಆಲೋಚನೆಯನ್ನು ಮಾಡುತ್ತೀರಿ ?" (ವಚನ 4)

ಯೇಸು ಮತ್ತು ಪೇತ್ರನು – ಮೂಲ ಮಾಹಿತಿ ಗುರುತಿಸುವುದು

ಕರ್ತನಾದ ಯೇಸುವು ಪೇತ್ರನು ಮಾತನಾಡುವಾಗ ಅವನ ಮಾಹಿತಿಯ ನೈಜ ಮೂಲವನ್ನು ಗುರುತಿಸಿದ್ದಾನೆ. ಒಂದು ನಿದರ್ಶನದಲ್ಲಿ ಯೇಸುವು ಯಾರು ಎಂಬುದರ ಪ್ರಕಟನೆಯನ್ನು ಪೇತ್ರನು ಪರಲೋಕದಲ್ಲಿನ ತಂದೆಯಿಂದ ಪಡೆದನು (ಮತ್ತಾಯ 16:16-17) ಮತ್ತು ಇನ್ನೊಂದು ನಿದರ್ಶನದಲ್ಲಿ ಪೇತ್ರನು ದುರಾತ್ಮನಿಂದ ಪ್ರೇರಿತಗೊಂಡು, ಯೇಸುವು ಶಿಲುಬೆಗೆ ಹೋಗುವುದನ್ನು ತಡೆಯುವ ಮಾತುಗಳನ್ನು ಆಡಿದನು (ಮತ್ತಾಯ 16:22-23).

ಯೇಸುವು, ಒಬ್ಬ ಸ್ತ್ರೀಯನ್ನು ದುರ್ಬಲತೆಯ ಆತ್ಮವು ಬಂಧಿಸಿದೆ ಎಂಬುದನ್ನು ತಿಳಿದಿದ್ದನು

“ಒಂದಾನೊಂದು ಸಬ್ಬತ್‌ದಿನದಲ್ಲಿ ಆತನು ಒಂದು ಸಭಾಮಂದಿರದೊಳಗೆ ಉಪದೇಶಮಾಡುತ್ತಾ ಇದ್ದನು. ಅಲ್ಲಿ ಹದಿನೆಂಟು ವರುಷಗಳಿಂದ ದೆವ್ವ ಬಡಿದು ಮೈಯಲ್ಲಿ ರೋಗವುಳ್ಳ ಒಬ್ಬ ಸ್ತ್ರೀಯು ಇದ್ದಳು. ಆಕೆಯು ನಡುಬೊಗ್ಗಿಹೋಗಿ ಸ್ವಲ್ಪವಾದರೂ ಮೈಯನ್ನು ಮೇಲಕ್ಕೆ ಎತ್ತಲಾರದೆ ಇದ್ದಳು. ಯೇಸು ಆಕೆಯನ್ನು ನೋಡಿ ಹತ್ತಿರಕ್ಕೆ ಕರೆದು ಆಕೆಗೆ - ಅಮ್ಮಾ, ನಿನಗೆ ರೋಗ ಬಿಡುಗಡೆಯಾಯಿತು ಎಂದು ಹೇಳಿ ಆಕೆಯ ಮೇಲೆ ತನ್ನ ಕೈಗಳನ್ನಿಟ್ಟನು; ಇಟ್ಟಕೂಡಲೆ ಆಕೆ ನೆಟ್ಟಗಾದಳು, ದೇವರನ್ನು ಕೊಂಡಾಡಿದಳು”((ಲೂಕ 13:10-13)

ಯೇಸು ಸೈತಾನನ ಯೋಜನೆಗಳನ್ನು ತಿಳಿದಿದ್ದಾನೆ

ಆತ್ಮನ ಕ್ಷೇತ್ರದಲ್ಲಿ ದುರಾತ್ಮನು ಏನು ಮಾಡಬೇಕೆಂದು ಯೋಜಿಸುತಿದ್ದಾನೆ ಎಂಬುದು ಕರ್ತನಾದ ಯೇಸುವಿಗೆ ತಿಳಿದಿತ್ತು. ಆತನು ಪೇತ್ರನಿಗಾಗಿ ಪ್ರಾರ್ಥಿಸಿದನು ಮತ್ತು ಮೊದಲೇ ಎಚ್ಚರಿಕೆ ನೀಡಿದನು “ಸೀಮೋನನೇ, ಸೀಮೋನನೇ, ನೋಡು, ಸೈತಾನನು ನಿಮ್ಮನ್ನು ಗೋದಿಯಂತೆ ಒನೆಯಬೇಕೆಂದು ಅಪ್ಪಣೆ ಕೇಳಿಕೊಂಡನು; ಆದರೆ ನಿನ್ನ ನಂಬಿಕೆ ಕುಂದಿಹೋಗಬಾರದೆಂದು ನಾನು ನಿನ್ನ ವಿಷಯದಲ್ಲಿ ದೇವರಿಗೆ ವಿಜ್ಞಾಪನೆಮಾಡಿಕೊಂಡೆನು. ನೀನು ತಿರುಗಿಕೊಂಡ ಮೇಲೆ ನಿನ್ನ ಸಹೋದರರನ್ನು ದೃಢಪಡಿಸು ಎಂದು ಹೇಳಿದನು” (ಲೂಕ 22:31-32)

ಕಾರ್ಯಾಚರಣೆಗಳು

ಆತ್ಮಗಳ ವಿವೇಚನೆಯ ವರವು ಉಪಯುಕ್ತವಾಗಿರುವಂತಹ ಕೆಲವು ಅನ್ವಯದ ಕ್ಷೇತ್ರಗಳು ಇಲ್ಲಿವೆ ಇದು ಸಂಪೂರ್ಣವಾದ ಪಟ್ಟಿ ಅಲ್ಲ.

1. ಜನರಿಗೆ ಸೇವೆ ಸಲ್ಲಿಸುವಾಗ ದುಷ್ಟ ಆತ್ಮಗಳನ್ನು ತೊಂದರೆಯ ನಿಜವಾದ ಮೂಲ ಎಂಬುದಾಗಿ ಗುರುತಿಸುವುದು ಒಂದು ಪರಿಚಿತ ಆತ್ಮವು ಒಬ್ಬ ವ್ಯಕ್ತಿ, ಒಂದು ಸ್ಥಳ ಅಥವಾ ಒಂದು ಸಂಗತಿಯೊಂದಿಗೆ "ಪರಿಚಿತವಾಗಿ" ಕಂಡು ಬರುವುದಾಗಿದೆ. ಫಲಿತಾಂಶವಾಗಿ ಅವರು ಅಲ್ಲಿ "ನಿವಾಸ" ತೆಗೆದುಕೊಂಡಿವೆ ಮತ್ತು ಅವರ ಪ್ರಭಾವವನ್ನು ಪ್ರಯೋಗಿಸುತ್ತವೆ ಒಬ್ಬ ವ್ಯಕ್ತಿಯಲ್ಲಿ, ಆತ್ಮಗಳು ಜೀವನಶೈಲಿ, ಮನಸ್ಥಿತಿಗಳು, ಆಲೋಚನೆ ಮಾದರಿಗಳು, ನಡವಳಿಕೆ ಮಾದರಿಗಳು ಮತ್ತು ವ್ಯಕ್ತಿಯ ಜೀವಿತದಲ್ಲಿ ಬದಲಾವಣೆ ತಡೆಯುವಂತಹ ಹಾನಿಗಳನ್ನುಂಟು ಮಾಡುತ್ತವೆ. ಬಿಡುಗಡೆಯು ಜರುಗುವುದು ಅವಶ್ಯಕವಾಗಿದೆ ಮತ್ತು ಪ್ರವೇಶದ ಬಿಂದುಗಳು ಪಶ್ಚಾತ್ತಾಪದಿಂದ ಮುಚ್ಚಲ್ಪಡಬೇಕು (ಅವಕಾಶಗಳನ್ನು ಒದಗಿಸುವುದಿಲ್ಲ, ವಿರುದ್ಧ ಜೀವನ ಶೈಲಿ ಆರಿಸಿಕೊಳ್ಳುವುದು)

2.ಬಿಡುಗಡೆ ಮಾಡುವ ಅವಧಿಯಲ್ಲಿ, ಅಧಿಕವಾದ ದುಷ್ಟ ಆತ್ಮಗಳು ಬಚ್ಚಿಟ್ಟುಕೊಂಡಿರುವುದು ತಿಳಿದರೆ ಅದನ್ನು ಹೊರಹೊಡಿಸುವುದು ಅಗತ್ಯವಾಗಿದೆ.

3. ಸತ್ಯ ಮತ್ತು ಸುಳ್ಳು ಸೇವಕರುಗಳನ್ನು, ಬೋಧನೆಯಲ್ಲಿ ದೋಷದ ಆತ್ಮ ಮತ್ತು ಸತ್ಯದ ಆತ್ಮ ಗುರುತಿಸುವುದು

4. ಜನರ ಹೃದಯಗಳಲ್ಲಿ ಇರುವ ನಿಜವಾದ ಉದ್ದೇಶವನ್ನು ಗುರುತಿಸುವುದು ಮತ್ತು ಬಾಹ್ಯನೋಟ ಮತ್ತು ನೆಪವನ್ನು ಕಳೆದಂತೆ ನೋಡಲು ಸಾಧ್ಯವಾಗುತ್ತದೆ.

5. ಆತ್ಮನ ಕ್ಷೇತ್ರದಲ್ಲಿ ದೇವರು ಮಾಡುತ್ತಿರುವುದನ್ನು ಗುರುತಿಸುವುದು ಮತ್ತು ಅದಕ್ಕನುಸಾರವಾಗಿ ನಿಮ್ಮನ್ನು ಸ್ಥಾನೀಕರಿಸಿಕೊಳ್ಳಬೇಕು.

6. ದೇವದೂತರುಗಳು ಮತ್ತು ಅವರು ಮಾಡುತ್ತಿರುವವುಗಳನ್ನು ಗುರುಗಿಸುವುದು.

7.ಸೈತಾನನ ಯೋಜನೆಗಳು ಗುರ್ತಿಸುವುದು ಮತ್ತು ಪ್ರಾರ್ಥನೆ ಮತ್ತು ಯುದ್ಧದ ಮೂಲಕ ಅವರನ್ನು ಪ್ರತಿರೋಧಿಸುವುದು.

ಆತ್ಮಗಳ ವಿವೇಚನೆಯು ಹೇಗೆ ಸ್ವೀಕರಿಸಲಾಗುತ್ತದೆ

ಆತ್ಮಗಳ ವಿವೇಚನೆಯ ವರವನ್ನು ಪವಿತ್ರಾತ್ಮನು ನಮ್ಮ ಆತ್ಮದ ಯಾವುದೇ ಇಂದ್ರಿಯಗಳ ಮೂಲಕವಾಗಿ ಉಪಯೋಗಿಸಬಹುದು. ಕೆಲವು ಮಾರ್ಗಗಳು ಇಲ್ಲಿವೆ.

ನಿಮ್ಮ ಆತ್ಮದಲ್ಲಿ ಒಂದು ತನಿಖೆ

ನೀವು ಪರೀಕ್ಷಿಸಿಕೊಳ್ಳುವುದನ್ನು ನಿಮ್ಮ ಆತ್ಮದಲ್ಲಿ ಅಹಿತಕರ ಭಾವನೆಯನ್ನು ಸ್ವೀಕರಿಸಬಹುದು. ಯಾವುದೋ ತಪ್ಪು ಎಂಬುದಾಗಿ ದೇವರು ಎಚ್ಚರಿಸುತ್ತಿರುವುದನ್ನು ಅರಿತುಕೊಳ್ಳಬೇಕು ಮತ್ತು ಕ್ರಮ ತೆಗೆದುಕೊಳ್ಳಬೇಕು. ಆ ರೀತಿಯಾಗಿ ನಿಮಗೆ ಏಕೆ ಅನ್ನಿಸುತ್ತಿದೆ ಎಂಬುದಾಗಿ ತೋರಿಸಲು ಮತ್ತು ನೀವು ಏನು ಮಾಡಬೇಕೆಂಬುದಾಗಿ ಆತನು ಅಪೇಕ್ಷಿಸುವುದೇನು ಎಂಬುದನ್ನು ತಿಳಿಯಲು ಪ್ರಾರ್ಥಿಸಬಹುದು ಮತ್ತು ದೇವರನ್ನು ಕೇಳಬಹುದು.

ಆತ್ಮದಲ್ಲಿ ಆನಂದ ಮತ್ತು ಅನ್ಯೋನ್ಯತೆಯ ಪ್ರಜ್ಞೆ

ನೀವು ಯಾರೊಂದಿಗಾದರು ಸಂಭಾಷಣೆ ಮಾಡುವಾಗ ಪವಿತ್ರಾತ್ಮದಲ್ಲಿ "ಸಂತೋಷ, ಸಮಾಧಾನ ಮತ್ತು ನೀತಿವಂತಿಕೆಯ" ಒಂದು ಭಾವನೆಯ ವಿಶೇಷ ಸಂಪರ್ಕದ ಪ್ರಜ್ಞೆ ಹೊಂದುವಂತಹ ಸಮಯಗಳಿವೆ. ಅವರ ಆತ್ಮದ ಗುಣ ಸ್ವಭಾವದ (ಅವರು ಯಾವ ರೀತಿಯ ವ್ಯಕ್ತಿಯಾಗಿದ್ದಾರೆ) ಪ್ರಜ್ಞೆಯನ್ನು ನಿಮ್ಮ ಆತ್ಮದಲ್ಲಿ ಪಡೆಯುತ್ತೀರಿ. ಅವರು ಯಾವ ರೀತಿಯ ಜನರಾಗಿದ್ದಾರೆಂಬುದನ್ನು ನೀವು ತಿಳಿಯಲು ಮತ್ತು ಅವರೊಂದಿಗೆ ಆತನ ರಾಜ್ಯದ ಉದ್ದೇಶಗಳಿಗಾಗಿ ನೀವು ಏನು ಮಾಡಬೇಕೆಂಬುದಾಗಿ ಆತನು ಅಪೇಕ್ಷಿಸುತ್ತಾನೆ ಎಂಬುದನ್ನು ತಿಳಿಯಲು ದೇವರು ಸಹಾಯ ಮಾಡುತ್ತಾನೆ.

ಕೆಲವು ನಿರ್ದಿಷ್ಟ ವಿಧವಾದ ಆತ್ಮವು ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ತಿಳಿಯುವುದು

ಒಬ್ಬ ವ್ಯಕ್ತಿಯನ್ನು ಪ್ರಭಾವಿಸುತ್ತಿರುವ ಅಥವಾ ಕಾರ್ಯನಡೆಸುತ್ತಿರುವ ದುಷ್ಟ ಆತ್ಮಗಳ ವಿಧದ ಕುರಿತು ತಿಳಿದುಕೊಳ್ಳುವುದನ್ನು ನಿಮ್ಮ ಆತ್ಮದಲ್ಲಿ ದೇವರು ಬಿಡುಗಡೆ ಮಾಡಬಹುದು ನಿಮ್ಮ ಆತ್ಮಕ್ಕೆ ದೇವರು ಪ್ರಕಟಿಸಿದನು ಎಂಬುದು ನಿಮಗೆ ಗೊತ್ತಾಗುತ್ತದೆ. ಈಗ ನೀವು ಇಂತಹ ದುಷ್ಟ ಆತ್ಮಗಳನ್ನು ಹೆಸರಿನಿಂದ ಕರೆಯಬಹುದು ಮತ್ತು ಪವಿತ್ರಾತ್ಮನ ಬಲದಿಂದ, ಯೇಸುವಿನ ಹೆಸರಿನ ಅಧಿಕಾರವನ್ನು ಉಪಯೋಗಿಸಿ ಮಾಡುತ್ತಿರುವವುಗಳನ್ನು ನಾಶಮಾಡಬಹುದು.

ವಿಭಿನ್ನ ಬಗೆಯ ಆತ್ಮಗಳು ಕಾರ್ಯನೆಡೆಸುವುದರ ಕುರಿತು ವಾಕ್ಯ ಅಥವಾ ವಾಕ್ಯಗಳು

ಕಾರ್ಯನಡೆಸುತ್ತಿರುವ ದುಷ್ಟ ಆತ್ಮಗಳ ವಿಧವನ್ನು ಗುರ್ತಿಸಲು ನಿಮ್ಮ ಆತ್ಮದಲ್ಲಿ ಪದಗಳು (ಹೆಸರುಗಳನ್ನು, ಗುಣಲಕ್ಷಣಗಳು, ಕ್ರಿಯೆಗಳು) ಹಾಗೆಯೇ ಬರುವಂತಹ ಸಮಯಗಳಿವೆ. ಇಂತಹ ದುಷ್ಟ ಆತ್ಮಗಳ ಮೇಲೆ ನೀವು ಅಧಿಕಾರ ತೆಗೆದುಕೊಳ್ಳಬೇಕು ಮತ್ತು ಅವುಗಳು ಮಾಡುತ್ತಿರುವುದನ್ನು ನಾಶಪಡಿಸಬೇಕು.

ಆತ್ಮನ ಕ್ಷೇತ್ರದಲ್ಲಿ ಜರುಗುತ್ತಿರುವುದನ್ನು ತೋರಿಸುವ ಒಂದು ದೃಶ್ಯ

ಜರುಗುತ್ತಿರುವ ವಿಷಯಗಳನ್ನು (ದರ್ಶನ) ಪವಿತ್ರಾತ್ಮನು ತೋರಿಸಬಹುದು. ನಿಮ್ಮ ಆತ್ಮದ ಕಣ್ಣುಗಳು ಇದನ್ನು ನೋಡುತ್ತವೆ. ಆತ್ಮನ ಕ್ಷೇತ್ರದಲ್ಲಿ ಸಂಗತಿಗಳು ಜರುಗುತ್ತಿರುವುದನ್ನು ನೀವು ನೋಡುವ ದೇವದೂತರ ಕಾರ್ಯಗಳು ಮತ್ತು ದುರಾತ್ಮನವುಗಳು ಮತ್ತು ಜನರ ಮೇಲಿನ ಪ್ರಭಾವಗಳ ಕುರಿತಾದದ್ದು ಪ್ರಕಟಗೊಳ್ಳುವಂತಹ ಘಟನೆಗಳ ಅನುಕ್ರಮವು ಬಹುಶಃ ತೆರೆದುಕೊಳ್ಳುತ್ತದೆ. ಆ ಮೇಲೆ ನೀವು ವ್ಯಕ್ತಿಗೆ (ಗಳಿಗೆ) ಸೇವೆ ಸಲ್ಲಿಸುವುದೇಗೆ ಮತ್ತು ಆತ್ಮದ ಕ್ಷೇತ್ರದಲ್ಲಿ ಜರುಗುತ್ತಿರುವವುಗಳೊಡನೆ ವ್ಯವಹರಿಸುವುದರಿಂದ ಅವರ ಜೀವತದಲ್ಲಿ ಬದಲಾವಣೆಯ ಪರಿಣಾಮ ಬೀರಲು ಏನು ಮಾಡಬೇಕೆಂಬುದನ್ನು ನೀವು ತಿಳಿಯುತ್ತೀರಿ.

ಆತ್ಮನ ಕ್ಷೇತ್ರದ ಥಟ್ಟನೆಯ ಅರಿವು

ನಿಮ್ಮ ಸುತ್ತಲೂ ಜರುಗುತ್ತಿರುವವುಗಳಿಗೆ ನಿಮ್ಮ ಆತ್ಮವು ಥಟ್ಟನೆ ಅರಿತುಕೊಳ್ಳುವುದಾಗಿ ಕಂಡು ಬರುತ್ತದೆ. ದೇವದೂತರುಗಳ ಕಾರ್ಯ ಚಟುವಟಿಕೆ ಅಥವಾ ವೈರಿಯ ದುಷ್ಟ ತಂತ್ರೋಪಾಯಗಳನ್ನು ನೀವು ಗುರ್ತಿಸುತ್ತೀರಿ. ಆ ಮೇಲೆ ನೀವು ಅಪೇಕ್ಷಿಸುತ್ತಾನೆ. ನಿಮಗೆ ಸೇವೆ ಸಲ್ಲಿಸಲು ಆತನ ದೇವದೂತರುಗಳ ಸೇವಯನ್ನು ಸ್ವಾಗತಿಸಬೇಕು ಮತ್ತು ಆತನಿಗೆ ವಂದನೆ ಹೇಳಬೇಕು ಇಲ್ಲವೇ ದುಷ್ಟ ಆತ್ಮಗಳ ಮೇಲೆ ಅಧಿಕಾರ ತೆಗೆಕುಕೊಳ್ಳಬೇಕು, ಗದರಿಸಬೇಕು ಮತ್ತು ದುರಾತ್ಮನು ಮಾಡಲೂ ಪ್ರಯತ್ನಿಸುತ್ತಿರುವವುಗಳನ್ನು ನಾಶಮಾಡಬೇಕು.

ಆತ್ಮನ ಕ್ಷೇತ್ರದಲ್ಲಿ ಜರುಗುತ್ತಿರುವುದನ್ನು ಕೇಳಿಸಿಕೊಳ್ಳುವುದು

ಆತ್ಮನ ಕ್ಷೇತ್ರದಲ್ಲಿ ಜರುಗುತ್ತಿರುವುದನ್ನು – ಕ್ರಿಯೆ, ಚಳುವಳಿ, ಸಂಭಾಷಣೆಗಳು ಇತ್ಯಾದಿಗಳನ್ನು ನಿಮ್ಮ ಆತ್ಮ "ಕೇಳಿಸಿಕೊಳ್ಳುತ್ತದೆ" ಉದಾಹರಣೆ, "ಫಿಲಿಷ್ಟಿಯರು ಇನ್ನೊಮ್ಮೆ ಹೊರಟು ಬಂದು ರೆಫಾಯಿಮ್ ತಗ್ಗಿನಲ್ಲಿ ಇಳುಕೊಂಡರು ದಾವಿದನು ಯೆಹೋವನ ಸನ್ನಿಧಿಯಲಿ ವಿಚಾರಿಸಿದಾಗ ಆತನು ಅವನಿಗೆ ನೀನು ನೆಟ್ಟಗೆ ಹೋಗಿ ಅವರ ಮೇಲೆ ಬೀಳಬೇಡ ಅವರ ಹಿಂದಳ ವನ್ನು ಸುತ್ತಿಕೊಂಡು ಹೋಗಿ ಬಾಕಾ ಮರಗಳಿರುವ ಕಡೆಯಿಂದ ಅವರ ಮೇಲೆ ಬೀಳು ಆ ಮರಗಳ ತುದಿಯಲ್ಲಿ ಹೆಜ್ಜೆಗಳ ಸಪ್ಪಳ ಕೇಳಿಸುವಾಗ ಯೆಹೋವನು ಫಿಲಿಷ್ಟಿಯರ ಸೈನ್ಯವನ್ನು ಸೋಲಿಸುವದಕ್ಕೋಸ್ಕರ ನಿನ್ನ ಮುಂದಾಗಿ ಹೊರಟನೆಂದು ತಿಳಿದುಕೊಂಡು ಅವರ ಮೇಲೆ ಬೀಳು ಅಂದನು ದಾವೀದನು ಯೆಹೋವನ ಆಜ್ಞಾನುಸಾರವಾಗಿ ಮಾಡಿ ಫಿಲಿಷ್ಟಿಯರನ್ನು ಗೆಬದಿಂದ ಗೆಜೆರಿನವರೆಗೂ ಸಂಹರಿಸಿದರು." (2ಸಮುವೇಲನು 5:22-25).

ಕನಸ್ಸುಗಳ ಮೂಲಕ

ಆತ್ಮನ ಕ್ಷೇತ್ರದಲ್ಲಿ ಜರುಗುತ್ತಿರುವ ಸಂಗತಿಗಳನ್ನು ಕನಸ್ಸುಗಳ ಮೂಲಕವಾಗಿ ದೇವರು ಮುಂಚೆಯೇ ಪ್ರಕಟಿಸಬಹುದು. ಆದ್ದರಿಂದ ನೀವು ಕಾರ್ಯಗತಗೊಳಸಲೂ ಸಿದ್ಧಗೊಂಡಿರಬೇಕು ಮತ್ತು ಅಗತ್ಯವಾಗಿರುವುದನ್ನು ಮಾಡಿರಿ.

ಜರುಗುತ್ತಿರುವುದನ್ನು ನೋಡಲು ನಿಮ್ಮ ಆತ್ಮದ ಕಣ್ಣುಗಳನ್ನು ತೆರೆದಿವೆ

ಪವಿತ್ರಾತ್ಮನು ನಿಮ್ಮ ಕಣ್ಣುಗಳು ನೋಡಲು ತೆರೆಯುತ್ತಾನೆ. ನಿಮ್ಮ ನೈಸರ್ಗಿಕ ಕಣ್ಣುಗಳ ಮೂಲಕವಾಗಿ ನಿಮ್ಮ ಆತ್ಮ ಮನುಷ್ಯನು ನೋಡುತ್ತಿದ್ದಾನೆ ಆದರೆ ಸ್ವಾಭಾವಿಕತೆಯನ್ನು ಮೀರಿ ಆತ್ಮಕ್ಷೇತ್ರಕ್ಕೆ ನೋಡುವುದಾಗಿದೆ

ಆತ್ಮನ ಕ್ಷೇತ್ರದಲ್ಲಿ ಸಾಗಣೆ

ಒಬ್ಬ ವ್ಯಕ್ತಿ, ಒಂದು ಕುಟುಂಬ, ಒಂದು ಜನರುಗಳ ಗುಂಪು ಅಥವಾ ಒಂದು ನಗರಗಳ ಮೇಲೆ ಆತ್ಮನ – ಕ್ಷೇತ್ರದಲ್ಲಿ ಕಾರ್ಯಚಟುವಟಿಕೆ ತೋರಿಸಲು ಆತ್ಮನ ಸಾಗಣಿಕೆ ಅಥವಾ ದರ್ಶನದಲ್ಲಿ ನಿಮ್ಮ ಆತ್ಮನಲ್ಲಿ ನೀವು ಸಾಗಿಸಲ್ಪಡುವಂತೆ ದೇವರು ಶಕ್ತರನ್ನಾಗಿಸುತ್ತಾನೆ.

ಕೈಯಲ್ಲಿ ದೈಹಿಕ ಅನುಭವ ಪಡೆಯುವುದು

ದುಷ್ಟ ಆತ್ಮನ ಪ್ರಸನ್ನತೆಯನ್ನು ನಿಮಗೆ ಸೂಚಿಸಲು ದೇವರು ನಿಮ್ಮ ಕೈಯಲ್ಲಿ ನಿರ್ದಿಷ್ಟ ನಿವೇದನೆಗಳನ್ನು (ಉದಾಹರಣೆಗೆ ಬಿಸಿ, ಬೆಂಕಿ, ಜುಮ್ಮೆನಿಸುವಿಕೆ ಇತ್ಯಾದಿ) ಕೆಲವೊಮ್ಮೆ ನೀವು ಹೊಂದಿರುವಂತೆ ದೇವರ ಉಪಯೋಗಿಸಬಹುದು ಕೆಲವು ದೇವರ ಸೇವಕರುಗಳು ಅವರ ಸೇವೆಗಳಲ್ಲಿ ಅಂತಹ ವಿಧಾನದಲ್ಲಿ ದೇವರು ಕಾರ್ಯಮಾಡುತ್ತಿರುವುದನ್ನು ಹಂಚಿಕೊಂಡಿದ್ದಾರೆ.

ವಾಸನೆ ಮತ್ತು ರುಚಿಯ ಆತ್ಮ ಪ್ರಜ್ಞೆಯ ಮೂಲಕ

ನಾವು ಹಿಂದಿನ ಅಧ್ಯಾಯದಲ್ಲಿ ವ್ಯಾಖ್ಯಾನಿಸಿದಂತೆ ದೇವರು ಒಂದು ನಿರ್ದಿಷ್ಟ ರುಚಿ/ವಾಸನೆ ಗುರುತಿಸುವಂತೆ ಕಾರಣನಾಗುತ್ತಾನೆ ಮತ್ತು ಆಮೇಲೆ ಆತನು ಸಂಪರ್ಕಿಸುತ್ತಿರುವುದರ ಮೇಲೆ ನಿರ್ದಿಷ್ಟ ತಿಳುವಳಿಕೆ ಕೊಡುತ್ತಾನೆ. **ಹಿತಕರವಾದ ರುಚಿಗಳು /ವಾಸನೆಗಳು** ನಾವು ಮಾಡುತ್ತಿರುವವುಗಳಲ್ಲಿ ದೇವರ ಸಂತೋಷ, ದೇವರು ಪ್ರಸ್ತುತವಾಗಿದ್ದಾನೆ, ದೇವರ ಅಭಿಷೇಕವು ಕಾರ್ಯನಿರತವಾಗಿದೆ; ದೇವರು ಸ್ವಸ್ಥತೆ ತರಲು ಚಲಿಸುತ್ತಿದ್ದಾನೆ; ಸಂತೈಸುವಿಕೆಯನ್ನು ತರಲು ದೇವರು ಚಲಿಸುತ್ತಿದಾನೆ; ನಿರ್ದಿಷ್ಟ ಬಗೆಯ ಅಗತ್ಯತೆಗಳನ್ನು ಪೂರೈಸಲು ದೇವರು ಚಲಿಸುತ್ತಿರುವುದು ಇತ್ಯಾದಿಗಳು ಸೂಚಿಸಲು ಉಪಯೋಗಿಸಲ್ಪಡುತ್ತವೆ. **ಅಹಿತಕರ ವಾಸನೆಗಳು/ರುಚಿಗಳು** ಜರುಗುತ್ತಿರುವವುಗಳಲ್ಲಿ (ಉದಾಹರಣೆ ಪ್ರಸಂಗಿಸಲ್ಪಟ್ಟ ತಪ್ಪಾದ ದೈವಶಾಸ್ತ್ರ, ಸುಳ್ಳು ಪ್ರವಾದಿಯು ಜನರನ್ನು ಮೋಸಗೊಳಿಸುತ್ತಿರುವುದು, ದೆವ್ವಗಳ ಬಲ, ಪ್ರಲೋಭನೆ ಆತ್ಮಗಳು, ಕಾರ್ಯನಿರತ ಅಶುದ್ಧ ಆತ್ಮಗಳು ಇತ್ಯಾದಿ) ನೀವು ಜಾಗರೂಕರಾಗಿರಲು, ಅಂತಹ ಪರಿಸ್ಥಿತಿಗಳಿಂದ ಹೊರ ಬರಲು (ಉದಾಹರಣೆ ಈಗ ಬಿಡು ನೀನು ಅಲ್ಲಿರುವುದು ಬೇಡ, ಇಂತಹ ಜನರುಗಳೊಡನೆ ಸಂಭಾಷಣೆ ಮಾಡಬೇಡ ಇತ್ಯಾದಿ) ಸೂಚಿಸುವಂತಹ ಎಚ್ಚರಿಕೆ ಆಗಿರುತ್ತವೆ.

ಆತ್ಮಗಳ ವಿವೇಚನೆಯ ಮೂಲಕ ಪಡೆದುಕೊಂಡಿದ್ದನ್ನು ಹೇಗೆ ಉಪಯೋಗಿಸುವುದು ಅಥವಾ ಬಿಡುಗಡೆ ಮಾಡುವುದು

ಸಾಮಾನ್ಯವಾಗಿ ಆತ್ಮಗಳ ವಿವೇಚನೆಯ ವರವು ನೀವು ಕ್ರಿಯ ತೆಗೆದುಕೊಳ್ಳುವುದನ್ನು ಪವಿತ್ರಾತ್ಮನು ನಿಮಗೆ ಪ್ರಕಟಿಸುತ್ತಿರುವುದಕ್ಕೆ ಪ್ರತಿಕ್ರಿಯೆಯಾಗಿ ಏನಾದರೂ ಮಾಡುವುದನ್ನು ಅಪೇಕ್ಷಿಸುತ್ತದೆ. ಆತ್ಮಗಳ ವಿವೇಚನೆಯ ಮೂಲಕ ಪಡೆದ

ಮಾಹಿತಿಯನ್ನು ಹೇಗೆ ಬಳಸಿಕೊಳ್ಳಲಾಗುತ್ತದೆ ಎಂಬುದರ ಕಿರು ಪ್ರತಿನಿಧಿಸುವ ಪಟ್ಟಿ ಇಲ್ಲಿದೆ.

ನೀವು ವ್ಯಕ್ತಿಗೆ ಬಿಡುಗಡೆಯ ಸೇವೆ ಮಾಡಬೇಕು

ವ್ಯವಹರಿಸಲಬೇಕಾದ ಆತ್ಮಗಳ ವಿಧಗಳು ನಿಮಗೆ ತಿಳಿದಿದ್ದರೆ, ಇಂತಹ ದುಷ್ಟ ಆತ್ಮಗಳನ್ನು ಹೆಸರಿನಿಂದ ಕರೆಯಿರಿ, ಅವರನ್ನು ಹೊರಹಾಕಿ ಮತ್ತು ಯೇಸುವಿನ ಹೆಸರಿನ ಅಧಿಕಾರ ಮತ್ತು ಪವಿತ್ರಾತ್ಮನ ಬಲದಿಂದ ಅವುಗಳು ಮಾಡುತ್ತಿರುವವನ್ನು ನಾಶ ಮಾಡಬೇಕು. ಹಾಗೆಯೇ ವ್ಯಕ್ತಿಯನ್ನು ಎಲ್ಲಾ ದುಷ್ಟ ಆತ್ಮಗಳು ಬಿಟ್ಟು ಹೋಗಿವೆಯಾ ಎಂಬುದನ್ನು ಖಾತರಿಪಡಿಸಿಕೊಳ್ಳಲು ಆತ್ಮನಿಗೆ ಸೂಕ್ಷ್ಮತೆಯುಳ್ಳವರಾಗಿ ಉಳಿಯಿರಿ ಆದ್ದರಿಂದ ಬಿಡುಗಡೆಯು ಸಂಪೂರ್ಣವಾಗಿರುತ್ತದೆ.

ಕಾರ್ಯನಡೆಸುತ್ತಿರುವ ಆತ್ಮಗಳ ವಿಧಗಳ ಮೇಲೆ ನೀವು ಅಧಿಕಾರ ತೆಗೆದುಕೊಳ್ಳುವುದು ಅಗತ್ಯವಾಗಿದೆ

ನಿಶ್ಚಿತ ಬಗೆಯ ಆತ್ಮಗಳು ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಅಥವಾ ಜನರ ಗುಂಪಿನ ಮೇಲೆ ಕಾರ್ಯನಡೆಸುತ್ತಿರುವುದನ್ನು ದೇವರ ಆತ್ಮನು ಪ್ರಕಟಿಸಿದರೆ, ಆಮೇಲೆ ಅಂತಹ ಆತ್ಮಗಳ ಮೇಲೆ ಅಧಿಕಾರ ತೆಗೆದುಕೊಳ್ಳಿರಿ ಆ ಪರಿಸ್ಥಿತಿಯಲ್ಲಿ ಅವರ ಕಾರ್ಯಾಚರಣೆಯನ್ನು ನಿಲ್ಲಿಸಿ. ಯೇಸುವಿನ ಹೆಸರಿನಲ್ಲಿ ಅವರ ಕಾರ್ಯಗಳನ್ನು ನಾಶಮಾಡಿರಿ. ಅವರ ದುಷ್ಟ ಪ್ರಭಾವಗಳನ್ನು ಹೊರ ಓಡಿಸಿರಿ. ಪರಿಸ್ಥಿತಿ ಅಥವಾ ಜನರ ಮೇಲೆ ದೇವರ ವಾಕ್ಯ ಮಾತನಾಡಿರಿ ಆ ಪರಿಸ್ಥಿತಿಗೆ ದೇವರ ರಾಜ್ಯದ ಪ್ರಭಾವ ಬಿಡುಗಡೆ ಮಾಡಿರಿ.

ನೀವು ಮತ್ತಷ್ಟು ಮುಂದುವರಿಯುವುದನ್ನು ನಿಲ್ಲಿಸಬೇಕಾಗಬಹುದು

ದೇವರ ಆತ್ಮನು ವೈರಿಯ ಕಾರ್ಯತಂತ್ರ ಅಥವಾ ಸಂಚುಗಳು ಯೋಜನೆ, ಉದ್ದೇಶಗಳನ್ನು ಪ್ರಕಟಿಸುತ್ತಾನೆ ಆ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಅವರ ಪ್ರಯತ್ನದೊಡನೆ ಮುಂದೆ ಹೋಗುವುದರಿಂದ ಅವರನ್ನು ತಡೆಗಟ್ಟಬೇಕು ಶತ್ರುಗಳ ಶಿಬಿರದಲ್ಲಿ ಗೊಂದಲವನ್ನು ಘೋಷಿಸಿ ಅವರ ಪ್ರಯತ್ನಗಳೆಲ್ಲವನ್ನು ಬಂಧಿಸಿರಿ ಮತ್ತು ಶೂನ್ಯಗೊಳಿಸಿರಿ ಯೇಸುವಿನ ಹೆಸರಿನ ಅಧಿಕಾರ ಉಪಯೋಗಿಸುವುದರಿಂದ ಅವರನ್ನು ಚದುರಿಸಿರಿ ದೇವರ ವಾಕ್ಯ ಮಾತನಾಡಿರಿ, ದೇವರ ರಾಜ್ಯದ ಪ್ರಭಾವ ಬಿಡುಗಡೆ ಮಾಡಿರಿ

ಮತ್ತು ಕೊಡಲ್ಪಟ್ಟ ಪರಿಸ್ಥಿತಿಯಲ್ಲಿ ಆತನ ದೇವದೂತರುಗಳು ಅವರ ಕಾರ್ಯವನ್ನು ಮಾಡಲೂ ಬಿಡುಗಡೆಗೊಳಿಸುವುದಕ್ಕಾಗಿ ದೇವರನ್ನು ಕೇಳಿರಿ

ನಿಮಗೆ ದೇವರು ತೋರಿಸುವಂತದ್ದರ ಮೇಲೆ ಪ್ರಾರ್ಥಿಸಿರಿ

ಕೆಲವೊಮ್ಮೆ ದೇವರು ನಮ್ಮನ್ನು ಏನಾಗುತ್ತದೆ ಎಂದು ತಿಳಿಯುವ ಕ್ರಮದಲ್ಲಿ ಮುಂಚಿತವಾಗಿ ಪ್ರಾರ್ಥನೆ ಮಾಢಲು ಮತ್ತು ತೊಡಗಿಸಿಕೊಂಡಿರುವ ಜನರನ್ನು ಸಂರಕ್ಷಿಸಲು ಎಚ್ಚರಿಸುತ್ತಾನೆ. ಕರ್ತನಾದ ಯೇಸುವು ಪೇತ್ರನಿಗಾಗಿ ಮತ್ತು ಅವನ ನಂಬಿಕೆಯು ಪುನಃ ಸ್ಥಾಪಿಸಲ್ಪಡಲು ಪ್ರಾರ್ಥಿಸಿದ್ದು ಒಂದು ಉದಾಹರಣೆಯಾಗಿದೆ (ಲೂಕ 22:31-32)

ಸಿದ್ಧವಾಗಿರಿ ಮತ್ತು ನಿಮ್ಮನ್ನು ಸ್ಥಾನೀಕರಿಸಿಕೊಂಡಿರಿ

ಆತ್ಮನ ಕ್ಷೇತ್ರದಲ್ಲಿ ಏನು ಜರುಗುತ್ತದೆಂಬುದರ ಕುರಿತು ದೇವರು ಪ್ರಕಟಿಸಬಹುದು ಆದ್ದರಿಂದ ಸ್ವಾಭಾವಿಕದಲ್ಲಿ ಕ್ರಮ ತೆಗೆದು ಕೊಳ್ಳಲು ನಿಮ್ಮನ್ನು ಸ್ಥಾನದಲ್ಲಿರಿಸಿಕೊಳ್ಳಿರಿ ಮತ್ತು ಸಿದ್ಧಗೊಂಡಿರಿ. ಅತ್ಯದ್ಭುತಕರವಾದ ಉದಾಹರಣೆಯು ದಾವೀದನ ಜೀವನದಲ್ಲಿನ ಘಟನೆಯಾಗಿದೆ, ಅವನು ಪಡೆಗಳ ನಡಿಗೆಯ ಶಬ್ದವನ್ನು ಕೇಳಿಸಿಕೊಂಡಾಗ ಆತ್ಮನ ಕ್ಷೇತ್ರದಲ್ಲಿ ಕ್ರಮವು ತೆಗೆದುಕೊಳ್ಳುವುದು ಜರುಗಿತು, ಆಮೇಲೆ ಅವನು ಸ್ವಾಭಾವಿಕದಲ್ಲಿ ಚಲಿಸಿದನು "ಫಿಲಿಷ್ಟಿಯರು ಇನ್ನೊಮ್ಮೆ ಹೊರಟು ಬಂದು ರೆಫಾಯಿಮ್ ತಗ್ಗಿನಲ್ಲಿ ಇಳುಕೊಂಡರು ದಾವೀದನು ಯೆಹೋವನ ಸನ್ನಿಧಿಯಲ್ಲಿ ವಿಚಾರಿಸಿದಾಗ ಆತನು ಅವನಿಗೆ ನೀನು ನೆಟ್ಟಗೆ ಹೋಗಿ ಅವರ ಮೇಲೆ ಬಿಳಬೇಡ ಅವರ ಹಿಂದಳವನ್ನು ಸುತ್ತಿಕೊಂಡು ಹೋಗಿ ಬಾಕಾ ಮರಗಳಿರುವ ಕಡೆಯಿಂದ ಅವರ ಮೇಲೆ ಬೀಳು ಆ ಮರಗಳ ತುದಿಯಲ್ಲಿ ಹೆಜ್ಜೆಗಳ ಸಪ್ಪಳ ಕೇಳಿಸುವಾಗ ಯೆಹೋವನು ಫಿಲಿಷ್ಟಿಯರ ಸೈನ್ಯವನ್ನು ಸೋಲಿಸುವದಕ್ಕೋಸ್ಕರ ನಿನ್ನ ಮುಂದಾಗಿ ಹೊರಟನೆಂದು ತಿಳಿದುಕೊಂಡು ಅವರ ಮೇಲೆ ಬೀಳು ಅಂದನು ದಾವೀದನು ಯೆಹೋವನ ಆಜ್ಞಾನುಸಾರವಾಗಿ ಮಾಡಿ ಫಿಲಿಷ್ಟಿಯರನ್ನು ನೆಬದಿಂದ ಗೆಜೆರಿನವರೆಗೂ ಸಂಹರಿಸಿದನು" (2 ಸಮುವೇಲನು 5:22-25)

ನೀವು ಎಚ್ಚರಿಸಲ್ಪಟ್ಟಂತಹ ಜನರುಗಳೊಡನೆ ಮುಂದಿನ ಸಂಭಾಷಣೆಯನ್ನು ತಪ್ಪಿಸುವುದು ನಿಮಗೆ ಅವಶ್ಯಕವಾಗಿದೆ

ಜನರ ಹೃದಯದಲ್ಲಿನ ಕೆಟ್ಟ ಉದ್ದೇಶಗಳನ್ನು ದೇವರು ಪ್ರಕಟಿಸಿದರೆ ಆಮೇಲೆ ಅವರೊಂದಿಗೆ ಹೆಚ್ಚಿನ ಸಂಭಾಷಣೆಯನ್ನು ನಿಯಂತ್ರಿಸಿಕೊಳ್ಳಬೇಕ ಆದ್ದರಿಂದ ಅವರೊಂದಿಗೆ ನೀವು ಸಿಕ್ಕಿಹಾಕಿಕೊಳ್ಳುವುದರಿಂದ ನಿಮ್ಮನ್ನು ದೂರವಿರಿಸಿಕೊಳ್ಳಬಹುದು.

ನಿರ್ದಿಷ್ಟ ಜನರುಗಳ ಸಹವಾಸದಲ್ಲಿರುವುದರಿಂದ ದೂರ ನಡೆಯುವುದು ನಿಮಗೆ ಅವಶ್ಯಕವಾಗಿದೆ

ಕೆಲವೊಮ್ಮೆ ನೀವು ಅಲ್ಲಿರಬಾರದೆಂದು ದೇವರ ಆತ್ಮನು ಎಚ್ಚರಿಸುವಾಗ ಜನರ ಗುಂಪಿನಿಂದ ನೀವು ದೂರ ಸರಿಯುವುದು ಅವಶ್ಯಕವಾಗಿರುತ್ತದೆ ಯಾಕೆಂದರೆ ಏನು ಹೇಳಲಾಗುತ್ತಿದೆ ಮತ್ತು ಮಾಡಲಾಗುತ್ತಿದೆ ಮತ್ತು ಆ ಪರಿಸ್ಥಿತಿಯಲ್ಲಿ ತಪ್ಪು ಆತ್ಮಗಳು ಕಾರ್ಯನಿರ್ವಹಿಸುತ್ತಿರುತ್ತವೆ.

ಸುಳ್ಳು ಮೂಲದಿಂದ (ದುರಾತ್ಮ) ಕೊಡಲ್ಪಟ್ಟ "ಪ್ರವಾದನೆ" ವಾಕ್ಯದೊಡನೆ ಒಪ್ಪಂದವನ್ನು ತಿರಸ್ಕರಿಸಿರಿ

ಕೆಲವೊಮ್ಮೆ ಒಬ್ಬ ವ್ಯಕ್ತಿಯು "ಪ್ರವಾದನೆ" ವಾಕ್ಯವನ್ನು ಕೊಡುವಾಗ ಆದರೆ ಸಾಮಾನ್ಯವಾಗಿ ಅದು ಸುಳ್ಳು ಆತ್ಮ (ಪರಿಚಿತ ಆತ್ಮ, ಭಯದ ಆತ್ಮ, ಮಾಟಮಂತ್ರ, ವಶೀಕರಣ, ಮುಂತಾದ) ಪ್ರಭಾವದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ, ಆಮೇಲೆ ಅದಕ್ಕೆ ದೇವರ ಆತ್ಮನ ನಿಮ್ಮನ್ನು ಎಚ್ಚರಿಸುವಾಗ, ಒಪ್ಪಿಕೊಳ್ಳುವುದನ್ನು ತಿರಸ್ಕರಿಸಿರಿ ಮತ್ತು ಆ "ಪ್ರವಾದನೆ" ವಾಕ್ಯವನ್ನು ಅಂಗೀಕರಿಸುವುದನ್ನು ತಿರಸ್ಕರಿಸಿರಿ ಆ ವಾಕ್ಯವನ್ನು ನೀವು ತಿರಸ್ಕಸಿರಿ ಮತ್ತು ನಿಮ್ಮ ಜೀವಿತದಲ್ಲಿ ಅದಕ್ಕೆ ಸ್ಥಳ ಅಥವಾ ಯಾವುದೇ ಪ್ರಭಾವ ಕೊಡದೇ ತಿರಸ್ಕರಿಸಿರಿ.

13.ಸ್ವಸ್ಥತೆಯ ವರಗಳು

ಅರ್ಥನಿರೂಪಣೆ

ಸ್ವಸ್ಥತೆಯ ವರಗಳು ಒಬ್ಬ ಅಸ್ವಸ್ಥತೆಯ ವ್ಯಕ್ತಿಗೆ ದೈಹಿಕ ಅಥವಾ ಭಾವನೆಯ ಸ್ವಸ್ಥತೆಯಲ್ಲಿ ಫಲಿತಾಂಶ ನೀಡುವ ದೇವರ ಅಪ್ರಾಕೃತ ಕಾರ್ಯವಾಗಿದೆ.

ಗುಣಪಡಿಸುವ ವರಗಳು, ಔಷಧಿಗಳನ್ನು ಉಪಯೋಗಿಸುವ ಮೂಲಕವಾಗಿ ಸ್ವಸ್ಥಪಡಿಸುವ ಮೇಲೆ ಆಧಾರಗೊಂಡ ವೈದ್ಯಕೀಯ ವೈದ್ಯರ ಕೆಲಸದ ರೀತಿಯಲ್ಲಿ ಇಲ್ಲ.

ದೇಹದಲ್ಲಿ ಮತ್ತು ಮನಸ್ಸಿನಲ್ಲಿ ತೊಂದರೆಗಳು ವಿವಿಧ ಕಾರಣಗಳಿಂದಾಗಿ ಉಂಟಾಗಬಹುದು ಮತ್ತು ಕೆಲವು ಸಂದರ್ಭಗಳಲ್ಲಿ ಅನೇಕ ಅಂಶಗಳು ಕಾರ್ಯನಿರತ ವಾಗಿರಬಹುದು: ಜನನದ ದೋಷಗಳು, ಅನುವಂಶಿಕ ತೊಂದರೆಗಳು, ನಿರ್ಲಕ್ಷ್ಯ ಅಥವಾ ಒಬ್ಬರ ಆರೋಗ್ಯದ ನಿಂದನೆ, ಅಪಘಾತಗಳು ಅಥವಾ ಗಾಯಗಳು, ಜೈವಿಕ / ಶಾರೀರಿಕ ತೊಂದರೆಗಳು, ಹಾಗೆಯೇ ದೆವ್ವಗಳ ಆತ್ಮಗಳು ಕಾರ್ಯನಿರತವಾಗಿರುವುದು.

ಎರಡು ಬಹುವಚನಗಳು ಎನ್. ಕೆ.ಜೆ.ವಿ ಎಂಬ ಸತ್ಯವೇದದಲ್ಲಿ ಉಪಯೋಗಿಸಲ್ಪಟ್ಟಿವೆ ಅವು “ವರಗಳು” , “ಸ್ವಸ್ಥತೆಗಳು” ಅನೇಕತ್ವ (ಎಲ್ಲಾ ರೀತಿಯ ರೋಗಗಳನ್ನು ವಾಸಿ ಮಾಡುವುದು) ಮತ್ತು ವಿವಿಧತೆ (ಅನೇಕ ವಿವಿಧ ಮಾರ್ಗಗಳ ಮೂಲಕವಾಗಿ ಅಪ್ರಾಕೃತ ಸ್ವಸ್ಥತೆಯು ಬಿಡುಗಡೆಯಾಗುವ ಅಥವಾ ಆಳ್ವಿಕೆ ಮಾಡುವುದು) ಇದನ್ನು ಸೂಚಿಸಲು ಬಳಸಲಾಗಿದೆ.

ದೇವರು ಅನೇಕ ಮಾರ್ಗಗಳಲ್ಲಿ ಗುಣಪಡಿಸುತ್ತಾನೆ. ಅದರಲ್ಲಿ ಒಂದು ವಾಸಿಮಾಡುವ ವರಗಳ ಮೂಲಕವಾಗಿದೆ. ಅತ್ಯದ್ಭುತಕರ ಗುಣಪಡಿಸುವಿಕೆಯು ಹೇಗೆ ನಡೆಯುತ್ತದೆ ಎಂಬುದನ್ನು ನಾವು ವಿಧವಾಗಿ ವರ್ಗೀಕರಿಸಬೇಕಾದರೆ ನಾವು ಮೂರು ಸಂಭಾವ್ಯ ವರ್ಗಗಳನ್ನು ಉಲ್ಲೇಖಿಸಬಹುದು: (ಅ) ದೇವರಲ್ಲಿ ವೈಯಕ್ತಿಕ ನಂಬಿಕೆ ಮತ್ತು ಆತನ ವಾಕ್ಯದ ಮೂಲಕವಾಗಿ (ಆ) ವಾಸಿಮಾಡುವ ಅಭಿಷೇಕ ಮತ್ತು ಸ್ವಸ್ಥತೆಯ ವರಗಳ ಮೂಲಕ (ಇ) ದೇವರ ಪ್ರಸನ್ನತೆ ಮತ್ತು ಮಹಿಮೆಯ ಮೂಲಕ

ವೈಯಕ್ತಿಕ ನಂಬಿಕೆ ಮೂಲಕ	ಸ್ವಸ್ಥತೆಯ ಅಭಿಷೇಕ ಮತ್ತು ಸ್ವಸ್ಥತೆಯ ವರಗಳ ಮೂಲಕ	ದೇವರ ಪ್ರಸನ್ನತೆ ಮತ್ತು ಮಹಿಮೆ ಮೂಲಕ
ಮಾರ್ಕ 11:22-24 ರಂತೆ ಇಲ್ಲಿ ಒಬ್ಬ ವ್ಯಕ್ತಿಯು ದೇವರ ವಾಕ್ಯವನ್ನು ನಂಬುತ್ತಾನೆ ಮತ್ತು ಅವರ ವೈಯಕ್ತಿಕ ನಂಬಿಕೆಯ ಮೂಲಕ ಪಡೆಯುತ್ತಾನೆ.	ಇಲ್ಲಿ ಒಬ್ಬ ವ್ಯಕ್ತಿಯ ಮೂಲಕವಾಗಿ ಸ್ವಸ್ಥಪಡಿಸುವ ಅಭಿಷೇಕ ಮತ್ತು ಗುಣ ಪಡಿಸುವ ವರಗಳು ಕಾರ್ಯನಡೆಸುತ್ತವೆ ಮತ್ತು ಸ್ವಸ್ಥತೆಯು ರೋಗಿಗೆ ನಿರ್ವಹಿಸಲಾಗುತ್ತದೆ.	ದೇವರು ಜನರಿಂದ ಸ್ವತಂತ್ರವಾಗಿ, ಸಾರ್ವಭೌಮವಾಗಿ ಚಲಿಸುತ್ತಾನೆ ಮತ್ತು ಜನರು ಗುಣ ಹೊಂದುವರು ನಂಬಿಕೆಯಿಂದ ಪಡೆಯುವರು, ಅಗತ್ಯವಾಗಿ ನಂಬಿಕೆಯಿಲ್ಲದವರು ಸಹ ಸ್ವಸ್ಥತೆ ಹೊಂದುವರು.
ಸೇವಕನು ವಾಕ್ಯವನ್ನು ಬೋಧಿಸುತ್ತಾನೆ ಜನರಲ್ಲಿ ನಂಬಿಕೆ ಕಟ್ಟಲು ಸಹಾಯ ಮಾಡುತ್ತಾನೆ ಮತ್ತು ಜನರಿಗೆ ನಂಬಿಕೆಯಲ್ಲಿ ಸೇವೆ ಸಲ್ಲಿಸುತ್ತಾನೆ ಪರಸ್ಪರ ನಂಬಿಕೆಯು ವ್ಯಕ್ತಿಗೆ ದೇವರ ಗುಣಪಡಿಸುವಿಕೆಯನ್ನು ಪಡೆಯುತ್ತದೆ	ಹೆಚ್ಚಿನ ಸಂಧರ್ಭಗಳಲ್ಲಿ ರೋಗಿಗಳು ನಂಬಿಕೆಯನ್ನು ಹೊಂದಿರಬೇಕು ಆದ್ಯತೆಗೊ ಕೆಲವು ವಿನಾಹಿತಿಗಳಿವೆ ಮತ್ತು ಕೆಲವೊಮ್ಮೆ ನಂಬಿಕೆಯಿಲ್ಲದ ಜನರು ಸಹ ಸಾರ್ವಭೌಮವಾಗಿ ಗುಣಮುಖರಾಗುತ್ತಾರೆ.	ದೇವರ ಪ್ರಸನ್ನತೆ ಮತ್ತು ಮಹಿಮೆಯು ಆಗ್ಗಾಗ್ಗ ತೀವ್ರ ಸ್ತೋತ್ರ ಮತ್ತು ಆರಾಧನೆ ಮೂಲಕವಾಗಿ ಮತ್ತು ಒಂದು ಉನ್ನತವಾದ ನಿರೀಕ್ಷಿಸುವ ಪ್ರಜ್ಞೆಯಾಡನೆ ಸ್ವಾಗತಿಸಲ್ಪಡುತ್ತದೆ.

ನಾವು ಎಲ್ಲಾ ಮೂರು ಮಾರ್ಗಗಳಲ್ಲಿ ಸ್ವಸ್ಥತೆ ಸೇವೆ ಮಾಡುವುದನ್ನು ಕಲಿಯಬೇಕು ಮತ್ತು ಆತನು ಚಲಿಸಲು ಅಪೇಕ್ಷಿಸುವಂತೆ ದೇವರೊಡನೆ ಚಲಿಸಿರಿ, ನಮ್ಮ ಸ್ವಂತ ಸ್ವಸ್ಥತೆಯನ್ನು ನಾವು ಹೇಗೆ ಪಡೆಯಬೇಕೆಂಬುದಾಗಿ ವಿಶ್ವಾಸಿಗಳಾಗಿ ನಾವು ತಿಳಿದಿರಬೇಕು. ಮತ್ತು ದೇವರಲ್ಲಿ ಮತ್ತು ಆತನ ವಾಕ್ಯದಲ್ಲಿ ವ್ಯಯಕ್ತಿಕ ನಂಬಿಕೆಯ ಮೂಲಕವಾಗಿ ನಮ್ಮ ಸಂಪೂರ್ಣತೆಯನ್ನು ಪಾಲಿಸಬೇಕು.

ವಾಸಿಮಾಡುವ ವರಗಳಲ್ಲಿ, ತುಂಬಾ ಆಗಾಗ್ಗೆ ಸ್ವೀಕರಿಸುವವರು ಸಕ್ರಿಯ ನಂಬಿಕೆಯನ್ನು ಅಭ್ಯಾಸ ಮಾಡುವುದಿಲ್ಲ. ಮತ್ತು ಆದಾಗ್ಯೂ ಅವರಿಗೆ ಸೇವೆ ಸಲ್ಲಿಸುವ ವ್ಯಕ್ತಿಯ

ಮೂಲಕವಾಗಿ ವಾಸಿಮಾಡುವ ವರಗಳು ಬಿಡುಗಡೆಗೊಳ್ಳುವಾಗ ಅವರು ಗುಣ ಹೊಂದುತ್ತಾರೆ.

ಧರ್ಮಗ್ರಂಥದ ಉದ್ದಕ್ಕೂ ಅಸಂಖ್ಯಾತ ಅಪ್ರಾಕೃತ ಸ್ವಸ್ಥತೆಯ ಉದಾಹರಣೆಗಳಿವೆ. ಇದರ ಮೇಲಿನ ಹೆಚ್ಚಿನ ಅಧ್ಯಯನಕ್ಕಾಗಿ, "ಸ್ವಸ್ಥತೆ ಮತ್ತು ಬಿಡುಗಡೆ ಸೇವೆ ಸಲ್ಲಿಸುವುದು" ಎಂಬ ಎಪಿಸಿಯ ಪಿ ಉಚಿತ ಪುಸ್ತಕ ನೋಡಿರಿ ಮತ್ತು apcwo.org/publications ನಲ್ಲಿ ಡೌನ್‌ಲೋಡ್‌ಗೆ ದೊರೆಯುತ್ತದೆ.

ಕೆಲವು ಉದಾಹರಣೆಗಳು ಇಲ್ಲಿವೆ.

ಸತ್ಯವೇದದ ಉದಾಹರಣೆಗಳು : ಹಳೆ ಒಡಂಬಡಿಕೆ

ಅಬೀಮೆಲೆಕನ ಹೆಂಡತಿ ಮತ್ತು ದಾಸಿಯರನ್ನು ಬಂಜೆತನದಿಂದ ವಾಸಿ ಮಾಡಿದ್ದು

ಅಬ್ರಹಾಮನ ಅಬೀಮಲೆಕನಿಗೆ, ಅವನ ಹೆಂಡತಿ ಮತ್ತು ದಾಸಿಯರಿಗೆ ಪ್ರಾರ್ಥಿಸಿದನು ಆಮೇಲೆ ಅವರು ಮಕ್ಕಳನ್ನು ಹೆತ್ತರು.

ಆತನ ಜನರ ಸ್ವಸ್ಥತೆ ಮಾಡುವಂತೆ ತನ್ನನ್ನು ದೇವರು ಪ್ರಕಟಪಡಿಸಿದನು

ಈಜಿಪ್ಟಿನಿಂದ ನಿರ್ಗಮನದ ನಂತರ, ಮರುಭೂಮಿ ಮೂಲಕವಾಗಿ ಅವರ ಪ್ರಯಾಣದ ಉದ್ದಕ್ಕೂ ಜನರು ಸಂರಕ್ಷಿಸಲ್ಪಟ್ಟರು ಮತ್ತು ಒಳ್ಳೆಯ ಆರೋಗ್ಯದಲ್ಲಿ ಇದ್ದರು. ಅವರ ಗುಣಪಡಿಸುವಾತನು ಎಂಬುದಾಗಿ ಆತನ ಜನರೊಂದಿಗೆ ಒಡಂಬಡಿಕೆ ಮಾಡಿಕೊಂಡನು ಮತ್ತು ಆತನ ಜನರೊಂದಿಗೆ ಒಡಂಬಡಿಕೆ ಮಾಡಿಕೊಂಡನು ಮತ್ತು ಆತನ ಒಡಂಬಡಿಕೆ ಹೆಸರನ್ನು ಪ್ರಕಟಿಸಿದನು: ಯೆಹೋವ-ರಾಫಾ (ವಿಮೋಚನಕಾಂಡ 15:26) ಎಂಬುದಾಗಿ ಪ್ರಕಟಿಸಿದನು. ಅವರು ಆತನಿಗೆ ಮಧ್ಯದಲ್ಲಿ ಒಬ್ಬ ವ್ಯಕ್ತಿಯು ಸಹ ಅಸ್ವಸ್ಥನಾಗಿರಲಿಲ್ಲ. ಎಂದು ಸತ್ಯವೇದವು ವ್ಯಾಖ್ಯಾನಿಸುವುದು ತುಂಬಾ ಆಸಕ್ತಿಕರವಾಗಿದೆ.

ಕೀರ್ತನೆಗಳು 105:37
ಇಸ್ರಾಯೇಲ್ಯರನ್ನು ಬೆಳ್ಳಿ ಬಂಗಾರಗಳ ಸಹಿತವಾಗಿ ಹೊರಗೆ ಬರಮಾಡಿದನು. ಅವರು ಕುಲಗಳಲ್ಲಿ ಒಬ್ಬನಾದರೂ ಎಡವುವವನಿರಲಿಲ್ಲ.

ನೆಹೆಮಿಯ 9:21
ನಾಲ್ವತ್ತು ವರುಷ ಅವರನ್ನು ಅರಣ್ಯದಲ್ಲಿ ಸಾಕುತ್ತಾ ಇದ್ದಿ ಅವರಿಗೆ ಯಾವ ಕೊರತೆಯೂ ಇರಲಿಲ್ಲ. ಅವರ ಬಟ್ಟೆಗಳು ಜೀರ್ಣವಾಗಲಿಲ್ಲ ಕಾಲುಗಳು ಬಾತುಹೋಗಲಿಲ್ಲ.

ಕೀರ್ತನೆಗಳು 107:19-20
19 ಅವರು ತಮ್ಮ ಇಕ್ಕಟ್ಟಿನಲ್ಲಿ ಯೆಹೋವನಿಗೆ ಮೊರೆಯಿಡಲು ಆತನು ಅವರನ್ನು ಕಷ್ಟದಿಂದ ತಪ್ಪಿಸಿದನು.
20 ಆತನು (ದೂತನನ್ನೋ ಎಂಬಂತೆ) ತನ್ನ ವಾಕ್ಯವನ್ನು ಕಳುಹಿಸಿ ಅವರನ್ನು ಗುಣಪಡಿಸಿದನು. ಸಮಾಧಿಗೆ ಸೇರದಂತೆ ಮಾಡಿದನು.

ಕುಷ್ಟರೋಗಿ ನಾಮಾನನನ್ನು ವಾಸಿಮಾಡಿದ್ದು

ನಾಮಾನನು ಪ್ರವಾದಿಯ ಮಾತಿನ ಮೇಲೆ ಕಾರ್ಯ ಮಾಡಿದನು. ಮತ್ತು ಸ್ವಸ್ಥತೆ ಪಡೆದನು. “ಎಲೀಷನು ಅವನಿಗೆ ಹೋಗಿ ಯೋರ್ದನ್ ಹೊಳೆಯಲ್ಲಿ ಏಳು ಸಾರಿಸ್ನಾನ ಮಾಡು ಆಗ ನಿನ್ನ ದೇಹವು ಮುಂಚಿನಂತಾಗುವದು. ನೀನು ಶುದ್ಧನಾಗುವಿ ಎಂದು ಹೇಳಿ ಕಳುಹಿಸಿದನು. ನಾಮಾನನ್ನು ಇದನ್ನು ಕೇಳಿ ಕೋಪಗೊಂಡು ಇದೇನು! ಅವನು ಹೇಗೊ ಹೊರಗೆ ಬಂದು ನಿಂತು ತನ್ನ ದೇವರಾದ ಯೆಹೋವನ ಹೆಸರು ಹೇಳಿ ಕುಷ್ಟದ ಮೇಲೆ ಕೈಯಾಡಿಸಿ ವಾಸಿಮಾಡುವನೆಂದು ನೆನಸಿದೆನು. ದಮಸ್ಕದ ಅಬಾನಾ, ಪರ್ವತ ಎಂಬ ಹೊಳೆಗಳು ಇಸ್ರಾಯೇಲ್ಯರ ಎಲ್ಲಾ ಹೊಳೆಹಳ್ಳಗಳಿಗಿಂತ ಉತ್ತಮ ವಾಗಿವೆಯಲ್ಲವೋ? ಸ್ನಾನದಿಂದ ವಾಸಿಯಾಗುವ ಹಾಗಿದ್ದರೆ ನಾನು ಅವುಗಳಲ್ಲಿಯೇ ಸ್ನಾನಮಾಡಬುದಲ್ಲವೇ ಎಂದು ಹೇಳಿ ಬಲು ಸಿಟ್ಟಿನಿಂದ ಹೊರಟು ಹೋದನು. ಆಗ ಅವನ ಸೇವಕರು ಹತ್ತಿರ ಬಂದು ಅವನಿಗೆ ಅಪ್ಪನವರೆ, ಪ್ರವಾದಿಯು ಒಂದು ಕಠಿಣವಾದ ಕೆಲಸವನ್ನು ಹೇಳಿದ್ದರೆ ಅದನ್ನು ಮಾಡುತ್ತಿದ್ದಿರಲ್ಲಾ ಹಾಗಾದರೆ ಸ್ನಾನ ಮಾಡಿ ಶುದ್ಧನಾಗು ಎಂದು ಹೇಳಿದರೆ ಯಾಕೆ ಅದರಂತೆ ಮಾಡಬಾರದು. ಅಂದರು ಅವನು ಯೋರ್ದನಿಗೆ ಹೋಗಿ ಏಳು ಸಾರಿ ಅದರಲ್ಲಿ ಮುಣುಗಿ ಎದ್ದನು. ಕೂಡಲೆ ದೇವರ ಮನುಷ್ಯನ ಮಾತಿಗನುಸಾರವಾಗಿ ಅವನ ದೇಹವು ಕೂಸಿನ ದೇಹದಂತೆ ಶುದ್ಧವಾಯಿತು. (2 ಅರಸುಗಳು 5:10-14).

ಅರಸನಾದ ಹಿಜ್ಕೀಯನು ಗುಣಹೊಂದಿದ್ದು

ಅರಸನಾದ ಹಿಜ್ಕೀಯನಿಗೆ ಸೇವೆ ಸಲ್ಲಿಸಲು ಪ್ರವಾದಿಯಾದ ಯೆಶಾಯನನ್ನು ದೇವರು ಕಳುಹಿಸಿದನು. ಮತ್ತು ಅವನ ಜೀವಿತವನ್ನು 15 ವರ್ಷಗಳವರೆಗೆ ವಿಸ್ತರಿಸಿದನು. ಹಿಜ್ಕೀಯನು ಸ್ವಸ್ಥತೆಯನ್ನು ಪಡೆಯಲು ನಂಬಿಕೆಯ ಕ್ರಿಯೆಯಾಗಿ ಒಂದು ಅಂಜೂರ ಹಣ್ಣಿನ ಉಂಡೆಯನ್ನು ದೇವರು ಉಪಯೋಗಿಸಿದ್ದನ್ನು ಇಲ್ಲಿ ನೋಡುವುದು ಆಸಕ್ತಿಕರವಾಗಿದೆ. “ನೀನು ಹಿಂದಿರುಗಿ ಹೋಗಿ ನನ್ನ ಪ್ರಜೆಗಳ ಪ್ರಭು ವಾಗಿರುವ ಹಿಜ್ಕೀಯನಿಗೆ ನಾನು ನಿನ್ನ ಪ್ರಾರ್ಥನೆಯನ್ನು ಕೇಳಿದ್ದೇನೆ ನಿನ್ನ ಕಣ್ಣೀರನ್ನು ನೋಡಿದ್ದೇನೆ. ನೀನು ಗುಣಹೊಂದಿ ನಾಡಿದ್ದು ನನ್ನ ಆಲಯಕ್ಕೆ ಬರುವಿ. ಇದಲ್ಲದೆ ನಿನ್ನ ಆಯುಷ್ಯಕ್ಕೆ ಹದಿನೈದು ವರುಷಗಳನ್ನು ಕೂಡಿಸುತ್ತೇನೆ. ನಿನ್ನನ್ನೂ ಈ ಪಟ್ಟಣವನ್ನು ಅಶ್ಶೂರದ

ಅರಸನ ಕೈಗೆ ಬೀಳದಂತೆ ತಪ್ಪಿಸುವೆನು. ನನಗೋಸ್ಕರವಾಗಿಯೂ ನನ್ನ ಸೇವಕನಾದ ದಾವೀದನಿಗೋಸ್ಕರವಾಗಿಯೂ ಈ ಪಟ್ಟಣವನ್ನು ಉಳಿಸಿ ಕಾಪಾಡುವೆನು ಎಂಬುದಾಗಿ ನಿನ್ನ ಪೂರ್ವಿಕನಾದ ದಾವೀದನ ದೇವರಾಗಿರುವ ಯೆಹೋವನು ಹೇಳುತ್ತಾನೆ. ಎಂದು ತಿಳಿಸು ಎಂದು ಆಜ್ಞಾಪಿಸಿದನು. ಯೆಶಾಯನು ಒಂದು ಅಂಜೂರ ಹಣ್ಣಿನ ಉಂಡೆಯನ್ನು ತರಿಸಿ ಅದನ್ನು ಕರುವಿನ ಮೇಲೆ ಇಡಿಸಿದಾಗ ಹಿಜ್ಕೀಯನ್ನು ಗುಣಹೊಂದಿದನು" .

(2 ಅರಸುಗಳು 20:5-7)

ಸತ್ಯವೇದದ ಉದಾಹರಣೆಗಳು : ಹೊಸ ಒಡಂಬಡಿಕೆ

ಯೇಸುವಿನ ಸೇವೆ

ಯೇಸು ಕ್ರಿಸ್ತನ ಸೇವೆಯ ಮೂಲಕವಾಗಿ ಸ್ವಸ್ಥತೆಯನ್ನು ಪಡೆದುಕೊಂಡ ವ್ಯಕ್ತಿಗಳು ಮತ್ತು ಬಹುಸಂಖ್ಯೆಯ ಆನೇಕ ಉದಾರಣೆಗಳನ್ನು ನಾಲ್ಕು ಸುರ್ವಾತೆಗಳು ದಾಖಲಿಸಿವೆ. ಕರ್ತನಾದ ಯೇಸುವು ಪವಿತ್ರಾತ್ಮನ ಅಭಿಷೇಕದ ಅಧೀನದಲ್ಲಿ ಸೇವೆ ಸಲ್ಲಿಸಿದನು. ಆತನ ಬಳಿಗೆ ನಂಬಿಕೆಯಲ್ಲಿ ಬಂದವರೆಲ್ಲರು ಅವರ ಸ್ವಸ್ಥತೆಯನ್ನು ಮತ್ತು ಬಿಡುಗಡೆಯನ್ನು ಪಡೆದರು. ಅಗತ್ಯಕರವಾಗಿ ನಂಬಿಕೆಯಿಲ್ಲದವರು ಸಹ ಇದ್ದರು, ಆದರೆ ಅವರಲ್ಲಿ ಆನೇಕರು ಸೇವೆ ಸಲ್ಲಿಸಿದರು ಮತ್ತು ಬೇತ್ಸಥಾಕೊಳದ ಬಳಿಯಲ್ಲಿದ್ದ ಒಬ್ಬ ಮನುಷ್ಯ (ಯೋಹಾನ 5) ಗುಣಹೊಂದಿದ್ದು ಅಥವಾ ಯೋಹಾನ 9 ರಲ್ಲಿ ಹುಟ್ಟು ಕುರುಡನು ಗುಣ ಹೊಂದಿದ್ದಂತಹ ಹಾಗೆಯೇ ಸ್ವಸ್ಥತೆ ಹೊಂದಿದ್ದು ಕರ್ತನಾದ ಯೇಸುವು ವಿವಿಧ ಮಾರ್ಗಗಳಲ್ಲಿ ಸೇವೆ ಮಾಡಿದನು. ಆತನು ಜನರ ಮೇಲೆ ಕೈಗಳನ್ನಿಟ್ಟನು ಜನರು ಆತನನ್ನು ಮುಟ್ಟಿದರು ಆತನು ಆಜ್ಞೆಯ ವಾಕ್ಯ ಹೇಳಿದನು. ಜನರು ಸ್ವಸ್ಥತೆ ಹೊಂದಿದರು ಎಂದು ಆತನು ಘೋಷಿಸಿದನು ಮತ್ತು ನಂಬಿಕೆಯಲ್ಲಿ ಮನೆಗೆ ಹೋಗಲು ಅವರಿಗೆ ಹೇಳಿದನು. ಜನರಿಗೆ ಮಾಡಲು ಸಾದ್ಯವಾಗದ ಎನಾದರೊ ಮಾಡಲು ಆತನು ಹೇಳಿದನು. ಆತನು ಕೆಲವು ಅಸಾಮಾನ್ಯ ಸಂಗತಿಗಳನ್ನು, ಆತನ ಉಗುಳಿನಿಂದ ಜನರನ್ನು ಮುಟ್ಟಿದ್ದು ಅಥವಾ ಆತನ ಉಗುಳಿನಿಂದ ಜೇಡಿಮಣ್ಣನ್ನು ಮಾಡಿ, ಮತ್ತು ಕುರುಡಾದ ಕಣ್ಣುಗಳಿಗೆ ಹಚ್ಚಿದ ಹಾಗೇ ಇಂತಹವುಗಳನ್ನು ಮಾಡಿದನು. ಕರ್ತನಾದ ಯೇಸು ಎಲ್ಲಾ ವಿಧವಾದ ರೋಗಗಳನ್ನು ಮತ್ತು ಕಾಯಿಲೆಗಳನ್ನು ವಾಸಿ ಮಾಡಿದನು.

ಮತ್ತಾಯ 11:4-5
4-5 ಆತನು ಅವರಿಗೆ ಪ್ರತ್ಯುತ್ತರವಾಗಿ ಕುರುಡರಿಗೆ ಕಣ್ಣು ಬರುತ್ತವೆ, ಕುಂಟರಿಗೆ ಕಾಲು ಬರುತ್ತವೆ, ಕುಷ್ಟರೋಗಿಗಳು ಶುದ್ಧರಾಗುತ್ತಾರೆ, ಕಿವುಡರಿಗೆ ಕಿವಿ ಬರುತ್ತವೆ, ಸತ್ತವರು ಜೀವವನ್ನು ಹೊಂದುತ್ತಾರೆ, ಬಡವರಿಗೆ ಸುವಾರ್ತೆ ಸಾರಲ್ಪಡುತ್ತದೆ. ನೀವು ಹೋಗಿ ಕಂಡು ಕೇಳುವವುಗಳನ್ನು ಯೋಹಾನನಿಗೆ ತಿಳಿಸಿರಿ.

ಯೋಹಾನ 20:30:31
30 ಯೇಸು ಇನ್ನು ಬೇರೆ ಎಷ್ಟೋ ಸೂಚಕಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿರುವುದಿಲ್ಲ.
31 ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡೆದುಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ.

ಆಧಿ ಸಭೆ

ಅಧಿ ಸಭೆಯಲ್ಲಿ ಅಪೊಸ್ತಲರು ಮತ್ತು ವಿಶ್ವಾಸಿಗಳು ಆನೇಕರಿಗೆ ಸ್ವಸ್ಥತೆಗಳು ಮತ್ತು ಬಿಡುಗಡೆಯ ಸೇವೆ ಮಾಡಿದರು. ಇವುಗಳಲ್ಲಿ ಕೆಲವು ನಿರ್ದಿಷ್ಟ ಸ್ವಸ್ಥತೆಗಳು ನಮಗಾಗಿ ದಾಖಲಿಸಲ್ಪಟ್ಟಿವೆ. ಒಬ್ಬ ಮನುಷ್ಯ ಹುಟ್ಟು ಕುಂಟನಾಗಿದ್ದನು ಮತ್ತು ನಾಲ್ವತ್ತು ವರುಷಗಳು ಆ ಸ್ಥಿತಿಯಲ್ಲಿದ್ದವನು ಆ ಕ್ಷಣವೇ ವಾಸಿಯಾದನು.(ಅಪೋಸ್ತಲರ ಕೃತ್ಯಗಳು 3). ಆತನ ಕೈಯನ್ನು ವಾಸಿಮಾಡಲು ಚಾಚುವಂತೆ ಮತ್ತು ಕರ್ತನಾದ ಯೇಸುವಿನ ಹೆಸರಿನಲ್ಲಿ ಮಹತ್ಕಾರ್ಯಗಳು ಮತ್ತು ಸೂಚಕಕಾರ್ಯಗಳು ನಡೆಯುವುದಕ್ಕಾಗಿ ಅವರು ದೇವರನ್ನು ಪ್ರಾರ್ಥಿಸಿದರು. (ಅಪೊಸ್ತಲರ ಕೃತ್ಯಗಳು 4:29-30). ಬಹು ಸಂಖ್ಯೆಯಲ್ಲಿ ಜನರು ರೋಗಿಗಳನ್ನು ಯೆರೊಸಲೇಮಿಗೆ ತರುತ್ತಿದ್ದರು ಮತ್ತು ದೇವರು ಪೇತ್ರನ ನೆರಳಿನ ಮೂಲಕ ಸ್ವಸ್ಥತೆಯ ಕಾರ್ಯ ಮಾಡಿದನು. ಮತ್ತು ಅವರಲ್ಲಿ ಎಲ್ಲರನ್ನು ಬಿಡುಗಡೆ ಗೊಳಿಸಿದನು. (ಅಪೊಸ್ತಲರ ಕೃತ್ಯಗಳು 5:14-16) ಹಿಂಸೆಯ ನಿಮಿತ್ತವಾಗಿ ಇತರೆ ನಗರಳಿಗೆ ವಿಶ್ವಾಸಿಗಳು ಚದುರಿದಾಗ, ಅವರು ಹೊರಟುಹೋಗಿ ಎಲ್ಲಾ ಕಡೆಯಲ್ಲಿಯು ಕ್ರಿಸ್ತನನ್ನು ಸಾರಿದರು ಮತ್ತು ಸ್ವಸ್ಥತೆಗಳು ಮತ್ತು ಅದ್ಭುತಗಳು ಅವರ ಜೊತೆಗೂಡಿದವು. (ಅಪೂಸ್ತಲರ ಕೃತ್ಯಗಳು 8:6-7: ಅಪೊಸ್ತಲರ ಕೃತ್ಯಗಳು 11:21).

ಅಪೊಸ್ತಲರ ಕಾರ್ಯಗಳಲ್ಲಿ ಮತ್ತು ಹೊಸ ಸಭೆಗಳನ್ನು ಸ್ಥಾಪಿಸುವುದರಲ್ಲಿ ಸ್ವಸ್ಥತೆಗಳು ಮತ್ತು ಅದ್ಭುತಗಳು ಪ್ರಾಮುಖ್ಯವಾಗಿದ್ದವು. ದೇವರು ಪೌಲನ ಮೂಲಕವಾಗಿ ಅದ್ಭುತಗಳನ್ನು ಮತ್ತು ಅಸಾಮಾನ್ಯ ಸ್ವಸ್ಥತೆಗಳನ್ನು ಮಾಡಿದನು. ಅವನಿಂದ ಕರವಸ್ತ್ರಗಳು ಮತ್ತು ಮೇಲುಡುಪುಗಳನ್ನು ತೆಗೆದುಕೊಂಡು ರೋಗಿಗಳ ಮೇಲೆ ಹಾಕಲು ಅವರು ಗುಣಹೊಂದಿದರು. ಮತ್ತು ಬಿಡುಗಡೆ ಹೊಂದಿದರು. (ಅಪೊಸ್ತಲರ ಕೃತ್ಯಗಳು 19:11-12) ಕರ್ತನ ಭೋಜನ ಮೇಜಿನಲ್ಲಿ ಪಾಲುತೆಗೆದು ಕೊಳ್ಳುವುದು ಸ್ವಸ್ಥತೆ ಮತ್ತು ದೀರ್ಘಾಯುಷ್ಯ ತರುವಂತಹ ಆಶೀರ್ವಾದದ ಪಾತ್ರೆ ಎಂಬುದಾಗಿ ಸಭೆಯು ತಿಳಿದಿತ್ತು(1 ಕೊರಿಂಥದವರಿಗೆ 11:17-34) ಯಾರದರೂ ಅಸ್ವಸ್ಥನಾಗಿದ್ದರೆ ಸಭೆಯ ಹಿರಿಯರನ್ನು ಕರೆಯಿಸಿ ಸ್ವಸ್ಥತೆ ಹೊಂದಲು ನಂಬಿಕೆಯ ಪ್ರಾರ್ಥನೆಯನ್ನು ಮಾಡಲು ಕರೆಯಬಹುದು (ಯಾಕೋಬನು 5:14-15).

ಕಾರ್ಯಚರಣೆಗಳು

ವಾಸಿ ಮಾಡುವ ವರಗಳು ದೈಹಿಕ ಮತ್ತು ಭಾವನಾತ್ಮಕ ಸಂಪೂರ್ಣತೆಯನ್ನು ಪುನಃ ಕಟ್ಟಿಕೊಡಲು ಮತ್ತು ಒಬ್ಬ ವ್ಯಕ್ತಿಯ ಯೋಗಕ್ಷೇಮದ ಸೇವೆ ಮಾಡುತ್ತವೆ. ಅನೇಕ ಸ್ವಸ್ಥತೆಗಳು ಆ ಕ್ಷಣವೇ ಮತ್ತು ತಕ್ಷಣದಲ್ಲಿ ಆದಾಗಲೂ ಕಾಲಾನಂತರದಲ್ಲಿ ಸ್ವಸ್ಥತೆಯು ಜರುಗಿದಾಗ ನಾವು ಸಹ ಆಚರಣೆ ಮಾಡುತ್ತೇವೆ.

ಪವಿತ್ರಾತ್ಮನು ಹೇಗೆ ಸ್ವಸ್ಥತೆಯವರಗಳನ್ನು ಬಿಡುಗಡೆಗೊಳಿಸುವುದನ್ನು ಆರಂಭಿಸುತ್ತಾನೆ

ದೇವರು ಏನು ಮಾಡುತ್ತಿದ್ದಾನೆಂದು ತಿಳಿದು ಕೊಳ್ಳುವುದು

ತಂದೆಯು ಮಾಡುತ್ತಿರುವುದನ್ನು ಯೇಸುವು ನೋಡಿದನು. ಮತ್ತು ಅದರಂತೆಯೇ ಆತನು ಮಾಡಿದನು. (ಯೋಹಾನ 5:19) ಇದಕ್ಕಾಗಿಯೇ ಆತನು ಬೇತ್ಸಥಾ ಕೊಳದ ಬಳಿ ಮನುಷ್ಯನನ್ನು ವಾಸಿಮಾಡಿದನು. ಆಗಾಗ್ಗೆ ಕೂಟದಲ್ಲಿ ಸೇವೆ ಸಲ್ಲಿಸುವಾಗ ಅಥವಾ ವೈಯಕ್ತಿಕ ಮಟ್ಟದಲ್ಲಿ ಮಾತನಾಡುವಾಗ/ ಸೇವೆ ಮಾಡುವಾಗ ನಿರ್ದಿಷ್ಟ ಪರಿಸ್ಥಿತಿಗಳನ್ನು ವಾಸಿಮಾಡಲು ಅಥವಾ ಸ್ವಸ್ಥತೆ ಮಾಡಲು ದೇವರು ಬಯಸುತ್ತಾನೆ ಎಂದು ನಿಮಗೆ ತಿಳಿದಿರುತ್ತದೆ.

ಜ್ಞಾನ ವಾಕ್ಯಗಳ ಮೂಲಕ

ಒಂದು ಕೂಟದಲ್ಲಿ ಸೇವೆ ಮಾಡುವಾಗ ಅಥವಾ ವ್ಯಕ್ತಿಗಳೊಂದಿಗೆ ಮಾತನಾಡುವಾಗ ಆತನು ವಾಸಿಮಾಡಲು ಅಪೇಕ್ಷಿಸುವ ನಿರ್ದಿಷ್ಟ ಪರಿಸ್ಥಿತಿಗಳನ್ನು ಜ್ಞಾನ ವಿವೇಕ ವಾಕ್ಯಗಳ ಮೂಲಕ ದೇವರ ಪ್ರಕಟಿಸುತ್ತಾನೆ. ಆ ಒಂದು ಕ್ಷಣದಲ್ಲಿ ದೇವರು ಮುಟ್ಟುತ್ತಿರುವ ದೇಹದಲ್ಲಿನ ವಿಶಿಷ್ಟ ಕ್ಷೇತ್ರಗಳು ಅಥವಾ ವಿಶಿಷ್ಟ ಪರಿಸ್ಥಿತಿಗಳಿಗೆ ಈ ಜ್ಞಾನದ ವಾಕ್ಯಗಳನ್ನು ನೀವು ಕರೆಯಿರಿ, ಇದು ನಂಬಿಕೆಯನ್ನು ಕಟ್ಟುತ್ತದೆ ಮತ್ತು ಜನರು ಅವರ ಸ್ವಸ್ಥತೆಯನ್ನು ಪಡೆಯುತ್ತಾರೆ.

ದೇವರ ವಾಸಿಮಾಡುವ ಪ್ರಸನ್ನತೆ ಮತ್ತು ಅಭಿಷೇಕವನ್ನು ಗುರ್ತಿಸುವುದು

ಒಂದು ಕೂಟದ ಅವಧಿಯಲ್ಲಿ ದೇವರ ಸ್ವಸ್ಥತೆಯ ಪ್ರಸನ್ನತೆ ಮತ್ತು ಗುಣಮಾಡುವ ಅಭಿಷೇಕವನ್ನು ನೀವು ತಿಳಿದಿರುತ್ತೀರಿ. ಕರ್ತನ ಬಲವು ವಾಸಿಮಾಡಲು

ಪ್ರಸ್ತುತದಲ್ಲಿರುತ್ತದೆ. (ಲೂಕ 5:17) ನೀವು ಅದರ ಪ್ರಕಾರವಾಗಿ ಸೇವೆ ಮಾಡಲು ಆರಂಬಿಸುತ್ತೀರಿ. ಯೇಸುವಿನ ಬಟ್ಟೆಯ ತುಂಡನ್ನು ಮುಟ್ಟಿದ ಸ್ತ್ರೀಯಂತೆ (ಮಾರ್ಕ 5:25-34) ಅಥವಾ ಬಹುಸಂಖ್ಯೆಯ ಗುಂಪಿನವರು ಯೇಸುವನ್ನು ಮುಟ್ಟಿ ಗುಣಹೊಂದಿದಂತೆ (ಲೂಕ 6:19) ಜನರು ನಂಬಿಕೆಯಿಂದ ಅಭಿಷೇಕವನ್ನು ಸ್ಪರ್ಶಿಸುತ್ತಾರೆ.

ಜನರು ನಿರೀಕ್ಷಿಸಿ ಮತ್ತು ನಂಬಿಕೆಯ ಮೂಲಕ ಬೇಡಿಕೆಯನ್ನು ಮಾಡುತ್ತಾರೆ

ಜನರು ಹೃದಯದಲ್ಲಿ ನಂಬಿಕೆ ಮತ್ತು ನಿರೀಕ್ಷಿಸಿಕೊಂಡಿರುವವರಿಗೆ ದೇವರು ಪ್ರತಿಕ್ರಿಯಿಸುತ್ತಾನೆ. ಆದ್ದರಿಂದ ಜನರು ದೇವರನ್ನು ನಂಬಿಕೆ ಮತ್ತು ನಿರೀಕ್ಷೆಯೊಡನೆ ನೋಡುವಾಗ ಮತ್ತು ಅವರಿಗೆ ಸೇವೆಯ ಸಹಾಯ ಮಾಡುವ ಒಂದು ಮಾನವ ಪಾತ್ರೆಯಂತೆ ನಿಮ್ಮ ಬಳಿ ಬರುವಾಗ, ದೇವರು ಅವರ ಅಗತ್ಯತೆ ಪೂರೈಸುವ ಸ್ವಸ್ಥತೆಯ ವರಗಳನ್ನು ಬಿಡುಗಡೆ ಮಾಡುತ್ತಾನೆ. ಅವರು ಗುಣಹೊಂದಲೂ ನಂಬಿಕೆಯುಳ್ಳರಾಗಿರುವುದನ್ನು ನೀವು ನೋಡುತ್ತೀರಿ ಮತ್ತು ದೇವರು ಅವನ ನಂಬಿಕೆಯ ಪ್ರತಿಕ್ರಿಯೆಲ್ಲಿ ಚಲಿಸುತ್ತಾನೆ.

ಸ್ವಸ್ಥತೆಯ ವರಗಳನ್ನು ಬಿಡುಗಡೆಗೊಳಿಸುವುದು ಹೇಗೆ

ದೇವರ ಏನು ಮಾಡುತ್ತಿದ್ದಾನೆಂದು ನೀವು ನೋಡುತ್ತೀರೊ ಅದನ್ನು ಘೋಷಸಿ

ಸ್ವಸ್ಥತೆ ಬಿಡುಗಡೆಯನ್ನು ವ್ಯಕ್ತಿಗಳಿಗೆ ಅಥವಾ ಜನರ ಗುಂಪಿಗೆ ತರಲು ದೇವರ ಆತ್ಮನು ಚಲಿಸುತ್ತಿದ್ದಾನೆಂಬುದನ್ನು ನೀವು ತಿಳಿದಾಗ ಆತ್ಮದಲ್ಲಿ ದೇವರು ತೋರಿಸುತ್ತಿರುವುದನ್ನು ಘೋಷಿಸಿರಿ. ಇದು ಜನರ ನಂಬಿಕೆಯನ್ನು ತ್ವರಿತಗೊಳಿಸುತ್ತದೆ ಮತ್ತು ಅಂತಹ ನಿರ್ದಿಷ್ಟ ಸ್ವಸ್ಥತೆಗಳು ಮತ್ತು ಅದ್ಭುತಗಳ ವರಗಳನ್ನು ಬಿಡುಗಡೆ ಮಾಡುವುದರಿಂದ ಆತನು ನಿಮಗೆ ತೋರಿಸುತ್ತಿರುವುದನ್ನು ದೇವರು ದೃಢಪಡಿಸುತ್ತಾನೆ. ಪೇತ್ರನು ಐನೇಯನಿಗೆ ದೇವರು ಮಾಡುತ್ತಿರುವುದನ್ನು ಘೋಷಿಸಿದನು. “ಪೇತ್ರನು ಎಲ್ಲಾ ಕಡೆಯು ಸಂಚಾರ ಮಾಡುತ್ತಿರುವಾಗ ವಾಸಿಯಾಗಿದ್ದ ದೇವರ ಜನರ ಬಳಿಗೊ ಬಂದನು. ಅಲ್ಲಿ ಪಾರ್ಶ್ವವಾಯುರೋಗಿಯಾಗಿ ಎಂಟು ವರುಷಗಳಿಂದ ಹಾಸಿಗೆಯ ಮೇಲೆ ಬಿದ್ದಿದ್ದ ಐನೇಯನೆಂಬ ಒಬ್ಬ ಮನುಷ್ಯನನ್ನು ಕಂಡನು. ಪೇತ್ರನು ಅವನಿಗೆ ಐನೇಯನೆ ಯೇಸು ಕ್ರಿಸ್ತನು ನಿನ್ನನ್ನು ವಾಸಿಮಾಡುತ್ತಾನೆ. ಎದ್ದು ನಿನ್ನ ಹಾಸಿಗೆಯನ್ನು ಹಾಸಿಕೋ ಎಂದು ಹೇಳಿದನು. ಕೂಡಲೆ ಅವನು ಎದ್ದನು. ಮತ್ತು ಲುದ್ದದಲ್ಲಿಯೂ ಸಾರೋನ ಪ್ರಾಂತ್ಯದಲ್ಲಿಯೂ ವಾಸವಾಗಿದ್ದವರೆಲ್ಲರು ಅವನನ್ನು ನೋಡಿದರು. ಮತ್ತು ಕರ್ತನ ಕಡೆಗೆ ತಿರುಗಿಕೊಂಡರು “ (ಅಪೊಸ್ತಲರ ಕೃತ್ಯಗಳು 9:32-35)

ಜ್ಞಾನವಿವೇಕ ವಾಕ್ಯಗಳನ್ನು ಬಿಡುಗಡೆ ಮಾಡಿರಿ

ದೇವರ ಆತ್ಮವು ನಿಮಗೆ ನೀಡುತ್ತಿರುವ ಜ್ಞಾನದ ಮಾತುಗಳನ್ನು ನೀವು ಕರೆಯುತ್ತೀರಿ. ನೀವು ಹೇಳುತ್ತಿರುವುದನ್ನು ಜನರು ಪಡೆಯುತ್ತಾರೆ ಮತ್ತು ನಂಬಿಕೆ ಮೂಲಕ ದೇವರೊಂದಿಗೆ ಅವರು ಸಂಪರ್ಕ ಹೊಂದುತ್ತಾರೆ. ಮತ್ತು ಸ್ವಸ್ಥತೆಯ ವರಗಳ ಮೂಲಕ ದೇವರು ಬಿಡುಗಡೆ ಮಾಡುತ್ತಿರುವುದನ್ನು ಪಡೆಯುತ್ತಾರೆ.

ನಂಬಿಕೆ ಮತ್ತು ಪ್ರಾರ್ಥನೆ ಮೂಲಕ

ನೀವು ಜನರ ಮೇಲೆ ಹಾಗೇ ಸುಮ್ಮನೆ ಕೈಗಳನ್ನಿಡುವ ಸಮಯಗಳಿವೆ ಮತ್ತು ಪ್ರಾರ್ಥನೆಯಲ್ಲಿ ಅವರಿಗೆ ಸೇವೆ ಸಲ್ಲಿಸಿರಿ, ಎಣ್ಣೆಯೊಡನೆ ಅಭಿಷೇಕಿಸಿರಿ ಅಥವಾ ಸ್ವಸ್ಥತೆಯನ್ನು ಆಜ್ಞಾಪಿಸಿರಿ ಜನರಿಗೆ ಸಂಪೂರ್ಣತೆ ನೀಡಲು ಸ್ವಸ್ಥತೆಗಳ ವರಗಳನ್ನು ದೇವರು ಬಿಡುಗಡೆ ಮಾಡುವ ಸಮಯಗಳೂ ಸಹ ಇದಾಗಿವೆ.

ಜನರನ್ನು ಅವರ ನಂಬಿಕೆಯಲ್ಲಿ ಕಾರ್ಯಮಾಡಲು ಪಡೆಯುವುದು

ಪೌಲನು ಪ್ರಸಂಗಿಸುತ್ತಿರುವಾಗಲೆ, ನಂಬಿಕೆಯು, ಆ ಕುಂಟ ಮನುಷ್ಯನ ಹೃದಯದಲ್ಲಿ ಜನ್ಮತಾಳಿತು. ಅವನ ಹೃದಯದಲ್ಲಿ ದೇವರು ಕಾರ್ಯ ಮಾಡುತ್ತಿರುವುದನ್ನು ಪೌಲನು ಗುರುತಿಸಿದನು ಮತ್ತು ಅವನ ನಂಬಿಕೆಯಲ್ಲಿ ಕಾರ್ಯ ಮಾಡಲು ಆಜ್ಞಾಪಿಸಿದನು:

"ಲುಸ್ತ್ರದೊಳಗೆ ಕಾಲುಗಳಲ್ಲಿ ಬಲವಿಲ್ಲದ ಒಬ್ಬ ಮನುಷ್ಯನು ಕೂತಿದ್ದನು ಅವನು ಹುಟ್ಟು ಕುಂಟುನಾಗಿದ್ದು ಎಂದಿಗೂ ನಡೆಯದೆ ಇದ್ದವನು. ಪೌಲನು ಆಡುವ ಮಾತುಗಳನ್ನು ಅವನು ಕಿವಿಗೊಟ್ಟು ಕೇಳುತ್ತಿದ್ದನು. ಪೌಲನು ಅವನನ್ನು ಸ್ಥಿರವಾಗಿ ನೋಡಿ ವಾಸಿಯಾಗುವದಕ್ಕೆ ಬೇಕಾದ ನಂಬಿಕೆಯು ಅವನಲ್ಲಿ ಉಂಟೆಂದು ತಿಳಿದು ನಿನ್ನ ಕಾಲೂರಿ ನೆಟ್ಟಗೆ ನಿಂತುಕೋ ಎಂದು ಮಹಾಧ್ವನಿಯಿಂದ ಹೇಳಿದನು. (ಅಪೊಸ್ತಲರ ಕೃತ್ಯಗಳು 14:8-10).

ಇದು ಗುಣಪಡಿಸುವ ವರವಾಗಿರಲಿ ಅಥವಾ ಅದು ನಿಮ್ಮ ನಂಬಿಕೆಯಿಂದ ಅಥವಾ ಇತರ ವ್ಯಕ್ತಿಯ ನಂಬಿಕೆಯಿಂದಾಗಿರಲಿ ಅಥವಾ ಆತನ ಪ್ರಸನ್ನತೆ ಮತ್ತು ಮಹಿಮೆಯಿಂದ ಸಾರ್ವಭೌಮವಾಗಿ ದೇವರು ಚಲಿಸುತ್ತಿರಲಿ ಇದರ ಬಗ್ಗೆ ಅಧಿಕವಾಗಿ ಮೆಚ್ಚಿಕೊಳ್ಳಬೇಡಿರಿ. ದೇವರ ಬಯಕೆ ಮತ್ತು ನಮ್ಮ ಬಯಕೆಯು ರೋಗಿಯು ಗುಣವಾಗುವುದನ್ನು ನೋಡುವುದಾಗಿದೆ. ಆದ್ದರಿಂದ ಆ ವ್ಯಕ್ತಿಯು ಗುಣಹೊಂದಿದನೆಂಬ ಸಂಗತಿಯಲ್ಲಿ ಆನಂದಿಸಿರಿ ಮತ್ತು ದೇವರಿಗೆ ಎಲ್ಲಾ ಮಹಿಮೆಯನ್ನು ಕೊಡಿರಿ.

14.ಅದ್ಭುತಗಳನ್ನು ಮಾಡುವದು

ಅರ್ಥನಿರೂಪಣೆ

ಅದ್ಭುತಕಾರ್ಯಗಳನ್ನು ಮಾಡುವುದರ ವರವು ಸ್ವಾಭಾವಿಕವಾದ ಹಾದಿ, ಜೀವಿತದ ಪರಿಸ್ಥಿತಿಗಳು, ಘಟನೆಗಳು ಮತ್ತು ಮನುಷ್ಯನ ಸಾಮರ್ಥ್ಯಗಳಿಗೆ ಅದ್ಭುತವೆಂಬುದಾಗಿ ಮಾತ್ರ ವ್ಯಾಖ್ಯಾನಿಸಲ್ಪಡುವಂತಹದ್ದಲ್ಲ. ಫಲಿತಾಂಶ ನೀಡುವ ಅಪ್ರಾಕೃತ ಅಥವಾ ಅತ್ಯದ್ಭುತಕರ ಮಧ್ಯಸ್ಥಿಕೆ ವಹಿಸುವುದಾಗಿದೆ. ಇದು ಅದ್ಭುತಕರವಾದ ಪೂರೈಕೆ, ಸೃಷ್ಟಿಶೀಲ ಸ್ವಸ್ಥತೆಗಳು (ಉದಾಹರಣೆಗೆ ಶಸ್ತ್ರಚಿಕಿತ್ಸೆಯಿಂದ ತೆಗೆಯಲ್ಪಟ್ಟ ಅಂಗಾಂಗಳು ಅತ್ಯದ್ಭುತವಾಗಿ ಪುನಃ ಸೃಷ್ಟಿಸಲ್ಪಡುವುದು, ಕೃತಕವಾಗಿ ಕಸಿಮಾಡಿದ್ದು ಕಣ್ಮರೆಯಾಗುವುದು ಮುಂತಾದವು).

ನೈಸರ್ಗಿಕ ಕಾನೂನುಗಳನ್ನು ಅತಿಕ್ರಮಿಸುವುದು ಮತ್ತು ಅಪ್ರಾಕೃತ ಜರುಗುವಿಕೆಗಳು ಅಥವಾ ಘಟನೆಗಳು ತಿರುವುಗಳನ್ನು ಒಳಗೊಂಡಿರುತ್ತದೆ. ಅಧ್ಭುತಕಾರ್ಯದ ಅಂತಿಮ ಫಲಿತಾಂಶವು ಜನರ ಅಗತ್ಯತೆಗಳನ್ನು ಪೂರೈಸುವುದು, ನಶಿಸಿ ಹೋಗುವವರನ್ನು ಕರ್ತನ ಕಡೆಗೆ ತಿರುಗಿಸುವುದು ಮತ್ತು ದೇವರಿಗೆ ಮಹಿಮೆ ಸಲ್ಲಿಸುವುದು.

ಸತ್ಯವೇದವು ಮನುಷ್ಯರ ಮಧ್ಯದಲ್ಲಿ ಅಧ್ಭುತ ಕಾರ್ಯಗಳನ್ನು ಮಾಡುವ ದೇವರ ಪುಸ್ತಕವಾಗಿದೆ. ಅದ್ಭುತ ಕಾರ್ಯಗಳು ಹಳೇ ಮತ್ತು ಹೊಸ ಒಡಂಬಡಿಕೆಗಳೆರಡರಲ್ಲೂ ತುಂಬಿತುಳುಕುತ್ತವೆ. ದೇವರು ಬದಲಾಗಿಲ್ಲ, ಆತನ ಬಲವನ್ನು ಕಳೆದುಕೊಂಡಿಲ್ಲ ಮತ್ತು ಇನ್ನೂ ಅಧ್ಭುತ ಕಾರ್ಯಗಳನ್ನು ಮಾಡುತ್ತಾನೆ. ಅಧ್ಭುತ ಕಾರ್ಯಗಳನ್ನು ಮಾಡುವ ವರವು ಪವಿತ್ರಾತ್ಮನು ವಿಶ್ವಾಸಿಗಳ ಮೂಲಕ ಆತನ ಅದ್ಭುತಕಾರ್ಯದ ಬಲವನ್ನು ಬಿಡುಗಡೆಗೊಳಿಸುವುದಾಗಿದೆ.

ಧರ್ಮ ಗ್ರಂಥದಲ್ಲಿ ದಾಖಲಿಸಲ್ಪಟ್ಟಂತಹ ಕೆಲವು ಅದ್ಭುತ ಕಾರ್ಯಗಳು ಇಲ್ಲಿವೆ.

ಸತ್ಯವೇದದ ಉದಾಹರಣೆಗಳು: ಹಳೇ ಒಡಂಬಡಿಕೆ

ಅಬ್ರಹಾಮನು ಮತ್ತು ಸಾರಳು ಇಸಾಕನನ್ನು ಅವರ ಮುಪ್ಪಾದ ವಯಸ್ಸಿನಲ್ಲಿ ಸಾರಳು ಬಂಜೆಯಾಗಿದ್ದಾಗಲು ಪಡೆದರು.

ಮೋಶೆ

- ಐಗುಪ್ತದಲ್ಲಿ ಅದ್ಭುತ ಕಾರ್ಯಗಳು
- ಕೆಂಪುಸಮುದ್ರವನ್ನು ವಿಭಜನೆ ಮಾಡಿದ್ದು
- ಕಹಿ ನೀರನ್ನು ಸಿಹಿ ನೀರಾಗಿ ತಿರುಗಿಸಿದ್ದು
- ಪ್ರತಿ ದಿನ ಮನ್ನವನ್ನೂ ಮತ್ತು ಲಾವಕ್ಕಿ ಕೊಟ್ಟದ್ದು
- ಬಂಡೆಯೊಳಗಿಂದ ನೀರು ಬರಮಾಡಿದ್ದು

ಯೆಹೋಶುವ

- ಯೋರ್ದನಿನ ನದಿಯನ್ನು ವಿಭಜನೆ ಮಾಡಿದ್ದು
- ಯೆರಿಕೋವಿನ ಗೋಡೆಗಳು ಬಿದ್ದು ಹೋದದ್ದು
- ಇಡೀ ದಿನ ಸೂರ್ಯ ಮತ್ತು ಚಂದ್ರ ಹಾಗೆಯೇ ನಿಂತಿದ್ದು ಸಂಸೋನನ ಅತ್ಯದ್ಭುತಕರವಾಗಿ ದೈಹಿಕ ಶಕ್ತಿಯ ಅಧಿಕಾರ ಹೊಂದಿದ್ದು

ಎಲೀಯನು

- ರೊಟ್ಟಿ ಮತ್ತು ಮೀನು ದಿನಕ್ಕೆ 2 ಸಾರಿ ಅನೇಕ ದಿವಸಗಳವರೆಗೂ ಕಾಗೆಗಳಿಂದ ಪಡೆದುಕೊಂಡಿದ್ದು.
- ಚಾರೆಪ್ತದಲ್ಲಿ ವಿಧವೆಗಾಗಿ ಎಣ್ಣೆ ಮತ್ತು ಗೋಧಿಹಿಟ್ಟು ತುಂಬಾ ಹೆಚ್ಚಾಗಿ ಮುಗಿದು ಹೋಗದಿದ್ದದ್ದು.
- ಮರಣದಿಂದ ವಿಧವೆಯ ಮಗನನ್ನು ಎಬ್ಬಿಸಿದ್ದು.
- ಪರಲೋಕದಿಂದ ಬೆಂಕಿ ಬಂದು ಯಜ್ಞವೇದಿಯನ್ನು ದಹಿಸಿದ್ದು.
- ಮೂರು ವರ್ಷಗಳು ಬರಗಾಲದ ನಂತರ ಮಳೆ ಬಂದಿದ್ದು.
- ಕುದುರೆಗಳ ರಥಕ್ಕಿಂತ ವೇಗವಾಗಿ ಓಡಿದ್ದು.
- 40 ದಿವಸಗಳವರೆಗೆ ಒಬ್ಬ ದೇವದೂತನು ಕೆಂಡದ ಮೇಲೆ ಸುಟ್ಟ ರೊಟ್ಟಿಯನ್ನು ಮತ್ತು ನೀರನ್ನು ಒದಗಿಸಿದ್ದು
- ಯೋರ್ದಾನಿನ ನದಿಯನ್ನು ವಿಭಜನೆ ಮಾಡಿದ್ದು.

ಎಲೀಷನು

● ಯೋರ್ದಾನಿನ ನದಿಯನ್ನು ವಿಭಜನೆ ಮಾಡಿದ್ದು

● ಯೆರಿಕೋವಿನ ನೀರನ್ನು ಸ್ವಸ್ಥಮಾಡಿದ್ದು.

● ಒಬ್ಬ ವಿಧವೆಯ ಸಾಲವನ್ನು ತೀರಿಲು ಪಾತ್ರೆಗಳಲ್ಲಿ ಎಣ್ಣೇ ಉಕ್ಕಿ ತುಂಬಿ ತುಳುಕಿದ್ದು.

● ಶೂನೇಮ್ಯ ಸ್ತ್ರೀಯು ಬಂಜೆತನದಿಂದ ಅದ್ಭುತವಾದ ಮಗು ಪಡೆದದ್ದು

● ಶೂನೇಮ್ಯ ಸ್ತ್ರೀಯು ಸತ್ತ ಮಗುವನ್ನು ಬದುಕಿಸಿಕೊಂಡದ್ದು.

● ಮರಣಾಂತಿಕ ವಿಷವುಳ್ಳ ಕಾಡುಬಳ್ಳಿಯ ಕಾಯಿಯು ಶುದ್ದೀಕರಿಸಲ್ಪಟ್ಟದ್ದು.

● ಇಪ್ಪತ್ತು ಜವೆಗೋದಿಯ ರೊಟ್ಟಿಗಳನ್ನು ನೂರು ಮಂದಿ ಪುರುಷರಿಗೆ ಊಟಕ್ಕೆ ಕೊಡಲೂ ಬಹು ಸಂಖ್ಯೆಯಲ್ಲಿ ಹೆಚ್ಚಾದದ್ದು.

● ನಾಮಾನನು ಕುಷ್ಟರೋಗದಿಂದ ಗುಣಹೊಂದಿದ್ದು

● ಕೊಡಲಿಯು ತೇಲಾಡಿಸಿದ್ದು.

● ಎಲೀಷನ ಮೂಳೆಗಳನ್ನು ಸತ್ತ ಮನುಷ್ಯನ ದೇಹವು ಮುಟ್ಟಿದಾಗ ಜೀವಿತನಾಗಿ ಸತ್ತ ಮನುಷ್ಯ ಎದ್ದದ್ದು.

ಯೆಶಾಯನು

● ಸೂರ್ಯನ ನೆರಳು 10 ಡಿಗ್ರಿ ಹಿಂದಕ್ಕೆ ಚಲಿಸಿದ್ದು.

ಸತ್ಯವೇದದ ಉದಾಹರಣೆಗಳು: ಹೊಸ ಒಡಂಬಡಿಕೆ

ಯೇಸು

● ನೀರು ದ್ರಾಕ್ಷಾರವಾಗಿ ತಿರುಗಿದ್ದು.

● ಉದ್ರಿಕ್ತ ಜನಸಮೂಹದೊಡನೆ ಹಾನಿಯಿಲ್ಲದೆ ನಡೆದಿದ್ದು.

● ಸಾವಿರಾರು ಜನರುಗಳಿಗೆ ಊಟ ಬಡಿಸಲು ಮೀನು ಮತ್ತು ರೊಟ್ಟಿಗಳನ್ನು ಬಹುಸಂಖ್ಯೆಯಾಗಿ ಮಾಡಿದ್ದು.

● ಬಿರುಗಾಳಿಯನ್ನು ಶಾಂತಪಡಿಸಿದ್ದು

● ನೀರಿನ ಮೇಲೆ ನಡೆದದ್ದು

● ಅತ್ಯದ್ಭುತಕರವಾಗಿ ಮೀನು ಹಿಡಿದದ್ದು

● ಮೀನಿನ ಬಾಯಿಯಲ್ಲಿ ನಾಣ್ಯ

● ಅಂಗವಿಕಲರನ್ನು ಸಂಪೂರ್ಣರನ್ನಾಗಿ ಮಾಡಿದ್ದು

● ಪೇತ್ರನ ನೆರಳು ಜನರನ್ನು ವಾಸಿಮಾಡಿದ್ದು

ಪೌಲನು

● ಮಂತ್ರವಾದಿಯಾದ ಎಲುಮನನ್ನು ಸ್ವಲ್ಪ ಸಮಯದವರೆಗೆ ಕುರುಡನನ್ನಾಗಿ ಮಾಡಿದ್ದು.

● ಕರವಸ್ತ್ರ ಮತ್ತು ಮೇಲುಡುಪಿನ ಮೂಲಕ ಅಸಾಮಾನ್ಯ ಮಹಾತ್ಕಾರ್ಯಗಳು ಜನರನ್ನು ವಾಸಿ ಮತ್ತು ಬಿಡುಗಡೆ ಮಾಡಲು ಜರುಗಿದ್ದು.

● ಮಾಲ್ಟಾ ದ್ವೀಪದಲ್ಲಿ ಹಾವಿನಿಂದ ಕಚ್ಚಲ್ಪಟ್ಟರು ಹಾನಿಯಾಗದಿದ್ದು.

ಕಾರ್ಯಚರಣೆಗಳು

ನಾವು ಹಿಂದೆ ಹೇಳಿದಂತೆ ಮಹತ್ಕಾರ್ಯಗಳ ಅಂತಿಮ ಫಲಿತಾಂಶವು ಜನರ ಅಗತ್ಯತೆ ಪೂರೈಸುವುದು, ತಪ್ಪಿ ಹೋದವರನ್ನು ಕರ್ತನ ಕಡೆಗೆ ತಿರುಗಿಸುವುದು ಮತ್ತು ಯೇಸುಕ್ರಿಸ್ತನಿಗೆ ಮಹಿಮೆ ಸಲ್ಲಿಸುವುದು.

ಸೂಚಕ ಕಾರ್ಯಗಳು, ಮಹತ್ಕಾರ್ಯಗಳು, ಅದ್ಭುತಕಾರ್ಯಗಳು ಮತ್ತು ಪವಿತ್ರಾತ್ಮನ ವರಗಳು ಸಾರಲ್ಪಟ್ಟ ಸಂದೇಶದ "ಸಾಕ್ಷಿ ನೀಡುತ್ತವೆ."

ಇಬ್ರಿಯರಿಗೆ 2:3-4
3 ಈ ಅತ್ಯಂತ ವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯ ಮಾಡಿದರೆ ತಪ್ಪಿಸಿಕೊಳ್ಳುವುದು ಹೇಗೆ? ಇದು ಕರ್ತನಿಂದ ಮೊದಲು ಹೇಳಲ್ಪಟ್ಟಿತು. ಆತನಿಂದ ಕೇಳಿದವರು ಇದನ್ನು ನಮಗೆ ಸ್ಥಿರಪಡಿಸಿದರು.
4 ಮತ್ತು ದೇವರು ಅವರ ಕೈಯಿಂದ ಸೂಚಕ ಕಾರ್ಯಗಳನ್ನು ಅದ್ಭುತ ಕಾರ್ಯಗಳನ್ನೂ ನಾನಾ ವಿಧವಾದ ಮಹತ್ಕಾರ್ಯಗಳನ್ನೂ ನಡಿಸಿ ಪವಿತ್ರಾತ್ಮ ವರಗಳನ್ನು ತನ್ನ ಚಿತ್ತಾನು ಸಾರವಾಗಿ ಅವರಿಗೆ ಅನುಗ್ರಹಿಸಿ ಅವರ ಮಾತಿಗೆ ಸಾಕ್ಷಿ ಕೊಡುತ್ತಿದ್ದನು.

ದೇವರು ಎಲ್ಲಾ ಬಗೆಯ ಅದ್ಭುತಕಾರ್ಯಗಳನ್ನು ಮಾಡಿದನು. ಇನ್ನೂ ನೋಡದ ಅಥವಾ ಕೇಳದ ವಿಷಯಗಳನ್ನು ಮಾಡಿದನು ಆದ್ದರಿಂದ ನಮ್ಮ ಮಧ್ಯದಲ್ಲಿ ಆತನು ಮಾಡುವ ಅದ್ಭುತಕಾರ್ಯಗಳ ವಿಧಗಳಿಗೆ ದೇವರನ್ನು ಸಿಮೀತಗೊಳಿಸಬಾರದು.

ಅದ್ಭುತಕಾರ್ಯ ಮಾಡುವ ವರವನ್ನು ಹೇಗೆ ಪಡೆಯಬಹುದು

ಅದ್ಭುತಕಾರ್ಯಗಳನ್ನು ಮಾಡುವ ವರದ ಕಾರ್ಯಚರಣೆಯು ಸ್ವಸ್ಥತೆಯ ವರಗಳಿಗೆ ಬಹಳ ಹೋಲುತ್ತದೆ.

ದೇವರು ಮಾಡುತ್ತಿರುವುದನ್ನು ತಿಳಿಯುವುದು

ಆಗಾಗ್ಗೆ ಒಂದು ಕೂಟದಲ್ಲಿ ಸೇವೆ ಸಲ್ಲಿಸುವಾಗ ಅಥವಾ ಮಾತನಾಡುವಾಗ / ಒಂದು ವ್ಯಕ್ತಿಯ ಮಟ್ಟದಲ್ಲಿ ಸೇವೆ ಮಾಡುವಾಗ ದೇವರ ವಿಶಿಷ್ಟ ಅದ್ಭುತ ಕಾರ್ಯಗಳನ್ನು ಬಿಡುಗಡೆ ಮಾಡಲು ಅಪೇಕ್ಷಿಸುತ್ತಾನೆಂಬುದು ನಿಮಗೆ ತಿಳಿದಿರುತ್ತದೆ.

ಜ್ಞಾನದ ವಾಕ್ಯಗಳ ಮೂಲಕ

ದೇವರು ನಿರ್ದಿಷ್ಟ ಅದ್ಭುತಕಾರ್ಯಗಳನ್ನು ಆತನು ಬಿಡುಗಡೆ ಮಾಡಲೂ ಅಪೇಕ್ಷಿಸುವವುಗಳನ್ನು ಪ್ರಕಟಿಸುತ್ತಾನೆ. ನೀವು ಅದನ್ನು ಜ್ಞಾನದ ವಾಕ್ಯಗಳೆಂಬುದಾಗಿ ಕರೆಯುವಿರಿ. ಈ ಜ್ಞಾನದ ವಾಕ್ಯಗಳು ಒಬ್ಬ ವ್ಯಕ್ತಿಯ ಜೀವಿತದಲ್ಲಿ ನಿರ್ದಿಷ್ಟ ಪರಿಸ್ಥಿತಿಗಳನ್ನು ದೇವರು ತಿರುಗಿಸುವುದನ್ನು ವ್ಯಾಖ್ಯಾನಿಸುತ್ತವೆ. ಇದು ನಂಬಿಕೆ ಕಟ್ಟುತ್ತದೆ ಮತ್ತು ಜನರು ಅವರ ಅದ್ಭುತ ಕಾರ್ಯಗಳನ್ನು ಪಡೆಯುತ್ತಾರೆ.

ದೇವರ ಅದ್ಭುತ ಕಾರ್ಯ ಮಾಡುವ ಪ್ರಸನ್ನತೆ ಮತ್ತು ಅಭಿಷೇಕ ಗುರ್ತಿಸುವುದು

ಒಂದು ಕೂಟದ ಅವಧಿಯಲ್ಲಿ ದೇವರ ಅದ್ಭುತಕಾರ್ಯ ಮಾಡುವ ಬಲ ಮತ್ತು ಅದ್ಭುತಕಾರ್ಯದ ಅಭಿಷೇಕವನ್ನು ನೀವು ಅರಿತುಕೊಳ್ಳುತ್ತೀರಿ. ಅದರ ಪ್ರಕಾರವಾಗಿ ಸೇವೆ ಮಾಡಲು ಆರಂಭಿಸಿರಿ. ದೇವರು ಮಾಡುತ್ತಿರುವವುಗಳಿಗೆ ಜನರು ಪ್ರತಿಕ್ರಿಯೆಯ ಕಾರ್ಯ ಮಾಡುತ್ತಾರೆ ಮತ್ತು ಅವರ ಅದ್ಭುತಕಾರ್ಯಗಳನ್ನು ಪಡೆಯುತ್ತಾರೆ.

ಜನರು ಎದುರು ನೋಡುವಿಕೆ ಮತ್ತು ನಂಬಿಕೆಯ ಮೂಲಕ ಬೇಡಿಕೆ ಮಾಡುತ್ತಾರೆ

ಜನರು ನಿರೀಕ್ಷೆಯೊಡನೆ ಮತ್ತು ನಂಬಿಕೆಯೊಡನೆ ಅವರ ಜೀವಿತದಲ್ಲಿ ದೇವರು ಮಧ್ಯಪ್ರವೇಶಿಸುತ್ತಾನೆ. ಎಂಬ ಬಯಕೆಯಿಂದ ಬರುತ್ತಾರೆ ಮತ್ತು ಅವರ ನಂಬಿಕೆಗೆ ದೇವರು ಪ್ರತಿಕ್ರಿಯಿಸುತ್ತಾನೆ. ಮತ್ತು ಅವರಿಗಾಗಿ ಅದ್ಭುತ ಕಾರ್ಯಗಳನ್ನು ಬಿಡುಗಡೆ ಮಾಡುತ್ತಾನೆ.

ಅದ್ಭುತ ಕಾರ್ಯಗಳನ್ನು ಮಾಡುವ ವರವು ಹೇಗೆ ಬಿಡುಗಡೆಯಾಗುತ್ತದೆ

ಅದ್ಭುತ ಕಾರ್ಯಗಳನ್ನು ಮಾಡುವ ವರವನ್ನು ಬಿಡುಗಡೆಗೊಳಿಸುವುದು ಸ್ವಸ್ಥತೆಯ ವರಗಳನ್ನು ಬಿಡುಗಡೆ ಮಾಡುವಂತಹ ರೀತಿಯಲ್ಲಿಯೇ ಇರುತ್ತದೆ.

ದೇವರು ಮಾಡುತ್ತಿರುವುದನ್ನು ನೀವು ನೋಡುವುದನ್ನು ಘೋಷಿಸಿರಿ ಮತ್ತು ಜನರು ಅದರ ಮೇಲೆ ಕಾರ್ಯ ಮಾಡಲು ಪ್ರೋತ್ಸಾಹಿಸಬೇಕು

ಆತನು ಮಾಡಲಿರುವ ಅದ್ಭುತ ಕಾರ್ಯಗಳನ್ನು ಪವಿತ್ರಾತ್ಮನು ಪ್ರಕಟಿಸು ವಾಗ ನೀವು ಅದನ್ನು ಘೋಷಿಸಿರಿ. ಅದಕ್ಕನುಸಾರವಾಗಿ ಜನರು ಕಾರ್ಯ ಮಾಡಲು ಹೇಳಿರಿ. ಉದಾಹರಣೆಗೆ ಯೇಸುವು ವಿಷಯಗಳನ್ನು ಹೀಗೆ ಹೇಳಿದನು. ನೀರಿನ ಬಾನೆಗಳನ್ನು ನೀರಿನಿಂದ ತುಂಬಿಸಿರಿ. ಆ ಮೇಲೆ ತೆಗೆದುಕೊಂಡು ಜನರಿಗೆ ಕೊಡಿರಿ. ಅಥವಾ ಆತನು ಐದು ರೊಟ್ಟಿಗಳು ಮತ್ತು ಎರಡು ಮೀನುಗಳನ್ನು ತೆಗೆದುಕೊಂಡು ಸ್ತೋತ್ರ ಮಾಡಿದನು. ಮತ್ತು ಆತನ ಶಿಷ್ಯರುಗಳು ಜನರಿಗೆ ಹಂಚಲು ಪ್ರಾರಂಭಿಸಿದರು. ಆತನು ಪೇತ್ರನಿಗೆ ನೀನು ಹೋಗಿ ಒಂದು ಮೀನನ್ನು ಹಿಡಿ ಮತ್ತು ಮೀನಿನ ಬಾಯಿಯನ್ನು ನೋಡಿದರೆ ಅಲ್ಲಿ ನಾಣ್ಯ ಇರುವುದು.

ದೇವರು ಮಾಡುತ್ತಿರುವ ಅದ್ಭುತಕಾರ್ಯಗಳ ವಿಧಗಳ ಮೇಲೆ ಜ್ಞಾನದ ವಾಕ್ಯಗಳನ್ನು ಬಿಡುಗಡೆ ಮಾಡುವುದು

ಜ್ಞಾನವಾಕ್ಯದ ಮೂಲಕವಾಗಿ ಪವಿತ್ರಾತ್ಮನು ವ್ಯಕ್ತಿಗಳು ಹಾದು ಹೋಗುತ್ತಿರುವಂತಹ ನಿಶ್ಚಿತವಾದ ಪರಿಸ್ಥಿತಿಗಳ ಕುರಿತು ಅಂತಹ ಪರಿಸ್ಥಿತಿಗಳನ್ನು ತಿರುಗಿಸಲು ದೇವರು ಏನು ಮಾಡುತ್ತಾನೆಂಬುದನ್ನು ಪ್ರಕಟಿಸುತ್ತಾನೆ. ಅಂತಹ ಜ್ಞಾನದ ವಾಕ್ಯಗಳನ್ನು ಸ್ಪಷ್ಟವಾಗಿ ನೀವು ಬಿಡುಗಡೆ ಮಾಡಿರಿ. ಜನರು ಪ್ರೋತ್ಸಾಹಗೊಳ್ಳುತ್ತಾರೆ ಮತ್ತು ನಂಬಿಕೆಯಿಂದ ಪಡೆದುಕೊಳ್ಳುತ್ತಾರೆ ಮತ್ತು ಅವರ ಜೀವಿತದಲ್ಲಿ ಅದ್ಭುತಕಾರ್ಯಗಳನ್ನು ಮಾಡುವುದನ್ನು ಅನುಭವಿಸುತ್ತಾರೆ.

ನಂಬಿಕೆ ಮತ್ತು ಪ್ರಾರ್ಥನೆ ಮೂಲಕ ದೇವರ ಅದ್ಭುತಕಾರ್ಯದ ಬಲ ಬಿಡುಗಡೆಯಾಗುತ್ತದೆ

ನೀವು ಜನರೊಡನೆ ಅವರ ನಿರ್ದಿಷ್ಟ ಪರಿಸ್ಥಿತಿ ಕುರಿತು ಪ್ರಾರ್ಥಿಸಿರಿ ಮತ್ತು ವಿಶ್ವಾಸಿಗಳಾಗಿ ನಮಗೆ ಕೊಡಲ್ಪಟ್ಟ ಅಧಿಕಾರವನ್ನು ಉಪಯೋಗಿಸಿ, ನೀವು ಅಧಿಕೃತ ಆಜ್ಞೆಕೊಡುತ್ತೀರಿ. ಮತ್ತು ದೇವರ ಅದ್ಭುತ ಕಾರ್ಯ ಮಾಡುವ ಬಲವನ್ನು ಅವರ ಪರಿಸ್ಥಿತಿಗಳಿಗೆ

ಬಿಡುಗಡೆಗೊಳಿಸಿರಿ. ಅದ್ಭುತ ಕಾರ್ಯಗಳ ಸೇವೆ ಮಾಡುವ / ಬಿಡುಗಡೆಗೊಳಿಸುವ ವ್ಯಕ್ತಿಯು ಮತ್ತು ಸ್ವೀಕರಿಸುವಂತಹ ವ್ಯಕ್ತಿಯು ನಂಬಿಕೆಯಲ್ಲಿ ಚಲಿಸಬೇಕು ಮತ್ತು ಅದ್ಭುತ ಕಾರ್ಯಗಳು ಜರುಗುತ್ತವೆ.

ಗಲಾತ್ಯದವರಿಗೆ 3:5
ದೇವರು ತನ್ನ ಆತ್ಮನನ್ನು ನಿಮಗೆ ಹೇರಳವಾಗಿ ಕೊಟ್ಟು ನಿಮ್ಮಲ್ಲಿ ಮಹತ್ಕಾರ್ಯಗಳನ್ನು ನಡಿಸುತ್ತಾ ಬಂದದ್ದು ಯಾತರಿಂದಾಯಿತು? ನೀವು ನೇಮನಿಷ್ಟೆಗಳನ್ನನುಸರಿಸಿದ್ದರಿಂದಲೋ? ಕೇಳಿ ನಂಬಿದ್ದರಿಂದಲೋ? ನಂಬಿದ್ದರಿಂದಲೇ.

ಜನರು ಅವರ ನಂಬಿಕೆಯಲ್ಲಿ ಕಾರ್ಯ ಮಾಡುವಂತೆ ಮಾಡುವುದು

ಧರ್ಮಗ್ರಂಥದಲ್ಲಿ ವಚನದಲ್ಲಿ ಆಗಾಗ್ಗೆ ದೇವರು ಜನರಿಗೆ ನಿರ್ದಿಷ್ಟ ಸಲಹೆಗಳನ್ನು ಕೊಡುವುದನ್ನು ಮತ್ತು ಅವರು ಅಂತಹ ಸಲಹೆಗಳನ್ನು ನಂಬಿಕೆಯಲ್ಲಿ ಹಿಂಬಾಲಿಸುವುದರ ಅಗತ್ಯತೆಯನ್ನು ನಾವು ಗುರ್ತಿಸುತ್ತೇವೆ. ಜನರು ಅಂತಹ ಸಲಹೆಗಳ ಮೇಲೆ ಕಾರ್ಯ ಮಾಡಿದಾಗ ಅದ್ಭುತಕಾರ್ಯಗಳು ಜರುಗಿದವು. ದೇವರ ಅದೇ ರೀತಿಯಾಗಿ ಇಂದು ಇನ್ನೂ ಚಲಿಸುವಾತನಾಗಿದ್ದಾನೆ. ನಿರ್ದಿಷ್ಟ ಸಲಹೆಗಳನ್ನು ನೀವು ಹಂಚಿಕೊಳ್ಳಲು ದೇವರ ಆತ್ಮನು ಮುನ್ನಡೆಸುತ್ತಾನೆ ಮತ್ತು ಜನರು ಕಾರ್ಯ ಮಾಡಿದಾಗ ಅವರ ಜೀವಿತದ ಪರಿಸ್ಥಿತಿಯಲ್ಲಿ ಅದ್ಭುತ ಕಾರ್ಯಗಳನ್ನು ಮಾಡುವುದನ್ನು ಜನರು ಪಡೆಯುತ್ತಾರೆ.

ನಾವು ದೇವರನ್ನು ಒಂದು ಪೆಟ್ಟಿಗೆಯೊಳಗೆ ಹಾಕಲಾಗುವುದಿಲ್ಲ ಮತ್ತು ದೇವರು ಮಾಡುವಂತಹ ಅದ್ಭುತ ಕಾರ್ಯಗಳ ರೀತಿಯನ್ನು ಸೀಮಿತಗೊಳಿಸಲು ಅಥವಾ ನಿರ್ಬಂಧಿಸಲಾಗುವುದಿಲ್ಲ. ಆತನು ಮೆಚ್ಚುವಂತದು ಮತ್ತು ಆರಿಸಿಕೊಳ್ಳುವಂತಹ ಯಾವುದನ್ನಾದರೂ ದೇವರು ಮಾಡುತ್ತಾನೆ ಮತ್ತು ಮಾಡಲು ಶಕ್ತನಾಗಿದ್ದಾನೆ." ನಮ್ಮ ದೇವರು ಪರಲೋಕದಲ್ಲಿದ್ದಾನೆ ಆತನು ತನಗೆ ಬೇಕಾದದ್ದನ್ನೆಲ್ಲಾ ಮಾಡುತ್ತಾನೆ" . (ಕೀರ್ತನೆಗಳು 115:3) ಆತನೊಂದಿಗೆ ಅಸಾಧ್ಯಕರವಾದದ್ದು ಯಾವುದು ಇಲ್ಲ ಅಥವಾ ಆತನಿಗೆ ಕಷ್ಟಕರವಾಗಿರುವುದಿಲ್ಲ. "ಎಲೈ ಕರ್ತನಾದ ಯೆಹೋವನೇ! ಆಹಾ ನೀನು ಭುಜವನ್ನೆತ್ತಿ ನಿನ್ನ ಮಹಾ ಶಕ್ತಿಯಿಂದ ಭೂಮ್ಯಾಕಾಶಗಳನ್ನು ಸೃಷ್ಟಿಸಿದ್ದೀ ಯಾವ ಕಾರ್ಯವು ನಿನಗೆ ಅಸಾಧ್ಯವಲ್ಲ." (ಯೆರೆಮೀಯ 32:17) ನಾವು ಆತನೊಡನೆ ಚಲಿಸಲು ಚಿತ್ತವುಳ್ಳವರಾಗಿರಬೇಕು ಮತ್ತು ನಮಗೆ ಆತನು ಪ್ರಕಟಿಸುವುದನ್ನು ಘೋಷಿಸಬೇಕು.

15. ನಂಬಿಕೆಯ ವರ

ಅರ್ಥ ನಿರೂಪಣೆ

ನಂಬಿಕೆಯ ವರವು ಒಂದು ನಿರ್ದಿಷ್ಟ ಪರಿಸ್ಥಿತಿ ಅಥವಾ ಒಂದು ಕೊಡಲ್ಪಟ್ಟ ನಿರ್ದಿಷ್ಟ ಸಮಯದಲ್ಲಿ ಅದ್ಭುತಕ್ಕಾಗಿ ದೇವರನ್ನು ನಂಬಲು ಒಬ್ಬ ವಿಶ್ವಾಸಿಯ ಹೃದಯಕ್ಕೆ ನಂಬಿಕೆಯ ಅಪ್ರಾಕೃತ ಪಾಲು ಕೊಡುವಿಕೆಯಾಗಿದೆ. ನಂಬಿಕೆಯ ವರವು ಸಾಮಾನ್ಯವಾಗಿ ಒಳ ಬಲಪಡಿಸುವುದಾಗಿ ಮತ್ತು ಸ್ವಸ್ಥತೆಯ ವರಗಳು ಮತ್ತು ಅದ್ಭುತ ಕಾರ್ಯ ಮಾಡುವ ವರದೊಡನೆ ಕಾರ್ಯ ಸಾಧಿಸಲು ಜೊತೆಗೂಡಿ ಕಾರ್ಯನಡೆಸುತ್ತದೆ.

ನಂಬಿಕೆಯ ವರವು ಒಬ್ಬ ವ್ಯಕ್ತಿಯು ದೇವರಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಅಭಿವೃದ್ಧಿ ಪಡಿಸಿದ ನಂಬಿಕೆಯನ್ನು ಪೋಷಿಸಿದ ಅಥವಾ ಬೆಳೆಸಿಕೊಂಡದ್ದರಿಂದ ವಿಭಿನ್ನವಾಗಿರುತ್ತದೆ. (ರೋಮಾಪುರದವರಿಗೆ 12:3, 2ಥೆಸಲೋನಿಕದವರಿಗೆ 1:3) ನಂಬಿಕೆಯ ವರವು ಸಾಮಾನ್ಯವಾಗಿ ನಿಮ್ಮ ಜೀವಿತದ ನಿರ್ದಿಷ್ಟ ಕ್ಷೇತ್ರದಲ್ಲಿ ಕಾಲಾನಂತರದಲ್ಲಿ ನೀವು ಪೋಷಿಸಿದ್ದ ದೇವರಲ್ಲಿನ ನಿಮ್ಮ ವೈಯಕ್ತಿಕ ನಂಬಿಕೆಯ ಹಾಗೆಯೇ, ಕ್ಷಣಿಕವಾಗಿರುತ್ತದೆ. (ಒಂದು ನಿರ್ದಿಷ್ಟ ಸಮಯಕ್ಕಾಗಿ ಮತ್ತು ಪರಿಸ್ಥಿತಿಗಾಗಿ) ಆದಾಗ್ಯೂ ನಂಬಿಕೆಯ ವರದ ಕಾರ್ಯಚರಣೆ ಅಡಿಯಲ್ಲಿ ಮಾಡಲ್ಪಟ್ಟ ಘೋಷಣೆಯು, ದೇವರ ವಾಕ್ಯದಲ್ಲಿ ನಿಮ್ಮ ವೈಯಕ್ತಿಕ ನಂಬಿಕೆಯನ್ನು ಘೋಷಿಸುವುದರಿಂದ ವ್ಯತ್ಯಾಸಕರವಾಗಿರುತ್ತದೆ.

ನಂಬಿಕೆಯ ವರವು ಪೂರ್ವ ಕಲ್ಪನೆಯಲ್ಲ. ನೀವು ಅದನ್ನು ಬಯಸುತ್ತೀರಿ ಎಂಬುದಾಗಿ ದೇವರು ನಿಮಗಾಗಿ ಏನನ್ನಾದರೂ ಮಾಡುತ್ತಾನೆ ಎಂದು ಗ್ರಹಿಸುವುದಿಲ್ಲ.

ಧರ್ಮಗ್ರಂಥದಲ್ಲಿ, ನಾವು ನಂಬಿಕೆಯ ಅಸಾಮಾನ್ಯ ತೋರ್ಪಡಿಸುವಿಕೆಗಳು ಮತ್ತು ಅದ್ಭುತಕಾರ್ಯಗಳನ್ನು ನಾವು ನೋಡುವಾಗಲೆಲ್ಲಾ, ಆ ಅದ್ಭುತ ನಡೆಯಲು ದೇವರನ್ನು ನಂಬಲು ತೊಡಗಿಸಿಕೊಂಡ ವ್ಯಕ್ತಿಯ(ಗಳ) ಹೃದಯದಲ್ಲಿ ನಂಬಿಕೆಯ ಅಪ್ರಾಕೃತ ದ್ರಾವಣವಿರಬೇಕು ಎಂಬುದಾಗಿ ಹೇಳುವುದು ಸುರಕ್ಷಿತವಾಗಿರುತ್ತದೆ. ಸತ್ಯವೇದದಿಂದ ಕೆಲವು ಉದಾಹರಣೆಗಳು ಇಲ್ಲಿವೆ.

ಸತ್ಯವೇದದ ಉದಾಹರಣೆಗಳು: ಹಳೇ ಒಡಂಬಡಿಕೆ

ಮೋಶೆ ಮತ್ತು ಐಗುಪ್ತದಲ್ಲಿ ಮತ್ತು ಮರುಭೂಮಿಯ ಹಾದಿಯಲ್ಲಿ ಅದ್ಭುತಗಳು

ಮೋಶೆಯು ಮಾಡಿದ ಎಲ್ಲಾ ಅದ್ಭುತ ಕಾರ್ಯಗಳು ಅವನು ಮಾಡಬೇಕೆಂದು ದೇವರು ಹೇಳಿದಂತವುಗಳು ಅವರ ಹೃದಯಕ್ಕೆ ಒಳಕ್ಕೆ ಸುರಿಯಲ್ಪಟ್ಟಂತಹ ಅಪ್ರಾಕೃತ ನಂಬಿಕೆಯ ಫಲಿತಾಂಶಗಳಾಗಿದ್ದವು, ಪ್ರತಿ ಸಮಯದಲ್ಲೂ ಅವನು ನಿರ್ದಿಷ್ಟ ವಾಕ್ಯವನ್ನು ದೇವರಿಂದ ಪಡೆದನು, ಅದ್ಭುತ ಕಾರ್ಯಗಳು ಜರುಗುತ್ತವೆ ಎಂಬುದಾಗಿ ಯಾವ ಸಂದೇಹವಿಲ್ಲದೆ ಮಿತಿಮೀರಿದ ನಂಬಿಕೆಯೊಡನೆ ಅವನ ಹೃದಯಗಳು ತುಂಬಿದ್ದವು. ದೇವರು ಹೇಳಿದ್ದೆಲ್ಲವುಗಳು ಅವನ ಕಣ್ಣುಗಳ ಮುಂದೆ ಜರುಗುತ್ತವೆ ಎಂಬುದಾಗಿ ಸಂಪೂರ್ಣವಾಗಿ ತಿಳಿದವನಾಗಿ ದೇವರು ಕೋಲನ್ನು ಅವನು ಚಾಚಿದನು ಯಾವಾಗಲೂ ಅದು ಮಾಡಿತು.

ಯೆಹೋಶುವ ಮತ್ತು ಸೂರ್ಯನು ಹಾಗೆಯೇ ನಿಂತದ್ದು

ಅದ್ಭುತ ಕಾರ್ಯಗಳು ಪೂರ್ವನಿದರ್ಶನವನ್ನು ಹೊಂದಿರುವುದಿಲ್ಲ. ಇದನ್ನು ಹಿಂದೆಂದೂ ಮಾಡಿರಲಿಲ್ಲ. ಮೋಶೆಯ ಮೂಲಕವಾಗಿಯು ಇದು ನಡೆದಿರಲಿಲ್ಲ. ಮತ್ತು ಆದಾಗ್ಯೂ ಆ ಒಂದು ದಿನದಲ್ಲಿ ಯೆಹೋಶುವನ ಹೃದಯವು ಅತ್ಯದ್ಭುತಕರವಾದ ಧೈರ್ಯದಿಂದ, ತಾನು ಮಾಡಬೇಕಿದ್ದ ಕಾರ್ಯ ಮಾಡಲೂ ನಂಬಿಕೆ ಮತ್ತು ಪ್ರೋತ್ಸಾಹದಿಂದ ತುಂಬಿಸಲ್ಪಟ್ಟಿತ್ತು. “ಯೆಹೋವನು ಅಮೋರಿಯರನ್ನು ಇಸ್ರಾಯೇಲ್ಯರಿಗೆ ಒಪ್ಪಿಸಿದ ದಿನದಲ್ಲಿ ಯೆಯೋಶುವನು ಯೆಹೋವನಿಗೆ ಒಂದು ವಿಜ್ಞಾಪನೆ ಮಾಡಿದನು ಸೂರ್ಯನೇ ನೀನು ಗಿಬ್ಯೋನಿನಲ್ಲಿಯೂ ಚಂದ್ರನೇ, ನೀನು ಅಯ್ಯಾಲೋನ್ ತಗ್ಗಿನಲ್ಲಿಯೂ ನಿಲ್ಲಿರಿ! ಎಂದು ಇಸ್ರಾಯೇಲ್ಯರ ಸಮಕ್ಷಮದಲ್ಲಿ ಆಜ್ಞಾಪಿಸಲು ಇಸ್ರಾಯೇಲ್ಯರು ತಮ್ಮ ಶತ್ರುಗಳಿಗೆ ಮುಯ್ಯಿತೀರಿಸುವವರೆಗೆ ಸೂರ್ಯ ಚಂದ್ರರು ಹಾಗೆಯೇ ನಿಂತರು ಈ ಮಾತು ಯಾಷಾರ್ ಗ್ರಂಥದಲ್ಲಿ ಬರೆದದೆಯಲ್ಲಾ ಹೀಗೆ ಸೂರ್ಯನು ಮುಣುಗಲಿಕ್ಕೆ ಆತುರ ಪಡದೆ ಹೆಚ್ಚು ಕಡಿಮೆ ಒಂದು ದಿವಸ ಪೂರ್ತಿ ಆಕಾಶ ಮಧ್ಯದಲ್ಲಿಯೇ ನಿಂತನು ಯೆಹೋವನು ಈ ಪ್ರಕಾರ ಒಬ್ಬ ಮನುಷ್ಯನ ಮಾತಿಗೆ ಕಿವಿಗೊಟ್ಟ ದಿವಸವು ಅದಕ್ಕಿಂತ ಹಿಂದೆಯೂ ಮುಂದೆಯೂ ಇಲ್ಲವೇ ಇಲ್ಲ. ಯೆಹೋವನು ತಾನೇ ಇಸ್ರಾಯೇಲ್ಯರಿಗೋಸ್ಕರ ಯುದ್ಧಮಾಡುತ್ತಾ ಇದ್ದನು” . (ಯೆಹೋಶುವ 10:12-14)

ಸತ್ಯವೇದದ ಉದಾಹರಣೆಗಳು: ಹೊಸ ಒಡಂಬಡಿಕೆ

ಹೊಸ ಒಡಬಂಡಿಕೆಯಲ್ಲಿ ಅನೇಕ ದಾಖಲಿತ ನಿದರ್ಶನಗಳನ್ನು ಕರ್ತನಾದ ಯೇಸುವಿನ ಸೇವೆ ಮತ್ತು ಶಿಷ್ಯರುಗಳ ಮೂಲಕವಾಗಿ ಸತ್ತವರು ಎಂಬಿಸಲ್ಪಟ್ಟಿದ್ದು, ಕುಂಟನು ಮತ್ತು ಅಂಗವಿಕಲರು ಸಂಪೂರ್ಣವಾಗಿ ಮಾಡಲ್ಪಟ್ಟಿದ್ದು ಮತ್ತು ಅದ್ಭುತ ಕಾರ್ಯಗಳನ್ನು ನೋಡುತ್ತೇವೆ ಈ ಎಲ್ಲಾ ನಿದರ್ಶನಗಳಲ್ಲಿ, ಸೇವೆ ಸಲ್ಲಿಸುತ್ತಿದ್ದವರ ಹೃದಯದಲ್ಲಿ ಅದ್ಭುತಕಾರ್ಯ ಮತ್ತು ಸ್ವಸ್ತತೆಯ ಫಲಿತಾಂಶ ನೀಡುವ ಅಪ್ರಾಕೃತ ನಂಬಿಕೆಯು ಒಳ-ಸೇರಲ್ಪಟ್ಟಿತ್ತು ಎಂಬುದಾಗಿ ಊಹಿಸಿಕೊಳ್ಳುವುದು ಸುರಕ್ಷಿತವಾಗಿದೆ.

ಕಾರ್ಯಚರಣೆಗಳು

ನಂಬಿಕೆಯ ವರವು ಒಂದು ಕೊಡಲ್ಪಟ್ಟ ಸಮಯದಲ್ಲಿ ನಮ್ಮ ಹೃದಯಗಳಿಗೆ ಅಪ್ರಾಕೃತ ನಂಬಿಕೆಯ ಒಳ-ಸುರಿಯುವಿಕೆಯಾಗಿದೆ. ನಂಬಿಕೆಯ ವರವು ಸಾಮಾನ್ಯವಾಗ ಒಳಹರಿಯುತ್ತದೆ ಮತ್ತು ಸ್ವಸ್ಥತೆಗಳ ವರಗಳು ಮತ್ತು ಅದ್ಭುತ ಕಾರ್ಯಗಳನ್ನು ಮಾಡುವ ವರಗಳ ಜೊತೆಗೆ ಕಾರ್ಯನಡೆಸುತ್ತವೆ. ನಾವು ಆಗಾಗ್ಗೆ ಹೋಗದಿರುವಂತಹ ಕ್ಷೇತ್ರಗಳಿಗೆ ನಾವು ಹೋಗಲು ಕಾರಣವಾಗುವ ಇತರೆ ವರಗಳೊಡನೆ ನಂಬಿಕೆಯ ವರವು ಒಳಹರಿಯಲ್ಪಡುತ್ತದೆ.

ಪವಿತ್ರಾತ್ಮನು ಹೇಗೆ ನಂಬಿಕೆಯ ವರ ನೀಡುತ್ತಾರೆ

ನಂಬಿಕೆಯ ವರ ಮತ್ತು ಇತರ ಪ್ರಕಟಿಸುವ ವರಗಳು

ನಾವೆಲ್ಲರೂ ಪ್ರವಾದಿಸುತ್ತೇವೆ ಮತ್ತು ನಮ್ಮ ನಂಬಿಕೆಗೆ ಅನುಗುಣವಾಗಿ (ರೋಮಾಪುರದವರಿಗೆ 12:6) ಪ್ರಕಟಿಸುವ ವರಗಳಲ್ಲಿ (ಜ್ಞಾನದ ವಾಕ್ಯ, ವಿವೇಕದ ವಾಕ್ಯ, ಪ್ರವಾದನೆ, ಆತ್ಮಗಳ ವಿವೇಚನೆಯ) ಚಲಿಸುತ್ತೇವೆ. ಆದ್ದರಿಂದ ನಾವು ಒಂದು ನಿರ್ದಿಷ್ಟ ಮಟ್ಟದ ಪ್ರಕಟಿಸುವಿಕೆಯ ವಿವರಗಳಲ್ಲಿ ಕಾರ್ಯನಿರ್ವಹಿಸಲು ಆರಾಮದಾಯಕವಾಗಿದ್ದೇವೆ. ಆದಾಗ್ಯೂ, ಈ ಪ್ರಕಟಿಸುವ ವರಗಳೊಡನೆ ನಂಬಿಕೆಯ ವರದ ಜೊತೆಗೂಡಿ ಕಾರ್ಯನಿರ್ವಹಿಸುವಾಗ, ಒಂದು ಉನ್ನತ ಮಟ್ಟದ ವಿವರಗಳಲ್ಲಿ ಸೇವೆ ಸಲ್ಲಿಸುವ ಒಂದು ಸಂಪೂರ್ಣ ನೂತನ ಮಟ್ಟ ನಾವು ಸಾಮಾನ್ಯವಾಗಿ ಒಗ್ಗಿಕೊಂಡಿರುವುದಕ್ಕಿಂತ ನಿಖರತೆ ಮತ್ತು ನಿಶ್ಚಿತತೆಗಳಿಗೆ ಚಲಿಸುತ್ತೇವೆ. ಪ್ರಕಟಿಸುವ ವರಗಳ ಕಾರ್ಯಾಚರಣೆಯಲ್ಲಿ ಹೊಸ ಕ್ಷೇತ್ರಗಳಿಗೆ ನಮ್ಮನ್ನು ತೆಗೆದುಕೊಡಲು ಪವಿತ್ರಾತ್ಮನಿಗೆ ನಾವು ಅನುಮತಿಸುತ್ತೇವೆ.

ನಂಬಿಕೆಯ ವರ ಮತ್ತು ಸ್ವಸ್ಥತೆಗಳ ವರಗಳು

ಸ್ವಸ್ಥತೆಯ ಸೇವೆ ಮಾಡಲು ಅನೇಕ ಮಾರ್ಗಗಳಿವೆ ಮತ್ತು ತುಂಬಾ ಆಗಾಗ್ಗೆ ದೇವರ ವಾಕ್ಯದಲ್ಲಿ ನಂಬಿಕೆಯ ಮೂಲಕ ಮಾಡುತ್ತೇವೆ. ಆದಾಗ್ಯೂ ಅತ್ಯದ್ಭುತಕರ ನಂಬಿಕೆ ವರವು ನಮ್ಮ ಹೃದಯ ತುಂಬಿದಾಗ, ಆ ನಿರ್ದಿಷ್ಟ ಕ್ಷಣದಲ್ಲಿ ಒಂದು ನಿರ್ದಿಷ್ಟ ಸ್ವಸ್ಥತೆಯು ಜರುಗಲು ನಾವು ಮಾತನಾಡುತ್ತೇವೆ. ಮತ್ತು ಕೆಲಸವನ್ನು ಸಾಮಾನ್ಯವಾಗಿ ಒಗ್ಗಿಕೊಂಡಿರುವುದಕ್ಕಿಂತ ಮಿಗಿಲಾಗಿ ಧೈರ್ಯದಿಂದ ಕಾರ್ಯ ಮಾಡುತ್ತೇವೆ.

ನಂಬಿಕೆಯ ವರ ಮತ್ತು ಅದ್ಭುತ ಕಾರ್ಯಗಳನ್ನು ಮಾಡುವುದು

ವಿಶ್ವಾಸಿಗಳಾಗಿ, ನಾವೆಲ್ಲರೂ ಅಧಿಕಾರ ಅಭ್ಯಾಸಿಸಬಹುದು ಮತ್ತು ಆತನ ವಾಗ್ದಾನಗಳ ಆಧಾರದ ಮೇಲೆ ಮತ್ತು ದೇವರ ವಾಕ್ಯದಲ್ಲಿನ ನಂಬಿಕೆಯನ್ನು ಉಪಯೋಗಿಸುವುದರಿಂದ ಜೀವಿತದ ಪರಿಸ್ಥಿತಿಗಳ ಮೇಲೆ ದೊರೆತನ ಮಾಡಬಹುದು ಅಂತಹ ವಿಧಾನಗಳಲ್ಲಿ ನಮ್ಮ ನಂಬಿಕೆಗೆ ಪ್ರತಿಕ್ರಿಯೆಯಲ್ಲಿ ದೇವರು ಕಾರ್ಯಮಾಡುತ್ತಾನೆ. ನಂಬಿಕೆಯ ವರವು, ಅದ್ಭುತಗಳನ್ನು ಮಾಡುವ ವರದೊಡನೆ ಒಳಸೇರಿ-ಹರಿಯುವುದರಿಂದ ಸಾಮಾನ್ಯ ಸಂದರ್ಭಗಳಲ್ಲಿ ಪರಿಗಣಿಸಲು ನಾವು ಧೈರ್ಯ ಮಾಡದ ವಿಷಯಗಳನ್ನು ಮಾತನಾಡಲು ಮತ್ತು ಘೋಷಿಸಲು ಕಾರಣವಾಗುತ್ತದೆ. ದೇವರ ಬಲವು ಪ್ರದರ್ಶಿಸಲ್ಪಡುತ್ತದೆ ಮತ್ತು ಅಸಾಮಾನ್ಯ ಅದ್ಭುತಗಳು ಜರುಗುತ್ತವೆ.

ನಂಬಿಕೆಯ ವರವನ್ನು ಹೇಗೆ ಬಿಡುಗಡೆಗೊಳಿಸುವುದು

ಧರ್ಮಗ್ರಂಥದಲ್ಲಿ ದಾಖಲಿಸಲ್ಪಟ್ಟಂತಹ ಅದ್ಭುತಗಳನ್ನು ನಾವು ನೋಡುವಾಗ, ಜನರು ಧೈರ್ಯವಾಗಿ ಮಾತನಾಡಿದರು ಮತ್ತು ಅವರ ಹೃದಯಗಳಿಗೆ ನೆನೆಹಾಕಲ್ಪಟ್ಟಂತಹ ನಂಬಿಕೆಯ ಅನುಗುಣವಾಗಿ ಧೈರ್ಯವಾಗಿ ಕಾರ್ಯ ಮಾಡಿದರು. ಆದ್ದರಿಂದ ನಂಬಿಕೆಯ ವರವು ಬಿಡುಗಡೆಗೊಂಡಿರುವುದನ್ನು ನೀವು ಗುರ್ತಿಸಿದಾಗ, ಅತ್ಯದ್ಭುತಕರ ನಂಬಿಕೆಯು ನಿಮ್ಮ ಹೃದಯ ತುಂಬಿದಾಗ, ದೇವರು ಪ್ರಕಟಿಸುತ್ತಿರುವುದನ್ನು ಧೈರ್ಯವಾಗಿ ಮಾತನಾಡಿರಿ ಮತ್ತು ಘೋಷಿಸಿರಿ. ಇದು ನಂಬಿಕೆಯ ವರವು ಬಿಡುಗಡೆಗೊಳ್ಳಲು ಕಾರಣವಾಗುತ್ತದೆ ಮತ್ತು ದೇವರ ಕಾರ್ಯವು ಜರುಗುತ್ತದೆ. ಯೇಸುವಿಗೆ ಮಹಿಮೆ ಉಂಟಾಗುತ್ತದೆ!

16. ಆತ್ಮನ ವರಗಳಲ್ಲಿ ಅಭಿವೃದ್ಧಿ ಹೊಂದುವುದು

ಈ ಅಧ್ಯಾಯದಲ್ಲಿ, ಆತ್ಮನ ವರಗಳಲ್ಲಿ ನಮ್ಮನ್ನು ಅಭಿವೃದ್ಧಿಗೊಳಿಸಲು ಸಹಾಯ ಮಾಡುವ , ಸ್ಥಿರವಾಗಿ ನಾವು ಚಲಾಯಿಸುವ ಕೆಲವು ಪ್ರಾಯೋಗಿಕ ಹೆಜ್ಜೆಗಳನ್ನು ಚರ್ಚಿಸೋಣ.

ಯಾವಾಗಲೂ ಪ್ರೀತಿಯಿಂದ ಪ್ರೇರಿತಗೊಂಡಿರಿ

1 ಕೊರಿಂಥದವರಿಗೆ 12:31
ಇವುಗಳಲ್ಲಿ ಶ್ರೇಷ್ಠವರಗಳನ್ನು ಆಸಕ್ತಿಯಿಂದ ಅಪೇಕ್ಷಿಸಿರಿ. ಇನ್ನೂ ಉತ್ಕೃಷ್ಟವಾದ ಮಾರ್ಗವನ್ನು ನಿಮಗೆ ತೋರಿಸುತ್ತೇನೆ.

1 ಕೊರಿಂಥದವರಿಗೆ 14:1
ಪ್ರೀತಿಯನ್ನು ಅಭ್ಯಾಸ ಮಾಡಿಕೊಳ್ಳಿರಿ ಆದರೂ ಪವಿತ್ರಾತ್ಮನಿಂದುಂಟಾಗುವ ವರಗಳನ್ನು ಅವುಗಳೊಳಗೆ ವಿಶೇಷವಾಗಿ ಪ್ರವಾದಿಸುವ ವರವನ್ನೇ ಆಸಕ್ತಿಯಿಂದ ಅಪೇಕ್ಷಿಸಿರಿ.

ಜನರಿಗಾಗಿ ಇರುವ ಪ್ರೀತಿಯಿಂದ ಮತ್ತು ದೇವರಿಗಾಗಿರುವ ಪ್ರೀತಿಯಿಂದ ಎಲ್ಲವನ್ನೂ ಮಾಡಿರಿ. ಪ್ರೀತಿಯಲ್ಲಿ ನಡೆಯಿರಿ, ಆತ್ಮೀಕ ವರಗಳನ್ನು ಅಪೇಕ್ಷಿಸಿರಿ, ನಂಬಿಕೆಯಲ್ಲಿ ಹೆಜ್ಜೆ ಇಡಿರಿ.

ತಪ್ಪು ಪ್ರೇರಣೆಗಳಿಂದ : ಉದಾಹರಣಗೆ ಗುರುತಿಸುವಿಕೆ ಅಗತ್ಯಕ್ಕಾಗಿ, ಸ್ವಯಂ ದೃಢೀಕರಣ ಅಗತ್ಯಕ್ಕಾಗಿ, ಗರ್ವ, ಇತರರೊಂದಿಗೆ ಸ್ಪರ್ಧೆ ಇತ್ಯಾದಿಗಳಿಂದ ಆತ್ಮನ ವರಗಳಲ್ಲಿ ಹರಿಯುವುದನ್ನು ಪ್ರಯತ್ನಿಸಬೇಡಿರಿ.

ಆತ್ಮನ ವರಗಳನ್ನು ಆಸಕ್ತಿಯಿಂದ ಅಪೇಕ್ಷಿಸಿರಿ

1 ಕೊರಿಂಥದವರಿಗೆ 12:31
ಇವುಗಳಲ್ಲಿ ಶ್ರೇಷ್ಠವರಗಳನ್ನು ಆಸಕ್ತಿಯಿಂದ ಅಪೇಕ್ಷಿಸಿರಿ. ಇನ್ನೂ ಉತ್ಕೃಷ್ಟವಾದ ಮಾರ್ಗವನ್ನು ನಿಮಗೆ ತೋರಿಸುತ್ತೇನೆ.

1 ಕೊರಿಂಥದವರಿಗೆ 14:1,12,39,40
1 ಪ್ರೀತಿಯನ್ನು ಅಭ್ಯಾಸ ಮಾಡಿಕೊಳ್ಳಿರಿ ಆದರೂ ಪವಿತ್ರಾತ್ಮನಿಂದುಂಟಾಗುವ ವರಗಳನ್ನು ಅವುಗಳೊಳಗೆ ವಿಶೇಷವಾಗಿ ಪ್ರವಾದಿಸುವ ವರವನ್ನೇ ಆಸಕ್ತಿಯಿಂದ ಅಪೇಕ್ಷಿಸಿರಿ.
12 ಹಾಗೆಯೇ ನೀವೂ ಆತ್ಮ ಪ್ರೇರಿತವಾದ ನುಡಿಗಳನ್ನಾಡುವದಕ್ಕೆ ಅಪೇಕ್ಷಿಸುವವರಾಗಿರುವದರಿಂದ ಸಭೆಗೆ ಭಕ್ತಿವೃದ್ಧಿ ಉಂಟಾಗುವ ಹಾಗೆ ಅದಕ್ಕಿಂತಲೂ ಹೆಚ್ಚಾದದ್ದನ್ನು ಮಾಡುವದಕ್ಕೆ ಪ್ರಯತ್ನಿಸಿರಿ.
39 ಆದಕಾರಣ ನನ್ನ ಸಹೋದರರೇ ಪ್ರವಾದಿಸುವದಕ್ಕೆ ಆಸಕ್ತಿಯಿಂದ ಅಪೇಕ್ಷಿಸಿರಿ ಮತ್ತು ವಾಣಿಯನ್ನಾಡುವದಕ್ಕೆ ಬೇಡವೆನ್ನಬಾರದು
40 ಆದರೆ ಎಲ್ಲವೂ ಮರ್ಯಾದೆಯಿಂದಲೂ ಕ್ರಮದಿಂದಲೂ ನಡೆಯಲಿ.

ಪ್ರತಿಯೊಬ್ಬ ವಿಶ್ವಾಸಿಯು ಆತ್ಮನ ವರಗಳನ್ನು ತೋರ್ಪಡಿಸಲು ದೇವರು ಅಪೇಕ್ಷಿಸುತ್ತಾನೆ. ಪ್ರತಿದಿನದ ಜೀವಿತದಲ್ಲಿ ಆತ್ಮನ ವರಗಳನ್ನು ಅಪೇಕ್ಷಿಸಿರಿ. ಆತ್ಮನ ವರಗಳು ಯಾವುದೇ ಸಮಯದಲ್ಲಿ ಎಲ್ಲಿಯಾದರೂ ತೋರ್ಪಡಿಸಲ್ಪಡುವವು ಎಂಬುದಾಗಿ ನೆನಪಿನಲ್ಲಿಟ್ಟುಕೊಳ್ಳಿರಿ: ನಿಮ್ಮ ಮನೆಯಲ್ಲಿ ನಿಮ್ಮ ಶಾಲೆ/ಕಾಲೇಜು/ಕೆಲಸದಸ್ಥಳ, ನೀವು ಜನರಿಗೆ ಸೇವೆ ಮಾಡುವ ಯಾವುದೇ ಸಮಯವಿರಬಹುದು. ಆತ್ಮನ ತೋರ್ಪಡಿಸುವಿಕೆಗಳನ್ನು ಅಪೇಕ್ಷಿಸಿರಿ. ಎಲ್ಲಾ ವರಗಳನ್ನು ಬಿಡುಗಡೆಗೊಳಿಸಲು ಪವಿತ್ರಾತ್ಮನನ್ನು ಕೇಳಿರಿ ಮತ್ತು ಪ್ರಾರ್ಥಿಸಿರಿ ನಿರ್ದಿಷ್ಟ ಅಗತ್ಯತೆಗಳನ್ನು ಪೂರೈಸಲು ನಿರ್ದಿಷ್ಟ ವರಗಳು ಅಗತ್ಯವಾಗಿವೆ ಎಂದು ಅನ್ನಿಸಿದರೆ ಆ ಮೇಲೆ ಆತ್ಮನ ಅಂತಹ ವಿಶೇಷವರಗಳನ್ನು ಅಪೇಕ್ಷಿಸಿರಿ.

ನಿಮ್ಮಲ್ಲಿರುವ ದೇವರ ವರಗಳನ್ನು ಪ್ರಚೋದಿಸಿರಿ

1 ತಿಮೊಥೆಯನಿಗೆ 4:14
ನಿನ್ನಲ್ಲಿರುವ ವರವನ್ನು ಅಲಕ್ಷ್ಯಮಾಡಬೇಡ ಸಭೆಯ ಹಿರಿಯರು ಪ್ರವಾದನೆಯ ಸಹಿತವಾಗಿ ನಿನ್ನ ಮೇಲೆ ಹಸ್ತಗಳನ್ನಿಟ್ಟಾಗ ಅದು ನಿನಗೆ ಕೊಡಲ್ಪಟ್ಟಿತಲ್ಲಾ.

2 ತಿಮೊಥೆಯನಿಗೆ 1:6-7
6 ಆದಕಾರಣ ನಾನು ನಿನ್ನ ತಲೆಯ ಮೇಲೆ ಹಸ್ತವನ್ನಿಟ್ಟಿದ್ದರ ಮೂಲಕ ನಿನಗೆ ದೊರಕಿದ ದೇವರ ಕೃಪಾವರವು ಪ್ರಜ್ವಲಿಸುವಂತೆ ಮಾಡಬೇಕೆಂದು ನಿನಗೆ ಜ್ಞಾಪಕಕೊಡುತ್ತೇನೆ.
7 ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ.

ಸೋಮಾರಿತನ, ಭಯ/ಅನುಮಾನ, ನಿರ್ಲಕ್ಷ್ಯ ಇತ್ಯಾಧಿಗಳ ಕಾರಣದಿಂದ ವರಗಳ ನಿಷ್ಕ್ರಿಯವಾಗುತ್ತವೆ. ಅನ್ಯಭಾಷೆಯಲ್ಲಿ ಪ್ರಾರ್ಥಿಸುವುದರಿಂದ ದೇವರ ವರಗಳನ್ನು ಪ್ರಚೋದಿಸಿರಿ. ನಿಮ್ಮ ಜೀವಿತದ ಮೂಲಕ ವರಗಳನ್ನು ಪ್ರದರ್ಶಿಸಲು ದೇವರನ್ನು ಕೇಳುವುದರಿಂದ ವರಗಳನ್ನು ಪ್ರಚೋದಿಸಿರಿ. ನಿಮ್ಮ ಜೀವಿತದ ಮೂಲಕ ವರಗಳನ್ನು ಪ್ರದರ್ಶಿಸಲು ದೇವರನ್ನು ಕೇಳುವುದರಿಂದ ವರಗಳನ್ನು ಪ್ರಚೋದಿಸಿರಿ. ಜನರ ಅಗತ್ಯತೆಗಳನ್ನು ಪೂರೈಸಲು ನಿಮಗೆ ಆತ್ಮನ ವರಗಳ ಅಗತ್ಯ ವಿರುವ ಪರಿಸ್ಥಿತಿಗಳಿಗೆ ನಿಮ್ಮನ್ನು ಇರಿಸಿಕೊಂಡು ಒಂದು ಬೇಡಿಕೆ ಮಾಡುವುದರಿಂದ ವರಗಳನ್ನು ಪ್ರಚೋದಿಸಿರಿ. ಎಲ್ಲಾ ಸಮಯದಲ್ಲಿ ನಿಮ್ಮ ಆತ್ಮೀಕ ಜೀವಿತದಲ್ಲಿ ಬಲವಾಗಿ ಇರ್ರಿ. ಆತನ ವಾಕ್ಯದಲ್ಲಿ ಪ್ರಾರ್ಥನೆ ಮತ್ತು ವೈಯಕ್ತಿಕ ವಿಧೇಯತೆಯಲ್ಲಿರುವ ಮೂಲಕ ದೇವರೊಡನೆ ನಿಕಟತೆ ಮತ್ತು ಒಂದು ಸ್ಥಿರವಾದ ಅನ್ಯೋನ್ಯತೆಯ ಜೀವಿತವನ್ನು ಪಾಲಿಸುವುದರಿಂದ ನಾವು ಇದನ್ನು ಮಾಡಬಹುದು.

ಅದರೊಳಗೆ ಇರಿ

ಗಲಾತ್ಯದವರಿಗೆ 5:25
ನಾವು ಆತ್ಮನಿಂದ ಜೀವಿಸುತ್ತಿರಲಾಗಿ ಆತ್ಮನನ್ನನುಸರಿಸಿ ನಡೆಯೋಣ

ಆತ್ಮನಲ್ಲಿ ನಡೆಯುವುದು ಆತ್ಮನೊಡನೆ ಹೆಜ್ಜೆಯಲ್ಲಿ ನಡೆಯುವುದಾಗಿದೆ. ಯಾವಾಗಲೂ ಆತ್ಮನಿಗೆ ಒಳಗಾದವರಾಗಿರುವ ರೀತಿಯಲ್ಲಿ ನಡೆಯಿರಿ ಎಚ್ಚರಿಕೆಯಾಗಿರಿ, ಸ್ವರವಾಗಿರಿ ಮತ್ತು ಪವಿತ್ರಾತ್ಮನಿಗೆ ಕೇಳಿಸಿಕೊಳ್ಳುವವರಾಗಿರಿ. ಆತ್ಮನು ಮಾತನಾಡಲು, ನಿಮ್ಮ ಮೇಲೆ ಚಲಿಸಲು, ನಿಮ್ಮನ್ನು ಮುನ್ನಡೆಸಲು, ನಿಮ್ಮನ್ನು ಮಾರ್ಗದರ್ಶಿಸಲು ನಿರೀಕ್ಷಿಸಿರಿ. ಸ್ಥಿರವಾದ ಅನ್ಯೋನ್ಯತೆಯನ್ನು ಪವಿತ್ರಾತ್ಮನೊಡನೆ ಪಾಲಿಸಿರಿ. ಅದೈವಿಕತೆ ಮತ್ತು ಪಾಪದಿಂದ ದೂರವಾಗಿರಿ.

ಶಾಂತವಾಗಿರಿ ಮತ್ತು ವಿಶ್ರಾಂತವಾಗಿರಿ

ಯೆಶಾಯ 11:2
ಆ ಅಂಕುರದ ಮೇಲೆ ಜ್ಞಾನ ವಿವೇಕದಾಯಕ ಆತ್ಮ, ಆಲೋಚನ ಪರಾಕ್ರಮಗಳನ್ನು ಹುಟ್ಟಿಸುವ ಆತ್ಮ, ತಿಳುವಳಿಕೆಯನ್ನೂ ಯೆಹೋವನ ಭಯವನ್ನೂ ಉಂಟುಮಾಡುವ ಆತ್ಮ ಅಂತು ಯೆಹೋವನ ಆತ್ಮವೇ ನೆಲೆಗೊಂಡಿರುವುದು.

ಅರಣ್ಯಕಾಂಡ 11:25-26
25 ಯೆಹೋವನು ಆ ಮೇಘದಲ್ಲಿ ಇಳಿದು ಬಂದು ಅವನ ಸಂಗಡ ಮಾತಾಡಿ ಅವನಲ್ಲಿದ್ದ ಆತ್ಮೀಯ ವರಗಳಲ್ಲಿ ಆ ಎಪ್ಪತ್ತು ಮಂದಿ ಹಿರಿಯರಿಗೂ ಪಾಲುಕೊಟ್ಟನು. ಆ ವರಗಳು ಅವರಿಗೆ ದೊರಕಿದಾಗ ಅವರು ಪರವಶರಾಗಿ ಪ್ರವಾದಿಸಿದರು ಆ ಮೇಲೆ ಅವರು ತಿರಿಗಿ ಪ್ರವಾದಿಸಲಿಲ್ಲ.
26 ಆದರೆ ಎಲ್ದಾದ್, ಮೇದಾದ್ ಎಂಬವರಿಬ್ಬರು ಪಾಳೆಯದೊಳಗೆ ನಿಂತಿದ್ದರು. ಅವರ ಹೆಸರುಗಳು ಬರೆಯಲ್ಪಟ್ಟಿದ್ದಾಗ್ಯೂ ಅವರು ದೇವದರ್ಶನದ ಗುಡಾರಕ್ಕೆ ಹೊರಟು ಹೋಗಲಿಲ್ಲ. ಆ ಆತ್ಮೀಯ ವರಗಳು ಅವರಿಗೂ ದೊರೆತದರಿಂದ ಅವರ ಪಾಳೆಯದೊಳಗೆ ಪರವಶರಾಗಿ ಪ್ರವಾದಿಸಿದರು.

ವಿಶ್ರಾಂತಿ ಎಂಬ ಪದವು ವಿಶ್ರಾಂತಿಪಡೆ ಎಂಬುದು ಇಬ್ರಿಯ ಭಾಷೆಯಲ್ಲಿ 'ನುವಾಚ್' ಇದರ ಅರ್ಥವು ವಿಶ್ರಾಂತಿ, ಉಳಿಯಲು, ಶಾಂತವಾಗಿರಲು, ನೆಲೆಸಲು, ವಾಸಿಸಲು ಎಂಬುದಾಗಿದೆ. ಜನರ ಮೇಲೆ ಆತ್ಮನು ಚಲಿಸುವುದನ್ನು ವರ್ಣಿಸಲು ಉಪಯೋಗಿಸಿರುವ ಒಂದು ಪದವು 'ವಿಶ್ರಾಂತಿ' ಯಾಗಿದೆ. ನಮ್ಮ ಮೇಲೆ ಪವಿತ್ರಾತ್ಮನು ವಿಶ್ರಮಿಸಲು ಪ್ರಾಯೋಗಿಕವಾಗಿ ನಾವು 'ವಿಶ್ರಾಂತಿಯಿಂದ' ಶಾಂತವಾದ ಸ್ಥಿತಿಯಲ್ಲಿ ಮತ್ತು ನಮ್ಮ ಸುತ್ತಲೂ ಅಡಚಣೆ ಮತ್ತು ಅಧಿಕವಾದ ಶಬ್ದ ಇರುವಾಗಲೂ ದೇವರ ಮುಂದೆ ನಮ್ಮ ಆತ್ಮದಲ್ಲಿ ಶಾಂತತೆಯಲ್ಲಿರುವುದು. ಎಲ್ಲಾ ಮುಂದೆ ನಮ್ಮ ಆತ್ಮದಲ್ಲಿ ಶಾಂತತೆಯಲ್ಲಿರುವುದು. ಎಲ್ಲಾ ಅಡ್ಡಿಗಳು, ಅಡಚಣೆಗಳು ಮತ್ತು ನಿಮ್ಮನ್ನು ಅಲುಗಾಡಿಸುವ ಸಂಗತಿಗಳಿಗೆ ವಿರುದ್ಧವಾಗಿ ನಿಮ್ಮ ಮನಸ್ಸನ್ನು ಸಂರಕ್ಷಿಸಿಕೊಳ್ಳಿರಿ. ಶಾಂತತೆಯಿಂದಿರಿ ಮತ್ತು ನಿಮ್ಮ ಆತ್ಮದಲ್ಲಿ ವಿಶ್ರಾಂತಿಯಿಂದಿರಿ.

ಆತ್ಮಗಳ ಹುರಿದುಂಬಿಸುವಿಕೆ ಮೇಲೆ ಧೈರ್ಯವಾಗಿ ಹೆಜ್ಜೆ ಹಾಕಿರಿ

ಅಪೊಸ್ತಲರ ಕೃತ್ಯಗಳು 11:12
ದೇವರಾತ್ಮನು ನೀನು ಏನೂ ಭೇದ ಮಾಡದೆ ಅವರ ಜೊತೆಯಲ್ಲಿ ಹೋಗು ಎಂದು ನನಗೆ ಹೇಳಿದನು ಈ ಆರು ಮಂದಿ ಸಹೋದರರು ಸಹ ನನ್ನ ಸಂಗಡ ಬಂದರು.

ನಿಮ್ಮ ಆತ್ಮದ ಇಂದ್ರಿಯಗಳ ಮೂಲಕ ಮತ್ತು ನಿಮಗೆ ಇತರೆ ಮಾರ್ಗಗಳಲ್ಲಿ ಆತನು ಮಾತನಾಡುತ್ತಿರುವಾಗ ಅದನ್ನು ಎತ್ತಿಕೊಳ್ಳಿರಿ. ಆತ್ಮನೊಡನೆ ಅನ್ಯೋನ್ಯವಾಗಿರಿ ಮತ್ತು ನೀವು ಮಾಡಬೇಕೆಂದು ಆತನು ಅಪೇಕ್ಷಿಸುವುದನ್ನು ಗುರುತಿಸಿರಿ. ಆ ಮೇಲೆ ಪವಿತ್ರಾತ್ಮನು ನೀವು ಮಾಡಬೇಕಾದ ಕಾರ್ಯದ ಕಡೆಗೆ ನಡೆಸುತ್ತಿರುವಾಗ ಶರಣಾಗತರಾಗಿರಿ. ಆತನ ಸಲಹೆಯಂತೆ ಕಾರ್ಯ ಮಾಡಿರಿ ಅಥವಾ ಮಾತನಾಡಿರಿ. ವಾಕ್ಯವನ್ನು ಬಿಡುಗಡೆ ಮಾಡಿರಿ ವ್ಯಕ್ತಿಗಳಿಗೆ ಸೇವೆ ಮಾಡಿರಿ. ಮೊದಲ ಕೆಲವು ಸಲಹೆಗಳ ಮೇಲೆ ಹೆಜ್ಜೆಯನ್ನು ಸಾಮಾನ್ಯವಾಗಿ ಇಡುವಾಗ ಮತ್ತು ನೀವು ಸೇವೆ ಮಾಡುವಾಗ, ಪವಿತ್ರಾತ್ಮ ನಿಮಗೆ ಅಧಿಕವಾದ ಮಾರ್ಗದರ್ಶನ ನೀಡುತ್ತಾನೆ ಹರಿಯುತ್ತಿರಿ ಮತ್ತು ಆತನು ಬಯಸುವಂತೆ ಆತ್ಮನ ವರಗಳನ್ನು ಬಿಡುಗಡೆ ಮಾಡಿ.

ಆತನು ನಮ್ಮ ಮೇಲೆ ಚಲಿಸುವಾಗ ನಾವು ಪ್ರತಿಕ್ರಿಯಿಸಬೇಕು: ಕಾರ್ಯಮಾಡಿ, ಮಾತನಾಡಿ, ಫಲನೀಡಿ.

ಪ್ರಕಟನೆ + ನುಡಿದ ವಾಕ್ಯ + ನಂಬಿಕೆ ಕ್ರಿಯೆ = ಆತ್ಮನ ಪ್ರದರ್ಶನ

ನೀವು ಈಗಾಗಲೇ ಹೊಂದಿರುವ ಬಲವನ್ನು ಅಭ್ಯಾಸಿಸುವುದರಿಂದ ಅಧಿಕ ಬಲವು ಬರುತ್ತದೆ.

ತೊಡಕುಗಳನ್ನು ತೆಗೆದುಕೊಳ್ಳಿರಿ

1 ಥೆಸಲೋನಿಕದವರಿಗೆ 5:19-21
19 ಪವಿತ್ರಾತ್ಮನನ್ನು ನಂದಿಸಬೇಡಿರಿ;
20 ಪ್ರವಾದನೆಗಳನ್ನು ಹೀನೈಸಬೇಡಿರಿ;
21 ಆದರೆ ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ

ಆತನು ನಮ್ಮನ್ನು ಮುನ್ನೆಡೆಸುವಾಗ ಮತ್ತು ನಮ್ಮನ್ನು ಉತ್ತೇಜಿಸುವಾಗ ಆತ್ಮನನ್ನು ನಾವು ನಿಂದಿಸಬಾರದು ಅಥವಾ ಹೀನೈಸಬಾರದು ನೀವು ಹೆಚ್ಚಾಗಿ ಹೆಜ್ಜೆಯನ್ನಿಟ್ಟು ಅಪಾಯ ಸಂಭವವನ್ನು ತೆಗೆದುಕೊಳ್ಳುವಾಗ ನೀವು ಅಧಿಕವಾಗಿ ಪವಿತ್ರಾತ್ಮನಿಗೆ ದೊರೆಯುತ್ತೀರಿ ಮತ್ತು ಅಧಿಕವಾದ ತೋರಿಬರುವಿಕೆ ನೋಡುತ್ತೀರಿ ಏನನ್ನಾದರೂ ಮಾಡಲು ಅಥವಾ ಹೇಳಲು ಪವಿತ್ರಾತ್ಮನು ಉತ್ತೇಜಿಸುವಾಗ ಅಥವಾ ಮುನ್ನೆಡೆಸುವುದನ್ನು ನೀವು ಗುರ್ತಿಸುವಾಗ “ಕಾರಣವನ್ನು ಪಕ್ಕಕ್ಕೆ ಇರಿಸಲು” ಚಿತ್ತವುಳ್ಳವರಾಗಿರಿ. ಪವಿತ್ರಾತ್ಮನು

ಹೇಳುವಂತದೆಲ್ಲವು ನಮ್ಮ ಕಾರಣಗಳಿಗೆ ಅಥವಾ ತರ್ಕಕ್ಕೆ ಹೊಂದಿಕೊಳ್ಳುವುದಿಲ್ಲ. ಇಲ್ಲಿ ನೀವು ಹೆಜ್ಜೆ ಇಡಬೇಕು ಮತ್ತು ತೊಡಕುಗಳನ್ನು ತೆಗೆದುಕೊಳ್ಳಬೇಕು.

ಅಭ್ಯಾಸಮಾಡಿ, ಅಭ್ಯಾಸಮಾಡಿ, ಅಭ್ಯಾಸಮಾಡಿ

2 ತಿಮೊಥೆಯನಿಗೆ 2:21
ಹೀಗಿರಲಾಗಿ ಒಬ್ಬನು ಹೀನ ನಡತೆಯುಳ್ಳವರ ಸಹವಾಸವನ್ನು ಬಿಟ್ಟು ಶುದ್ಧಮಾಡಿಕೊಂಡರೆ ಅವನು ಉತ್ತಮವಾಗದ ಬಳಕೆಗೆ ಯೋಗ್ಯನಾಗಿರುವನು ಅವನು ದೇವರ ಸೇವೆಗೆ ಪ್ರತಿಷ್ಠಿತನಾಗಿಯೂ ಯಜಮಾನನಿಗೆ ಉಪಯುಕ್ತನಾಗಿಯೂ ಸಕಲ ಸತ್ಕ್ರಿಯೆಗಳನ್ನು ಮಾಡುವದಕ್ಕೆ ಸಿದ್ದನಾಗಿಯೂ ಇರುವನು.

ಪಾತ್ರೆಗಳಾಗಿ, ನಾವು ಉಪಯುಕ್ತವಾಗಬೇಕು ಮತ್ತು ತಯಾರಾಗಿರಬೇಕು ಅಥವಾ ಸಿದ್ಧವಾಗಬೇಕು. ಉಪಯುಕ್ತವಾಗಿ ಮತ್ತು ಸಿದ್ಧಗೊಂಡಿರುವವರಾಗಿ ಕಂಡು ಬರುವುದರ ಭಾಗವಾಗಿ ಸಜ್ಜುಗೊಳ್ಳಬೇಕು. ಮತ್ತು ತರಬೇತಿಗೊಂಡಿರಬೇಕು ವರಗಳು ದೇವರಿಂದ ಬರುತ್ತವೆ. ಹೇಗಾದರೂ ನಾವು ತರಬೇತಿ ಮತ್ತು ಪರಿಪಕ್ವತೆ ಮತ್ತು ಪವಿತ್ರಾತ್ಮದೊಡನೆ ಒಟ್ಟಾಗಿ ಆತನ ಬಲವನ್ನು ಉತ್ತಮವಾಗಿ ಮತ್ತು ಶ್ರೇಷ್ಟವಾದ ಮಾರ್ಗದಲ್ಲಿ ತೋರ್ಪಡಿಸಲು ಕಾರ್ಯಮಾಡುವ ಸಾಮರ್ಥ್ಯ ಹೊಂದಬೇಕು. ನೀವು ತಪ್ಪುಗಳನ್ನು ಮಾಡಿದಾಗಲು, ಮುಗ್ಗರಿಸಿದರು, ಬಿಟ್ಟುಕೊಡಬೇಡಿರಿ. ಅಪೇಕ್ಷಿಸುತ್ತೀರಿ ಮತ್ತು ಹೆಜ್ಜೆಯನ್ನಿಡುವುದನ್ನು ಮುಂದುವರೆಸಿ – ಬೇರೆ ರೀತಿಯಲ್ಲಿ ಹೇಳುವುದಾದರೆ ಅಭ್ಯಾಸವನ್ನು ಮಾಡುತ್ತೀರಿ.

ಪ್ರತಿಯೊಂದು ಅನುಭವದಿಂದ ಕಲಿಯಿರಿ

ಆತ್ಮನ ವರಗಳನ್ನು ಪ್ರದರ್ಶಿಸುವುದರಲ್ಲಿ ನಿಮ್ಮ ಅನುಭವಗಳ ಮೇಲೆ ಪ್ರತಿಬಿಂಬಿಸಿರಿ. ನಿಮ್ಮ ವಿಜಯಗಳು ಮತ್ತು ಸೋಲುಗಳಿಂದ ಎರಡರಲ್ಲೂ ಕಲಿಯಿರಿ. ನಿಮ್ಮ ವಿಜಯಗಳ ಮೇಲೆ ಕಟ್ಟುತ್ತೀರಿ ಮತ್ತು ಹಿಂದಿನ ತಪ್ಪುಗಳನ್ನು ಮಾಡುವುದರಿಂದ ದೂರವಾಗಿರಿ.

ನಂಬಿಕೆಯಲ್ಲಿ ಹೆಚ್ಚಳ

ರೋಮಾಪುರದವರಿಗೆ 12:6
ದೇವರು ನಮಗೆ ಕೃಪೆಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸ ವರಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ.

ಗಲಾತ್ಯದವರಿಗೆ 3:5

ದೇವರು ತನ್ನ ಆತ್ಮನನ್ನು ನಿಮಗೆ ಹೇರಳವಾಗಿ ಕೊಟ್ಟು ನಿಮ್ಮಲ್ಲಿ ಮಹತ್ಕಾರ್ಯಗಳನ್ನು ನಡಿಸುತ್ತಾ ಬಂದದ್ದು ಯಾತರಿಂದಾಯತು ?ನೀವು ನೇಮನಿಷ್ಟೆಗಳನ್ನನುಸರಿಸಿದ್ದರಿಂದಲೋ ?

ವರಗಳು ನಂಬಿಕೆಯಿಂದ ಬಿಡುಗಡೆಯಾಗುತ್ತವೆ. ದೇವರ ವಾಕ್ಯದಲ್ಲಿ ಧ್ಯಾನಿಸುವುದರಿಂದ, ಇತರ ಜನರ ಮೂಲಕವಾಗಿ ಹೇಗೆ ದೇವರು ಕಾರ್ಯ ಮಾಡುತ್ತಾನೆಂಬ ಅಧಿಕವಾದ ಕಥೆಗಳನ್ನು ಕೇಳಿಸಿಕೊಳ್ಳುವುದರಿಂದ ಮತ್ತು ಅತ್ಯದ್ಭುತರ ರೀತಿಯಲ್ಲಿ ತೋರ್ಪಡಿಸಲು ದೇವರನ್ನು ಹಿಂಬಾಲಿಸುತ್ತಿರುವ ಜನರೊಂದಿಗೆ ಸುತ್ತಲೂ ಇರುವುದರಿಂದ ನಂಬಿಕೆಯನ್ನು ನೀವು ಕಟ್ಟಿಕೊಳ್ಳಬಹುದು. ನಿಮ್ಮ ನಂಬಿಕೆಯನ್ನು ಕಟ್ಟಿಕೊಂಡವರಾಗಿರಿ ದೇವರ ವಾಕ್ಯದ ಮೇಲೆ ಆತನ ಅಭಿಷೇಕ, ಪವಿತ್ರಾತ್ಮನ ಬಲ ಮತ್ತು ಆತ್ಮನ ವರಗಳನ್ನು ಘೋಷಿಸಿರಿ ಮತ್ತು ಧ್ಯಾನಿಸಿರಿ.

ಉಪವಾಸದಿಂದ ಪ್ರಾರ್ಥಿಸಿರಿ

ನೀವು ಅಧಿಕವಾಗಿ ಪ್ರಾರ್ಥಿಸಿದರೆ ಅಧಿಕವಾಗಿ ದೇವರಿಂದ ಕೇಳುತ್ತೀರಿ ಮತ್ತು ಅಧಿಕವಾಗಿ ವಿವರಗಳನ್ನು ಕೇಳುತ್ತೀರಿ ಹೊಸ ದ್ರಾಕ್ಷಾರಸ ಹೊಂದಿರುವ ಹೊಸ ಬುದ್ದಲಿಗಳು ಉಪವಾಸ ಮತ್ತು ಪ್ರಾರ್ಥನೆಯಿಲ್ಲದೆ ಬರುವುದಿಲ್ಲ. ಅನ್ಯಭಾಷೆಯಲ್ಲಿ ಅಧಿಕವಾಗಿ ಪ್ರಾರ್ಥಿಸಿರಿ.

ಪಾಲುಕೊಡುವಿಕೆ ಪಡೆದುಕೊಳ್ಳಿ

ರೋಮಾಪುರದವರಿಗೆ 1:11
ನನ್ನ ಮುಖಾಂತರವಾಗಿ ನಿಮಗೆ ಪಾರಮಾರ್ಥಿಕ ವರವೇನಾದರೂ ದೊರಕಿ ನೀವು ದೃಢವಾಗುವದಕ್ಕೋಸ್ಕರ

1ತಿಮೊಥೆಯನಿಗೆ 4:14
ನಿನ್ನಲ್ಲಿರುವ ವರವನ್ನು ಅಲಕ್ಷ್ಯಮಾಡಬೇಡ ಸಭೆಯ ಹಿರಿಯರು ಪ್ರವಾದನೆಯ ಸಹಿತವಾಗಿ ನಿನ್ನ ಮೇಲೆ ಹಸ್ತಗಳನ್ನಿಟ್ಟಾಗ ಅದು ನಿನಗೆ ಕೊಡಲ್ಪಟ್ಟಿತಲ್ಲಾ

ದೇವರ ವರಗಳು ದೇವರಿಂದ ಬರುತ್ತವೆ. ಆತನು ಮಾತ್ರವೇ ಮೂಲವಾಗಿದ್ದಾನೆ. “ಪರಲೋಕದಿಂದ ಅನುಗ್ರಹಿಸೋಣವಾದದ್ದನ್ನೇ ಹೊರತು ಮನುಷ್ಯನು ಹೆಚ್ಚೇನು ಹೊಂದಲಾರನು” (ಯೋಹಾನ 3:27) ಆದಾಗ್ಯೂ ದೇವರು ಜನರನ್ನು ನಮ್ಮ ಜೀವಿತದಲ್ಲಿ ಅಸ್ತಿತ್ವದಲ್ಲಿರುವ ವರಗಳ ಮೇಲೆ ಅಭಿಷೇಕ ಮತ್ತು ಅಧಿಕವಾದ ಕೃಪೆಯ ಪಾಲುಕೊಡಲು ಮತ್ತು ಸಕ್ರಿಯಗೊಳಿಸಲು (ನಮ್ಮನ್ನು ಪ್ರಾರಂಭಿಸಲು) ಉಪಯೋಗಿಸುತ್ತಾನೆ. ಸಕ್ರಿಯಗೊಳಿಸುವಿಕೆ ಮತ್ತು ಪಾಲುಕೊಡುವಿಕೆಯು ನಿಮ್ಮ ಜೀವಿತದಲ್ಲಿ ಪವಿತ್ರಾತ್ಮನ ಆಳತೆಗಳು ಮತ್ತು ಶಕ್ತಿಯನ್ನು ಸೇರಿಸುತ್ತವೆ. ಇದು ಅವರು ಕೈಗಳನ್ನು ನಮ್ಮ

ಮೇಲಿಡುವುದರಿಂದ ಮತ್ತು ಪ್ರಾರ್ಥನೆ, ಅವರ ಸೇವೆಯ ಮೂಲಕ ಪಡೆದುಕೊಳ್ಳುವುದರಿಂದ (ಅವರ ಸಂದೇಶ ಕೇಳುವುದು, ಅವರ ಪುಸ್ತಕ ಓದುವುದು ಇತ್ಯಾದಿ) ಮತ್ತು ಜತೆಗಾರಿಕೆಯಿಂದ (ಅವರೊಂದಿಗೆ ನಿಕಟವಾಗಿ ಕಾರ್ಯಮಾಡುವುದು) ಇದು ಜರುಗುತ್ತದೆ.

ನಿಮ್ಮ ಕ್ರಿಯೆ ಮತ್ತು ಅಭಿಷೇಕದಲ್ಲಿ ಬೆಳೆಯಿರಿ

ಪ್ರತಿಯೊಬ್ಬ ವಿಶ್ವಾಸಿಯು ದೇವರು ಕೊಡುವಂತಹ ಕೃಪೆ ಮತ್ತು ವರಗಳಿಂದ ಜೊತೆಗೂಡುವಿಕೆಯ ಕಾರ್ಯವನ್ನು ಹೊಂದಿದ್ದಾರೆ. ವರಗಳು ಸದಸ್ಯತ್ವದ ಕ್ರಿಯೆಗಳು ಮತ್ತು ಸೇವಾ ಸ್ಥಾನಗಳಿಗೆ ಅಧಿಕಾರ ನೀಡುತ್ತವೆ. ನಿಮ್ಮ ಕ್ರಿಯೆಯಲ್ಲಿ ನೀವು ಬೆಳೆಯುವಾಗ, ನೀವು ಕೃಪೆಯನ್ನು ನೋಡುತ್ತೀರಿ ಮತ್ತು ನಿಮ್ಮ ಜೀವಿತದ ಮೇಲೆ ದೇವರ ವರವು ಸಹ ಬೆಳೆಯುವುದನ್ನು ನೋಡುತ್ತೀರಿ. ನಿಮ್ಮ ಸೇವಾ ಕಾರ್ಯಕ್ಕಾಗಿರುವ ಅಭಿಷೇಕದಲ್ಲಿನ ಹೆಚ್ಚಳವು ಆತ್ಮನ ವರಗಳ ತೋರ್ಪಡಿಸುವಿಕೆಯ ಹೆಚ್ಚಳಕ್ಕೆ ಕಾರಣವಾಗುತ್ತದೆ.

17.ವರಗಳನ್ನು ಬಿಡುಗಡೆ ಮಾಡವುದಕ್ಕಾಗಿ ಸರಿಯಾದ ಅಸ್ತಿವಾರ

ನಾವು ಅಧಿಕವಾಗಿ ಮುಂದುವರೆಯುವುದನ್ನು ಮತ್ತು ಆತನ ಆತ್ಮನ ತೋರ್ಪಡಿಸುವಿಕೆಯನ್ನು ಅಧಿಕವಾಗಿ ಹುಡುಕುವಾಗ ನಾವು ಕಾರ್ಯನಿರ್ವಹಿಸುವಂತಹದ್ದರಿಂದ ಒಂದು ಬಲಿಷ್ಟವಾದ ಅಸ್ತಿವಾರವನ್ನು ಪಾಲಿಸಲು ಕಾಯುವ ಅಭ್ಯಾಸವಿರುವವರಾಗಿರಬೇಕು. ಈ ಒಂದು ಅಧ್ಯಾಯದಲ್ಲಿ ನಾವು ಪವಿತ್ರಾತ್ಮನ ವರಗಳಲ್ಲಿ ಚಲಿಸುವಾಗ ನಾವು ಪಾಲಿಸಬೇಕಾದಂತಹ ಕೆಲವು ಪ್ರಾಮುಖ್ಯ ಮಾರ್ಗದರ್ಶನವನ್ನು ನಾವು ಪ್ರಸ್ತುತಪಡಿಸುತ್ತೇವೆ. ಸಭೆಯ ಇತಿಹಾಸದಲ್ಲಿ ಮತ್ತು ಪ್ರಸ್ತುತ ದಿನದಲ್ಲಿ ದೇವರಿಂದ ಶ್ರೇಷ್ಟವಾಗಿ ಉಪಯೋಗಿಸಲ್ಪಟ್ಟ ಪುರುಷ ಮತ್ತು ಸ್ತ್ರೀಯರ ಜೀವಿತಗಳಿಂದ ಗಮನಿಸಲ್ಪಟ್ಟಿದ್ದರಿಂದ ಸತ್ವ ಸಂಗ್ರಹಿಸಲ್ಪಟ್ಟವುಗಳು ಇವಾಗಿವೆ. ಅವರ ವಿಜಯಗಳಿಂದ ನಾವು ಕಲಿಯಬಹುದು ಮತ್ತು ಅವರು ಮಾಡಿದ ತಪ್ಪುಗಳಿಂದ ಕಲಿಯಬಹುದು. ಇವುಗಳನ್ನು ಹೃದಯಕ್ಕೆ ತೆಗೆದುಕೊಳ್ಳೋಣ.

ವಿಧಾನಗಳು ಮತ್ತು ತಂತ್ರಗಳ ಆಧಾರಿತವಲ್ಲದೇ ಕರ್ತನೊಂದಿಗಿನ ಸಂಬಂಧದಿಂದ ಕಾರ್ಯನಡೆಸುವುದು

ಯೊಹಾನ 15: 4-5
4 ನೀವು ನನ್ನಲ್ಲಿ ನೆಲೆಗೊಂಡಿರಿ; ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ.
5 ನಾನು ದ್ರಾಕ್ಷೇ ಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ

ಆತ್ಮನ ವರಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬುದರ ಬಗ್ಗೆ ಕಲಿಯುವುದು ಮತ್ತು ತರಬೇತಿ ಹೊಂದುವುದು ಒಳ್ಳೆಯದು ಆದರೆ ದೇವರ ರಾಜ್ಯದಲ್ಲಿ ಎಲ್ಲವೂ ರಾಜನೊಂದಿಗಿನ ವೈಯಕ್ತಿಕ ಸಂಬಂಧವನ್ನು ಆಧರಿಸಿದೆ ಎಂದು ನೆನಪಿಡಬೇಕು. ಸ್ಥಾಪಿಸಲ್ಪಟ್ಟವರಾಗಿರಿ ಮತ್ತು ಕರ್ತನೊಡನೆ ನಿಕಟತೆ ಮತ್ತು ನಿಮ್ಮ ವೈಯಕ್ತಿಕ ಸಂಬಂದದಲ್ಲಿ ನಿರಂತರವಾಗಿ ಬೆಳೆಯಿರಿ. ವಿಧಾನಗಳ ಮತ್ತು ಕ್ರಿಯೆಗಳಿಂದಲ್ಲದೆ ಸಂಬಂಧದಿಂದ ಕಾರ್ಯ ನಡೆಸುವವರಾಗಿರಿ.

ದೇವರಲ್ಲಿ ನಿಮ್ಮ ಗುರುತಿನಲ್ಲಿ ಸ್ಥಾಪಿಸಲ್ಪಟ್ಟವರಾಗಿರಿ

ವರಗಳಿಂದ ಜೀವಿಸಬೇಡಿರಿ ಆತ್ಮನ ವರಗಳು ನಿಮ್ಮನ್ನು ವ್ಯಾಖ್ಯಾನಿಸುವುದಿಲ್ಲ ಅಥವಾ ವಿವರಿಸುವುದಿಲ್ಲ ಜನರಿಗೆ ಸೇವೆ ಮಾಡಲು ಉಪಯೋಗಿಸುವ ಉಪಕರಣಗಳಾಗಿವೆ. ನೀವು ಹೊಂದಿ ಚಲಿಸುತ್ತಿರುವ ವರಗಳಲ್ಲಿ ಅಥವಾ ಕ್ರಿಯೆಗಳಲ್ಲಿ ನಿಮ್ಮ ಗುರುತನ್ನು ಆಧರಿಸಿಕೊಳ್ಳಬೇಡಿರಿ. ಯಾವಾಗಲೂ ನೀವು ಯಾರಿಗೆ ಸಂಬಂಧ ಪಟ್ಟವರು ಮತ್ತು ನೀವು ಕ್ರಿಸ್ತನಲ್ಲಿ ಯಾರಾಗಿದ್ದೀರೀ ಎಂಬುದರಲ್ಲಿ ದೇವರೊಡನೆ ನಿಮ್ಮ ವೈಯಕ್ತಿಕ ನಡೆಯಲ್ಲಿ ಜೀವಿಸಿರಿ. ದೇವರು ನಿಮ್ಮನ್ನು ಪ್ರೀತಿಸುತ್ತಾನೆ. ದೇವರು ನನ್ನ ಸಮೀಪದಲ್ಲಿದ್ದಾನೆ. ಎಂಬುದಾಗಿ ಭಾವಿಸಿಕೊಳ್ಳಲು ನೀವು ಆತ್ಮೀಕ ತೋರ್ಪಡಿಸುವಿಕೆಗಳನ್ನು ಹೊಂದಿರಬೇಕು ಅಂದುಕೊಂಡರೆ ಆಮೇಲೆ ನೀವು ವರಗಳ ಮೇಲೆ ನಿಮ್ಮ ಗುರುತನ್ನು ಆಧರಿಸಿಕೊಂಡಿರುತ್ತೀರಿ. ಇದು ತಪ್ಪು ಆತನ ಬರೆಯಲ್ಪಟ್ಟ ವಾಕ್ಯದಲ್ಲಿ ನೀವು ಯಾರಾಗಿದ್ದೀರಿ ಎಂದು ದೇವರು ಹೇಳುತ್ತಾನೋ ನೀವು ಅವರೇ ಅಗಿದ್ದೀರಿ.

ನಿಮ್ಮ ವರಗಳ ಕುರಿತು ಇತರೆ ಜನರು ಕೇಳಿಸಿಕೊಳ್ಳುವುದರಿಂದ ನಿಮಗೆ ಉತ್ತಮವಾಗಿ ಅನ್ನಿಸುವಂತೆ ಮಾಡಿದರೆ ಆಮೇಲೆ ನಿಮ್ಮ ವರದ ಮೇಲೆ ನಿಮ್ಮ ಗುರುತನ್ನು ಆಧರಿಸಿಕೊಳ್ಳುತ್ತಿದ್ದೀರಿ. ಇದು ಅಭದ್ರುತೆಯ ಒಂದು ಸೂಚನೆಯಾಗಿದೆ.

ತಿರಸ್ಕಾರದ ಸಮಸ್ಯೆಗಳೊಡನೆ ಹೋರಾಡುತ್ತಿರುವ ಜನರು ಸಾಮಾನ್ಯವಾಗಿ ಆತ್ಮನ ವರಗಳಲ್ಲಿ ಕಾರ್ಯ ನಡೆಸಲು ಪ್ರತಿಕ್ರಿಯೆಯಲ್ಲಿ ದೃಢೀಕರಣಕ್ಕಾಗಿ ನೋಡುತ್ತಾರೆ. ತಿರಸ್ಕಾರದಿಂದ ಸ್ವಸ್ಥತೆ ಹೊಂದುವುದು ಸರಿಯಾದ ಕಾರ್ಯವಾಗಿದೆ ಮತ್ತು ದೇವರಲ್ಲಿ ಸುರಕ್ಷತೆ ಮತ್ತು ಸಂಪೂರ್ಣತೆಯ ಸ್ಥಳದಲ್ಲಿ ಕಾರ್ಯ ನಡೆಸುವುದನ್ನು ಕಲಿಯಿರಿ.

ಮೌಲ್ಯ ಮತ್ತು ಕ್ರಿಯೆ ನಡುವಿನ ವ್ಯತ್ಯಾಸ ಅರ್ಥಮಾಡಿಕೊಳ್ಳಿರಿ. ನಿಮ್ಮ ದೇವರಲ್ಲಿನ ಮೌಲ್ಯವು ನಿಮ್ಮ ಮೂಲಕ ಕಾರ್ಯನಡಿಸುವಂತ ವರಗಳ ಮೇಲೆ ಆಧಾರಗೊಂಡಿಲ್ಲ. ನಿಮ್ಮ ಮೂಲಕವಾಗಿ ಆತ್ಮನ ವರಗಳು ವ್ಯಕ್ತಗೊಳಿಸಲ್ಪಡುವುದು ಇತರರಿಗೆ ಸೇವೆ ಮಾಡುವ ಸಹಾಯಕ್ಕಾಗಿ ಮಾತ್ರವೇ ಮತ್ತು ನಿಮ್ಮ ಮೌಲ್ಯವನ್ನು ವ್ಯಾಖ್ಯಾ ನಿಸಿಕೊಳ್ಳಬೇಡಿರಿ.

ಕ್ರಿಸ್ತನಂತೆ ಗುಣನಡತೆ ಪ್ರದರ್ಶಿಸಿರಿ

ಎಫೆಸದವರಿಗೆ 4:15
ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು

ವರಗಳನ್ನು ಫಲಗಳೊಡನೆ ಸೇವೆಮಾಡಿರಿ. ಆತ್ಮನಲ್ಲಿ ನಡೆಯುವುದು ಆತ್ಮನ ಫಲಗಳನ್ನು ನಮ್ಮ ಜೀವಿತದಲ್ಲಿ ಕೊಡುವುದನ್ನು ಖಚಿತಪಡಿಸುತ್ತದೆ. ನಾವು ಆತ್ಮನಲ್ಲಿ ನಡೆಯುವಾಗ, ಆತ್ಮನ ಫಲಗಳನ್ನು ಕೊಡುವಾಗ, ಮತ್ತು ಮಾರ್ಗದುದ್ದಕ್ಕೂ, ನಮ್ಮ ಜೀವಿತದ ಮೂಲಕ ಜನರು ಸಿದ್ದವಾಗಿ ಸ್ವೀಕರಿಸಲು ಶಕ್ತರಾಗುವಂತ ಆತ್ಮನ ವರಗಳನ್ನು ತೋರ್ಪಡಿಸಬೇಕು.

ಯೇಸುವನ್ನು ಹಿಂಬಾಲಿಸಿರಿ, ಆತ್ಮನ ವರಗಳಲ್ಲಿ ನೀವು ಹರಿಯುವಾಗ ಯೇಸುವನ್ನು ಪ್ರಕಟಿಸಿರಿ.ನಿಮ್ಮ ಹೃದಯ ಮತ್ತು ನಿಮ್ಮ ಪ್ರೇರಣೆಗಳನ್ನು ಸಂರಕ್ಷಿಸಿಕೊಳ್ಳಿರಿ. ಇದು ಯಾವಗಲೂ ಕ್ರಿಸ್ತನಿಗೆ ಮಹಿಮೆ ಸಲ್ಲಿಸಲಿ. ಮಾರ್ಗದಿಂದ ಸ್ವಯಂ ನ್ನು ತೆಗೆದುಬಿಡಿರಿ. ಇದು ನಿಮ್ಮ ಕುರಿತಾಗಿ ಅಲ್ಲ! ಇದು ದೇವರ ಕುರಿತಾಗಿದೆ ಮತ್ತು ಜನರ ಕುರಿತಾಗಿದೆ. ನಿಮ್ಮನ್ನು ಪ್ರಚಾರ ಮಾಡಲು ಆತ್ಮೀಕ ವರಗಳನ್ನು ಉಪಯೋಗಿಸಬೇಡಿರಿ. ಕಳಪೆ ಪ್ರಚಾರ, ಸ್ವಯಂ ಪ್ರಚಾರ, ಅಸೂಯೆ ಅಥವಾ ಸ್ಪರ್ಧೆಯಿಂದ ದೂರವಿರಿ. ಪ್ರೀತಿಯು ನಿಮ್ಮ ಮುಖ್ಯ ಪ್ರೇರಣೆಯಾಗಬೇಕು.

ಜನರ ಭಾವನೆಗಳ ಮೇಲೆ ಆಟವಾಡಬೇಡಿರಿ. ವಂಚಿಸುವುದು, ಸಂವೇದನಶೀಲತೆ, ಭಾವನೆಗಳನ್ನು ಹುಟ್ಟುಹಾಕುವುದು, ಸುಳ್ಳು ಹಕ್ಕುಗಳನ್ನು ಮಾಡುವುದು ಮತ್ತು ಸುಳ್ಳುವಾಗ್ದಾನಗಳನ್ನು ತಪ್ಪಿಸಿರಿ. ತಪ್ಪು ಉತ್ಪ್ರೇಕ್ಷೆಗಳನ್ನು ತಪ್ಪಿಸಿರಿ. ಒಬ್ಬರ ಸ್ವಂತ ಅತಿ ಮಹತ್ವದ- ಆತ್ಮೀಕತೆಯನ್ನು ಹೊಗಳುವ ಹೇಳಿಕೆಗಳನ್ನು ನೀಡುವುದನ್ನು ತಪ್ಪಿಸಿರಿ.

ಪ್ರಕಟನೆಯ ಮೇಲೆ ಜ್ಞಾನದ ಅತ್ಯುನ್ನತ ಮೌಲ್ಯವನ್ನು ಅರ್ಥಮಾಡಿಕೊಳ್ಳಿರಿ, ಯಾಕೆಂದರೆ ಜ್ಞಾನವಿಲ್ಲದೆ ಪ್ರಕಟನೆಯು ದುರುಪಯೋಗವಾಗಬಹುದು .

ನಿಖರವಾದ ದೈವಶಾಸ್ತ್ರವನ್ನು ಪಾಲಿಸಿರಿ. ತಿದ್ದುಪಡಿಗೆ ತೆರೆದವರಾಗಿರಿ. ಕಲ್ಲಿಸಬಲ್ಲವರಾಗಿರಿ

1ತಿಮೊಥೆಯನಿಗೆ 4:16
ನಿನ್ನ ವಿಷಯದಲ್ಲಿಯೂ ನಿನ್ನ ಉಪದೇಶದ ವಿಷಯದಲ್ಲಿಯೂ ಎಚ್ಚರಿಕೆಯಾಗಿರು ನೀನು ಈ ಕಾರ್ಯಗಳಲ್ಲಿ ನಿರತನಾಗಿರು ಹೀಗಿರುವದರಿಂದ ನಿನ್ನನ್ನೂ ನಿನ್ನ ಉಪದೇಶ ಕೇಳುವವರನ್ನು ರಕ್ಷಿಸುವಿ.

ಇಬ್ರಿಯರಿಗೆ 13:9
ನಾನಾ ವಿಧವಾದ ಅನ್ಯೋಪದೇಶಗಳ ಸೆಳವಿಗೆ ಸಿಕ್ಕಬೇಡಿರಿ. ದೇವರ ಕೃಪೆಯನ್ನು ಆತುಕೊಂಡು ಮನಸ್ಸನ್ನು ದೃಢಮಾಡಿಕೊಳ್ಳುವದು ಉತ್ತಮವೇ. ಭೋಜನ ಪದಾರ್ಥಗಳನ್ನು ವಿಶೇಷಿಸುವದರಿಂದ ಅದು ಆಗುವದಿಲ್ಲ. ಭೋಜನ ಪದಾರ್ಥಗಳನ್ನು ವಿಶೇಷಿಸಿ ನಡೆದವರು ಏನೂ ಪ್ರಯೋಜನ ಹೊಂದಲಿಲ್ಲ.

ವಿಚಿತ್ರ ಮತ್ತು ವಿವಿಧ ಸಿದ್ಧಾಂತಗಳನ್ನು ಸ್ವೀಕರಿಸುವುದು "ಕೆಟ್ಟ ಆಹಾರವನ್ನು" ತಿನ್ನುವಂತಿದೆ ಅದು ನಿಮಗೆ ಲಾಭದಾಯಕವಾಗಿರುವುದಿಲ್ಲ ಮತ್ತು ನಿಮಗೆ ಹಾನಿಯಾಗಬಹುದು.

ದೇವರ ವಾಕ್ಯದ ಸಿದ್ಧಾಂತದ ಅತ್ಯವಶ್ಯಕವಾದ್ದರಲ್ಲಿ ಮತ್ತು ಸಾರಭೂತವಾದರಲ್ಲಿಯೇ ಮತ್ತು ಕ್ರಿಸ್ತನ ಸಾರೂಪ್ಯದ ಕಡೆಗೆ ಪರಿಪಕ್ವತೆಯಲ್ಲಿ ಸಹಾಯ ಮಾಡುವ ಬೋಧನೆಗಳಲ್ಲಿ ನೆಲೆಸಿರಿ. (ಇಬ್ರಿಯರಿಗೆ 6:1-2) ಇದು ನಿಮ್ಮ ದೀರ್ಘವಾದ ಓಟದಲ್ಲಿ ಸುರಕ್ಷಿತವಾಗಿರಿಸುತ್ತದೆ. ಯೇಸುವಿನ ಮಾದರಿಯನ್ನು ಅನುಸರಿಸಿರಿ. ಆತನು ಅನುಕಂಪದೊಡನೆ ಚಲಿಸಿದನು, ಪ್ರಸಂಗಿಸಿದನು ಮತ್ತು ದೇವರ ವಾಕ್ಯವನ್ನು ಉಪದೇಶಿಸಿದನು, ರೋಗಿಗಳನ್ನು ಗುಣಪಡಿಸಿದನು, ದೆವ್ವಗಳನ್ನು ಬಿಡಿಸಿದನು ಮತ್ತು ಅದ್ಭುತಗಳನ್ನು ಮಾಡಿದನು. ದೇವರ ಅನುಕಂಪತೋರ್ಪಡಿಸಲು, ನಶಿಸಿಹೋಗುವ ಆತ್ಮಗಳನ್ನು ಗೆಲ್ಲಲು ಮತ್ತು ಶಿಷ್ಯರನ್ನಾಗಿ ಮಾಡುವ ಕ್ರಮದಲ್ಲಿ ನಾವು ಅದೇ ರೀತಿಯಲ್ಲಿ ಮಾಡಬೇಕೆಂಬುದಾಗಿ ಆತನು ಆದೇಶಿಸಿದ್ದಾನೆ. ಆದ್ದರಿಂದ ಎಲ್ಲಾ ಆತ್ಮೀಕ ತೋರ್ಪಡಿಸುವಿಕೆಗಳಲ್ಲಿ, ನಾವು ಯೇಸುವಿನ ಮಹಿಮೆ ಸಲ್ಲಿಸುವುದು ಅವಶ್ಯಕವಾಗಿದೆ, ಜನರು ರಕ್ಷಿಸುವ ನಂಬಿಕೆಗೆ ತರಲ್ಪಡಬೇಕು, ಶಿಷ್ಯರಂತೆ ಸ್ಥಾಪಿಸಲ್ಪಡಬೇಕು ಮತ್ತು ಅವರೆಡೆಗೆ ದೇವರ ಅನುಕಂಪ ಅನುಭವಿಸಬೇಕು. ಆದ್ದರಿಂದ ಜನರುಗಳ ಅಗತ್ಯತೆಗಳನ್ನು ಪೂರೈಸುವ ಅದ್ಭುತಗಳನ್ನು ಮತ್ತು ಸ್ವಸ್ಥತೆಗಳನ್ನು ಮತ್ತು ಬಿಡುಗಡೆಯನ್ನು ಹಿಂಬಾಲಿಸಿರಿ.

ದೇವರ ವಾಕ್ಯದ ನಿಮ್ಮ ವೈಯಕ್ತಿಕ ಅಧ್ಯಯನದಲ್ಲಿ ಬೆಳೆಯುವುದು ಮತ್ತು ಉತ್ತಮ ದೈವ ಸಿದ್ಧಾಂತಗಳಲ್ಲಿ ಸ್ಥಾಪಿಸಲ್ಪಟ್ಟಿರುವುದು, ನೀವು ಪಡೆಯುತ್ತಿರುವುದನ್ನು ಪರೀಕ್ಷಿಸಲು ಸಹಾಯಿಸುತ್ತದೆ (ಉದಾ: ಪ್ರಕಟಿಸುವ ವರಗಳು) ಮತ್ತು ದೋಷವನ್ನು ಉತ್ತೇಜಿಸುವುದನ್ನು ತಡೆಯುತ್ತದೆ.

ಕೆಲವು ಸಾಮಾನ್ಯ ದೋಷಗಳನ್ನು ಗಮನಿಸಿ:

ಭವ್ಯತೆಯ ಭ್ರಮೆಗಳು ಮತ್ತು ಮಹಾತ್ವಾಕಾಂಕ್ಷೆ: ಒಬ್ಬನು ತುಂಬಾ ಬಲಯುತವಾದವನು, ತುಂಬಾ ಪ್ರಾಮುಖ್ಯವಾದವನು ಎಂಬುದಾಗಿ ಆಲೋಚನೆಯಲ್ಲಿ ಮೋಸಗೊಂಡವರಾಗಿರುವುದು ಸಭಾ ಇತಿಹಾಸದಲ್ಲಿ ನಾವು ನೋಡುತ್ತೇವೆ. ಜಾನ್ ಅಲೆಕ್ಸಾಂಡರ್ ಡೋವಿಯಂತಹ ಜನರು ಅವರನ್ನು ಪ್ರವಾದಿ ಎಲೀಯನಂತೆ ಘೋಷಿಸಿಕೊಂಡರು.

ರಕ್ಷಕನ ಮನಸ್ಥಿತಿ: ಎಲ್ಲರನ್ನೂ ಮುಟ್ಟಲು ದೇವರು ಉಪಯೋಗಿಸುವ ಒಬ್ಬನೇ ನೀವು, ನಿಮ್ಮ ಬಳಿ ಎಲ್ಲಾ ಉತ್ತರಗಳಿವೆ ಮತ್ತು ನೀವು ಇಲ್ಲದೆ ಜನರು ಬದುಕಲು ಸಾಧ್ಯವಿಲ್ಲ.

ಸಿದ್ಧಾಂತದ ವಿಚಲನಗಳು: ನೀವು ಬೋಧಿಸುವುದನ್ನು ಮೌಲ್ಯೀಕರಿಸಿರಿ ಮತ್ತು ದೇವರ ಸಮಗ್ರ ಸಲಹೆಯೊಡನೆ ಪ್ರಸಂಗಿಸಿರಿ. ದೇವರು ಬಲಿಷ್ಟವಾದ ತೋರ್ಪಡಿಸುವಿಕೆಯಲ್ಲಿ ಉಪಯೋಗಿಸುವುದರ ನಿಮಿತ್ತದಿಂದ ನಿಮ್ಮ ಮನಸ್ಸಿಗೆ ಬರುವಂತದ್ದೆಲ್ಲಾ ಪ್ರಸಂಗಿಸು ಅಥವಾ ಬೋಧಿಸು ಎಂಬುದಾಗಿ ಅರ್ಥವಲ್ಲ. ವಿಲಿಯಂ ಬ್ರಾನ್ಹ್ಯಾಮ್ ರವರು ದೇವರಿಂದ ಮಹೋನ್ನತವಾಗಿ ಉಪಯೋಗಿಸಲ್ಪಟ್ಟರು ಅವರ ಜೀವನದ ಅಂತಿಮ ಭಾಗದಲ್ಲಿ ದೇವರ ವಾಕ್ಯವನ್ನು ಬೋಧಿಸುವುದು ಮತ್ತು ಪ್ರಸಂಗಿಸುವುದರಲ್ಲಿ ದೋಷಕ್ಕೆ ಒಳಗಾದರು.

ಹೊಸಯುಗದ ಬೋಧನೆಗಳು: ಪೂರ್ವದ ದೇಶಗಳ ಅತೀಂದ್ರಿಯತೆ ಮತ್ತು ಇತರೆ ಸತ್ಯವೇದದ ಅಲ್ಲದ ಆತ್ಮೀಕ ಬೋಧನೆಗಳು ಹೊಸ ಯುಗದೊಡನೆ ಸತ್ಯವೇದವನ್ನು ಸತ್ಯವನ್ನು ಸೇರಿಸಬೇಡಿರಿ. ಅಪ್ರಾಕೃತವಾದದ್ದು ಯಾವಾಗಲೂ ಪ್ರೇಕ್ಷಣೀಯವಲ್ಲ ಎಂಬುದನ್ನು ನೆನಪಿನಲ್ಲಿಡಿರಿ. ಪ್ರೇಕ್ಷಣೀಯವನ್ನು ನೋಡುವುದಕ್ಕಾಗಿ ಅಪ್ರಾಕೃತವಾದದ್ದನ್ನು ಕಳೆದುಕೊಳ್ಳಬೇಡಿರಿ (1 ಅರಸುಗಳು 19:9-14).

ಲಿಖಿತ ವಾಕ್ಯಗಳು ನಮಗೆ ನಿತ್ಯವಾದ ಜೀವದ ವಾಕ್ಯವನ್ನು ಪ್ರಕಟಿಸುತ್ತವೆ. "ಶಾಸ್ತ್ರಗಳಿಂದ ನಿತ್ಯಜೀವವು ದೊರೆಯುತ್ತದೆಂದು ನೀವು ನೆನಸಿ ಅವುಗಳನ್ನು ವಿಚಾರಿಸುತ್ತೀರಲ್ಲಾ" .(ಯೋಹಾನ 5:39) ನಿತ್ಯವಾದ ವಾಕ್ಯದ ನಮ್ಮ ಪ್ರಕಟನೆಯು ಆತನ ಲಿಖಿತ ವಾಕ್ಯದ ಮೂಲಕವಾಗಿ ಬರುತ್ತದೆ. ನಿತ್ಯವಾದ ವಾಕ್ಯದ ಯಾವುದೇ ಪ್ರಕಟನೆಯು ಲಿಖಿತ ವಾಕ್ಯದ ಬೆಳಕಿನಲ್ಲಿ ಪರಿಶೀಲಿಸಲ್ಪಡಬೇಕು. ಆತ್ಮನ ಮೂಲಕವಾಗಿ ಬರುವಂತಹ ನಿತ್ಯವಾದ ವಾಕ್ಯದ ಪ್ರಕಟನೆಯು ಲಿಖಿತ ವಾಕ್ಯದೊಡನೆ ಒಪ್ಪಂದ ಸಹ ಮಾಡಿಕೊಳ್ಳಬೇಕು. (ಯೋಹಾನ 5:7)

ಕಲಿಸಬಹುದಾದವರಾಗಿರಿ, ತಿದ್ದುಪಡಿಗೆ ಮುಕ್ತವಾಗಿರಿ

ಕೀರ್ತನೆಗಳು 141:5
ನೀತಿವಂತರು ನನ್ನನ್ನು ಹೊಡೆಯಲಿ, ಅದು ನನಗುಪಕಾರ ಅವರು ನನ್ನನ್ನು ಶಿಕ್ಷಿಸಲಿ, ಅದು ನನ್ನ ತಲೆಗೆ ಎಣ್ಣೆಯಂತಿದೆ, ನನ್ನ ತಲೆಯು ಅದನ್ನು ಬೇಡವೆನ್ನದಿರಲಿ ಆದರೆ ದುಷ್ಟರ ಕೆಟ್ಟತನಕ್ಕೆ ವಿರೋಧವಾಗಿ ದೇವರನ್ನು ಪ್ರಾರ್ಥಿಸುತ್ತಿರುವೆನು.

ಕೀರ್ತನೆಗಳು 141 ದಾವೀದನ ಕೀರ್ತನೆಯಾಗಿದೆ. ನೀತಿವಂತನಿಂದ ತಿದ್ದುಪಡಿಯನ್ನು ದಾವೀದನ ಹೃದಯವು ಪಡೆಯುವುದನ್ನು ನಾವು ನೋಡುತ್ತೇವೆ. ದಾವೀದನು ಇದನ್ನು "ಅತ್ಯುತ್ತಮ ತೈಲ" ಎಂದು ಉಲ್ಲೇಖಿಸಿದ್ದಾನೆ. ಇದು ಅವನ ಜೀವಿತವನ್ನು

ಆಶೀರ್ವದಿಸುವಂತದ್ದು ಮತ್ತು ಅವನ ಜೀವಿತವನ್ನು ಉತ್ಕೃಷ್ಟಗೊಳಿಸುವಂತದ್ದು ಮತ್ತು ಇದೇ ರೀತಿಯಾದದ್ದನ್ನು ನಮಗೂ ಮಾಡುತ್ತಾನೆ.

ಸ್ವಯಂ – ಸಂಯಮ ಬೆಳಿಸಿಕೊಳ್ಳಿರಿ

ಗಲಾತ್ಯದವರಿಗೆ 5:22-23
22 ಆದರೆ ದೇವರಾತ್ಮನಿಂದ ಉಂಟಾಗುವ ಫಲವೇನೆಂದರೆ ಪ್ರೀತಿ, ಸಂತೋಷ, ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ
23 ಇಂಥವುಗಳೇ ಇಂಥವುಗಳನ್ನು ಯಾವ ಧರ್ಮಶಾಸ್ತ್ರವೂ ಆಕ್ಷೇಪಿಸುವದಿಲ್ಲ.

ಸ್ವಯಂ ಸಂಯಮವು ಸ್ವ-ಆಳ್ವಿಕೆನಡೆಸುವುದರ ಸಾಮರ್ಥ್ಯವಾಗಿದೆ, ಪವಿತ್ರಾತ್ಮನ ಮುನ್ನೆಡೆಸುವಿಕೆಯ ಅಧೀನದಲ್ಲಿ ಇಟ್ಟುಕೊಳ್ಳುವುದು ಮತ್ತು ಭಾವನಾತ್ಮಕ ಅಥವಾ ಶಾರೀರಿಕ ಉದ್ವೇಗ ಮೇಲೆ ಹೊರಹೋಗದಿರುವುದು ಉದಾಹರಣೆಗಾಗಿ ಪ್ರವಾದನೆಯ ಸಂದೇಶವನ್ನು ಸರಿಯಾದ ಸಮಯದಲ್ಲಿ ಅದನ್ನು ಬಿಡುಗಡೆಗೊಳಿಸುವವರೆಗೂ ಹಿಡಿದಿಟ್ಟುಕೊಂಡಿರುವುದು. ವರಗಳನ್ನು ತೋರಿಸುವ ನಿಮ್ಮ ಅಪೇಕ್ಷೆಯಲ್ಲಿ ಅಹಂಕಾರಕ್ಕೆ ಒಳಗಾಗಬೇಡಿರಿ. ದೇವರು ಯಾವುದಾದರೊಂದನ್ನು ಮಾಡಲು ಮುನ್ನೆಡೆಸಿದರೆ ಅದನ್ನು ಮಾಡಿರಿ. ಇಲ್ಲದಿದ್ದರೆ ನಿಮ್ಮ ಉತ್ಸಾಹವನ್ನು ಹೆಚ್ಚಿಸಿ ಮತ್ತು ಬುದ್ಧಿವಂತಿಕೆಯನ್ನು ಆಳಲು ಅನುಮತಿಸಿರಿ. ಉದಾಹರಣೆಗಾಗಿ: ದೇವರು ಮಾತನಾಡುತ್ತಿದ್ದರೆ, ಪ್ರವಾದನೆ. ಇಲ್ಲದಿದ್ದರೆ ಸ್ವಯಂ ಸಂಯಮದಿಂದ ಅಭ್ಯಾಸಮಾಡಿರಿ ಮತ್ತು ಶಾಂತತೆಯಿಂದಿರಿ. ಆತ್ಮನು ಉತ್ತೇಜಿಸುವಾಗ, ಧೈರ್ಯವಾಗಿ ಹೆಜ್ಜೆಯನ್ನಿಡಿರಿ, ತೊಡಕುಗಳನ್ನು ತೆಗೆದುಕೊಳ್ಳಿರಿ ಮತ್ತು ನಂಬಿಕೆಯಲ್ಲಿ ಚಲಿಸಿ ದೇವರಿಂದ ಜ್ಞಾನದೊಡನೆ ಯಾವಾಗಲೂ ನಡೆಯಿರಿ.

ಒಂದು ಒಳ್ಳೆಯ ಸ್ಥಳೀಯ ಸಭೆ ಸಮುದಾಯದೊಳಗೆ ಬೆಳೆಯಿರಿ

ನಾವು ಒಂದು ಕುಟುಂಬ, ಒಂದು ದೇಹ, ಒಂದು ಸೈನ್ಯದ ಭಾಗವಾಗಿದ್ದೇವೆ. ಇತರರ ಮೇಲೆ ಅವಲಂಬಿತರಾಗಿರುವಂತಹ ರೀತಿಯಲ್ಲಿ ದೇವರು ನಮ್ಮನ್ನು ಸೃಷ್ಟಿಸಿದ್ದಾನೆ ಮತ್ತು ರಚಿಸಿದ್ದಾನೆ. ಆದ್ದರಿಂದ ಉತ್ತಮವಾಗಿ ಸಂಪರ್ಕ ಹೊಂದಿದವರಾಗಿರಿ ಮತ್ತು ಒಂದು ಒಳ್ಳೆಯ ಸಭೆಯಲ್ಲಿ ಒಂದು ಉತ್ತಮ ಸಂಬಂಧ ಹೊಂದಿದವರಾಗಿರಿ.

ಯಾವುದೇ ಸ್ಥಳೀಯ ಸಭೆಯ ಪರಿಪೂರ್ಣವಲ್ಲ. ನಮ್ಮಲ್ಲಿ ಆತನು ನೋಡುವ ಅಪರಿಪೂರ್ಣತೆಯನ್ನುಪರಿಪೂರ್ಣಗೊಳಿಸಲು ನಮ್ಮ ಸುತ್ತಲಿನ ಅಪರಿಪೂರ್ಣತೆಗಳನ್ನು ದೇವರು ಉಪಯೋಗಿಸುತ್ತಾನೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ.

ಯೆಶಾಯ 65:8
ಯೆಹೋವನು ಹೀಗನ್ನುತ್ತಾನೆ – ರಸದೊರೆಯಬಹುದಾದ ದ್ರಾಕ್ಷೆಯ ಗೊಂಚಲನ್ನು ಒಬ್ಬನು ನೋಡಿ ಹಾಳುಮಾಡಬೇಡ, ಅದರಲ್ಲಿ ಪ್ರಯೋಜನವಿದೆ ಎನ್ನುವಂತೆ ನಾನು ನನ್ನ ಸೇವಕರನ್ನು ಲಕ್ಷ್ಯಕ್ಕೆ ತಂದು ಇವರನ್ನೆಲ್ಲಾ ಹಾಳೂಮಾಡಬಾರದು ಎಂದು ಅಂದುಕೊಳ್ಳುವೆನು.

ಹೊಸ ದ್ರಾಕ್ಷಾರಸವು ಬುದ್ದಲಿಯಲ್ಲಿ ಇರುತ್ತದೆ – ಪ್ರತ್ಯೇಕ ದ್ರಾಕ್ಷಿ ಹಣ್ಣಿನಲ್ಲಿಯಲ್ಲ ಆತ್ಮನ ವರಗಳು ಪೋಷಿಸಲ್ಪಡುವ ಜನರು ಪ್ರೀತಿಯಿಂದ ತಿದ್ದುಪಡಿಮಾಡುವ ಮತ್ತು ಆತ್ಮನ ವಿಷಯಗಳಲ್ಲಿ ಪರಿಪಕ್ವತೆಗೆ ಮಾರ್ಗದರ್ಶಿಸುವ ಮತ್ತು ಆತ್ಮನ ತೋರ್ಪಡಿಸುವಿಕೆಗಳನ್ನು ಬಿಡುಗಡೆ ಮಾಡಲು ಸ್ವಾತಂತ್ರ್ಯ ಕೊಡಲ್ಪಟ್ಟಂತಹ ಪರಿಸರದಲ್ಲಿ ಬೆಳೆಯಿರಿ. ದೃಢವಾಗಿ ನಿಂತವರಾಗಿರಿ. ಸುತ್ತಲು ತೇಲಬೇಡಿರಿ ಪವಿತ್ರಾತ್ಮನ ಗಾಳಿಯಂತೆ ಮತ್ತು ನೀರಿನಂತೆ – ವಿಶ್ವಾಸಿಗಳ ಜೀವಂತ ಕಲ್ಲಿನಂತೆ ಚಿತ್ರಿಸಲಾಗಿದೆ. ಪವಿತ್ರಾತ್ಮನು ವಿಶ್ವಾಸಿಗಳು “ನೆಟ್ಟಲ್ಪಟ್ಟವರಾಗಿ” “ಬೇರೂರಿದವರಾಗಿ” “ಸ್ಥಾಪಿಸಲ್ಪಟ್ಟವರಾಗಿ” ಇರಲು “ಚಲಿಸುತ್ತಾನೆ” .

ನಿಮ್ಮ ನಾಯಕರುಗಳಾಗಿರುವರಿಗೆ ಸರಿಯಾದ ಸಂಬಂಧದೊಡನೆ ನಡೆಯಿರಿ.

ಇಬ್ರಿಯರಿಗೆ 13:17
ನಿಮ್ಮ ಸಭಾನಾಯಕರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ, ಅವರು ಲೆಕ್ಕ ಒಪ್ಪಿಸಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ. ಅವರು ವ್ಯಸನಪಡದೆ ಸಂತೋಷದಿಂದ ಇದನ್ನು ಮಾಡುವಂತೆ ನೋಡಿರಿ. ಅವರು ವ್ಯಸನದಿಂದಿರುವದು ನಿಮಗೆ ಪ್ರಯೋಜನಕರವಾದದ್ದಲ್ಲ

ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ ಸೇವಕರ ಸಮಾವೇಸವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು.
Account Name: All Peoples Church
Account Number: 0057213809,
IFSC Code: CITI0000004
Bank: Citibank N.A. 506-507
Level 5 Prestige Meridian 2, #30.
M.G. Road Banglore – 560 001

ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು **FCRA** ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!

ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರ
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದ
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು-
-ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜಸ್ಥಳ
ದೇವರ ಉದ್ದೇಶಗಳಿಗೆ ಜನ್ಮಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು-
-ನೆರವೇರಿಸುವುದು.
ತಂದೆಯ ಪ್ರೀತಿ
ದೇವರ ಪ್ರಸನ್ನತೆ
ಜ್ಞಾನ,ಪ್ರಕಟನೆಮತ್ತುಬಲದಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ
ಆಸ್ತಿವಾರಗಳು ಭಾಗ-1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ದೇವರ ರಾಜ್ಯ
ಪ್ರಾಚೀನ ಹೆಗ್ಗುರುತು
ಯೇಸುವಿನ ಪ್ರಬಲ ಹೆಸರು

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ
ದೇವರ ಮನೆ
ಮದುವೆ ಮತ್ತು ಕುಟುಂಬ
ದೈವಿಕ ದಯೆ
ದೈವಿಕಕ್ರಮ ನಗರವ್ಯಾಪ್ತಿ ಸಭೆಗಳಲ್ಲಿ
ಶುದ್ಧೀಕರಿಸುವ ಬೆಂಕಿ
ಬದ್ಧತೆಯ ಬಲ
ಜಗಳರಹಿತವಾದಜೀವಿತ ಜೀವಿಸುವುದು
ಕೆಲಸ ಮತ್ತುಆದರ ಮೂಲ ವಿನ್ಯಾಸ
ನಾವು ವಿಭಿನ್ನರು
ಉಜ್ಜೀವನದಲ್ಲಿ ಒಂದು ಸಭೆ

ನಮ್ಮ ವಿಮೋಚನೆ
ಆತ್ಮಿಕವಾಗಿ ಮನಸುಳ್ಳವರಾಗಿರುವುದು –
-ಲೌಕಿಕ -ಜ್ಞಾನವಂತರಾಗಿರುವುದು
ದೇವರಮಾರ್ಗದರ್ಶನಪಡೆದುಕೊಳ್ಳುವುದು
ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ
ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ
ಶ್! ಹರಟೆ ಬೇಡ
ದೇವರ ವಿಮೋಚನ ಹೃದಯ
ಪವಿತ್ರಾತ್ಮನ ವರಗಳು
ಕೆಲಸದ ಸ್ಥಳದಲ್ಲಿನ ಸ್ತ್ರೀಯರು
ಮನಸ್ಸಿನ ವಿಜಯ

ಉಚಿತ ಇ- ಪುಸ್ತಕಗಳು ನಮ್ಮ ಚರ್ಚ್ ವೆಬ್ ಸೈಟ್apcwo.org/publications ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ.ಡಿ.ಎಫ್ ಅನುವಾದನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ.ಇಂತಹ ಉಚಿತ ಪುಸ್ತಕಗಳಿಗಾಗಿ ಇ –ಮೇಲ್ bookrequests@apcwo.org ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನುಸಂಪರ್ಕಿಸಹುದಾಗಿದೆ.

ಉಚಿತ ಆಡಿಯೋ,ವಿಡಿಯೋ ಸಂದೇಶಗಳುಪ್ರಸಂಗ ಟಿಪ್ಪಣಿಗಳಿಗಾಗಿನಮ್ಮವೆಬ್ ಸೈಟನ್ನು ಸಂಪರ್ಕಿಸಿ (apcwo.org/sermons)ಮತ್ತು ಇತರೆಅನೇಕ ಅಧ್ಯಯನ ಸಂಗ್ರಹ ಬಳಸಹುದು.

ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರುನಗರದಲ್ಲಿ ಉಪ್ಪುಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ದತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕ ಕಾರ್ಯ, ಅಧ್ಭುತಕಾರ್ಯ, ಮಹಾತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2:4,5, ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಆಲ್ ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿರಿ. www.apcwo.org ಅಥವಾ Contact@apcwo.org ಗೆ ಇ- ಮೇಲ್ ಕಳುಹಿಸಿರಿ

ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ – ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

ಈ ಎಲ್ಲಾ ಕಾರ್ಯಗಳು,ದೇವರು, ಒಳ್ಳೆಯ ದೇವರಾಗಿದ್ದಾನೆ , ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ನಮಗೆ ಪ್ರಕಟಿಸುತ್ತವೆ.

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು **"ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ**

ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ" ಎಂದು ಹೇಳುತ್ತದೆ. (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ,ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.
" ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು" (ಅಪೊಸ್ತಲರ ಕೃತ್ಯ 10:43)

" ನೀನು ಯೆಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು ಎಂಬುದೇ" (ರೋಮಾಪುರದವರಿಗೆ 10:9).

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು.

ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ದೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

ಪ್ರಿಯ ಕರ್ತನಾದ ಯೇಸುವ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರು ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.

ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ.
ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.

ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ " ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ದೀಕರಣ ಪಡೆದುಕೊಂಡೆ" ಎಂದು ಹೇಳುತ್ತೇನೆ.

ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು. ಆಮೆನ್

ಆಲ್ ಪೀಪಲ್ಸ್ ಚರ್ಚ್
ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-PC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು – ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಏ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೆಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳು ನೀಡುತ್ತೇವೆ.
ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (C.Th.)
ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (D.Th.)
ಮೂರು ವರ್ಷದ ಬ್ಯಾಚುಲರ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9 ರಿಂದ ಮದ್ಯಾಹ್ನ 1 ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರೆಸಬಹುದು.

ವಸತಿನಿಲಯ ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಾಕಾರ್ಯಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮದ್ಯಾಹ್ನ 2 ರಿಂದ 5 ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ತರಗತಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾಂತ್ಯದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಟ್ಟಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್ ಲೋಡ್ ಮಾಡಲು apcwo.org/biblecollege ಅನ್ನು ಸಂಪರ್ಕಿಸಿರಿ.

APC-BC is accredited by the Nations Association for Theological Accreditation (NATA)

ಆತನು ಯಾರಾಗಿದ್ದಾನೆ ಎಂಬುದನ್ನು ಸಾಕ್ಷಿಯನ್ನು ಹೊಂದುವ ಕ್ರಮದಲ್ಲಿ ಪವಿತ್ರಾತ್ಮ ಬಲವನ್ನು ತೋರಿಸಲು ಎಲ್ಲಾ ವಿಶ್ವಾಸಿಗಳು ಕೊನೆಗೊಂಡವರಾಗಬೇಕೆಂದು ಕರ್ತನು ಬಯಸುತ್ತಾನೆ. ಎಲ್ಲಾಕಡೆಯು ಮತ್ತು ಎಲ್ಲಾ ಸಮಯದಲ್ಲೂ ಆತನ ಸಾಕ್ಷಿಗಳು ನಾವಾಗಿರಬೇಕು. ಒಬ್ಬ ವಿದ್ಯಾರ್ಥಿಯಾಗಿರಬಹುದು, ಇಂಜೀನಿಯರ್,ವಿಜ್ಞಾನಿ,ಒಬ್ಬ ವಕೀಲ,ಒಬ್ಬ ಸರ್ಕಾರಿ ಅಧಿಕಾರಿ, ಒಬ್ಬ ಸಾಮಾಜಿಕ ಕೆಲಸಗಾರ,ಒಬ್ಬ ವಿದ್ಯಾರ್ಥಿ, ಒಬ್ಬ ಗೃಹಿಣಿ, ಒಬ್ಬ ವಾಪಾರಸ್ಥ, ಒಬ್ಬ ಕ್ರೀಡಾ ವ್ಯಕ್ತಿ, ಒಬ್ಬವೈದ್ಯ, ಒಬ್ಬ ಸರ್ಕಾರಿ ಅಧಿಕಾರಿ,ಒಬ್ಬ ಸಮಾಜ ಸೇವಕ – ಯಾವುದೇ ವೃತ್ತಿಯಿರಬಹುದು ನಾವು ಇರುವಲ್ಲಿಯೇ ಆತ್ಮನ ವರಗಳನ್ನು ತೋರಿಸಬಹುದು ಯೇಸುಕ್ರಿಸ್ತನಿಗಾಗಿ ಸಾಕ್ಷಿಯಾಗಿರಬಹುದು. ಆತ್ಮನ ವರಗಳು ನಮ್ಮ "ಉಪಕರಣ ಪೆಟ್ಟಿಗೆ" ಇದ್ದಂತೆ, ಪವಿತ್ರಾತ್ಮನ ಬಲದ ತೋರಿಸುವಿಗಾಗಿ ನಮಗೆ ಕೊಟಂತಹ ಉಪಕರಣವನ್ನು ಇದು ಒಳಗೊಂಡಿದೆ ಆದ್ದರಿಂದ ನಾವು ಹೋಗುವಲೆಲ್ಲಾ ಜನರು ಸ್ಪರ್ಶಿಸಲ್ಪಡುತ್ತಾರೆ,ಸೇವೆ ಸಲ್ಲಿಸಲ್ಪಡುತ್ತಾರೆ ಮತ್ತು ಮಾನಸಾಂತರ ಹೊಂದುತ್ತಾರೆ ಮತ್ತು ಕರ್ತನಾದ ಯೇಸುವಿಗೆ ಮಹಿಮೆಯುಂಟಾಗುತ್ತದೆ.

ಈ ಪುಸ್ತಕವು ಸರಳವಾದ ಉದ್ದೇಶ ಹೊಂದಿದೆ ಮತ್ತು ಆತ್ಮನ ವರಗಳನ್ನು ಬಿಡುಗಡೆಗೊಳಿಸಲು ಪವಿತ್ರಾತ್ಮನೊಡನೆ ಹೇಗೆ ಸಾಗಬೇಕೆಂಬುದನ್ನು ಕಲಿಯಲು ಮತ್ತು ಅರ್ಥಮಾಡಿಕೊಳ್ಳಲೂ ವಿಶ್ವಾಸಿಗಳಿಗೆ ಸಹಾಯ ಮಾಡಲು ಉಪಯೋಗಿಸಬಹುದಾದ ಸುಲಭವಾದ ತರಬೇತಿ ಕೈಪಿಡಿಯಾಗಿದೆ. ವಿಶ್ವಾಸಿಗಳು ಎಲ್ಲಿಯಾದರು ಮತ್ತು ಯಾವುದೇ ಸಮಯದಲ್ಲಿಯಾದರೂ ಅವರ ಮೂಲಕವಾಗಿ ಕರ್ತನ ಆತ್ಮನು ಚಲಿಸುವಾಗ ನಿರಂತರವಾಗಿ ಆತ್ಮನ ವರಗಳನ್ನು ಬಿಡುಗಡೆಗೊಳಿಸುವುದು ಮತ್ತು ಚಲಿಸುವುದನ್ನು ನೋಡುವುದು ನಮ್ಮ ಗುರಿಯಾಗಿದೆ

ಆಶೀಷ್ ರಾಯ್‌ಚೂರ್

All Peoples Church & World Outreach
 # 319, 2nd Floor, 7th Main, HRBR Layout,
2nd Block, Kalyan Nagar, Bangalore 560 043 Karnataka, INDIA

Phone: +91-80-25452617
Email: contact@apcwo.org
Website: apcwo.org